1975

"LIFE ASSURANCE
IS
NO EXPENSE
BUT
AN INVESTMENT"
Kochikar Brothers,
Udipi, Mangalore, Bangalore, Madras, Bombay and Calicut.

ESTABLISHED 1906

(ಕೀರ್ತಿಶೇಷ ವಿ. ಶ್ರೀನಿವಾಸ ಕಾಮತರಿಂದ ೧೯೦೬ರಲ್ಲಿ ಸ್ಥಾಪಿತವಾದುದು.)

ಪ್ರತಿ ಶುಕ್ರವಾರವೂ ಮಂಗಳೂರಿನ ಶಾರದಾ ಛಾಪಖಾನೆಯಲ್ಲಿ ಪ್ರಕಟನಾಗುವ ವಾರಪತ್ರಿಕೆ.

ಪುಟಗಳು ೮ ಬೆಲೆ ೩ ಪೈ. ಮಂಗಳೂರು ಕಾ. ೪ನೇ ಶುಕ್ರವಾರ ಜನವರಿ ೧೯೩೬. (4–1–'36) ಸಂಚಿಕೆ ೧೭

ಪೋಲೀಸ್ ಸುಪರಿಂಟೆಂಡೆಂಟರನ್ನು ಗುಂಡಿಕ್ಕಿ ಕೊಂದರು!

ಪೋರ್ಚುಗಲ್‌ನಲ್ಲಿ ಭೂಕಂಪ! ಸಿಲೋನಿನಲ್ಲಿ ಮಲೇರಿಯಾ ಹಾವಳಿ!!

ಕ್ರಿಸ್‌ಮಸ್ ಹಬ್ಬದ ದಿನ ಅನೇಕ ಅವಘಡಗಳು! ಮರಣಗಳು!

ಎಲ್ಲೆಲ್ಲೂ ಜ್ಯೊಂಟ್ ಕಮಿಟಿ ರಿಪೋರ್ಟಿನ ಖಂಡನೆ! ಮಹಾಯುದ್ಧವು ಸಂಭವಿಸುವುದು ನಿಜ!

ಸಂಯುಕ್ತ ಸ್ವಾಂಕ್ಷದ ಮಿರ್ಜಾಪುರದಲ್ಲಿನ ಪೋಲೀಸ್ ಸುಪರಿಂಟೆಂಡೆಂಟರಾದ ಮಿ| ಎಂಡ್ರೂ ಕೋರ್ಡ್ ಕ್ರೋಫರ್ಡ್‌ರನ್ನು ದಕ್ಷಂಬರ ಕಾ. ೨೪ರಂದು ಅವರು ಮಲಗಿದ್ದಲ್ಲಿಯೇ ಯಾರೋ ಗುಂಡಿಕ್ಕಿ ಕೊಂದರು. ಅವರ ಒಬ್ಬ ಹಿಂದೀಯ ಕೆಲಸದವನೇ ಅತ್ಯಾಚಾರವಿದೆಂದು ಭಾವಿಸಿ ಪ್ರಭು ಅವನನ್ನು ಸೆರೆಹಿಡಿದಿದ್ದಾರೆ. ಕ್ರೊಫೋರ್ಡರು ಮಿರ್ಜಾಪುರದಿಂದ ೧೦೦ ಮೈಲು ದೂರದಲ್ಲಿರುವ ಹತ್ತನಲ್ಲಾ ಎಂಬಲ್ಲಿ 'ಕೇಂಪ್' ಮಾಡಿ ಮಲಗಿದ್ದಾಗ ಈ ಕೆಲಸವು ನಡೆಯಿತು. ಈ ಕಾರಣದಿಂದ ಅವರನ್ನು ಕೊಲೆ ಮಾಡಲಾಯಿತೆಂದು ತಿಳಿದುಬಂದಿಲ್ಲ. ಕೊಲೆಯ ಸುದ್ದಿಯನ್ನು ಒಡನೆ ಇಂಡಿಯಾ ಸರಕಾರಕ್ಕೆ ತಿಳಿಸಲಾಯಿತು. ಮಿ| ಕ್ರೊಫರ್ಡರು ೧೯೦೭ರಲ್ಲಿ ಪೋಲೀಸ್ ಸರ್ವಿಸಿಗೆ ಸೇರಿದ್ದರು. ಸಾಯುವಾಗ ೪೭ ವರ್ಷ ವಯಸ್ಸಿನವರಾಗಿದ್ದರು. ಅನೇಕ ಸರಕಾರೀ ಅಧಿಕಾರಿಗಳ ಸಮಕ್ಷಮ ಶವಸಂಸ್ಕಾರವು ನಡೆಯಿತು.

ಪೋರ್ಚುಗಲ್‌ನಲ್ಲಿ ಭೂಕಂಪ!

ಪೋರ್ಚುಗಲ್‌ನ ಅರ್ಗ್ರೇವ್ ಪ್ರಾಂತ್ಯದಲ್ಲಿ ಶನಿವಾರ ಭೂಕಂಪವುಂಟಾಯಿತು. ಭೂಕಂಪವು ದೇಶಕ್ಕೆ ಪ್ರಾರಂಭವಾಯಿತು. ಭೂಮಿಯು ಆಗಾಗ ನಡುಗುತ್ತಿತ್ತು. ಸಾವಿರಾರು ಕಟ್ಟಡಗಳು ಬಿದ್ದುವು. ಸಿಲ್ವಾಸ್ ಎಂಬ ಹಳ್ಳಿಯ ಮೂರಿಷ್ ಕೋಟೆಯೆಂಬ ಕಲ್ಲಿನ ಕಟ್ಟಡವು ಬಿದ್ದುಬಿಟ್ಟುದರಿಂದ ಪ್ರಾಂತ್ಯದಲ್ಲೆಲ್ಲಾ ಹೆಚ್ಚು ಕಟ್ಟಡಗಳಿಗೆ ವಿಶೇಷ ಧಕ್ಕೆಯಾಗಿ ತಪ್ಪಿರಬೇಕೆಂದು ಅಂದಾಜು ಮಾಡಲಾಗಿದೆ. ಈ ಕೋಟೆಯೊಳಗೆ ಸ್ವತಂತ್ರ ಕೈದಿಗಳಕ್ಕಿಟ್ಟಿದ್ದರು. ಅದರ ಗೋಡೆಗಳು ಬಿದ್ದುದರಿಂದ ಆ ಖೈದಿಗಳು ಬಯಲುಪ್ರದೇಶಕ್ಕೋಡಿಬಂದರು. ಬಿದ್ದ ಗೋಡೆಗಳನ್ನು ದಾಟಿ ಅನೇಕ ಖೈದಿಗಳು ಪಲಾಯನಮಾಡಿರುವರು. ಪ್ರಾಣಾಪಾಯವಿಲ್ಲವೆಂದು ತಿಳಿದುಬಂದಿಲ್ಲ.

ಕ್ರಿಸ್‌ಮಸ್ ಆಚರಣೆಗಳು ಮರಣಗಳು.

ಕ್ರಿಸ್‌ಮಸ್ ಸಮಯದ ವರ್ಷ ವರ್ಷ [illegible]

ರೈಲುಬಂಡಿಗಳು ಢಿಕ್ಕಿ ಒಡೆದು, ಎರಡು [illegible] ಬಂಡಿಗಳೂ ಬಿದ್ದು ೧೬ ಮಂದಿ ಮೃತರಾದರು. ನಲ್ವತ್ತು ಜನರು ಘಾಯಗೊಂಡರು. ಮೂರು ಬಂಡಿಗಳಲ್ಲಿದ್ದ ಜನರೆಲ್ಲ ನುಚ್ಚುನೂರಾಗಿ ಗುರುತು ಹತ್ತದೆಂತಾದರು. ಈ ಅವಘಡವು ಒಂದು ದೊಡ್ಡ ಗುಡ್ಡೆಯ ಮೇಲೆ ನಡೆಯಿತು. ಚಿಕಾಗೋವಿನಲ್ಲಿ ಮೋಟರ್ ಗಾಡಿಯೊಂದು ಬಿದ್ದು ೭ ಮಂದಿ ಮೃತರಾದರು. ಸಂಯುಕ್ತ ಅಮೇರಿಕಾದಲ್ಲಿ ಕ್ರಿಸ್‌ಮಸ್ ದಿನ ೧೫೬ ಮಂದಿ ಅಕಾಲ ಮರಣಕ್ಕೆ ತುತ್ತಾದರೆಂದು ಲೆಕ್ಕ ಹಾಕಲಾಗಿದೆ. ಸೆಡಲಿಯಾ ಎಂಬಲ್ಲಿ ಕ್ರಿಸ್‌ಮಸ್ ಮರದೊಡನೆ ಮೂರು ಮಕ್ಕಳು ಮತ್ತು ಅವುಗಳ ತಾಯಿಯ ಬಟ್ಟೆಗೆ ಬೆಂಕಿ ತಗಲಿ ಸುಟ್ಟು ಸಾಯುವಂತಾಯಿತು.

ಸಿಲೋನಿನಲ್ಲಿ ಮಲೇರಿಯಾ ರೋಗ.

ದಿನೇ ದಿನೇ ಹೆಚ್ಚುತ್ತಿದ್ದು ಸಾವಿರಾರು ಜನರನ್ನು ಬಲಿಯಾಗಿ ತಿಂದ ಜಾಡ್ಯವು ಶಾಂತವಾಗುತ್ತಿದೆಯೆಂಬ ವಾರ್ತೆಯಿದೆ. ಕೊಲೊಂಬೊದಿಂದ ೧೫೦ ಮೈಲು ದೂರದಲ್ಲಿರುವ ಕೆಲವು ಹಳ್ಳಿಗಳಲ್ಲಿ ಈ ರೋಗವು ಸರ್ವತ್ರವಾಗಿ ಹಬ್ಬಿದೆ. ಇಲ್ಲಿ ೬೦೦೦ ಜನಸಂಖ್ಯೆಯಿದೆ. ಇದರಲ್ಲಿ ೨೦೦೦ ಜನರಾದರೂ ಮಲೇರಿಯಾಕ್ಕೆ ತುತ್ತಾಗಿರುವರೆಂದು ಅಂದಾಜು ಮಾಡಲಾಗಿದೆ. ಮೃತರಾದವರಲ್ಲಿ ಮಕ್ಕಳ ಸಂಖ್ಯೆ ಹೆಚ್ಚು. ದೀರ್ಘ ಕಾಲದ ಉಪವಾಸದಿಂದಾಗಿಯೂ ಬಡತನದಿಂದಾಗಿಯೂ ಅನೇಕರು ಒಮ್ಮೆ ಗುಣ ಹೊಂದಿದ್ದರೂ ಈ ಜಾಡ್ಯದಿಂದ ಪುನರ್ಬಾಧಿತರಾಗಿರುವರು. ಹೀಗೆ ರೋಗ ಪೀಡಿತರಾದವರಲ್ಲಿ ಹೆಚ್ಚಿನವರು ಬಡುಕಿ ಉಳಿಯುವುದೇ ಕಷ್ಟವಾಗಿದೆ. ಅಧಿಕಾರಿಗಳೂ ನಾಗರೀಕರೂ ನಿವಾರಣಾ ಯೋಜನೆಗಳನ್ನು ಮಾಡುತ್ತಿರುವರು.

ಜ್ಯೊಂಟ್ ಸಿಲೆಕ್ಟ್ ಕಮಿಟಿಯ ರಿಪೋರ್ಟಿನ ಖಂಡನೆ.

ಸರಕಾರ ವಲ್ಲಭಭಾಯಿ ಪಟೇಲರು ಗುಜರಾತಿನಲ್ಲಿ ಸಂಚಾರಮಾಡುತ್ತಿರುವರು. ಅವರು ಸೂರತ್ತಿನಲ್ಲಿ ಅನೇಕ ಸಭೆಗಳಲ್ಲಿ ಭಾಷಣ ಮಾಡಿ, ಕಾರಣವು ಮಾಡದೇ ಭಾರತೀಯರೆಂದರೂ ಹಿಂಜರಿಯದೆ, ಜ್ಯೊಂಟ್ ಸಿಲೆಕ್ಟ್ ಕಮಿಟಿಯ ರಿಪೋರ್ಟಿನ ಸುಧಾರಣೆಗಳನ್ನು ತಿರಸ್ಕರಿಸಬೇಕೆಂದು ಹೇಳಿದರು. ಮುಂದವಕ್ಷೀಯರ ಧುರೀಣರಾದ ಶ್ರೀ ಚಿಂತಾಮಣಿಯವರೂ, ಸರ್ವೆಂಟ್ಸ್ ಒಫ್ ಇಂಡಿಯಾ ಸೊಸ್ಯಾಟಿಯೂ ಈ ಸುಧಾರಣೆಗಳನ್ನು ತಿರಸ್ಕರಿಸಿರುವುದರಿಂದ ಈ ನವಸುಧಾರಣೆಗಳು ಇನ್ನು ಯಾರಿಗೂ ಸ್ವೀಕಾರಕ್ಕೂ ಪಾತ್ರವಾಗಲಾರವು ಎಂದರು.

ಕಾ. ೨೮ರಲ್ಲಿ ವಂಡಿತ ಹೃದಯನಾಥ ಕುಂಜ್ರುರವರ ಅಧ್ಯಕ್ಷತೆಯಲ್ಲಿ ಇಂಡಿಯನ್ ಲಿಬರಲ್ ಫೆಡರೇಶನ್ ಪೂನಾದಲ್ಲಿ ಜರಗಿತು. ಅವರು ಜ್ಯೊಂಟ್ ಸಿಲೆಕ್ಟ್ ಕಮಿಟಿಯ ರಿಪೋರ್ಟನ್ನು ವಿಮರ್ಶಿಸಿ ಅದು ಯಾವ ಬಗೆಯಿಂದಲೂ ಹಿಂದೀಯರನ್ನು ಸಮಾಧಾನಗೊಳಿಸಲು ಸಮರ್ಥವಾಗಿಲ್ಲವೆಂದರು.

ರಿಫೋರ್ಮ್ಸ್ ರಿಪೋರ್ಟಿನ ಕುರಿತಾಗಿ ಸರ್ ತೇಜ ಬಹದ್ದೂರ್ ಸಪ್ರೂರವರು T'wentieth Century ಎಂಬ ಪತ್ರಿಕೆಯಲ್ಲಿಂದು ಲೇಖನವನ್ನು ಪ್ರಕಟಿಸಿರುವರು. ಅದು ಬಹು ಸಾರವತ್ತಾಗಿದ್ದು ಅದರಲ್ಲಿ ಮೂರು ರೌಂಡ್‌ಟೇಬಲ್‌ಗಳಲ್ಲಿ ವಿವರವಿದ್ದು ಹಿಂದೀಯರನ್ನು ಬ್ರಿಟಿಷ ಮುಖ್ಯದ್ದಿಗಳು ಯಾವ ದೃಷ್ಟಿಯಿಂದವಲೋಕಿಸುತ್ತಿರುವರೆಂಬ ವಿಷಯವಾಗಿ ಚರ್ಚಿಸಿರುವರು ಕೇಂದ್ರದಲ್ಲಿ ಜವಾಬ್ದಾರಿ, ಫೆಡರೇಶನ್ ಮೊದಲಾದ ಕುರಿತು ಅವರು ಹೇಳುತ್ತಾ, ಸರಕಾರದ ಧೋರಣೆಯು ಅಸಮರ್ಪಕವೆಂದು ತೀರ್ಮಾನಿಸಿರುವರು.

ಇಂಡಿಯನ್ ಲಿಬರಲ್ ಫೆಡರೇಶನಿನ ಬಹಿರಂಗ ಸಭೆಯು ಕಳೆದ ಆದಿತ್ಯವಾರ ಪುನಾದಲ್ಲಿ ಜರಗಿತು. ಮಹತ್ವದ ಅನೇಕ ಠರಾವುಗಳು ಮಂಜೂರುಗೊಂಡುವು. ಪ್ರಾಮುಖ್ಯ ಠರಾವಾಗಿ ನವಸುಧಾರಣೆಯ ಮೇಲಿನ ಲಿಬರಲ್ ಫೆಡರೇಶನ್ ಅಭಿಪ್ರಾಯದ ಠರಾವನ್ನು ಮಾನ್ಯ ವಿ. ಶ್ರೀನಿವಾಸ ಶಾಸ್ತ್ರಿಗಳವರು ಸೂಚಿಸಿದರು. ಅವರ ಸೂಚನೆಯಲ್ಲಿ ಪವಿತ್ರಾರತ್ನಗಳ ಪೂರ್ಣ ಖಂಡನೆಯಿತ್ತು. ಹಿಂದೀಯರ ಪರವಾದ ವರ್ಗವು ಈ ಮತ್ತಿನ ಸರಕಾರಿಯಿಂದ ಸಹಕರಿಸಿ ಪ್ರಯೋಜನವಿಲ್ಲವೆಂದೂ ಸಹಕಾರವನ್ನೂ ಈ ವು ನೀಡಲಾರೆವು. ನವಸುಧಾರಣೆಯಿಂದಲೇನು?— ಅದು ನಮಗೆ ಡೊಮಿನಿಯನ್ ಸ್ಟೇಟಸ್ ಎಂಬುದನ್ನೂ ಕೊಡಲಿಲ್ಲ. ಅನೇಕ ಸಲ ಇತ್ತ ವಾಗ್ದಾನವೆಲ್ಲ ಈಗ ಈ ಸುಧಾರಣೆಯು ಯಾವ ಅಂಗದಲ್ಲೂ ವೈಕ್ತವಾಗಿಯದಿಲ್ಲ' ಎಂದರು. ರಕ್ಷಣಾಕವಚಗಳ ವಿಷಯವಾಗಿ ಶ್ರೀ ಶಾಸ್ತ್ರಿಗಳು ಭಾಷಣಮಾಡುತ್ತ 'ಭದ್ರತೆಗಳು ಬೇಕು; ನಾವು ಒಪ್ಪುವೆವು. ಆದರೆ ಅವುಗಳು ಜೇಗರಬೇಕು! ಹಿಂದುಸ್ಥಾನಕ್ಕೆ ಬ್ರಿಟಿಷರಿಗೂ ಯಾವ ರಕ್ಷಣಾಕವಚಗಳು ಬೇಕೆಂದು ಮಹಾತ್ಮಾ ಗಾಂಧಿಯವರು ಲೋರ್ಡ್ ಇರ್ವಿನರೊಡನೆ ನಿರ್ಧರಿಸಿರುವರೆ. ಅವುಗಳು ಸಾಕು. ಸರಕಾರಕ್ಕೂ ಇಂತಹ ಭದ್ರತೆಗಳು ಸಾಕು' ಎಂದರು.

ಮಹಾ ಯುದ್ಧವು ಸಂಭವಿಸುವುದು ನಿಜ.

ವಿಜ್ಞಾನದ ಪ್ರವಾದ.

ಫ್ರಾನ್ಸ್ ದೇಶದ ಚಾರ್ಗೆ ಎಂಬಲ್ಲಿರುವ ಜ್ಯೋತಿಷ್ಯ ಶೋಧನಾಲಯದ ಅಬ್ಬೆ ಥೊಮಸ್ ನೊರೆಯು ಎಂಬವರು,–ಭೂಕೋಳದ ಪ್ರಬಲ ರಾಷ್ಟ್ರಗಳೆಲ್ಲವೂ, ಇನ್ನು ಕೆಲಕಾಲದಲ್ಲೆ ಒಂದು ಮಹಾ ಯುದ್ಧಕ್ಕೆ ಇಳಿವುವೆಂದು ಪ್ರವಾದ ನುಡಿಯುವರು!

ಸೂರ್ಯನಿಂದ ಒಂದು ವಿಧದ ವಿದ್ಯುಚ್ಛಕ್ತಿಯು ಹೊರಡುವುದು; ಅದರಿಂದ ಮನುಷ್ಯರ ಭಾವಗಳೆಲ್ಲ ಬದಲಾಯಿಸುವುವು; ಸ್ವಭಾವವು ಪರಿವರ್ತನೆಯಾಗುವುದು; ಅತಿ ಚಿಕ್ಕ ನಿವನದಿಂದಲಾದರೂ ಅವರು ಕೆಣಕಿಸಲ್ಪಟ್ಟು, ಸಮರಾಂಗಣಕ್ಕೆ ದುಮ್ಮಿಕ್ಕುವಂತಾಗುವುದು.–

ಯಾವಾಗ!—೧೯೩೬ರಿಂದ ೧೯೪೬ನೇ ಇಸವಿಯ ಅಂತ್ಯದೊಳಗೆ ಈ ದುರ್ದೆಸೆಯುಂಟಾಗುವುದೆಂದು ಅವರು ಹೇಳುತ್ತಾರೆ. ಕಳೆದ ಮಹಾ ಯುದ್ಧಕಾಲದಲ್ಲಿ ಹೀಗಾಯು ತೆಂಬುದನ್ನು ಅವರು ಸುಂದು, ತಮ್ಮ ಪ್ರವಾದ ದಲ್ಲಿ ಹೆಚ್ಚಿಕೆಯನ್ನು ತರುತ್ತಾರೆ.

ಫ್ರಾನ್ಸ್ ಸೈನ್ಯಾಗಾರಗಳಲ್ಲಿ ಈ ಕಾರಣದಲ್ಲಿ ಹೆಚ್ಚಿಕೆಗಳು ಆಗಲಿವೆ.

ಹಿಂದೀಯರಾದ ನಾವು ಹೇಗೆ ಮೋಸಹೊಂದುವೆವು!

ಓದಿರಿ — ದೇಸೀಯರಾದ ನಮ್ಮ (ಹಿಂದೀಯರ) ಅಜ್ಞಾನವನ್ನು ವಿದೇಶೀ ವ್ಯಾಪಾರಿಗಳು ಹೇಗೆ ಸುಲಭವಾಗಿ ಪರಿವರ್ತಿಸಿಕೊಳ್ಳುವರೆಂಬುದನ್ನು ತಿಳಿದುಕೊಳ್ಳಲು—ಓದಿರಿ ಇದನ್ನು!—

ನೆಲಗಡಲೆ-ಎಣ್ಣೆಯು ಬಾದಾಮಿ ಎಣ್ಣೆಯಾಗಿದೆಯೆಂದು ಗೊತ್ತೇ?

ನಮ್ಮ ದೇಶದಲ್ಲಿ "ಶುದ್ಧ ಲೂಕಾ ಬಾದಾಮಿ ಎಣ್ಣೆ" ಎಂಬ ಹೆಸರಲ್ಲಿ ಮಾರಾಟಮಾಡಲ್ಪಡುತ್ತಿರುವ ಎಣ್ಣೆಯು ಬಾದಾಮಿ ಎಣ್ಣೆಯಲ್ಲ; ನಮ್ಮ ದೇಶದಿಂದಲೇ ಒಯ್ದು ನೆಲಗಡಲೆಯಿಂದ ತೆಗೆದ ಶುದ್ಧ ನೆಲಗಡಲೆ ಎಣ್ಣೆಯಾಗಿದೆ. ("ಇಂಡಿಜಿನಸ್ ಡ್ರಗ್ಸ್ ಆಫ್ ಇಂಡಿಯಾ" ಇದರ ಪುಟ ೮೪ನ್ನು ನೋಡಿ.)

ವನಸ್ಪತಿ ತೈಲವಲ್ಲ—ಮಿನಿನ ತೈಲ! ತಿಳಿಯಿತೇ?

"ಇಂಪೀರಿಯಲ್ ಕೌನ್ಸಿಲ್ ಆಫ್ ಅಗ್ರಿಕಲ್ಚರಲ್ ರಿಸರ್ಚ್" ಇದರ "ಇಂಡಿಯನ್ ಫ್ಯಾಟ್ಸ್ ಆಂಡ್ ಆಯಿಲ್ ಕಮಿಟಿ"ಯ ತೃತೀಯ ಸಭೆಯಲ್ಲಿ, ಸ್ವಕೃತ ವರದೀಕರಣದಿಂದ "Edible Hardened Oil" (ಆಹಾರಕ್ಕುಪಯೋಗಿಸಬಹುದಾದ ತೈಲ) ಎಂಬ ಟೀನನ್ನು ಹೆಚ್ಚಿಸಿ, ವರದೀಕರಣದಿಂದ ಮತ್ಸ್ಯತೈಲವನ್ನು ಹಿಂದೂದೇಶಕ್ಕೆ ಆಮದು ಮಾಡಿ "ಸಸ್ಯತೈಲ" ವೆಂಬುದಾಗಿ ಮಾರಾಟಮಾಡುತ್ತಿರುವರೆಂದು ಬಯಲಾಯಿತು ಆದರೆ,—

ಸತ್ತ ಹೆಗ್ಗಣಗಳು, ಬೆಕ್ಕುಗಳು, ನಾಯಿಗಳ ಮತ್ತು ಇನ ಇತ್ಯಾದಿಗಳ ಕೊಬ್ಬಿನಿಂದಾಗುವ ಸಾಬೂನುಗಳು!—

ಇವುಗಳಿಗೆ ಸರಿಗಟ್ಟುವಂತಹುದು ಮತ್ತಾವುದಿದೆ? ಯುರೋಪಿನಲ್ಲಿ ಮೃಗಗಳ ಕೊಬ್ಬನ್ನೂ ವಿಷವು ಎಣ್ಣೆಯನ್ನೂ ಆಹಾರಕ್ಕಾಗಿ ಉಪಯೋಗಿಸುತ್ತಿರುವಲ್ಲಿ ಸಾಬೂನುತಯಾರಿಯಲ್ಲಿ ಉಪಯೋಗಿಸುವ ಹೆಚ್ಚಿನ ಕೊಬ್ಬುಗಳು ಸತ್ತ ಮೃಗಗಳ ಶರೀರಗಳಿಂದಲೂ, ವಧಾಖಾನೆಗಳಿಂದಲೂ, ರಸ್ತೆಗಳ 'ಕಚರಾ'ದಿಂದಲೂ, ಒಮ್ಮೊಮ್ಮೆ ನರಬೇಹಗಳಿಂದಲೂ ದೊರಕಿಸಿಕೊಂಡಂಥವುಗಳಾಗಿವೆ (ಸರ್ ಎಫ್ ಎ ಟಾಲ್ಬೊಟ್ ರವರ "ಮಿಲ್ಲಿಯನ್ಸ್ ಫ್ರೊಮ್ ವೇಸ್ಟ್" ಎಂಬ ಗ್ರಂಥವನ್ನೋದಿರಿ.)

ಗೊಡ್ರೆಜ್ ವನಸ್ಪತಿ ಸುಗಂಧಸಾಬೂನುಗಳ

ವಿಷಯವಾಗಿ, ಅದನ್ನುಪಯೋಗಿಸುವ ಪ್ರಸಿದ್ಧಪುರುಷರೇನು ಹೇಳುವರೋ ಓದಿರಿ —

ಕವಿರತ್ನೀಂದ್ರ:—"ಗೊಡ್ರೆಜ್ ಸಾಬೂನುಗಳಿಗಿಂತ ಉತ್ತಮವಾದ ವಿದೇಶೀ ಸಾಬೂನುಗಳನ್ನು ನಾನು ಕಂಡಿಲ್ಲ ಇನ್ನು ಮುಂದೆ ಗೊಡ್ರೆಜ್ ಸಾಬೂನುಗಳನ್ನೆ ಉಪಯೋಗಿಸಲು ನಿರ್ಧರಿಸಿದ್ದೇನೆ"

ಕಲ ವರ್ಷಗಳ ಹಿಂದೆ ಡಾ। ಅನ್ನಿಬಿಸೆಂಟರು ತಮ್ಮ "ನ್ಯೂ ಇಂಡಿಯಾ"ದ ಪತ್ರಿಕೆಯಲ್ಲಿ, ಗೊಡ್ರೆಜ್ ಸಾಬೂನುಗಳು ಸ್ವದೇಚದಲ್ಲಿ ಅತ್ಯುತ್ಕೃಷ್ಟವೆಂದು ಪ್ರಶಂಸಿಸಿದ್ದರು

ರಾಷ್ಟ್ರೀಯ ಮಹಾಸಭೆಯ ಮಾಜಿ ಅಧ್ಯಕ್ಷರಾದ ಡಾ। ಅನ್ಸಾರಿಯವರು— ಗೊಡ್ರೆಜ್ ಸಾಬೂನುಗಳ ವಿಷಯವಾಗಿ ಹೇಳುವರು —"ಗೊಡ್ರೆಜ್ ಸಾಬೂನುಗಳ ಉತ್ತಮ ಗುಣಗಳನ್ನು ಗುರುತಿಸಲು ನನಗೆ ಅತ್ಯಾನಂದವಾಗುತ್ತದೆ. ನಾನು ಅವುಗಳನ್ನು ಕಳೆದ ಹತ್ತು ವರ್ಷಗಳಿಂದಲೂ ಉಪಯೋಗಿಸುತ್ತಿದ್ದು, ಯುರೋಪಿನ ಯಾವ ಉತ್ತಮ ಸಾಬೂನುಗಳಿಗಿಂತಲೂ ಉತ್ಕೃಷ್ಟವೆಂಬುದನ್ನು ಮನಗಂಡಿದ್ದೇನೆ ಅವುಗಳು ಹಿಂದೂದೇಶದಲ್ಲಿ ಸಿದ್ಧವಾಗುತ್ತಿರುವುದಕ್ಕೂ ಅವುಗಳ ಉತ್ಕೃಷ್ಟತೆಯ ದೆಸೆಯಿಂದಲೂ ಹಿಂದೀಯರೆಲ್ಲ ಅವುಗಳನ್ನೇ ಉಪಯೋಗಿಸಬೇಕೆಂದು ನನ್ನ ಸಲಹೆ."

ಗೊಡ್ರೆಜ್ ಗಂಧದ ಸಾಬೂನು ಮತ್ತು } ಇವುಗಳನ್ನು ಉಪಯೋಗಿಸಿರಿ.
ಶೇವಿಂಗ್ ಸ್ಟಿಕ್ }

ಸೋಲ್ ನಿಜಂಟರುಃ

ನಾದಿರ ಷಾ, ಪ್ರಿಂಟರ್ ಎಂಡ್ ಕೊ., ಬ್ರೋಡ್ವೇ, ಮದರಾಸು

ಹೆಡ್ ಆಫೀಸುಃ ಬೊಂಬಾಯಿ ಇತರ ಶಾಖೆಗಳು—ಕಲ್ಕತ್ತಾ, ಲಾಹೋರ್ ಮತ್ತು ಕರಾಚಿ

ವಿ. ಸೂ:—ಗೊಡ್ರೆಜ್‌ರವರ ಹೆಸರಲ್ಲಿ ಮಾರಾಟವಾಗುತ್ತಿರುವ ಬಾರ್‌ಸೋಪ್ ಮತ್ತು ಇತರ (ಬಟ್ಟೆ ಬೊಗಸುವ) ಸಾಬೂನುಗಳಲ್ಲ ಗೋದ್ರೆಜ ರವರಿಗೆ ಸಂಬಂಧವಿಲ್ಲ

ವಾ

"ಇಂಬಳಕ್ಕೆ ಹಿಟ್ಟುತ್ತಾ ಇರ್ ಎಂದು ಮಾತು ಇದ್ದ ಗಿಡ್! ಗರ್ಭ ತೊಳೆ! ಗರ್ಭಕ ಬಂಗಳ್ಳ! ಈ ಸುದ್ದುತೆಯನ್ನು ತಂತುಪಿಡಿದವರಯ್ಯ! ನಿಜ ಜಾಗಿಯೂ ಧನ್ಯರಿದರು!

ಈ ಚರ್ಮದ ಮಹಿಮೆಯೆಂತಹದಯ್ಯ!—ಸೂರ್ಯನೂ ಚರ್ಮದಂತೆ! ಚಂದ್ರನೂ ಚರ್ಮದಂತೆ! ಭೂಮಿಯೂ ಚರ್ಮದಂತೆ! ನಕ್ಷತ್ರಗಳೂ ಚರ್ಮದಂತೆ! ನೀರಿಗೆ ಚಳ್ಳಿಸೆದರೆ ಅಲ್ಲೂ ಚರ್ಮ! ಭೈಸಿಯ ಪ್ರಯಾಣವೂ ಚರ್ಮದಂತೆ! ಬಲ್ಲೆಲ್ಲಿ ಚರ್ಮ! ಚರ್ಮಾ! ಚರ್ಮಾ!

ನಿಮ್ಮ ಕೈಯಲ್ಲಿರುವ ಕಾಸೂ ಚರ್ಮದಂತೆ! ನಿಮ್ಮ ಕೆಣ್ಣುಗಳು ಚರ್ಮದಂತೆ! ನಿಮ್ಮ ಲಾಜು ಚರ್ಮದಂತೆ! ನಿಮ್ಮ ಕವಿಯ ತೂತುಗಳು ಚರ್ಮದಂತೆ! ನಿಮ್ಮ ತಲೆಯು ಭರ್ತದಂತೆ! ನಿಮ್ಮ ಅತ್ಮಸಂಚಾರವೂ ಚರ್ಮದಂತೆ! ಅದರ ಜನನ ಮರಣಗಳು ಚರ್ಮದಂತೆ! ನಿಮ್ಮ ಸೃಷ್ಟಿಚರ್ಮ ಚರ್ಮದಂತೆ!

ಸೈನರಾಯರುಗಳ ಅಗಸನ ನರ್ಗಮನಗಳು ಚರ್ಮದಂತೆ! ಸ್ಟೇಟ್‌ಸೆಕ್ರೆಟರಿಗಳ ಭಾಷಣವು ಚರ್ಮದಂತೆ! ಮಂತ್ರಿವರ್ಯರ ಆಕಾಸನೆಗಳು ಚರ್ಮದಂತೆ! ಗಾಂಧಿ ಟೀಯ ಬಂಧನ ಧಿಡುಗಡೆಗಳು ಚರ್ಮದಂತೆ! ಹಿಂದೀಯರ ಅಸ್ಪೃಶ್ಯವೂ ಚರ್ಮದಂತೆ! ಸರ್ವಭೌಮರ ಸಂದೇಶವೂ ಚರ್ಮದಂತೆ!

ವೈಸರಾಯರು ಬೊಸ್ಸೆ ತರಿಸಿದ ವಿಮಾನದ ಮುಖವು ಚರ್ಮದಂತೆ! ಅದು ಹಾರುವುದೂ ಚರ್ಮದಂತೆ! ಅದರ ಮೋಟರಿನ ಕಾಲುಗಳು ಚರ್ಮದಂತೆ! ಅವರ ಗೋಡೆಯ ಗಡಿಯಾರ ಚರ್ಮದಂತೆ! ರಿಸ್ಟವಾಚು ಚರ್ಮದಂತೆ! ಅದರ ಒಳಭಾಗ ಚರ್ಮದಂತೆ! ಜ್ಯೊಂಟ್‌ಸಿಲೆಕ್ಟ್ ಕವಿಟಿಯ ಸುಧಾರಣೆಗಳು ಚರ್ಮದಂತೆ! ರೌಂಡ್‌ಟೇಬಲ್ ಚರ್ಮದಂತೆ! ಲಂಡನಿನ ವೈಟ್‌ಹೋಲ್ ಚರ್ಮದಂತೆ! ಕೆಲವರ ಬುದರಬುದ್ದಿಯೂ ಚರ್ಮದಂತೆ! ಅವರುಣ್ಣುವ ಬಟ್ಟೆಬಟ್ಟೆ ಚರ್ಮದಂತೆ! ಎಳೆಯುವ ಸಿಗರೇಟಿನ ಟಿನ್ನು ಚರ್ಮದಂತೆ! ಸಿಗರೇಟಿನ ತುದಿಯು ಚರ್ಮದಂತೆ! ಚುಟ್ಟುವ ತುದಿಯು ಚರ್ಮದಂತೆ!

ಸಿಲೆಕ್ಟ್‌ಕಮಿಟಿಯ ರಿಪೋರ್ಟು ಬರೆವಾಗ ಉಪಯೋಗಿಸಿದ ದೀಪದ ಮೂಸ್ ಚರ್ಮದಂತೆ! ಅದರೊಳಗಿನ ಬಾರುಡೆಯು ಚರ್ಮದಂತೆ! ಅದು ಬರೆಯಲ್ಪಟ್ಟ ಪೆನ್ನಿನ ತಲೆಯೂ ಚರ್ಮದಂತೆ! ಸಾಯ್ದಿನ ಹೆಸರಿನ ಅಕ್ಷರವೂ ಚರ್ಮದಂತೆ!

ತಿತಿತಿತಿ! ಗರ್ಭಕರಲ್ಲಿ ಸಾಯ್ದನು ಇದೇಕೆ ಚರ್ಮಗಳ ಸುದ್ದಿಯೆತ್ತಿದ? ಎಂದು ನಿಮ್ಮೆಲ್ಲರಿಗೆ ಆಶ್ಚರ್ಯವಾಗಬಹುದು! ನೀವು ಆಶ್ಚರ್ಯದಿಂದ ಬಾಯಿತ್ತಿದರೆ ನಿಮ್ಮ ಬಾಯೊಳಗೂ ಚರ್ಮವು ತೋರುತ್ತಿದೆ! ಆಶ್ಚರ್ಯಕ್ಕೆ ಕಾರಣವಿಲ್ಲ! ಬೇಗನೆ ಬಾಯ್ಮುಚ್ಚಿ ಬಾಯ್ಮುಚ್ಚಿದಿರಾ? ಒಳ್ಳೆಯದೇ ಆಯಿತು! ನೋಡಿ ನಿಮ್ಮ ನೋಡಿಯು ಈಗ ಉರಿಯಾಗಿ ಚರ್ಮದಂತೆ ತೋರುತ್ತಿದೆ! ನಗಬೇಡ! ಳೆ ನಗಬೇಡಿ! ನಗುವಿರಾ? ನೆಗಿರಿ! ಇನ್ನೂ ಚೆನ್ನಾಗಿ ನಗಿರಿ ನೋಡಿ ನಿಮ್ಮ ಮುಖವಿಡೀ ಕೆಂಪಗಿನ ಚರ್ಮದಂತೆ ಕಾಣುತ್ತಿದೆ

ಒಹೋ ತಾವು ಸಾಹಿತಿಗಳೋ! ಪ್ರತಿಸ್ಪೆಯನ್ನು ಕಾಯ್ದುಕೊಳ್ಳಬೇಕೆಂದು ಗರ್ಭಕರಲ್ಲಿ ನಗಲಾರಿರಾ? ಇಲ್ಲ! ನೀವು ನಗಲಾರಿರಿ! ಒಂದಿಕ ನಗಲಾರಿರಿ! ನೋಡಿ ನಿಮ್ಮ ದುಃಖ ನೋಡಿ! ಕನ್ನೆ ನೋಡಿ ಉಬ್ಬುತ್ತಿದೆ! ಅಸ್ಸಲ್ ಕಿತ್ತಳೆ ಹಣ್ಣಿನ ಹಾಗೆ ಕಾಣುತ್ತಿರುವಿರಿ! ತಾಜಾ ಚರ್ಮದಂತೆ ತೋರುತ್ತಿರುವಿರಿ! ನಗಬೇಕೋ ಬೇಡವೋ ಎಂಬ ಪ್ರಶ್ನೆಯದ್ದಿದೆ ನಿಮ್ಮ ಚರ್ಮದಂತಹ ಮುಖಗಳಲ್ಲಿ! ಆ ಪ್ರಶ್ನೆಯು ಚರ್ಮದಂತೆ ಸುತ್ತುತ್ತಿದೆ! ನೋಡಿ, ಅಲ್ಲಿಯೂ ಚರ್ಮ!

ಚರ್ಮದ ಮಹಾತ್ಮೆ ತುಂಬಾ ಇದೆ ಸ್ವಾಮಿ ಆದರೂ ಗರ್ಭಕರ ವಿನಿಸ್ಪಿಂಗಿಗೆ ಇಷ್ಟು ಸಾಕು ದಯಮಾಡಿ ತಮ್ಮ ಚರ್ಮಗಳನ್ನು ಸ್ವದೇಶಾಭಿಮಾನಿ ರವಾನಿಸಿ ಈ ಧರ್ಮದ ಚರ್ಮದಲ್ಲಿ ಸಂಪಾದಕರನ್ನು ಪ್ರೋತ್ಸಾಹಿಸಿರಿ!

ಒಂದು ಪದ ಹೇಳುತ್ತೇನೆ —

ಸಂದಿತಪ್ಪ ಸಾಲ್ಮ
ಬಂದಿತಪ್ಪ ಐದು!
ಬರುವುದಪ್ಪ ಅದು!
ಇದುವುದಪ್ಪ ನಿಲು!
ಕೆಟ್ಟುಪರ್ ಹೋಯಿತು!
ಸಪ್ಪರೇನೊ ಆದಿತು!
ದುಷ್ಕಾಲ ಪ್ರಾರಂಭ!
ಧ್ವಸ್ತಜನ ಹಾರಿತು!

'ಡಿಡ್‌ಮೋರ್ಸ್‌ಡಿಂಗ್'

'ಸಾಯ್ದ'

FOR SALE

A Coffee Estate situated in Mudigere Taluk, Banakal Hobli with a decent Bungalow in the middle of the Estate on the roadside Total area of the Estate including wet lands etc about 240 acres

For further particulars apply to

B Ramanatha Prabhu,
Coffee Planter, Baragode Estate,
Banakal Post, Mudigere Taluk,
Kadur District

ಶಿವರಾಮ ಕಾರಂತ ವಿರಚಿತ

ಗ್ನಾನ—

ಜ್ಞಾನದ ಮೇಲೆ ವ್ಯಂಗ ಟೀಕೆ.

ಈಗ ಗ್ರಂಥರೂಪದಲ್ಲಿ ಸಿದ್ಧವಾಗಿದೆ.
ದಸ್ರಗಿನ ಲಟಿಕ್ ಕಾಗದದಲ್ಲಿ ಮುದ್ರಣ.
ಕ್ರೌನ್ ½ ಆಕಾರದ 188 ಪುಟಗಳು
ಉತ್ತಮ ಕರಗತಿಯ ಹಾಸ್ಯ
ಬೆಲೆ ರೂ. 1—4—0.

ಶಾರದಾ ಭೂಷಣಾನೆ,
ರಥಬೀದಿ ಮಂಗಳೂರು
ಇಲ್ಲಿಂದ ಪಡೆಕೊಳ್ಳಬಹುದು

1906ರಲ್ಲಿ

ಆಲ್ಪಾವಸ್ಥೆಯಲ್ಲಿ ಹುಟ್ಟಿ ಶೈಶವವನ್ನು ಮಂಗಳೂರಿನಲ್ಲಿಯೇ ಕಳೆದು, ಕೌಮಾರ್ಯದಲ್ಲಿ ದಕ್ಷಿಣ ಕನ್ನಡ ಜಿಲ್ಲೆಯ ಎಲ್ಲಾ ತಾಲೂಕುಗಳಲ್ಲಿಯೂ ಯೌವನದ ಆದಿಯಲ್ಲಿಯೇ ಮುಂಬಾಯಿ, ಕೊಚ್ಚಿ, ತಿರುವಾಂಕೂರು, ಮೈಸೂರು ಸಂಸ್ಥಾನಗಳಲ್ಲಿಯೂ ಪಸರಿಸಿ, ನಿಷ್ಠಾತಿ ಪಡೆದು, ಇನ್ನೂ ಅಭಿವೃದ್ಧಿ ಪಟ್ಟು ದೇಶಸೇವೆಯನ್ನು ಮಾಡಲಿಚ್ಛಿಸುವ ಮದ್ರಾಸ್ ಸಂಸ್ಥಾನದ ದೇಶೀಯ ಜ್ಯೊಂಟ್ ಸ್ಟಾಕ್ ಬ್ಯಾಂಕುಗಳಲ್ಲಿ ಎರಡನೇ ಸ್ಥಾನವನ್ನು ಹೊಂದಿರುವ

ಕೆನರಾ ಬ್ಯಾಂಕ್ ಲಿಮಿಟೆಡ್

ಶೇತ್ತ ಮೂಲಧನಃ ರೂ. 330,900. ಕ್ಷೇಮನಿಧಿಗಳು: ರೂ. 444,647. ಠೇವಣಾತಿಗಳು: ರೂ. 57,67,040.

ಆಫೀಸುಗಳು:—ಮಂಗಳೂರು, ಮುಂಬಾಯಿ, ಅಲಪ್ಪೆ, ಕೊಚ್ಚಿ, ಏರ್ನಾಕುಳಂ, ಕಲ್ಲಿಕೋಟೆ, ಬೆಂಗಳೂರು, ಶಿಕ್ಕಮಗಳೂರು, ಪುತ್ತೂರು, ಕಾಸರಗೋಡು, ಕಾರ್ಕಳ, ಉಡುಪಿ, ಕುಂದಾಪುರ, ಗಂಗೊಳ್ಳಿ ಮತ್ತು ಬಂಟ್ವಾಳ.

ಎಲ್ಲಾ ತರದ ಬ್ಯಾಂಕಿಂಗ್ ವಹಿವಾಟುಗಳು ನಡಿಸಲ್ಪಡುತ್ತವೆ.

Canara Bank Ltd.

ಪತ್ರಿಕಾ ಪ್ರಪಂಚ.

ಮನುಷ್ಯನಿಂದರೇನು? ಅನುಕರಣವೇ ಪ್ರತಿಭೆಯಲ್ಲ ಪೋಲಾನೆಗ್ರಿ ಮತ್ತು ಉದಯಶಂಕರ. ಹಿಂದೀ—ತೆಲುಗು.

ಮನುಷ್ಯನಿಂದರೇನು?

ಮನುಷ್ಯನ ಪ್ರಯತ್ನವು ಎಂದೂ ಗುಣದಿಂದ ಗುಣಕ್ಕೆ ಬದಲಾಗುತ್ತಾ ಇದೆ. ನೈಯಕ್ತಿಕ ಚಿಗುರಿನ ನಿರ್ದೇಶನಾರ್ಥ ಮಾತ್ರ ಅವನ ಆ ಗುಣದ ಸ್ಥಾನದಲ್ಲಿ ವಿಶ್ವಚೈತನ್ಯವು ಪ್ರತಿಷ್ಠಾಪಿತವಾಗುತ್ತದೆ. ಸ್ವಾರ್ಥಗಳ ಕೂಪಗಳಿಂದ ಅವನ ಆಚಾರ ವಿಚಾರಗಳೆಲ್ಲ ಹೊರಬಾಹುದಾಗಿ ಅವನು ವಿಶ್ವದ ಸೇವಕನಾಗುವನು. ಇನ್ನು ಮೇಲಿನ ಪ್ರೇರಣವು ಮನುಷ್ಯನಲ್ಲಿ ಮೂಡಿದೊಡನೆ ಅವನು ಮಹಾತ್ಮನಾಗುವನು. ಇದಕ್ಕೆ ಅವನು ತನ್ನ ಬಾಂಧವ್ಯವನ್ನು ಇತರ ಪ್ರಾಣಿಗಳೆಡೆಗೆ ಮುಡಿಸಿಕೊಂಡಂತಾಗುತ್ತದೆ. ಮನುಷ್ಯನೆಂದು ಭೂಗದ ಅಂಧಕಾರವು ತೊಲಗಿ ಅವನಿಗೆ ಸ್ವತಂತ್ರತ್ವವು ಸಿಗುತ್ತದೆ

'Vishva Bharathi News'

ಶ್ರೀ ಸುಭಾಷ್ಚಂದ್ರ ಬೋಸರು ಲೆಟನ್ ಅಮೆರಿಕಾ ಖಂಡದ ಹಿಂದೂದೇಶಗಳಿಗೊಳಗಿನ ವ್ಯಾಪಾರ ಸಂಬಂಧವನ್ನು ವಿಶೇಷವಾಗಿ ವೃದ್ಧಿಯಾಗುವುದಕ್ಕಾಗಿ ಕೆಲವು ಸೂಚನೆಗಳನ್ನು ಕೊಟ್ಟಿದ್ದಾರೆ. ಅವು —

ದಕ್ಷಿಣಾಮೆರಿಕವು ಬ್ರಿಟಿಷ್ ಸಾಮ್ರಾಜ್ಯದ ಅರ್ಧಕ್ಕಿಂತ ವಿಸ್ತೀರ್ಣವಿದೆ. ಹಿಂದೂದೇಶದ ಸರಕುಗಳನ್ನು ಇಂಗ್ಲಾಂಡ್ ಮತ್ತು ಅಮೆರಿಕಗಳು ಪಡೆಯುತ್ತವೆ ಆದರೂ ನಾವು ದಕ್ಷಿಣ ಅಮೆರಿಕದೊಡನೆ ನೇರವಾ ವ್ಯಾಪಾರ ನಡೆಸಿದರೆ ಹಿತಕಾರಿಯಾಗಿದೆ. ಹೀಗೆ ಮಾಡಿದರೆ ಮಧ್ಯಸ್ಥರಾಗಿ ಬರುವವರಿಗೆ ಸಿಗುವ ಲಾಭವು ಹಿಂದೂದೇಶಕ್ಕೆ ಲಭ್ಯವಾಗುವುದು. ಒಬ್ಬ ವಿಶ್ವಕರಂಡಕಿ ಹಿಂದೂದೇಶದ ಪದನ್ನು ಒಡವೆಗಳನ್ನು ಒಂದು ಭೀಮಾಕಿನಲ್ಲಿ ಹಾಕಿ ನಾವು ಇಲ್ಲಿಯವರಿಗೆ ಪ್ರದರ್ಶಿಸಬೇಕು. ಇದರಿಂದ ವ್ಯಾಪಾರವು ಹೆಚ್ಚುವುದು ಕೆಲವು ಹಿಂದೀಯರು ದಕ್ಷಿಣ ಅಮೆರಿಕದಲ್ಲಿ ಉಳಿದು ಹಿಂದೂದೇಶಕ್ಕೆ ಇಲ್ಲಿಯ ವಾರ್ತೆಗಳನ್ನು ಕಳುಹಿಸಬೇಕು. ಇಲ್ಲಿರುವ ಹಿಂದೀಯರು ಸ್ಪಾನಿಶ್ ಭಾಷೆಯನ್ನು ಕಲಿಯಬೇಕು ಆದರು ಹಿಂದೂದೇಶದ ಉನ್ನತಿಗಾಗಿ ಇಲ್ಲಿ ಪ್ರಚಾರ ಮಾಡಬೇಕು

'India and the world'

ಅನುಕರಣವೇ ಪ್ರತಿಭೆಯಲ್ಲ

ನಾಟಕದಲ್ಲಿ ಒಬ್ಬ ನಟನನ್ನು ನೋಡಿ ಅವನಂತೆ ಅಭಿನಯಿಸುವುದನ್ನು ನಾವೆಂದಿಗೂ ಉತ್ತಮ ನಟನೆಯೆನ್ನುವುದಿಲ್ಲ. ಅವನನ್ನು ಅನುಕರಣಪಟುವೆನ್ನುವೆವು ಹಾಗೆಯೇ, ಒಬ್ಬನು ಬರೆದ ಚಿತ್ರವನ್ನು ನೋಡಿ ಬರೆದವನನ್ನು ಉತ್ತಮ ಚಿತ್ರಗಾರನೆನ್ನುವುದಕ್ಕಾಗುವುದಿಲ್ಲ. ಅನೇಕರು ಈ ಬಗೆಯ ನಕಲೆತ್ತುವುದನ್ನೇ ಕಲಾ ಪ್ರತಿಭೆಯೆಂದುಕೊಳ್ಳುವರು. "ನಮ್ಮ ಹುಡುಗ ರವಿವರ್ಮನ ಚಿತ್ರದ ಹಾಗೆಯೇ ಬರೆದಿದ್ದಾನೆ ಅವನಿಗೆ ಕಲೆಯಲ್ಲಿ ತುಂಬಾ ಪ್ರತಿಭೆಯುಂಟು" ಎಂದು ಜೇಳುವುದನ್ನು ಅನೇಕವಾಗಿ ಕೇಳಿದ್ದೇನೆ. ಇಂತಹ ತರುಣರು ಅನುಕರಣಪಟುಗಳು ಅವರ ಅಭ್ಯಾಸವೆಲ್ಲ ನಕಲೆತ್ತುವುದರಲ್ಲಿ. ಹೀಗೆ ನಕಲೆತ್ತುವುದರಲ್ಲಿ ಕುಶಲರಾದವರಲ್ಲಿ ಸಾಕಾದಷ್ಟು ತಾತ್ಕಾಯೂ ಪರಸ್ಪರ ಪ್ರಮಾಣ ಜ್ಞಾನವೂ, ವರ್ಣಗಳ ಜೇಕೆ ಮತ್ತು ತಾರತಮ್ಯವೂ ಚೆನ್ನಾಗಿ ತಿಳಿದಿರಬಹುದು ಆದರೆ, ಇದನ್ನೇ ಪ್ರತಿಭೆಯೆಂದುಕೊಳ್ಳಬಾರದು. ಉತ್ತರು ಚಿತ್ರರಚನೆಗೆ ಈ ಗುಣಗಳೆಲ್ಲ ಅವಶ್ಯಕವಾದರೂ ಇಷ್ಟುಮಾತ್ರವೇ ಸಾಲದು. ಚಿತ್ರರಚನಾ ಕೌಶಲ್ಯವೂ ಸ್ವಕಲ್ಪನಾ ಶಕ್ತಿಯೂ ಅಳವಡಿಸಿ ಸಿದ್ಧರಿಸುವ ಶಕ್ತಿಯೂ ಅತ್ಯವಶ್ಯಕ ಕೆಲವರಲ್ಲಿ ಸಹಜವಾಗಿ ಇಂತಹ ಸೃಷ್ಟಿಸಾಮರ್ಥ್ಯವೂ ಆತುರತೆಯೂ ವ್ಯಕ್ತವಾಗುವುದು ಇದನ್ನೇ ನಾವು ಪ್ರತಿಭೆಯೆನ್ನುವುದು ಈ ಪ್ರತಿಭೆಯನ್ನು ಅನುಕರಣಕ್ಕೆ ಪ್ರತಿಭೆಯಾಗಿ ಭಾವಿಸಬಾರದು. ಇಂತಹ ಪ್ರತಿಭೆಯು ಚೆನ್ನಾಗಿ ಪ್ರಯೋಜನವಾಗಲು ಸರಿಯಾದ ಸಲಿವೇಶವೂ ತಕ್ಕ ಶಿಕ್ಷಣವೂ ಅವಶ್ಯಕ. ಚತುರನಾದ ಗುರುವು ಪಾತ್ರಜ್ಞ ಸಹಾಯಕನಾಗುವನು

'ಶಲಾ'.

ಪೋಲಾನೆಗ್ರಿ ಮತ್ತು ಉದಯಶಂಕರ.

ಪೋಲಾನೆಗ್ರಿ ಎಂಬ ಪ್ರಖ್ಯಾತ ಸಿನೆಮ ನಟಯು ಅಮೆರಿಕಾದಿಂದ ಹೊರಿಟ್ಟಿದ್ದಾಗ ಬಂದಾಗ ನ್ಯೂ ಯೋರ್ಕಿನ ಸ್ನೇಹಿತ ಜೇಮ್ಸ್ ಫಿಯೇಟರಿನಲ್ಲಿ ಉದಯಶಂಕರ ನೃತ್ಯವಿಲಿಯಮ್ಸಂದು ತಿಳಿದುಕೊಂಡಳು ಅವಳು ಒಡನೆ ಅಲ್ಲಿಗೆ ಹೋದಳು ಉದಯಶಂಕರನ ಪ್ರಥಮ ನೃತ್ಯಕಾರ್ಯಕ್ರಮಕ್ಕೆ ಏನಾ ಪೋಲಾನೆಗ್ರಿಯು ರಂಗಭೂಮಿಯ ಹಿಂದುಗಡೆಗೆ ಹೋಗಿ ಉದಯಶಂಕರರನ್ನು ಕಂಡು ಅಭಿನಂದಿಸಿದಳು "ಅನೇಕ ವರ್ಷಗಳಿಂದ ನಾನು ಇಂತಹ ನೃತ್ಯನನ್ನು ಕಂಡಿಲ್ಲ ನನ್ನ ಅನುಭವದಲ್ಲಿ ಇದೀಗ ಅತ್ಯಂತ ಆನಂದಜನಕಳಲೆ ಅನ್ನಪೊಮ್ಮಲೊ ಏಳು ಕಾಲವಾದ ನಂತರ ಈ ಕಲೆಯು ನಿಮ್ಮಲ್ಲೇ ಪ್ರತಿಮಾಂತರಗೊಂಡಿತು ಅನ್ನಪೊಮ್ಮಲೊವಿಗಿಂತ ನೃತ್ಯ ವೆಂದರೆ ನನಗೆ ಮಹದಾನಂದದ ವಿಷಯ" ಎಂದಳು ಅದಕ್ಕೆ ಉದಯಶಂಕರರು "ನಾನು ಆವಳಿಗೆ ನನ್ನ ಎಲ್ಲಾ ಹಿಂದೂನೃತ್ಯಗಳನ್ನು ನನ್ನ ಸಂಗಡಿಗರೊಡನಿದ್ದು ಒಂದು ಸಲವೂ ತೋರಿಸಲಾರದಾದೆನು" ಎಂದರು ನಿಗ್ರಿಯು ಉದಯಶಂಕರನ ಸಂಪೂರ್ಣ ನೃತ್ಯವನ್ನು ನೋಡಿದ ನಂತರ—"ಉದಯಶಂಕರನ ನೃತ್ಯವು ಸರ್ವೋತ್ಕೃಷ್ಟ. ಅವನ ನರ್ತನದಲ್ಲಿ ದೈವತ್ವವಿದೆ ಅದು ಕೃತಕ ಕಡಮೆ ಜೇಳಿದೆ." ಎಂದಳು

"Modern Review"

ಹಿಂದೀ—ತೆಲುಗು.

'ಭಾರತಿ ಎಂಬ ತೆಲುಗು ಮಾಸಪತ್ರಿಕೆಯ ಆಗಸ್ಟು ತಿಂಗಳ ಸಂಚಿಕೆಯಲ್ಲಿ 'ಹಿಂದೀ—ತೆಲುಗು ಎಂಬ ಒಂದು ಸಂಪಾದಕೀಯ ಲೇಖನವಿದೆ ದೇಶಕ್ಷೇಮವನ್ನು ದೃಷ್ಟಿಯಿಟ್ಟುಂಡ ಆ ಲೇಖನವು ತೆಲುಗರಿಗೆ ಎಷ್ಟು ದುಷ್ಟಿಗೆ ಅನ್ಯಯಿಸುತ್ತದೆಯೋ ಕನ್ನಡಿಗರಿಗೂ ಅಷ್ಟಿನ ಮಟ್ಟಿಗೆ ಅನ್ವಯಿಸುವುದರಿಂದ ಆದರ ಭಾವಾಂತರವನ್ನು ಇಲ್ಲಿ ಕೊಡುತ್ತೇವೆ —

"ತೆಲುಗಿನವರು ಹಿಂದೀಯನ್ನು ಓದುವುದರಿಂದ ತೆಲುಗಿಗೆ ಅಪಕಾರವಾಗುತ್ತಿರುವ ಮಾತು ವಾಸ್ತವ ಇದು ಇರೆಗೆ ಇಂಗ್ಲಿಷು ಒಂದೇ ತೆಲುಗಿಗೆ ಅಪಕಾರ ಮಾಡುತ್ತಿದ್ದು, ಈಗ ಹಿಂದಿ ಇದಕ್ಕೆ ಸೂರರಷ್ಟು ಅಪಕಾರಿಯಾಗುತ್ತದೆ ಈ ಅಪಕಾರವು ಆಗುತ್ತಿರುವುದು ಆ ಭಾಷೆಗಳಿಂದಲ್ಲ; ಅದನ್ನು ಓದುವ ತೆಲುಗರಿಂದ

"ತೆಲುಗಿನವರು ವಿದೇಶಭಾಷೆಯೆಲ್ಲವೂ ಉತ್ಸಾಹ, ಅತ್ಯಹಿತವನ್ನರಿಯದ ಆದೇಶ ಇದರಿಂದ್ದ ಆಗುವ ಅಪಕಾರಗಳು ಅನೇಕ. ತೆಲುಗರು ಹಿಂದೀಯು ರಾಷ್ಟ್ರ ಭಾಷೆಯಾಗಬೇಕು ಎಂಬ ನಿರ್ಣಯವನ್ನು ಕೇಳಿದ್ದಾರೆ. ಹಿಂದೀ ಪ್ರಚಾರ ಪ್ರಪಂಚವನ್ನು ನೋಡಿದ್ದಾರೆ ಅಂತೆಯೇ ಹಿಂದೀ ಓದುವುದಕ್ಕೆ ಸ್ಪಾರಂಭಿಸಿದ್ದಾರೆ ಈಗ್ಗೆ ದಕ್ಷಿಣ ಭಾರತದಲ್ಲಿ ಹಿಂದೀಯನ್ನು ಓದಿದ ಪುಸ್ತ್ರ ಓಸ್ತ್ರಿರ-ದ ಜನರಲ್ಲಿ ತಾವು ಅರ್ಧಮಂದಿಗಂತ ಹೆಚ್ಚಾಗಬೇಕೆಂದು ಹೊರಟಿದ್ದಾರೆ. ತೆಲುಗನ್ನು ಕೂಡಾ ಮರೆತುಬಿಟ್ಟು ಹಿಂದೀಯನ್ನು ಓದಿಬಿಡಲು ಇವರಲ್ಲಿ ಅನೇಕರು ಎಷ್ಟು ಭಾಷೆಗಳು ಒಂದೂ ಕೂಡಾ ಮಾತೃಭಾಷೆಯನ್ನೇ ಮಾತನಾಡಬೇಕೆನ್ನುವ ಸಮಯ ಇತರರಿಗೆ. ಹಿಂದೀ ಬಂದವರು ಹಿಂದೀಯಲ್ಲೇ ಸಂಭಾಷಿಸಬೇಕು ಎನ್ನುವ ಸಮಯ ತೆಲುಗನವರಿಗೆ ತೆಲುಗೇ ಬೇಡ ಹಿಂದೀಯನ್ನೇ ಓದೋಣವೆಂದು ಬೋಧಿಸುವವರು ಕೂಡ ಹಲವರಿದ್ದಾರೆ ತೆಲುಗು ದೇಶದಲ್ಲಿ ಊರೂರುಗಳಲ್ಲಿಯೂ ಹಿಂದೀಯ ಪಾಠಶಾಲೆಗಳು ತೆಲುಗು ಶಾಲೆಗಳಂತೆ ನೆರೆಯುತ್ತಿವೆ ಪ್ರಚಾರಕರೂ ಅನೇಕರು ಇದೆಲ್ಲಾ ತೆಲುಗಿನವರ ಪರಿಸ್ಥಿತಿ ದೇಶೋದ್ಧಾರಣ ವಾಂಛೆಯನ್ನು ಪ್ರಕಟಿಸುತ್ತಿದೆ ಇದು ಎಷ್ಟರ ವರೆಗೆ ಸಫಲವಾಗಬಹುದೋ ಎಂದು ಹೀಗ ಪೂರ್ತಿ ಸಾಧ್ಯವಲ್ಲ, ಆದರೆ ಪ್ರತ್ಯಕ್ಷದಲ್ಲಿ ಇದರಿಂದ ಆದರ ಮಾತೃಭಾಷೆಗೆ ಮಾತ್ರ ಮಹೋಪದ್ರವವೊಂಟಾಗುವುದು ನಿಶ್ಚಯ.

"ಹಿಂದೀ ಓದಿದ ತೆಲುಗರು ಏನು ಮಾತನಾಡಿದರೂ ಏನು ಬರೆದರೂ, ಎಲ್ಲವನ್ನೂ ಹಿಂದೀ ಸಂಪ್ರದಾಯದಿಂದ ತುಂಬುತ್ತಿದ್ದಾರೆ. ಇದರಿಂದ ತೆಲುಗಿಗೆ ವಿಕೃತಸ್ವರೂಪ ಪವೂ ವಿಸದೀಕ ಸ್ವಭಾವವೂ ಏರ್ಪಟ್ಟಿದೆ. ಅದರ ಸಮಿಯೂ ಜಾರಿಹೋಗಿದೆ ಅದರ ವ್ಯಕ್ತಿತ್ವಕ್ಕೆ ಹಾನಿ ಯಾಗುತ್ತಿದೆ. "ದೇಶಭಾಷೆಗಳೆಲ್ಲಾ ಲೇಸಾದವ್ದು" ಎಂಬ ನ್ಯಾತಿಯನ್ನು ಜೊಂದಿದ ತೆಲುಗಿಗೆ ಇಂದು ವಿತ್ಯ ಈ ರೀತಿ ಕೇಡು ಸಂಭವಿಸುತ್ತಿರುವುದು! ಆದರೆ ಸೊಭಗನ್ನು ನೆಲುಜನ್ನು ತಿಳಿದ ಹೃದಯಗಳಿಗೆ ಇದು ಅಸಹ್ಯವಾದುದು ಆದುದರಿಂದಲೇ ದೇಶದಲ್ಲಿ ಹೊಂದರೆ ಹುಟ್ಟುವುದು ತೆಲುಗು ತನ್ನ ತೆಲುಗತನವನ್ನು ಉಳಿಸಿಕೊಳ್ಳಬೇಕೆಂಬ ಎಚ್ಚರಿಕೆಗಳು ನಾಲ್ಕು ಮೂಲೆಗಳಲ್ಲಿಯೂ ಪ್ರತಿಧ್ವನಿಗೊಯಿತ್ತಿದೆ ಈ ಪ್ರಬೋಧವು ನ್ಯಾಯೋಚಿತವಲ್ಲದ ಕರ್ತವ್ಯವು. "ಹಿಂದೀಯು ರಾಷ್ಟ್ರ ಭಾಷೆಯಾಗುವುದಕ್ಕೆ ಯಾರಿಗೂ ವಿರೋಧವಿಲ್ಲ ಇರಬೇಕಾದುದಿಲ್ಲ—ಏಕೆಂದರೆ, ದೇಶಕ್ಷೇಮವನ್ನು ಕೋರಿದ ದೇಶಿಕರಿಯರು ಇರರ ಹಿಂದೀಯು ವಿಚಾರದಲ್ಲಿ ದ್ವೇಷವಿಲ್ಲದೇ ಇರಬೇಕಾದುದಿಲ್ಲ ಆದರೆ, ಎಲ್ಲರಿಗೂ ಮಾತೃ ಭಾಷೆಯ ವಿಷಯದಲ್ಲಿ ಅದರವು ಸದಮಾಪಕ್ಷಕ್ಕೆ ಅದರ ಉದ್ಧಾರವು ಪ್ರಥಮ ಕರ್ತವ್ಯ—ನಾವೆಂತರು ಸಿಪಿಲ ಭಾರತಕ್ಕೆ ಒಂದು ರಾಷ್ಟ್ರಭಾಷೆ ಬೇಕು ಎಂದು ಹೇಳಿರುವುದು ದೇಶಕ್ಷೇಮಪಾಠಗಳನ್ನು ನಡೆಸುವುದ ಕ್ಕಾಗಿ ಆವರು ಯಾರು ಎಂದಿಗೂ ಮಾತೃಭಾಷೆಗೆ ಸ್ವಸ್ತಿ ಹೇಳಿರಿ ಎಂದೆ ಶಾಸನ ಮಾಡಿಲ್ಲ ತಪ್ಪೂ ಹಾಗೆ ಕೂಡಿಲ್ಲ ಆದರೂ ಕನ್ನಡಿಗರು ಸುಳಿಯಾಳರು ಇತರರು ಹಿಂದೀಯನ್ನು ಕಲಿತುಕೊಳ್ಳಲಿಕ್ಕಿರುವಂತೆಲ್ಲವೆ ಅವರಾವೂ ತೆಲ್ಲುಗರಂತೆ ಮಾತೃಭಾಷೆಯನ್ನು ಹಾಳು ಮಾಡಿಕೊಳ್ಳಲಿಲ್ಲ ವಿಶೇಷವುಳ್ಳದ್ದು ಸ್ವವಿಷಯದಲ್ಲಿ ಯಾವತ್ತಿಗೂ ಜಾಗ್ರತೆಯುಳ್ಳವರಾಗಿಯೇ ಇರುವರು "ತೆಲುಗರ ಅಜಾಗ್ರತೆಯೂ ಅವಿವೇಕವೂ ಅವರು ಭಾಷೆಗೆ ಈ ತರದ ಕೇಡನ್ನು ಉಂಟುಮಾಡಿವುದೇ ಅಲ್ಲದೆ ದೇಶದ ಸಾಮಾಕರಿಗೂ ಅಪರಿಮಿತ ಕಷ್ಟಗಳನ್ನು ತಂದೊಡ್ಡುತ್ತಿವೆ ಇನ್ನಾದರೂ ತೆಲುಗರು ಪ್ರಬುದ್ಧರಾಗಿ ಈ ಎರಡನ್ನೂ ದೂರ ತೊಲಗಿಸುವರಲ್ಲವೇ"!

(ಭಾರತಿ ಸಂಪಾದಕರ ನೋಟ್ಟಿಂದ ಅಭಿಪ್ರಾಯವನ್ನು ನಾವು ಸಂಪೂರ್ಣವಾ ಅನುಮೋದಿಸ ತ್ತೇವೆ ಆದರೆ ಲೇಖನದಲ್ಲಿ ತೆಲುಗು ಎಂಬ ಪದಕಿಗೆ ಒದಲು ಕನ್ನಡ ಎಂದು ಹಾಕಿದರೆ ಅದು ನಮಗೆ ಪೂರ್ತಿಯಾಗಿ ಅನ್ವಯಿಸುತ್ತದೆ)

"ಕರ್ನಾಟಕ ಸಾಹಿತ್ಯ ಪರಿಷತ್ಪತ್ರಿಕೆ"

"ಕಿಂಗ್ ಆಫ್ ಕಿಂಗ್ಸ್" ಚಿತ್ರದೊಳಗಿನ ಒಂದು ದೃಶ್ಯ
(ಈ ಚಿತ್ರವು ಈಗ ಇಲ್ಲಿಯ ಶ್ರೀ ಕೃಷ್ಣ ಸಿನೆವ ದಲ್ಲಿ ಪ್ರದರ್ಶಿಸಲ್ಪಡುತ್ತಿದೆ)

ಡಿಸ್ಟ್ರಿಕ್ಟ್ ಎಲಿಮೆಂಟರಿ ಎಜ್ಯುಕೇಶನಲ್ ಕೌನ್ಸಿಲಿನವರು ತಯಾರಿಸಿದ ದಕ್ಷಿಣ ಕನ್ನಡ ಜಿಲ್ಲೆಯ ಪ್ರಾಥಮಿಕ ಶಾಲೆಗಳ ಉಪಯೋಗದ ಬಗ್ಗೆ 1934ರ ಹೊಸ ಸಾರಪಟ್ಟಿಗನುಸಾರವಾಗಿ ಶ್ರೀ ಎಮ್. ಗಣಪತಿರಾವ್ ಐಗಳರವರಿಂದ ರಚಿತವಾಗಿ, ಮದ್ರಾಸು ಟೆಕ್ಸ್ಟ್‌ಬುಕ್ ಕಮಿಟಿಯವರಿಂದ ಸಮರ್ಥನೆಹೊಂದಿ ಡೈರೆಕ್ಟರ್ ಒಫ್ ಪಬ್ಲಿಕ್ ಇನ್ಸ್‌ಟ್ರಕ್ಷನ್ ಇವರಿಂದ ಶಿಫಾರಸುಮಾಡಲ್ಪಟ್ಟಿ ಪುಸ್ತಕಗಳು.

ಸಾಮಾನ್ಯ ವಿಜ್ಞಾನ.

	ರೂ	ಅ.	ಪೈ
ಚರಿತ್ರೆ ಮತ್ತು ಕಥೆಗಳು.			
ನಾಲ್ಕನೇ ದರ್ಜೆ	0	6	0
ಮೂರನೇ ,,	0	4	6
ಎರಡನೇ ,,	0	4	0
ಸಿವಿಕ್ಸ್ ಮತ್ತು ನೀತಿಬೋಧೆ.			
ಐದನೇ ದರ್ಜೆ	0	3	0
ನಾಲ್ಕನೇ ,,	0	3	0
ಮೂರನೇ ,,	0	2	6
ಎರಡನೇ ,,	0	2	0
ದೇಹಶಾಸ್ತ್ರ ಮತ್ತು ಆರೋಗ್ಯಶಾಸ್ತ್ರ.			
ಐದನೇ ದರ್ಜೆ	0	3	0
ನಾಲ್ಕನೇ ಸಚಿತ್ರ	0	3	0
ಪ್ರಕೃತಿಶಾಸ್ತ್ರ ಮತ್ತು ಸಾಮಾನ್ಯ ತಿಳುವಳಿಕೆ.			
ಎರಡನೇ ದರ್ಜೆ	0	3	6
ಮೂರನೇ ,,	0	3	0
ನಾಲ್ಕನೇ ,,	0	3	0
ಐದನೇ ,,	0	4	0

ಆಡ್ಜೆ ಕಥೆಗಳು (ಸಚಿತ್ರ).

ಮೂರು ಕರಡಿಗಳು
ಹೇನು ಸತ್ತ ಕಾಗೆ ಬಡವಾಯಿತು
ಮೆಣಸಿನ ಕಾಳಿಪ್ಪು
ಅಗ್ಗಣಿ ನುಂಪ್ಪೆ
ಇಲಿಗಳ ಛಕ್ಕ ಛೈ
ಅಂಗಳ ದುಗ್ಗು
ಗುಡುಗುಡು ಗುಮ್ಮಟ ದೇವರು
ಒಡ್ಡನ ಒಟ
(ಇವುಗಳ ಕ್ರಯ 1ಕ್ಕೆ 0-0-9)

ಟ್ರೈನಿಂಗ್ ಶಾಲೆಗಳ ಉಪಯೋಗಾರ್ಥವಾಗಿ 'ಸಮಾಜಶಾಸ್ತ್ರ' ಸಿದ್ಧವಾಗಿದೆ.

ನಿಮ್ಮ ಆಮಂತ್ರಣಪತ್ರಿಕೆಗಳು, ವ್ಯಾಪಾರಕ್ಕೆ ಅಗತ್ಯವಿರುವ ಎಲ್ಲಾ ಕಾಗದಪತ್ರಗಳು, ವರದಿ ಪುಸ್ತಕಗಳು, ಇನ್ನಿತರ ಪುಸ್ತಕಗಳು ಒಳ್ಳೆಯ ಅಕ್ಷರಗಳಿಂದ ಮುದ್ರಿಸಲ್ಪಟ್ಟು ಆತ್ಯಂತ ಸುಂದರವಾಗಿರಬೇಕೆಂದು ಬಯಸುವಿರಾದರೆ,—

1935ರ ಡೈರಿಗಳು, ಎಲ್ಲಾ ಕೋರ್ಟು ಫಾರ್ಮುಗಳು,
ಬೇಕೆಂದಾದರೆ
ಶಾರದಾ ಛಾಪಖಾನೆ, ಮಂಗಳೂರು.

ಲೋಧ್ರ

ಸುಪ್ರಸವಕ್ಕಾಗಿ ದಿವ್ಯ ಔಷಧ.
ಸ್ತ್ರೀಯರಿಗೊಂದು ಮಹಾ ವರ.

ಯಾವ ತರದ ಅಥವಾ ಎಲ್ಲಾ ತರದ ಮುಟ್ಟು ದೋಷ, ಮುಟ್ಟಾಗುವುದರಲ್ಲಿ ನೋವು, ಅಕ್ರಮ ತರದ ಮತ್ತು ಮುಟ್ಟಾಗದಿರುವಿಕೆ, ಬಿಳಿ ಸೆರಗು, ಗರ್ಭಕೋಶದ ದೋಷ ಅಶುದ್ಧ ಮುಟ್ಟು, ಬಂಜೆತನ, ಸೂತಿಕಾವಾಯು, ಅಶುದ್ಧರಕ್ತ, ನೀರೆ ದಾಟು ಅಥವಾ ಬೇಕಾದಷ್ಟು ಮುಟ್ಟಾಗದಿರುವುದು, ಸ್ತ್ರೀಯರ ಅಂಗಾಂಗಗಳ ಇನ್ನಿತರ ಅನೇಕಾನೇಕ ರೋಗಗಳುಳ್ಳ ಸ್ತ್ರೀಯರನ್ನು ಈ ಔಷಧಿಯು ಸಂಪೂರ್ಣ ಗುಣಗೊಳಿಸಿರುತ್ತದೆ.

ಲೋಧ್ರ

ಎರಡು ಸೈಜಿನಲ್ಲಿ ದೊರೆಯುತ್ತದೆ. ರೂ. 8 ಮತ್ತು 1—10—0

ಕೇಸರಿ ಕುಟೀರ

ಇಂಡಿಯನ್ ಕೆಮಿಸ್ಟ್ಸ್ ಮತ್ತು ಡ್ರಗಿಸ್ಟ್ಸ್, ಎಗ್ಮೋರ್ ಮದರಾಸು,

ದಕ್ಷಿಣ ಕನ್ನಡ ಮತ್ತು ಕೊಡಗು ದೇಶದ ವಿಜಂಟರು,
ಪೊಪ್ಯೂಲರ್ ಸ್ಟೋರ್ಸ್, ಮಂಗಳೂರು.

ಶ್ವಾಸಕೋಶಗಳಿಗೆ
ಚ್ಯವನಪ್ರಾಶಾವಲೇಹ.

ಪ್ರಸೂತಿ ರೋಗಾದಿಗಳಿಗೆ
ದಶಮೂಲಾರಿಷ್ಟ.

(ಕಸ್ತೂರಿ ಮಿಶ್ರಣ)

ಸಮಸ್ತ ಪಾಕರೋಗಗಳಿಗೆ
ಮಹಾನಾರಾಯಣ ತೈಲ.

ಶ್ರೀ ರಾಮಕೃಷ್ಣ ಧರ್ಮಸೈದ್ಧಾಶ್ರಮ ಸಂಘ, ಡೊಂಗರಕೇರಿ ರಸ್ತೆ, ಮಂಗಳೂರು.

++ ++

ಚಿತ್ರಾಪುರ ಸಮೀಪ
ಋಗ್ವೇದೀ ಸಂಧ್ಯಾವಂದನೆ.

(ವೈಷ್ಣವರಿಗೆ—ಊರ್ಧ್ವಪುಂಡ್ರ—ಮುದ್ರಾಧಾರಣ ವಿಧಿ)
ಸ್ಮಾರ್ತರಿಗೆ—ಭಸ್ಮಧಾರಣ ವಿಧಿ, ಕೂಡಿ)

ಎಂ. ನರಸಿಂಗರಾವ್, ಬಿ. ಎ., ಎಂ. ಎಲ್.

ಇವರಿಂದ ರಚಿತವಾದ
ಪ್ರತಿವಾರ್ಥಬೋಧಕ ವಿಧಿಸಹಿತ.

ಬೆಲೆ ಆಣೆ 1.

30, 60, 100 ಪ್ರತಿಗಳನ್ನು ಒಟ್ಟಿಗೆ ಪಡೆಕೊಳ್ಳುವವರಿಗೆ ಒಳ್ಳೆಯ ಡಿಸ್ಕೌಂಟು)

ವಿಳಾಸ:— ಶಾರದಾ ಛಾಪಖಾನೆ,
ರಥಬೀದಿ, ಮಂಗಳೂರು

ಕೆಲ್ವೋಸ್ಕರ ಪಂಪುಗಳು.

ಹಿಂದೂದೇಶದಲ್ಲೆಲ್ಲ ಬಳಕೆಯಲ್ಲಿವೆ

ಅವು, ಬೇಸಾಯಕ್ಕಾಗಲಿ, ಕಾರ್ಖಾನೆಗಳಿಗಾಗಲಿ ಅಥವಾ ಮನೆಗಳಿಗಾಗಲಿ ನೀರನ್ನೊದಗಿಸುವ ಉತ್ತಮ ಸಾಧನಗಳೆಂದು ಸಿದ್ಧಾಂತವಾಗಿವೆ.

ಉತ್ಕೃಷ್ಟವಾದುವು—ಮಿತವ್ಯಯ ಸಾಧಕ—ವಿಶ್ವಾಸಾರ್ಹವಾದುವು.

ಸಚಿತ್ರಕಟಲಾಗಿಗೆ ಬರೆಯಿರಿ.

ಕೆಲ್ವೋಸ್ಕರ ಬ್ರದರ್ಸ್ ಲಿಮಿಟೆಡ್,

ಕೆಲ್ವೋಸ್ಕರವಾಡಿ, (ಸತಾರಾ.)

ಚಾತುರ್ಕಾಟ್ಯ ವೈದ್ಯರ
ವಿಶೂಚಿಕಾ ಸಂಹಾರಿ
Vishuchika Samhari
(PILCO)

ಕೊಲೆರಕ್ಕೆ ದಿವ್ಯೌಷಧ! ಉಪಯೋಗಿಸಿದರೆ ಗುಣ ಖಾತ್ರಿ!

ಕ್ರಯ ಡಬ್ಬಿ 1ಕ್ಕೆ ರೂ. 1—0—0

ಗುಹ್ಯರೋಗ ನಿವಾರಿಣೀ ತೈಲ
Anti-Venereal Oil
(A. V. Oil)

ಗುಹ್ಯರೋಗ ನಿವಾರಕಕ್ಕೆ ಅತೀತ್ಯ ವನಸ್ಪತಿ ಔಷಧಿಗಳುಂಟು ಪಾರಂಪರ್ಯದ ವ ತಗಲಿದ ರೋಗವು ಗುಣವಾಗುವುದು. ಪರೋಕ್ಷಗಳನ್ನು ಹೊಟ್ಟೆಯ ಶುದ್ಧಿಗಾಗಿ ಜುಲಾಬಿನ ಮದ್ದಿನಂತೆ ತೆಗೆದುಕೊಳ್ಳಬಹುದು.

8 ಔನ್ಸ್‌ಗಳ ಬಾಟ್ಲಿ 1ಕ್ಕೆ ರೂ. 2—8—0

ಕೆ. ವಿ. ಕೃಷ್ಣನ್,
ಕಲ್ಲಾಯಿ, ಮಲಬಾರ್,
ಅಥವಾ
ಟಾಲ್ ಸಿ. ಮತ್ತು ಕಂಪೆನಿ, ಕಲ್ಲಿಕೋಟೆ

ತಲ್ಲಿ ಸಿಗುವುದು.

ಸೈಂಟಿಫಿಕ್
ಸ್ವರ್ಣಾಭರಣಗಳು

(ನಿಜವಾದ ಬಂಗಾರಕ್ಕೆ ಬದಲಾಗಿ ಇವು ತಯಾರಾಗಲ್ಪಟ್ಟಿವೆ.)

ಹೈಕೋರ್ಟು ಜಡ್ಜರುಗಳಿಂದಲೂ, ಸರಕಾರದ ಮಂತ್ರಿಗಳಿಂದಲೂ, ಇತರ ಪ್ರಮುಖರಿಂದಲೂ ಕೊಂಡಾಡಲ್ಪಟ್ಟಿವೆ.

ಪಶ್ಚಿಮವಹಾರವನ್ನು ಇಂಗ್ಲಿಷಿನಲ್ಲೇ ಮಾಡಬೇಕು.

ಹೊಸ ಕೆಟ್ಲಾಗು ಧರ್ಮಾರ್ಥ.

ವಿಳಾಸ:—
TheScientificGold Bangles Co., Ltd.,
Head Office:-48, Byragimannam Street,
Post Box No. 203, Madras.

ಪಂಡಿತ ಡಿ. ಗೋಪಾಲಾಚಾರ್ಯುರವರ
ಜೀವಾಮೃತವು

ಆಧುನಿಕ ಕಾಲದ ಒತ್ತಾಟವು ನಿಮ್ಮ ಅಮೂಲ್ಯ ಆರೋಗ್ಯವನ್ನು ನಿಧಾನವಾಗಿ ಹೀರಿ ಮುಗಿಸುತ್ತಿದೆ. ಅದರ ಫಲವೇ— ಆಯಾಸ, ನರಗಳ ದುರ್ಬಲತೆ, ಶಿರೋವೇದನೆ, ಕರ್ಕಶಸ್ವಭಾವ ಇವೇ ಮೊದಲಾದುವು. ಅವುಗಳು ನಿಮ್ಮನ್ನು ಪೂರ್ಣವಾಗಿ ತಮ್ಮ ಹಿಡಿತದಲ್ಲಿರಿಸಿಬಿಡದಂತೆ ಏರೀಗಲೇ ತಡೆಹಾಕಬೇಕು; ಉತ್ತಮೋಪಾಯವೇ ಜೀವಾಮೃತಸೇವನೆ— ಈ ವರಿಷ್ಠಾಮಕಾರೀ ಪೌಷ್ಟಿವರ್ಧಕ ಔಷಧವು ನಿಮ್ಮಲ್ಲಿ ರಕ್ತವರ್ಧನೆಯನ್ನುಂಟುಮಾಡುವುದು. ನೀವು ಕಳಕೊಂಡ ಚೇತನವನ್ನೆಲ್ಲ ಮೆರಳಿ ಕೊಟ್ಟು, ನಿಮ್ಮನ್ನು ಪೂರ್ವದಂತೇ ಪೂರ್ಣ ಶಕ್ತಿಯುತ ಪುರುಷರನ್ನಾಗಿ ಮಾಡುವುದು. ಎಲ್ಲೆಲ್ಲಿಯೂ ದೊರೆವುದು:—ದೊಡ್ಡದು ರೂ. 3—4—0. ಸಣ್ಣದು ರೂ. 1—12—0.

ತಯಾರಿಸುವವರು:—ಆಯುರ್ವೇದಾಶ್ರಮ, ಪೋಸ್ಟು ಬೋಕ್ಸ್ 287, ಮದರಾಸು.

ಮೈಸೂರುನ್ಯಾಂತ್ಯದ ಡಿಸ್ಟ್ರಿಬ್ಯೂಟರರು:—ಸಿಟಿ ಮೆಡಿಕಲ್ ಎಂಡ್ ಜನರಲ್ ಏಜನ್ಸಿ,
92, ಚಿಕ್ಕಪೇಟೆ, ಬೆಂಗಳೂರು ಸಿಟಿ.

---

77 ವರ್ಷಗಳು.

ಅಸಂಖ್ಯಾತರಾದ ನಮ್ಮ ಗಿರಾಕಿಗಳ ಕೇಳಿಕೆ ಮತ್ತು ಅನುಕೂಲತೆಗಳನ್ನು ಇದೇ ಮುಕ್ಕಾಲು ಶತಮಾನದಿಂದ ತಿಳಿದು, ಅವರಿಗೆ ಸುಲಭ ದರದಲ್ಲಿ ಯೋಗ್ಯ ಹಾಗೂ ಬಹುಕಾಲ ಬಾಳುವ ಪರ್ವತರದ ಉಡುಪುಕೊಡುಪುಗಳನ್ನು ಒದಗಿಸುವ ನಮ್ಮ ಎರಡು ತಲಾಂತರಗಳ ಅನುಭವವು ಮಂದಕ್ಕೂ ಸಂತೃಪ್ತಿಯನ್ನೇ ಕೊಡುವುದಲ್ಲವೆ?

ಸ್ವದೇಶೀ

ಕಾರ್ಖಾನೆಗಳಲ್ಲಾದ ನೂಲು ಮತ್ತು ಕೈಮಗ್ಗದ ವಸ್ತ್ರ, ಹೊದಿಕೆಗಳೂ, ಬೆಡ್‌ಶೀಟ್, ಬಾತ್ ಟವಾಲುಗಳೂ ಧೋತಿ, ಸೀರೆ— ಬೈರವಾಸು— ಚೆಳ್ಳು— ಚೀಟು ಇತ್ಯಾದಿ ಎಲ್ಲವೂ ಯಾವಾಗಲೂ ಮಾರಾಟಕ್ಕಿವೆ.

ಶ್ರೀನಿವಾಸ ರಂಗ ಪೈ,

[ಸಾಹುಕಾರ ಮಹಾಲ್]
ರಥಬೀದಿ, ಮಂಗಳೂರು.

Srinivasa Ranga Pai,
Representatives for South Canara and Malabar.
For— A. & F. Harvey,
Managers: Madura Mills Co, Ltd.,

An Advertisement in
'Swadeshabhimani'
Means a sure fortune to you
Ask for Contract Rates.
The Swadeshabhimani office,
Car Street, Mangalore.

Preserve Your Wealth by BIRTH-CONTROL.
ದೇಶದ ಐಶ್ವರ್ಯವನ್ನು ಮಿತಸಂತತಿಯಿಂದ ಕಾಪಾಡಿ.

ಮೂರೇ ಮೂರು ರೂಪಾಯಿಗಳಿಂದ ಸ್ತ್ರೀಯರಿಗೆ ಪ್ರಸವಭಯವನ್ನು ನಿಲ್ಲಿಸುವುದು. ಬೇಕಾದ್ದಲ್ಲಿ ಕಿರಿದು ಗರ್ಭವಾಗುವಂತೆ ಔಷಧವಿದೆ.

ವರ್ಷಕ್ಕೊಂದರಂತೆ ಹೆತ್ತು ತಾಯಿ—ಮಕ್ಕಳು ನರಳದಂತೆ ದೂರ ದೂರ ಮಾಡುವುದು. ಆರೋಗ್ಯಕ್ಕೆ ಹಾನಿಯಿಲ್ಲ.

ವಿಳಾಸ:—ಪಂಡಿತ ಕೆ. ನಾರಾಯಣಾಚಾರ್, ಆಯುರ್ವೇದ ಭವನ, ಗಾರ್ಡನ್, ದ. ಕ.
Branches—Kukkundoor & Kaikamba (Gurpoor Rly):—ಕುಕ್ಕುಂದೂರು, ಕೈಕಂಬ ಗುರ್ಪುರ.
[N. B.—ಉತ್ತರದಸ್ಥಪೇಕ್ಷಿಸುವವರು ಒಂದಣೆಚಾವಣಿಯ ಟಿಕ್ಕಾಲು ಸ್ಟಾಂಪಿನೊಂದಿಗೆ ಬರೆಯಬೇಕು.]

ಮನುಷ್ಯನ ವಿವಿಧ ದೇಹಾಕೃತಿಗಳು.

ಮನುಷ್ಯರಲ್ಲಿ ಹಲವರು ಬಹು ಎತ್ತರವಾಗಿಯೂ ಹಲವರು ಬಹು ಕುಳ್ಳರಾಗಿಯೂ ಇರುವುದಕ್ಕೆ ಕಾರಣವಾದರೂ ಏನು?–ದೇಹದ ಬೆಳವಣಿಗೆ ಅಥವಾ ಬೆಳವಣಿಗೆ ಇಲ್ಲದಿರಲು ಕಾರಣವೇನು? ಎಂಬ ಕುತೂಹಲಪೂರ್ಣ ವಿಚಾರವಾಗಿ ತರ್ಕಿಸುತ್ತಾ ಜೆ. ರೆಡ್‌ವರ್ಸ್ ಸ್ಟೌನ್ ಎಂಬವರು ಹೀಗೆ ಬರೆದಿದ್ದಾರೆ:–

ನಾವು ಅನೇಕ ವಿಷಯಗಳನ್ನು ದಿನಂಪ್ರತಿ ನೋಡುತ್ತೇವೆ. ಆದರೆ ಅವುಗಳ ಕುರಿತಾಗಿ ಬಹಳ ವಿಚಾರಿಸದೆ ಇದ್ದ ವಿಷಯಗಳನ್ನು ಇದ್ದಂತೆಯೇ ಸ್ವೀಕರಿಸುತ್ತೇವೆ. ಆದರೆ ಹಲವು. ವೇಳೆ ನಾತ್ರ ನಾವು ಕೆಲವು ವಿಷಯಗಳಿಗೆ ನಮ್ಮ ಲಕ್ಷ್ಯವನ್ನಿತ್ತು ವಿಮರ್ಶಿಸುತ್ತೇವೆ; ಪ್ರತಿಭಟಿಸುತ್ತೇವೆ.

ಮನುಷ್ಯನ ದೇಹಾಕೃತಿಯು ದೊಡ್ಡದಾಗಿರುವುದಕ್ಕೂ ಅಥವಾ ಸಣ್ಣದಾಗಿರುವುದಕ್ಕೂ ಕಾರಣವೇನು?–ಒಬ್ಬನು ಒಂದು ಅನಿಯನ್ನು ವೃಥಕಾಯನೂ ಇಲಿಯಷ್ಟು ಸಣ್ಣ ದೇಹಿಯೂ ಆಗದಿರಲು ಕಾರಣವೇನು? ಎಂಬ ವಿಚಾರವಾಗಿ ತರ್ಕಿಸಿದರೆ–

ಈ ಪ್ರಶ್ನೆಗೆ ಸದುತ್ತರವನ್ನು ಹುಡುಕಲು ಅಸಾಧ್ಯವೆಂದು ಕಂಡುಬರುವುದು. ಆದರೂ ಮನುಷ್ಯ ಮಾತ್ರನು ಇಂತಿಷ್ಟೇ ಎತ್ತರವಾಗಿ ಬೆಳೆಯಬೇಕು; ಅವನ ದೇಹಗಾತ್ರವು ಇಂತಿಷ್ಟೆ ಇರಬೇಕೆಂದು ಒಂದು ನೈಸರ್ಗಿಕನ್ಯ ನಿಯಮವೇ ಇದೆಯೆಂದು ತಿಳಿದುಬರುವುದು. ಒಬ್ಬನು ಇಂತಿಷ್ಟೇ ಬೆಳೆಯುವನೆಂದು ಅವನ ಬೆಳವಣಿಗೆಯು ಪೂರ್ಣತೆಯನ್ನು ಮುಟ್ಟಿದೊಡನೆ ಗೊತ್ತಾಗುವುದು. ಅನಂತರದಿಂದ ವಿಚಾರಿಸಿದ್ದಲ್ಲಿ ತನ್ನ ಬೆಳವಣಿಗೆಯಾದುದು ಅವನಿಗೆ ತಿಳಿದುಬರುವುದು ಕಷ್ಟ; ಯಾರಾದರೂ "ನಿನಗೆ ಬೇಕಾದ ಹಾಗೆ ನಿನ್ನ ದೇಹಾಕೃತಿಯನ್ನು ಸಣ್ಣದು ಅಥವಾ ದೊಡ್ಡದು ಮಾಡುವಿಯೋ?" ಎಂದು ಪ್ರಶ್ನಿಸಿದರೆ ಇದಕ್ಕೆ ಯಾರಾದರೂ ಉತ್ತರವಿಯಲಾರರು. ಈ ಪ್ರತಿಭಟನೆಯನ್ನು ಯಾವ ರೀತಿಯಿಂದಲಾದರೂ ಖಂಡಿಸಲು ಯಾರಿಗೂ ಸಾಧ್ಯವಿರುವುದಿಲ್ಲವೆಂದು ತಿಳಿದುಬರುವುದು. ಇಷ್ಟಿದ್ದರೂ ಆಧುನಿಕ ವಿಜ್ಞಾನವು ಇದನ್ನು ಹೇಗೆ ಸಾಧಿಸುತ್ತದೆಂದು ಕಡೆಗು ಹಿಡಿಯೋಣ.

ಕ್ರಿಸ್ತಪೂರ್ವ ೩೦೦ರಲ್ಲಿ ಫಿಲೆಟಸ್ ಆಫ್ ಕೋಸ್ ಎಂಬ ಮಹಾಕವಿಯಿದ್ದನು. ಇವನು ಅಂದಿನ ಮನುಷ್ಯರಲ್ಲಿ ಅತ್ಯಂತ ಕುಳ್ಳನೆಂದು ತಿಳಿದುಬರುತ್ತದೆ. ಇವನ ದೇಹವು ಎಷ್ಟು ಸಣ್ಣದೋ ಅಷ್ಟು ಹಗುರವೂ ಆಗಿತ್ತು. ಇದಕ್ಕಾಗಿ ಇವನು ದೊಡ್ಡ ಅಂಗಿಯೊಂದನ್ನು ಧರಿಸಿ ಅದರ ಎರಡು ಜೋಬಿನೊಳಗೆ ಭಾರವಾದ ವಸ್ತುಗಳನ್ನು ಹಾಕಿಕೊಳ್ಳುತ್ತಿದ್ದನು. ಇವನ ವಿಷಯವಾಗಿರುವ ಶಾಖಲೆಯಿಂದ ತಿಳಿದುಬರುವಂತೆ "ಅವನು ಗಾಳಿಗೆ ಹಾರಿಹೋಗದಂತೆ ಈ ಭಾರವಾದ ವಸ್ತುಗಳನ್ನು ಹಾಕಿಕೊಳ್ಳುತ್ತಿದ್ದನು." ಇವನ ನಂತರ ಅಲೆಕ್ಸಾಂಡ್ರಿಯದ ಅಲಿಫಿಯಸ್ ಎಂಬವನಿದ್ದನು;–ಇವನು ಒಂದು ಅಡಿದು ಇಂಚು ಮಾತ್ರ ಎತ್ತರವಿದ್ದನು. ಮಹಾ ತತ್ವೇತ್ತರನೂ ನ್ಯಾಯಪರ್ತಿಯೂ ಆಗಿದ್ದನು. ಇವನ ದೇಹಾಕೃತಿಯು ಇವನಿಗೆ ದೈವಿಕ ಪುರುಷನೆಂಬ ರೂಢಿಯ ಹೆಸರನ್ನು ತಂದಿತ್ತು.

ಗಿರ್ಜರಲ್ಲಿ ಕೌಂಟ್ ಬೊರ್ಲಾಸ್ಕಿ ಎಂಬವನಿದ್ದನು. ಇವನು ಬರೇ ೩೯ ಅಂಗುಲ ಎತ್ತರವಿದ್ದನು. ಇವನು ಪ್ರಸಿದ್ಧ ಪೀತಿಜ್ಞನಿದ್ದು ಯೂರೋಪು ಖಂಡದ ಅನೇಕ ರಾಜಳುಟುಂಬಗಳ ಆದರಕ್ಕೆ ಪಾತ್ರನಾಗಿದ್ದನು. ಗಿಲಖಿರಲ್ಲಿ ಇವನು ಮೃತನಾದನು. ಇವನಿಗೆ ಅನಸ್ಟಸಿಯೊ ಎಂಬ ಸಹೋದರಿಯೊಬ್ಬಳಿದ್ದಳು. ಇವಳು ಇವನ ಕಂಠುಳಿದ ಕಳಗೆಸಿಲ್ಲ ವಷ್ಟು ಎತ್ತರವಿದ್ದಳು. ಇವಳು ಇವನಿಗಿಂತ ೭ ವರ್ಷ ಕಡಮೆ ಪ್ರಾಯದವಳಾಗಿದ್ದಳು.

ಅಮೇರಿಕದ ಚಾರ್ಲ್ಸ್ ಸ್ಟರ್ಟನ್ ಎಂಬವನು ಆ ದೇಶದಲ್ಲಿ ಪ್ರಖ್ಯಾತ ಕುಳ್ಳ. ೨೫ ವರ್ಷ ವಯಸ್ಸಿನಲ್ಲಿ ಅವನು ೩೧ ಅಂಗುಲ ಎತ್ತರವಾಗಿದ್ದನು. ೩೨ ಅಂಗುಲ ಎತ್ತರವಿದ್ದ ಲಿವಿನಿಯಾ ವಾರೆಸ್ ಎಂಬವಳನ್ನು ಅವಳ ೨೦ನೇ ವರ್ಷದಲ್ಲಿ ವಿವಾಹವಾದನು. ಗಿಲಖಿರಲ್ಲಿ ಇವನೂ ಇವನ ಪತ್ನಿಯೂ ಒಂದು ಮಗುವನ್ನು ಇಂಗ್ಲಾಂಡಿಗೆ ಒಂದು ತಮ್ಮ ದೇಹಾಕೃತಿಯನ್ನು ಪ್ರದರ್ಶಿಸಿದ್ದರು.

ಬಾಷನ್ ದೇಶದ ಅರಸನು ಬಹು ದೀರ್ಘಾಕೃತಿಯವನಾಗಿದ್ದನೆಂದು ಪ್ರಾಚೀನ ಇತಿಹಾಸದಿಂದ ತಿಳಿದು ಬರುತ್ತದೆ. ಇವನ ಹಾಸಿಗೆಯು ೧೩॥ ಅಡಿ ಉದ್ದವಿತ್ತಂತೆ. ಗೊಲಿಯತ್ ಆಫ್ ಗಾದ್ (ಇವನನ್ನು ಡೇವಿದನು ಕೊಂದುದು) ಇವನು ಸುಮಾರು ೯॥ ಅಡಿ ಎತ್ತರವಿದ್ದನಂತೆ.

ಸ್ಟಿ ಎಂಬ ತಜ್ಞನು ಬರೆಯುವಂತೆ–ಗಾರ್ಬ ಎಂಬ ಅರೇಬಿಯಾ ದೇಶಸ್ಥನೊಬ್ಬನು "ಈ ಕಾಲದ ದೀರ್ಘ ದೇಹ!" ಎಂದು ತಿಳಿದು ಬರುತ್ತದೆ. ಹೀಗೆಯೇ ಮೆಕ್ಸಿಮಿನ್ ಎಂಬ ಅರಸನು (ಕ್ರಿ. ಶ. ೨೩೫) ೮॥ ಅಡಿ ಎತ್ತರವಿದ್ದನೆಂಬ ದಾಖಲೆಯಿದೆ.

೧೫೭೦ರಲ್ಲಿ ಫ್ರೆಂಚಕಯರಿನಲ್ಲಿ ಜೋನ್ ಮಿಡ್ಲಟನ್ ಎಂಬನು ಇದ್ದನು. ಇವನು ಪ್ರಪಂಚದಲ್ಲಿ ಅತಿ ದೀರ್ಘ ದೇಹಿಯೆಂಬ ಪ್ರಖ್ಯಾತಿಯುಳ್ಳವನು. ಅವನ ಅಂಗೈಯು ೪॥ ಅಂಗುಲ ಅಗಲವಿತ್ತು. ದೇಹವು ೯ ಅಡಿ ೩ ಅಂಗುಲ ಎತ್ತರವಾಗಿದ್ದಿತು.

ಏರ್ಲೆಂಡಿನಲ್ಲಿ ಪೆಟ್ರಿಕ್ ಕೊಟ್ಸರ್ ಎಂಬ ನನಿದ್ದನು. ಇವನು ೮ ಅಡಿ ೭ ಅಂಗುಲ ಉದ್ದದ ವಾದರಕ್ಕೆಯನ್ನು ಧರಿಸುತ್ತಿದ್ದನು. ಇವನು ಇವನ ೪೬ನೇ ವರ್ಷ ಪ್ರಾಯದಲ್ಲಿ ಕಾಲವಾದನು.

ನಾಲ್ಕನೇ ಜೋರ್ಜರಿಗೆ ಅವರ ಕಾರ್ಯಟನ್ ಅರಮನೆಯಲ್ಲಿ ಬಿಗ್ ಸೇವ್ ಎಂಬ ಸೇವಕನಿದ್ದನು. ಇವನು ಎಂಟು ಅಡಿ ಎತ್ತರವಿದ್ದನು. ನರ್ತನ ನುಂದಿರದಲ್ಲಿ ನಡೆಯುವ ಪ್ರದರ್ಶನಗಳಲ್ಲಿ ಇವನು ಭಾಗವಹಿಸಿ ಬಹು ಮೆಚ್ಚುಗೆಗೆ ಪಾತ್ರನಾಗಿದ್ದನು.

ಮನುಷ್ಯನ ಬೆಳವಣಿಗೆಗೆ ಕಾರಣವೇನು? ಎಂಬ ಪ್ರಶ್ನೆ: ಇದಕ್ಕೆ ಮನುಷ್ಯ ದೇಹದಲ್ಲಿರುವ Pituitary Gland ಎಂಬುದೇ ಕಾರಣ. ಇದರಿಂದಾಗಿ ಮನುಷ್ಯನ ದೇಹವು ಹೆಚ್ಚು ಬೆಳೆಯುತ್ತಾರದು; ಇಲ್ಲವೆ, ಕಡಮೆಯೂ ಬೆಳೆಯದಾರದು. ಇದರ ಶಕ್ತಿಯನ್ನು ಸರಿಯಾಗಿ ಮನುಷ್ಯನ ದೇಹಬಲವೂ ನೃದ್ಧಿಗೊಳ್ಳುತ್ತದೆ. ಇದರ ಪರಿಣಾಮವಾಗಿಯೆ ಮನುಷ್ಯನ ಎರಡು ಕೈಕಾಲುಗಳು, ಸಮಾನರೂಪದಿಂದ ಬೆಳೆಯುತ್ತವೆ. ಒಂದು ಕೈಯು ಸಣ್ಣದಿದ್ದು, ಒಂದು ಕೈಯು ಉದ್ದವಾಗಿ ಬೆಳೆಯದಿರಲು ಈ ಗ್ಲೆಂಡ್ ಕಾರಣವಾಗಿ ನಿಂತಿದೆ.

ರಕ್ಕಸ ದೇಹವಿರುವವರನ್ನೂ ಕುಳ್ಳರನ್ನೂ ಪರೀಕ್ಷಿಸಿದರೆ ಅವರ ಪಿಶ್ಯುಟರಿ ಗ್ಲೆಂಡ್‌ನ ಹೆಚ್ಚು ಕಡಮೆಯೇ ಅವರ ದೇಹದ ಆಕಾರ ವನ್ನು ಸಣ್ಣದು ದೊಡ್ಡದು ನೂಡಲು ಕಾರಣವೇ ಭೂತವಾಗಿದೆಯೆಂದು ಕಂಡುಬರುವುದು. ಮನುಷ್ಯನ ನೇತ್ರಗಳ ಹಿಂದೆ, ತಲೆಯೊಳಗೆ ಈ ಗ್ಲೆಂಡ್ ಇದೆ. ಇದರಿಂದ Hormone (ಹೊರ್ಮನ್)ಎಂಬ ಒಂದು ದ್ರಾವಕವು ದೇಹದ ರಕ್ಷಣೆಗಾಗಿ ಮನುಷ್ಯನ ದೇಹದ ಬೆಳವಣಿಗೆಯನ್ನುಂಟು ಮಾಡುತ್ತದೆ.



ಮಿಸ್ ಸಿ. ಎಫ್. ಎಂಡ್ರೂಸರವರು.

ಯುಂಜೀದಾರದಲ್ಲಿರುವ ಹಿಂದೀಯರಿಗೆ ಒದಗಿರುವ ವಿಪತ್ತನ್ನು, ಅಲ್ಲಿಗೆ ತೆರಳಿ, ವಿಮರ್ಶಿಸಿ, ಸರಕಾರಕ್ಕೂ ಜವಾಬುದಾರಿ ಹಿಂದೀಯರಿಗೂ ವಿಷದಪಡಿಸಿರುವರು. ಇವರು ಭಾರತ ಪುತ್ರರು; ದೀನ ಸೇವಾಕಾರ್ಯಾಸಕ್ತರು. ಶಿವೀಂದ್ರ ರವೀಂದ್ರರ ತತ್ವಗಳನ್ನು ಪಾಶ್ಚಾತ್ಯರಿಗೆ ತಿಳಿಯಪಡಿಸಲು ಬಲು ಮುತ್ತಗೆ ಸಹಾಯಕರಾದರು.



ಶ್ರೀ ಕೃಷ್ಣ ಸಿನೆಮದಲ್ಲಿ ಸದ್ಯದಲ್ಲಿ ಪ್ರದರ್ಶಿಸಲ್ಪಡಲಿರುವ "ಗುಣಸುಂದರಿ" ಚಿತ್ರದೊಳಗಿನ ಎರಡು ದೃಶ್ಯಗಳು.

ಗೆರ್ಜರಲ್ಲಿ ಮಿಲ್ಲಿನ್‌ನಲ್ಲಿ ಜೋನ್ ಡಿ' ಎಲ್ಟ್ಸ್ ಎಂಬವನಿದ್ದನು. ಇವನು ತನ್ನ ೩೫ನೇ ವರ್ಷದಲ್ಲಿ ಎರಡು ಅಡಿಗಿಂತ ಎತ್ತರವಿರಲಿಲ್ಲ. ಉದ್ದವಾದ ಗಡ್ಡವನ್ನು ಬೆಳೆಸಿಕೊಂಡಿದ್ದನು. ಸಕಲ ಭಾಷಾಜ್ಞಾನಿಯಾಗಿದ್ದನು.

ಹಡ್ಸನ್ ನಗರದಲ್ಲಿ ಜಕ್ಕರಿ ಎಂಬ ಕೂಟ ನೊಬ್ಬನಿದ್ದನು. ಇವನು ತನ್ನ ೩೫ನೇ ವರ್ಷದಲ್ಲಿ ೧೮ ಅಂಗುಲ ಎತ್ತರವಿದ್ದನು. ಇವನಿಗೆ ಬಕಿಂಹೆಮಿನ ಡಚೆಸ್‌ನ ಪರಿಚಯವಿದ್ದು ಅವರೊಡನೆ ಒಂದು ಸಲ್ಕೇಲ ಮಂಚದ ಮೇಲೆ ಕುಳಿತು ಭೋಜನ ಮಾಡಿದ್ದನಂತೆ.

ಜಾಪಾನ್-ಟರ್ಕಿ-ಜರ್ಮನಿಗಳ ವ್ಯಾಪಾರದ ಮಸಲತ್ತು!

ಜಾಪಾನು ಜರ್ಮನಿಗೆ ಸೋಯಾಬೀನು ಗಳನ್ನು ಕೊಟ್ಟು ವಾಯುಯಾನಗಳನ್ನು ಪಡೆದುದು ಸತ್ಯವು ನಿಜವೆಂದು ಸರ್ವಜನಿಯ ಸುದ್ದಿ ಬಂದಿದೆ. ಇವನ್ನೂ ಪೂರ್ಣಾಶ್ಚಿತವಲ್ಲವಾದರೂ, ಈಗ ಆ ವಿಷಯವಾಗಿ ಎರಡೂ ರಾಷ್ಟ್ರಗಳೊಳಗೆ ನಡೆಯುತ್ತಿರುವ ವ್ಯವಹಾರವು ಆರೀತಿಯಲ್ಲಿ ಫಲಿತಕ್ಕೆ ಬರುವುದು ನಿಸ್ಸಂದೇಹವೆಂದು ಅಧಿಕಾರವಾಣಿಯಿಂದ ಆಡುವವರಿದ್ದಾರೆ.

'ಯುದ್ಧಕ್ಕೆ ನಮಗೆ ವಿಮಾನಗಳ ಅವಶ್ಯಕತೆ ಇದೆಯೆಂದು ನಾವಿಧನ್ನು ಕೊಂಡುಕೊಳ್ಳುವುದಲ್ಲ; ಫ್ಲಿಂಗ್ ಕಿಂಗ್–ಒಸಾಕಾ–ಟೋಕಿಯೋ–ಮತ್ತು ದಕ್ಷಿಣ ಪೆಸಿಫಿಕ್ ದ್ವೀಪಗಳಿಗೆಲ್ಲ ವಿಮಾನ ಸರ್ವೀಸನ್ನು ಇಡುವರಿಗಿವು!' ಎಂದು ಜಾಪಾನು ನುಡಿಯುತ್ತಿದೆ!

ಇತ್ತ ಜಾಪಾನ್–ಟರ್ಕಿಗಳೊಳಗೊಂದು ಹೊಸ ಕರಾರು:–ಜಾಪಾನಿಗೆ ಕಬ್ಬಿಣ ಅದಿರಿಯನ್ನು ತುರ್ಕಿಯು ಕೊಡುವುದು; ಬದಲಾಗಿ ಅದಿರಿಳಿಯ ನೂಲನ್ನೂ ಇತರ ಕೆಲವು ಸಾಮಾನುಗಳನ್ನೂ ಪಡೆಯುವುದು!

ಇದರಿಂದ ಇತರ ದೇಶಗಳ ವ್ಯಾಪಾರಕ್ಕೆ ಕೊಂಚ ಹಾನಿಯುಂಟೆ.

ಟೀಚರ್ ಮೇನೇಜರರ ಪರಿಷತ್ತು.

ಶ್ರೀ ಪಿ. ಟಿ. ರಾಜನರವರ ಭಾಷಣ.

ಚತುರ್ಥ ಮದರಾಸು ಪ್ರಾಂತಿಕ ಟೀಚರ್ ಮೇಜರರ ಪರಿಷತ್ತು ಇದೇ ಕಳೆದ ತಾರೀಕು ೨೮ರಲ್ಲಿ ಮದರಾಸಿನ ಪಚ್ಚಯ್ಯಾ ಕೋಲೇಜಿನಲ್ಲಿ, ದಿವಾನ್ ಬಹದೂರ್ ಎ. ರಾಮಸ್ವಾಮಿ ಮೊದಲಿಯಾರರ ಅಧ್ಯಕ್ಷತೆಯಲ್ಲಿ ಸೇರಿತು. ಮಾನ್ಯ ಪಿ. ಟಿ. ರಾಜನರವರು, ಪರಿಷತ್ತಿನ ಆರಂಭೋತ್ಸವವನ್ನು ನೆರವೇರಿಸುತ್ತ ಈ ಕೆಳಗಣ ಸಾರಾಂಶವುಳ್ಳ ಭಾಷಣ ಮಾಡಿದರು:–

'ವಿದ್ಯಾ ಇಲಾಖಾ ಸಚಿವರು ಇದ್ದರೆ–ಈ ಪರಿಷತ್ತಿಗೆ ಕಳೆಯೇರುವಂತಿತ್ತು; ಅವರಿರಬೇಕಾದುದೂ ಅವಶ್ಯವಿತ್ತು. ಅಧ್ಯಾಪಕರಿಗೆ ಸಂಬಂಧಪಟ್ಟ ಸಮಸ್ಯೆಗಳನ್ನು ಅವರೇ ಅಧಿಕಾರ ವಾಣಿಯಿಂದ ವಿಮರ್ಶಿಸಿ, ಚಿಕಿತ್ಸೆಯನ್ನು ಸೂಚಿಸಲೂ, ಅಭ್ಯಾಸಕ್ಕೆ ಕೊಡಲೂ ಸಮರ್ಥರು. ರಾಮ್ನಾಡ್ ದಿಸ್ಟ್ರಿಕ್ಟ್ಸ್ ಎಡ್ಯುಕೇಶನಲ್ ಕೌನ್ಸಿಲಿನ ಅಧ್ಯಕ್ಷನಾಗಿ ಕೆಲಕಾಲ ವಿದ್ದ ಪ್ರಯುಕ್ತ ನಾನು ಕೆಲವೊಂದು ಅನುಭವಗಳನ್ನು ಹೊಂದಿ, ನಮ್ಮ ಸಮಸ್ಯೆಗಳನ್ನು ತಿಳಿಯಲು ಸಮರ್ಥನಾದೆ. ಶಿಕ್ಷಣದ ಉದ್ದೇಶವೂ ಗುರಿಯೂ ಶಿಕ್ಷಣಾಧಿಕಾರಿಗಳ ಲಕ್ಷ್ಯವನ್ನು ಸೆಳೆದಿದ್ದು, ಪ್ರಜೆಯು ಉಪಯೋಗಕಾರಿಯಾಗಿ, ಜೀವನ ನಿರ್ವಾಹಪಯುಕ್ತಿಕೊಳ್ಳುವಂತಹ ಶಿಕ್ಷಣವು ಅಗತ್ಯವಿದೆಯೆಂಬುದನ್ನು ಇತ್ತೀಚೆಗೆ ಜಿವ್ಯಾಪಿ ಮನಗಾಣಲಾಗಿದೆ. ಅದನ್ನು ಯಶಸ್ವಿಯಾಗಿ ಸಾಧಿಸಲು ಅನೇಕ ಎಡರು-ತೊಡರುಗಳಿವೆ. ಆದರಲ್ಲಿ, ಮುಖ್ಯವಾದುದೇ ಇದು–ಹಣ!

ಟೀಚರ್ ಮೇನೇಜರರು ಶಿಕ್ಷಣ ವಿಭಾಗದಲ್ಲಿ ಮಾಡಿರುವ ಸೇವೆಯೇನೂ ಅಸ್ಪಷ್ಟವಲ್ಲ. ಆದರೆ, ಅದನ್ನು ಗುರುತಿಸಿಯೂ–ಸರಕಾರವು ಹೆಚ್ಚು ಸಹಾಯ ಮಾಡಲಾರದೆ–ಅನೇಕ ದೆಸೆಗಳಲ್ಲಿ ಗ್ರಾಂಟುಗಳನ್ನೆ ಕಡಿಯಬೇಕಾದ ದುಃಸ್ಥಿತಿಯೊದಗಿರುವುದು ಅನಿವಾರ್ಯವಾಗಿದೆ. ಪ್ರಾಥಮಿಕ ಶಿಕ್ಷಣ ಪ್ರಸಾರದ ಆನಿಷ್ಟ ಕತೆಯು ಸರಕಾರಕ್ಕೆ ತಿಳಿದಿದೆ. ಪರಂತು, ಧನವೇ ಮುಖ್ಯ! ಇನ್ನು ಮುಂದೆ, ಕಾಲ ಸ್ಥಿತಿಯು ಬದಲಾಗುತ್ತಿದ್ದಂತೆ ಸರಕಾರದ ಭಂಡಾರವೂ ತುಂಬಿ ಪ್ರಾಥಮಿಕ ಶಿಕ್ಷಣಕ್ಕೆ ಸಿಗಬೇಕಾದ ಸಹಾಯವು ದೊರೆಯುವ ಕಾಲವು ಇನ್ನು ದೂರವಿರದು. ಜನರು ನಿಷ್ಕೃತ್ತರಾಗುವಂತೆ, ಅವರ ಜೀವನ ಕ್ರಮವು ಇತ್ಯಾದಿಗಳು ಸುಧಾರಿಸುವಂತೆ ಅವರಿಗೆ ನಾನಾ ಉಪಾಯಗಳನ್ನೂ ಅನುಕೂಲತೆಗಳನ್ನೂ ವಿಧಿಪಡಿಸುವುದೇ ನಮ್ಮ ಕರ್ತವ್ಯವಾಗಿರುವುದು. ಕೃಷಿ ಮತ್ತು ಕೈಗಾರಿಕೆಗಳಲ್ಲಿ ಜನರು ಮುಂದಾಗಬೇಕಾಗಿದೆ. ನೀವು ನಿರಕ್ಷರತೆಯು ಅಳಿಸಿ ಹೋಗಲು ಸಾಧ್ಯವಾದ ಯೋಗ್ಯ ರೀತಿಯ ಗಳನ್ನು ಮಾಡುವಿರಾಗಿ ನಾನು ನಿರೀಕ್ಷಿಸುವೆನು.''

FRESH CONSIGNMENT ARRIVED.

UNEQUAL QUALITY——————EXCEPTIONAL PRICE.

A TIRE THAT SAVES YOU REPUTATION AND MONEY.

The Canara Public Conveyance Co., Ltd.

MANGALORE.

ತೆರೆಯ ಮರೆಯಲ್ಲಿ

—ಅನುವಾದ—

ಲೇಖಕರು—ಶ್ರೀ ಕೋಟ ಶಿವರಾಮ ಕಾರಂತರು.

೩. ಜಗತ್ತು ಯಾರಿಗೆ?

ಅಮ್ಮಲ್ಲಾರರೆ ಮಗಳು ನಮ್ಮ ಜಯಲಕ್ಷ್ಮಿ. ಇನ್ನು ಅವಳ ಪಾಲಿಗೇನು ಕಡಿಮೆ? ಮಗಳಿಲ್ಲ ಮಗಳಿಲ್ಲವೆಂದು ನೋಂದು ನೋಂದು ಬಯಸಿದಾಗ ಭಾಗೀರಥಿಯಂತೆ ಬಂದ ವಳು ಅವಳು. ಅವಳನ್ನು ಪಡೆಯುವಾಗ ಅವಳ ತಾಯಿಗೆ ಐವತ್ತೇ ವಯಸ್ಸು ನಡೆಯುತ್ತಿತ್ತು. ಸಾಧಾರಣ ಐವತ್ತಕ್ಕೆ ಸವಿೂಪವಾಗಿತ್ತು ಶ್ಯಾಮರಾಯರ ಪ್ರಾಯ. ಶ್ಯಾಮರಾಯ ರೆಂಬುದು ನಮ್ಮ ಅಮಲ್ಲಾರರ ಹೆಸರು. ಅಲ್ಲಿಯ ತನಕ ಅವರ ಕುಟುಂಬದಲ್ಲಿ ಒಂದು ಕೂಸೂ ಹುಟ್ಟಿ ಬೆಳೆದಿರಲಿಲ್ಲ. ಇನ್ನೆನ್ನು ಅವರು ತಮ್ಮ ಸಂತತಿಯ ಯೋಚನೆಯನ್ನು ಬಿಟ್ಟು ಎಲ್ಲಿಂದಲಾದರೂ ದತ್ತ ತೆಗೆದುಕೊಳ್ಳಬೇಕೆಂದು ನಿಶ್ಚಯ ಮಾಡಿದ್ದರು. ಅವರ ಪತ್ನಿ ಚಿನ್ನದಂಥ ಹೆಂಗಸು, ಕಾವೇರಮ್ಮನೂ ಅದಕ್ಕೆ ಒಡಂಬಟ್ಟಿದ್ದಳು. ಅದೇ ತಳ್ಳುದೆಂದು ನಿಶ್ಚಯವಾಯಿತು. ಹಾಗಾದರೆ ಇನ್ನೆ ಯೋಗ್ಯನಾದ ಹುಡುಗನನ್ನು ಅರಿಸುವಾ ಎಂದು ನಿಶ್ಚಯ ಮಾಡಿದರು. ಹುಡುಗನಾದರೂ ಹುಡುಗಿಯಾದರೂ ಒಂದೇ ಅವರ ಪಾಲಿಗೆ. ಅವರ ಆಸ್ತಿಪಾಸ್ತಿಗಳಿಗೆ ಬೇರೆ ಹಕ್ಕುದಾರರೇ ಇರಲಿಲ್ಲ. ಇನ್ನರು ಹೀಗೆಯೇ ಕಣ್ಮುಚ್ಚಿದರೆ ಅದು ನೇರಾಗಿ ಸರಕಾರದವರ ಪಾಲಿಗೆ ಬೀಳುತ್ತಿತ್ತು. ಹೀಗಾಗಿ ಹಲವರು ರಾಯರ ಈ ಯೋಚನೆಯನ್ನು ಕಂಡು ತಮ್ಮ ಮಕ್ಕಳನ್ನು ದತ್ತ ಕೊಡುವೆನೆಂದು ಮುಂದೆ ಬಂದರು. ಆ ಮಕ್ಕಳಲ್ಲಿ ಯಾರಾದರೊಬ್ಬನನ್ನು ಆರಿಸಬೇಕೆಂದು ದಂಪತಿಗಳಿಬ್ಬರೂ ನಿಶ್ಚಯಿಸಿದರು. ಮನಸ್ಸಿನಲ್ಲಿ, ಬಹಳವಾಗಿ ಚರ್ಚಿಸಿ ಇಂಥ ಒಬ್ಬ ಬಾಲಕನೇ ಆಗಬಹುದೆಂದು ನಿಶ್ಚಯಿಸಿದರು. ಆ ಹುಡುಗನು, ಅವರ ರೆವಿನ್ಯು ಇನ್ಸ್‌ಪೆಕ್ಟರರ ಹುಡುಗ ಸುಬ್ಬು. ಸುಬ್ಬುವಿಗೀಗ ೧೦ ವರ್ಷ ಪ್ರಾಯ. ಉಪ ನಯನವಾಗಿದ್ದರಲಿಲ್ಲ. ಮನಸ್ಸಿನಲ್ಲಿ ಅನಸೇ ತಳ್ಕವನೆಂದ. ಎಣಿಕೆ ಹಾಕಿದ್ದರು. ಅವರ ಮುಂದೆ ಮಾತ್ರ ಬಾಯಿ ಬಿಡಿಸಲಿಲ್ಲ. ಕಾವೇರಮ್ಮನೆನ್ನುತ್ತಿದ್ದಳು:—"ಈ ಹುಡುಗನಿಗಿಂತ ಚುರುಕು ಹುಡುಗನು ನಮಗೆ ಸಿಗಲಾರನೆಂಬ ನಿಶ್ಚಯವಾದ ಬಳಿಕ ಮಾತ್ರ ಅನುರಿಗೆ ತಿಳಿಸುವ. ಈಗ ಅವ ಸರವೇನು? ಇನ್ನು ಒಂದೆರಡು ತಿಂಗಳ ತನಕ ನನ್ನು ಶೋಧ ನೆಯ ಕೆಲಸ ನಡೆಯಲಿ"—ಎಂದು.

ಒಂದು ದಿನ ಶ್ಯಾಮರಾಯರು, ತಮ್ಮ ಕ್ರಮದಂತೆ ಹಳ್ಳಿಗಳಿಗೆ ಸರ್ಕಿಟಿಗೆ ಹೋದರು. ಬರುವಾಗ ಬಹಳ ದಿನ ಕಳೆಯಬಹುದೆಂದಿತ್ತು. ಆದುದರಿಂದ ಹೋಗುವ ಗಳಿಗೆಯಲ್ಲಿ "ಮ್ಮ ಇವಳೇ.....ನೀನು ನೋಡುತ್ತಿರು; ಬೇರೆ ಯೋಗ್ಯ ಹುಡುಗರು ಯಾರಾದರೂ ಇದ್ದಾರೆಯೇ!"—ಎಂದು ಹೇಳಿ ಹೋದರು. ಕಾವೇರಮ್ಮನಿಗೆ ಹೇಳುವುದೇ ಬೇಡವಿತ್ತು. ಅವಳಾಗಿ ಅದಕ್ಕೆ ಚಡಪಡಿಸುತ್ತಿದ್ದಳು. ತಿರಿಗಿ ಶ್ಯಾಮ ರಾಯರು ಸ್ವವಾಸ ಮುಗಿಸಿಕೊಂಡು ಮನೆಗೆ ಬರುವಾಗ ಒಂದು ತಿಂಗಳ ಮೇಲೆಯೇ ಕಳೆಯಿತು. ನಾಳೆ ಬರುವೆ ನೆಂದು ಮನೆಗೆ, ತಮ್ಮ ಕೊನೆಯ ಮೊಕ್ಕಾಮಿನಿಂದ ಜವಾನ ನನ್ನು ಕಳುಹಿಸಿದರು. ಕಾವೇರಮ್ಮನ ಹರುಷಕ್ಕೆ ಪಾರವಿಲ್ಲ. ಆ "ನ್ನಾಳೆ"ಯು ಬರಲು ಅವಳು ತೀರ ಉತ್ಸಾಹದಲ್ಲಿ ಕುಣಿಯುತ್ತಿದ್ದಳು. ಸರಿ; ಅಮಲ್ಲಾರರು ಬರುವಾಗ ಕಾವೇ ರಮ್ಮನು ಬಾಗಿಲಲ್ಲೇ ಇದಿರುಗೊಳ್ಳಲು ಕಾದು ನಿಂತಿದ್ದಳು. ರಾಯರು ಬಂದವರೇ, "ಏನು? ಎಲ್ಲಾದರೂ ಕಂಡೆಯಾ" ಎಂದು ಕೇಳಿದರು. ಕಾವೇರಮ್ಮನು ಅದರ ಹತ್ತು ಮಡಿ ಉತ್ಸಾಹದಿಂದ "ಅಹುದು ಹೇಳುತ್ತೇನೆ" ಎಂದು ಅವರನ್ನು ಒಳಕ್ಕೆ ಕರೆದುಕೊಂಡು ಹೋದಳು. ಅವಳಿಗೆ ವಿಷಯವನ್ನು ಹೇಳಲು ಅಷ್ಟಿನ್ನು ಉತ್ಸಾಹವಿದ್ದಿಲ್ಲ. ಆದರೆ ನಾಚುಗೆ ಯಿಂದ ಬಾಯಿಯೇ ಬಾರದಿತ್ತು. ಕೊನೆಗೆ ಮಾತು ಮಾತಿನ ಮೇಲೆ ಅಮಲ್ಲಾರಿಗೆ ಊಹೆಯು ಮಾತ್ರ ಹೊಳೆಯಿತು. ದೇವರು ಅವಳ ಹೊಟ್ಟೆಯಲ್ಲಿಯೇ ಶಿಶುವನ್ನು ಕರುಣಿಸಿ ಲಿರುವನೆಂದು. ಆದರೆ ಈ ವಯಸ್ಸಿನಲ್ಲಿ ಅವಳು ಗರ್ಭಿಣಿ ಯಾಗುವುದುಂಟೇ ಎಂಬ ಸಂಶಯವೂ ಬಂದಿತ್ತು. ಒಂದೆ ರಡು ತಿಂಗಳುಗಳಲ್ಲಿ ಸಂಶಯವು ನಿವಾರಣೆಯಾಗಿ, ಕಾವೇ ರಮ್ಮನು ತಾಯಿಯಾಗುವುದು ಖಂಡಿತವೆಂದೇ ಆಯಿತು. ಅಮಲ್ಲಾರರಿಗೆ ಯೋಚನೆ ಹೆಚ್ಚಿತು. ಒಬ್ಬಬ್ಬರು ವೈದ್ಯ ರನ್ನು ಕರೆದು ಅಂತರಂಗದಲ್ಲಿ ವಿಚಾರಿಸ ತೊಡಗಿದರು—"ಹೇಗೆ, ನಮ್ಮ ಮಗು ನನಗೆ ಸಿಕ್ಕೀತೇ?" ಎಂದು. ವೈದ್ಯರು ಧೈರ್ಯದಿಂದ "ಚೆನ್ನಾಗಿ ಲಾಲನೆ ಪಾಲನೆ ಮಾಡಿದರೆ ಸಿಕ್ಕದೆ ಏನು?" ಎಂದರು. "ಲಾಲನೆ ಪಾಲನೆ ಮಾಡಲು ಅವಳಿಲ್ಲವೇ?" ಎಂದರು. ವೈದ್ಯರು ಬೇಸರದಿಂದ "ನಿಜ; ಆದರೆ ಪ್ರಸವವು ಕಠಿಣವಾದೀತು; ತಾಯಿಯು ಬಹುಕುವುದು ಕಷ್ಟ"—ಎಂದರು. ಅಮಲ್ಲಾರರ ತಲೆಯ ಮೇಲಿನ ಒಂದು ಚಿಂತೆಯ ಭಾರವು ಇನ್ನೊಂದು ಬಂದು ಕುಳಿತಿತು. ಆದರೆ ಅವರು ಆ ವಿಷಯವಾಗಿ ಕಾವೇರಮ್ಮ ನೊಡನೆ ಬಾಯಿ ತೆರೆಯಲಿಲ್ಲ.

ಸರಿ, ನವಮಾಸ ತುಂಬಿ ಹಡೆಯುವ ದಿನವೇ ಬಂದಿತು. ಮೂರು ದಿವಸಗಳಿಂದ ತಾಯಿಯು ವೇದನೆಯನ್ನು ಅನು ಭವಿಸತೊಡಗಿದ್ದಳು. ವೈದ್ಯರು ಬಂದರು, ಡಾಕ್ಟರು ಬಂದರು, ಸೂಲಗಿತ್ತಿಯೂ ಬಂದಳು. ಅವರ ಸಾಹಸದಿಂದ ಶಿಶುವು ಬೆಳಕನ್ನು ಕಂಡಿತು. ಪೂರ್ವಸೂಚನೆಯಂತೆ ತಾಯಿಯು ಬೆಳಕಿಂದ ಹೊರಟುಹೋದಳು. ಅಮಲ್ಲಾ ರರು ಎದೆ ತಟ್ಟಿಕೊಂಡರು. ಅಂತು ಕೂಸನ್ನು ಕಂಡು ಕುಸು ಶಾಂತಿಯಾಯಿತು. ಹುಟ್ಟಿದುದು ಹೆಣ್ಣು ಕೂಸು. ಪಾಪ, ಕಾವೇರಮ್ಮ ಕೂಸನ್ನು ಕಂಡಿದ್ದರೋ ಇಲ್ಲವೋ! ಅಂತು ಪತಿಚರಣವನ್ನು ಸಲ್ಲಿಸಿ ಹೋದಳವಳು. ಶ್ಯಾಮರಾಯರು ಕೂಸಿಗೆ "ಜಯಲಕ್ಷ್ಮಿ" ಎಂದು ಹೆಸರಿಸಿದರು. ಜಯ ಲಕ್ಷ್ಮಿಯನ್ನು ಸಾಕಿ ದೊಡ್ಡದು ಮಾಡುವುದಕ್ಕೆಂದೇ ಇನ್ನೊಂದು ಮದುವೆಯಾದರು. ಆದರೆ ಅದೂ ಅಸೆ ಈ ಉಗ್ರದಿಂದ ಪೂರೈಸತೇ ವಿನಹ ಸಂತತಿಯ ಬಯಕೆಯು ಈ ಎರಡನೆಯ ವಿವಾಹದಿಂದಲೂ ಫಲಿಸಲಿಲ್ಲ. ಜಯ ಲಕ್ಷ್ಮಿಯೇ ಆ ಎರಡನೆಯ ಹೆಂಡತಿ ವಿಶಾಲಾಕ್ಷಿಗೂ ಮಗು ವಾಯಿತು. ಹೀಗಾಗಿ ಅನಳು ಮಗುವನ್ನು ತೀರ ಮುದ್ದು ಸಿಂದ ಸಾಕುತ್ತಿದ್ದಳು. ಜಯಮ್ಮಗೆ ತಾಯಿ ಇಲ್ಲವೆಂಬ ಯೋಚನೆಯು ಸಹ ಉಂಟಾಗಲಿಲ್ಲ. ಇತ್ತ ಬಾಲಕಿಯು ಸಾಲೆಗೆ ಹೋಗತೊಡಗಿದಳು. ಕಲಿಯುವುದರಲ್ಲಿಯೂ ತೀರ ಚುರುಕಿನ ಹುಡುಗಿಯಿಂದು ತಿಳಿಯಿತು. ಇದರ ಮೇಲಂತೂ ಶ್ಯಾಮರಾಯರಿಗೆ ಸ್ವರ್ಗವೇ ದೊರೆತಷ್ಟು ಆನಂದವಾಯಿತು. "ಇನ್ನು ಯೋಗ್ಯನಾಥ ಮನೆ ಅಳಿಯ ನನ್ನು ತಂದರೆ?" ಎಂದು ಯೋಚನೆ ಸೂಡಿದರು. ಕಾಣ ಕಾಣುತ್ತ ಹದಿನೆರಡು ವರುಷಗಳ. ಸಂದು ಜಯಮ್ಮನು ಪ್ರಾಯಭರಿತೆಯಾದಳು. ವರನನ್ನು ಹುಡುಕಲೇ ಬೇಕೆಂದು ನಿಶ್ಚಯಿಸಿದರು. ಅವರ ಮನೆಗೆ ಈಗ ರೆವಿನ್ಯೂ ಇನ್ಸ್‌ಪೆಕ್ಟರರ ಆ ಹುಡುಗ, ದತ್ತುವಿಗೆ ತೆಗೆದುಕೊಳ್ಳಬೇಕೆಂ ದಿದ್ದರಲ್ಲ, ಅವನನ್ನೇ ತೆಗೆದುಕೊಳ್ಳುವ ಎಂದು ನೆನಪಾ ಯಿತು. ಈಗ ಅವನನ್ನು ಕೊಳ್ಳಲು ಮತ್ತೂ ಹೆಚ್ಚಿನ ಉತ್ಸಾ ಹವಿತ್ತು.

ಅದಕ್ಕಾಗಿಯೇ ಅವರು ಒಂದು ದಿನ ತಮ್ಮ ಕೆಳಗಿನ ನೌಕರರಾದೂ ಅವರ ಮನೆಗೆ ಹೋದರು. ಗೌರವಾರ್ಥದ ಊಟ ಉಪಚಾರಗಳಾದ ಬಳಿಕ—"ಸ್ವಾಮಿ, ನಿಮ್ಮ ಹುಡುಗ ನನ್ನು ಕಾಣಲೇ ಇಲ್ಲವಲ್ಲ. ರಜೆಗೆ ಅವನು ಊರಿಗೆ ಬಂದಿ ಲ್ಲವೇ?"—ಎಂದರು. ಮನೆಗಾರರು "ಯಾರು ಸ್ವಾಮಿ?—ರಜೆಗೆ ಮನೆಗೆ ಬಂದಿಲ್ಲವೆಂಬುದು?"—ಎಂದರು. "ಯಾಕೆ, ನಿಮ್ಮ ಸುಬ್ಬು" ಎಂದರು ಅಮಲ್ಲಾರರು. ಮನೆಗಾರರ ಮುಖ ಸಪ್ಪಗಾಯಿತು. ಅತೀವ ವ್ಯಸನದಿಂದವರು—"ಅದು ನನ್ನ ಹೊಟ್ಟೆಯಲ್ಲಿಯೇ ಜನಿಸಿಲ್ಲವೆಂದು ತಿಳಿಯುತ್ತೇನೆ. ಅವನೀಗ ಯಾವ್ಯಾವ ಪೋಲಿಗಳ ಸಂಗಡ ಸೇರಿ ಊರು ಬಿಟ್ಟು ಹೋದನು. ವಿದ್ಯೆಯು ಅಯಿತಲ್ಲಿಗೆ; ಈಗೆಲ್ಲಿಯೋ ನಾಟಕ ಕಂಪೆನಿಯಲ್ಲಿರುವನಂತೆ. ಹಾಳಾಗಲಿ ಅವನ ವಿಚಾರ."—ಎಂದರು. "ಇನ್ನು ನನ್ನ ಎರಡನೆ ಹುಡುಗ ರಾಮ ಏನಾದರೂ ಆದರೆ ಆಗಬೇಕು" ಎಂದರು. 'ರಾಮ' ಎನಲು, ಅಮಲ್ಲಾರರು "ಎಷ್ಟು ವಯಸ್ಸಿನವನು?" ಎಂದರು. "ಏನು ಸ್ವಾಮಿ, ಇನ್ನೂ ಹನ್ನೆರಡು ವಯಸ್ಸು" ಎಂದರು. ರಾಯರು ತಮ್ಮ ಮನೆಗೆ ಜಯಲಕ್ಷ್ಮಿಯ ಲಗ್ನದ ಯೋಚನೆ ಯಿಂದ ಬಂದಿದ್ದರೆಂದು ಅವರಿಗೆ ತಿಳಿದಿರಲಿಲ್ಲ. ತಿಳಿದಿದ್ದರೆ ಅವರು ಈ ರೀತಿಯಾಗಿ ಮಗನ ನಿಂದೆ ಮಾಡುತ್ತಿರಲಿಲ್ಲ. ಸಜಕ್ಕೂ ಜಯಮ್ಮ ನಿಗುವುದಾದರೆ ಹುಡುಗನಿಗೆ ಸಲಾಮು ನ್ನಾದರೂ ಹೊಡೆದು ಮನೆಗೆ ಕರೆಯಿಸುತ್ತಿದ್ದೆ ಎಂದು ಆ ಬಳಿಕ ಅಂದುಕೊಂಡರವರು. ಅಂತು ರಾಯರು ಹತಾಶ ರಾಗಿ ಮರಳಿದರು.

ಊರಿನಲ್ಲಿ ಮನೆಗಾರನೊಬ್ಬನ ಮಗನೇ ಇರುವ ನೇನು? ರಾಯರ ಅದ್ವಿತೀಯ ಗೌರವ ಅಂತಸ್ತುಗಳ ದೆಸೆಯಿಂದ ನೂರಾರು ಜಾತಕಗಳು ಅವರ ಕಾಲಬುಡಕ್ಕೆ ಬಂದು ಕುಳಿ ತವು. ಅದರಲ್ಲೆ ಒಬ್ಬನನ್ನು ಆರಿಸುವುದೆಂದು ನಿಶ್ಚಯಿಸಿ ದರು. ಹಾಗೆಯೇ ಆರಿಸಿದರು. ಆರಿಸಿದ ಬಾಲಕನು—ನೆರೆಯಂರಿನವನು. ಶ್ರೀಮಂತರ ಮಗನು. ಇತ್ತ ಬಿ. ಎ. ಕಲಿಯುತ್ತಿದ್ದನು. ಇದಕ್ಕೆ ಮೇಲಿನ ನೆಂಟಸ್ತಿಕೆ ಸಿಕ್ಕೀತೆಂದು ಅವರು ಬಯಸಿರಲಿಲ್ಲ. ಆದರೆ ಸ್ವಲ್ಪ ಕಾಯಿಲೆಯ ಪ್ರಕೃತಿ ಯೆಂದು ಕಂಡವರು ಅನ್ನುತ್ತಿದ್ದರು. ಆದರೆ ಯೋಗ್ಯ ಉಪ ಚಾರದಿಂದ ಅದನ್ನು ನಿವಾರಿಸುವುದು ಕ್ಷಣ ಮಾತ್ರದ ಕೆಲಸ ವೆಂದು ಅವರು ತಿಳಿದಿದ್ದರು. ಸ್ವತಃ ಅವರೇ ಜಾಮಾತನ ಪರೀಕ್ಷೆಗೆಂದು ಮದ್ರಾಸಿನ ತನಕ ಯಾತ್ರೆ ಬೆಳೆಯಿ ಬಂದರು. ಅದೇ ವರನೆಂದು ನಿಶ್ಚಯವಾಯಿತು. ಲಗ್ನದ ದಿನವೂ ನಿಶ್ಚಯವಾಯಿತು.

ಲಗ್ನದ ದಿನ ಧಾರಾನುಂಟವದಲ್ಲಿ ಜಯಲಕ್ಷ್ಮಿಗೆ ತನ್ನ ಜೀವನ ನಾಯಕನ ದರುಶನವು ಪ್ರಥಮ ಬಾರಿಗೆ ಉಂಟಾ ಯಿತು. ನಡುವೆ ಮಧುಪರ್ಕವನ್ನು ಹಿಡಿದು ವಧೂವರರ ಕೈಯಲ್ಲಿ ಹೂಮಾಲೆ ಕೊಡಿಸಿದ್ದರು. ರಾಯರು ಮಗು ವನ್ನು ಎತ್ತಿ ಹಿಡಿದರು. ಜಯಮ್ಮನು ಆ ಕ್ಷಣ ನಾಚುಗೆ ಯನ್ನು ಮರೆತು, ವರನ ಮುಖವನ್ನು ಕಂಡಳು. ಪರನು ಮಾಲಿಕೆಯನ್ನು ಹಾಕಿದನು. ಜಯಮ್ಮನು ನಡುಗುತ ಹಾರವನ್ನು ಹಾಕಿದಳು. ಲಗ್ನದ ನಾಲ್ಕು ದಿನಗಳು ಕಳೆ ದುವು. ಅದರ ಬಳಿಕವೂ ಅಳಿಯರಾಯನು ಒಂದೆರಡು ಬಾರಿ ಮಾವನ ಮನೆಗೆ ಬಂದಿದ್ದನು. ಆದರೆ ಅವನಿಗೂ ಅಳುಕು ಹೆಚ್ಚು. ಹೀಗಾಗಿ ದಂಪತಿಗಳಲ್ಲಿ ಆ ಸಾರಿ ಮಾತು ಕಥೆಗಳು ಸಹ ಆಗಿರಲಿಲ್ಲ. ಸರಿ; ರಜೆ ಮುಗಿಯಲು ಹುಡು ಗನು ಬಿ. ಯಲ್. ಕಲಿಯಲು ಹೊರಟೇ ಹೋದನು.

ಜಯಮ್ಮನು ಯಾವ ಚಿಂತೆಯೂ ಇಲ್ಲದೆ ಸಾತೆಗೆ ಹೋಗಿ ಬರುತ್ತಿದ್ದಳು. ಒಂದೆರಡು ಬಾರಿ ಅಳಿಗೆ ಅವಳ ಪತಿಯಿಂದ ಕಾಗದವು ಬಂದಿತ್ತು. ಅದನ್ನು ಓದಿ ಅವಳು ನಾಚಿಕೊಂಡಿದ್ದಳು. ಉತ್ತರವನ್ನು ಬರೆಯುವ ಸಾಹಸವೂ ಆಗಲಿಲ್ಲ. ಇದರಿಂದ ತನ್ನ ಪತಿರಾಯನು ಕುಪಿತನಾಗು ವನೋ ಏನೋ ಎಂದು ಅಂಜಿದ್ದಳು.

ಈಗ ಜಯಮ್ಮಗೆ ೧೪ ವರುಷವಾಗಿ ಅವಳು ಋತು ಮತಿಯಾದಳು. ಮನೆಯಲ್ಲಿ ಉತ್ಸವವೇ ಆಯಿತು. ಹೆಂಗಸ ರೆಲ್ಲರೂ ಬಂದು ಸುತ್ತಲೂ ಸೇರಿ ಹಾಡನ್ನು ಹೇಳಿ ಹರಸಿ ದರು. ಸತ್ಕಿಯ ಆಗ್ರಹದಂತೆ ರಾಯರು ಅಳಿಯನಿಗೆ "ಕೂಡಲೇ ಹೊರಟು ಬಾ" ಎಂದು ತಂತಿ ಕಳುಹಿಸಿದರು. ತಂತಿ ಕಳುಹಿಸಿದ ಎರಡು ತಾಸಿನಲ್ಲೇ ಮಣೇಗಾರರ ಕಿರಿ ಮಗನು ಅವರನ್ನು ಕಾಣಲು ಬಂದನು. ಅವನ ಕೈಯಲ್ಲಿ ಒಂದು ತಂತಿಯಿತ್ತು. ಅವನು ಅದನ್ನು ರಾಯರ ಕೈಮೇಲಿ ರಿಸಿ ಮೂತನಾಡದೆ ಹೊರಟು ಹೋದನು. ರಾಯರು ತೆರೆದು ನೋಡಿದರು: ಏದ್ದ ಒಡೆಯುತು. ಅಳಿಯನು ಅದಕ್ಕೆ ಆರು ತಾಸುಗಳ ಮುಂದೆ ಕ್ಷಯ ರೋಗದಿಂದ ಸರಂಧಾಮವನ್ನು ಹೊಂದಿದ್ದನು. ಸರಿ, ನಗಲು ಬಂದನೆರೆಲ್ಲ ಅಳತೊಡಗಿ ದರು. ರಾಯರು ನೀರಾಗಿ ಜಯಮ್ಮನ ಬಳಿಗೆ ಹೋಗಿ ನಾನಾ ವಿಧದಿಂದ ಸಮಾಧಾನವನ್ನು ಹೇಳಿದರು. "ಪೂರ್ವ ಕರ್ಮದ ಫಲವನ್ನು ನಾವಲ್ಲದೆ ಇನ್ನಾರು ಅನುಭವಿಸು ವರು?"—ಎಂದರು. ಜಯಲಕ್ಷ್ಮಿ ಅಳಲೂ ಇಲ್ಲ. ನಗಲೂ ಇಲ್ಲ.

ಜಯಲಕ್ಷ್ಮಿ ಬಾಲವಿಧವೆಯಾಗಿ ಎರಡು ವರ್ಷಗಳನ್ನು ಕಳೆದಳು. ಅವಳ ಮನಸ್ಸಿಗೆ ಯಾವ ರೀತಿಯಿಂದಲೂ ಸೋವಾಗದಂತೆ ತಂದೆಯು ನೋಡುತ್ತಿದ್ದನು. ಉಂಡುಡು ನ್ನುವುದರಲ್ಲಿ, ಉಟ್ಟುತ್ತಿರುವುದರಲ್ಲಿ ಅವಳಿಗೆ ಯಾವ ಕೊಂದರೆಯೂ ಆಗುತ್ತಿದ್ದಿಲ್ಲ. ಹೀಗಾಗಿ ಚಿಂತೆಯಿಲ್ಲದೆ ಅವಳ ಜೀವನವು ಕಳೆಯುತ್ತಿತ್ತೆನ್ನಬೇಕು. ಈಗ ಅವಳಿಗೆ ೧೮ ವರುಷ. ಒಂದು ದಿನ ಅವರು ಮಗಳನ್ನು ಕರೆದುಕೊಂಡು, ತಮ್ಮೂರಿಗೆ ಬಂದ ನಾಟಕವೊಂದನ್ನು ಕಾಣಲು ಹೋಗಿದ್ದರು. ಟಕೇ ಟಲ್ಲ..... ಕಂಡಷ್ಟು ನಾಟಕಗಳನ್ನು ಕಾಣಬಹುದಾಗಿತ್ತು. ಜಯಲಕ್ಷ್ಮಿಗೆ ನಾಟಕಗಳ ಮೇಲಿನ ಮಮತೆ ಅಧಿಕ. ಹೀಗಾಗಿ ತಂದೆಯು ಇಲ್ಲದಿರುವಾಗಲೂ ಅವಳು ನಾಟಕ ವನ್ನು ಕಾಣಲು ಹೋಗುತ್ತಿದ್ದಳು. ಇದಕ್ಕೆ ತಿರಿತಾಯಿಯು ಆಕ್ಷೇಪಿಸಲೂ ಇಲ್ಲ.

ನಾಟಕದವರು ಬಂದು ಒಂದು ತಿಂಗಳಾಯಿತು. ಈ ದಿನ ಅವರ ಕೊನೆಯ ನಾಟಕ. ಹಿಂದೆ ಆಡಿದ ನಾಟಕವೇ ಈ ದಿನವೂ ಆಡುವುದು. ಆದರೂ ಜಯಲಕ್ಷ್ಮಿಗೆ ಅದನ್ನು ನೋಡುವ ಆಸೆ. ತಾಯಿಯು "ಜಯ, ಎಕೆ ಹೀಗೆ ನಿದ್ದೆ ಹಾಳುಮಾಡುತ್ತಿ"—ಎಂದು ಎಷ್ಟೋ ಹೇಳಿದರೂ ಕೇಳಲಿಲ್ಲ. "ಎನ್ನೆಂದರೂ ಇದು ಕೊನೆಯ ನಾಟಕವಲ್ಲವೇ" ಎಂದು ರಾಯರ ಮುದಿ ವೇದೆಯ ಸಂಗಡ ಒಂದು ದೀವಿಗೆಯನ್ನು ಕೊಟ್ಟು ನಾಟಕಕ್ಕೆ ಕಳುಹಿಸಿದಳು.

ರಾತ್ರಿ ಮೂರು ತಾಸಾಯಿತು. ಜಯಮ್ಮನು ಮರಳಿ ಬಲ್ಲಿ. ಆ ನಾಟಕವು ರಾತ್ರಿ ಒಂದು ಘಂಟೆಗೆ ಕಳೆಯುತ್ತಿತ್ತು. ಹೀಗಾಗಿ ತಿರಿತಾಯಿಗೆ ಚಿಂತೆಯಾಯಿತು. ಏನು ಅಪಾಯವಾಯಿತೋ ಎಂದು ಅಂಜಿ—ಇನ್ನೊಬ್ಬ ಜವಾನ ನನ್ನು ನಾಟಕ ಶಾಲೆಗೆ ಕಳುಹಿಸಿದಳು. ಅವನೂ ಹೋದನು. ಅವನು ಹೋದ ಒಂದು ತಾಸಿನಲ್ಲಿ ನೂದಲು ಅವಳನ್ನು ಕರೆ ದೊಯ್ದು ವೇದೆಯು ಬಂದನು. ಅವನಾಗ ಅಳುತ್ತಿದ್ದನು. "ಅಮ್ಮಾ ನಾನೇನು ಮಾಡಲಿ? ಅನರು ಹೋಗಿ ಹೆಂಗುಸ ರಿಗೆ ಪ್ರತ್ಯೇಕಿಸಿಟ್ಟ ಸ್ಥಳದಲ್ಲಿ ಕುಳಿತುಕೊಂಡರು. ನಾಟಕ ಮುಗಿಯಲು ನಾನು ಹೊರಗೆ ಬಂದು ನಿಂತೆ. ಅವರಾಗಿ ಕಾಡು ಕಾಡು ಬೇಸತ್ತೆ. ಕೊನೆಗೆ ಗಾಬರಿಯಿಂದ ಅರಸ ತೊಡಗಿದನು. ಆದರೆ ಕಾಣಲಿಲ್ಲ. ತಾವಾಗಿ ಮನೆಗೆ

(ನಂತರ ಇಪ್ಪತ್ತೆ ಮುಂಚಿನದಿದೆ.)

ಮಂಗಳೂರಿನ ಪೇಟೆಧಾರಣೆ.

ಸಾಮಗ್ರಿಗಳು	ಇಂದ	ವರೆಗೆ
	ರೂ. ಆ	ರೂ. ಆ
ಹೊಸ ಅಕ್ಕಿ ಆಳ್ಕೆ	3— 2	3— 6
ಹಳ್ಳು ಮುಳ್ಳಕ	4— 2	4—12
ಹಳ್ಳು ಗುಳ್ಳು	3— 8	3—12
ಹಳ್ಳು ಹುಗ್ಗಿ ..	3— 4	3— 7
ಉಪ್ಪಿ ಅಕ್ಕರ್ ಬೆಲ್ಲಗೆ	4— 0	5— 4
ಕಂಗಡಿಯಿಂದ ಬೆ. ಗೋಟ ೧ಕ್ಕೆ	5— 0	5— 4
ಎಲ್ಲಾದರು ಬೆ. ಮು. ೧ಕ್ಕೆ.	4— 2	4— 4
ಗೋಧಿ ಗೋಟಿ ೧ಕ್ಕೆ	10— 0	12— 8
ಕೆಂಪಗಿ ಗೋಟಿ ೧ಕ್ಕೆ ...	9— 6	10— 0
ಹುರುಳಿ ಗೋಟಿ ೧ಕ್ಕೆ ...	6 — 0	7— 0
ಕಡಲೆ ಗೋಟಿ ೧ಕ್ಕೆ	7 — 0	10— 8
ಕೊಗರುಬೀಳ್ಳಿಗೆಗೋಟಿ ೧ಕ್ಕೆ..	10— 0	17— 0
ಉದ್ದು ಗೋಟಿ ೧ಕ್ಕೆ	8— 0	8— 2
ಹೆಸರು ಗೋಟಿ ೧ಕ್ಕೆ	6—10	7— 6
ಉಗುರುಬೆಲ್ಲ ಖಂಡಿ ೧ಕ್ಕೆ	32— 8	35— 0
ಉಪ್ಪು ಗೋಟಿ ೧ಕ್ಕೆ	4— 8	5— 0
ಹೊಸಬೆ ಖಂಡಿ ೧ಕ್ಕೆ	41— 0	43— 0
ಹೊಸಬೆ ಖಂಡಿ ಒಂಡಿ ೧ಕ್ಕೆ	31— 0	32— 0
ಎಳ್ಳಂಡಿ ಖಂಡಿ ೧ಕ್ಕೆ .	30— 0	35—12
ಹೊಸಬೆ ಎಳ್ಳೆ ಮಣ ೧ಕ್ಕೆ	8— 0	4— 0
ಎಳ್ಳಿಕ್ಕೆ ಮಣ ೧ಕ್ಕೆ	5— 2	5—10
ಚಮಿಮೆಎಣ್ಣೆ ಶಿಟ್ಟಿಗೆ ೧ಕ್ಕೆ	5— 7	5—7
ತೋಂಬರೆಕೊಬ್ಬರಿ ಮ. ೧ಕ್ಕೆ	3— 6	3— 8
ಪ್ರಾಣಾಸು	5— 4	6— 4
ಸಾಮಿನ ಮುಡಿ ೧ಕ್ಕೆ	4—12	5— 4
ಕಾಳುಮೆಣಸು ಖ. ೧ಕ್ಕೆ	155— 0	160— 0
ಯೇಲಕ್ಕಿ ಮಣ ೧ಕ್ಕೆ	24— 0	29— 0
ಗೇರುಬೀಜಮು. ೧ಕ್ಕೆ	3— 8	8—12
ಕಚ್ಚೂರ ಖಂಡಿ ೧ಕ್ಕೆ	42— 0	44— 0
ತಾಂಮ್ರಪಾತ್ರಗಳು ಮ. ೧ಕ್ಕೆ	9 — 8	10—0
ತಾಂಮ್ರಪಾತ್ರಗಳು ಮ ೧ಕ್ಕೆ	12— 8	14— 0
ಚೀಣಿಬೆಳ್ಳ ಸೇರು ೧ಕ್ಕೆ	14—12	15— 0
ಹಿತ್ತಾಳೆ ತಗಡು ಮ. ೧ಕ್ಕೆ	9— 2	9—10
ಹವಸು ೧ಕ್ಕೆ	21— 8	21— 8
ಹುಣಸೆ ಹುಳಿ ಖಂಡಿ ೧ಕ್ಕೆ	30— 0	40— 0
ನೇಪಾಳ ಕಾಫಿ ಖಂಡಿ ೧ಕ್ಕೆ	185— 0	190— 0
ಕುಬೇರ ಕಾಫಿ ಖಂಡಿ ೧ಕ್ಕೆ	275— 0	285— 0
ಚಕ್ಕೆ ಆಡಿಕೆ	80 — 0	115— 0
ಹೊಸ ಆಡಿಕೆ	60— 0	80 — 0

ಪುಕ್ಕಸು ಬಹುಮಾನ ರೂ. 4000

ಬಹುಮಾನಗಳು 600, ರೂ. 11,000.
ಬೆಲೆಯು 1ಕ್ಕೆ 0—8—0 ಮಾತ್ರ.

ಕುಳ್ಳುಂಡೂರು ಶ್ರೀ ದುರ್ಗಾ ಕಾಯರ್ ಏಲ್ ಮೆಂಟರಿ ಶಾಲಾ ಸಹಾಯಾರ್ಥವಾಗಿ ನೋಡ್ತಿ.

ನೋಡ್ತಿ ಕೆಗೆಯುವ ಕಾ 16-2-'35.

ನುಸುಂದರ್ಭವನ್ನು ಕಳಕೊಳ್ಳಬೇಡಿರಿ.

'ನೋಡ್ತಿ ಕೆಗೆಯುವ ಕಾರ್ಡಿಕನ್ನು ಯಾವ ಕಾರಣದಿಂದಲೂ ಮುಂದೂಸುವುದಿಲ್ಲ.

ಅದೃಷ್ಟಪರೀಕ್ಷೆಗೆ ಒಳ್ಳೆ ಸಮಯ, ಸದುದ್ದೇಶಕ್ಕೆ ಸಹಾಯಮಾಡಿ ಪುಣ್ಯ ಭಾಗಿಗಳಾಗಿರಿ.

ಉತ್ತಾಹಿಗಳಾದ ಏಜಂಟರಿಗೆ ಧಾರಾಳ ಕಮಿಶನ್ ಇದೆ.

ವಿಶೇಷ ಮಾಹಿತಿಗೆ ಈ ವಿಳಾಸಕ್ಕೆ ಬರೆಯಿರಿ —
ಗೌರವ ಕಾರ್ಯದರ್ಶಿ,
ದಿ ಗ್ರೇಂಡ್ ರೇಫಲ್ ಆಫೀಸು,
ಕಾರ್ಕಳ, ದ ಕ.

CHEAPEST WATCHES

Lever wrist watch Rs 2/8/-

All watches are accurate in time strong in mechanism and of lasting lever movement Each watch solid guaranteed for 2years On purchasing three at a time postatge free

Round nickle wrist watch	2/8/—
Round superior quality wrist watch	3/8/—
Round rold golden wrist watch	4/8/-
Round rold golden radium dial wrist watch	5/8 —
Rectangular nickle wrist watch	6/8/
Rectangular rold golden wrist watch	7 8 —
Rectangular rold golden 15 jewels wrist watch	15/8/—
Level Pocket Watch	1 15—
'B Time piece	1/11—

East India Watch Co
P O Beadon St, Calcutta

NEW ARRIVALS.

Medicines.

Dr. Schnessler's Twelve Tissue Remedies 5 gr. bot As. 4/-
Homoeopathy Medicines 5 gr. bot. As 5/—
Sugar of Milk Dr. Schwabe's original bot. 1lb Rs 2/-
Haarlem Oil-a world-renowned remedy As. 8/-per phial.
Dr. Haele's New Curative Earth-Radium Cure Rs 4/-per lb.
Dr. Schwabe's other special remedies are always in stock
Please consult us for your requirements.
Kanarese Book a Family Guide to Biochemistry Re 1/-
" Domestic Homoeopathy Rs 1-4/-

If you own these two Books you will be able to pick up treatment and administer Tissue & Homoeopathy Medicines successfully without consulting others.

German Toilet Soaps, Shaving sticks and Washing and Bleaching powders.

Toilet soaps to suit all tastes, and prices from As 2/6
Delightful in aroma, charming in appearance Please try

Kirloskar Pumps.

We are the Representatives for Kirloskar Brothers for their reliable Shallow well and Deep well Pumps Spring Cots, Spring Couches etc., and stock—
Pipes and pipe fittings at cheap prices Coir Mats and Mattings
Steadler Pencils and Stationeries
We are the recognised agents for STEADLERS all stationeries and shall be glad to serve you

Olympia Typwriter.

An up-to date Machine in Standard and portable sizes
For Further particulars apply or write to —

Basel Mission Book & Tract Depository,
Mangalore, S K or Hubli, S M

ಶಾಲಿವಾಹನ ಶಕ ೧೮೫೬ನೆಯ ಭಾವ ಸಂವತ್ಸರದ ಮಾರ್ಗಶಿರ ಬ ೩೦ಕ ವಾರದಿಂದ ಪುಷ್ಯ ಶು೭ ಶುಕ್ರವಾರದ ನರೇಗಿನ ಪಂಚಾಂಗ. (ರ್ಗಣನೆಯ ಸಿಂಹಸೋಣ)

ತಾರೀಕು	ವಾರ	ತಿಥಿ	ನಕ್ಷತ್ರ	ಯೋಗ	ಕರಣ	ಸೂರ್ಯೋದಯ ಗಂ	ಸೂರ್ಯೋದಯ ನಿ	ವಿಶೇಷ
5	ಶನಿ	೩೦	೧೪	ಪೂ ಷಾಢ	೪೭	೫೧	6 22	6 18
6	ರವಿ	೧	೮	ಉ ಷಾಢ	೪೪	೫೨	6 22	6 17
7	ಸೋಮ	೨	೨೬	ಶ್ರವಣಾ	೩೯	೫೩	6 22	6 17
8	ಮಂಜ	೪	೫೧	ಧನಿಷ್ಠ	೨೫	೫೪	6 22	6 16
9	ಬುಧ	೫	೭೫	ಶತಭಿಷಾ	೨೧	೫೫	6 22	6 15
10	ಗುರು	೬	೧೦	ಪೂ ಭಾದ್ರ	೧೪	೫೬	6 22	6 14
11	ಶ-ಶ್ರ	೭	೨೬	ಉ ಭಾದ್ರ	೧೫	೫೭	6 22	6 14

Standard Furniture Co. Ltd

KALLAI, MALABAR

THE BEST HOUSE FOR FURNITURE.

BRANCHES:—
Madras:—34—35, General Patters Road, Mount Road.
Trichinopoly—11, Promenade Road, Cantt.

"ITS A PARAGON PRODUCT."

ಅದನ್ನು ಅಲಕ್ಷಿಸದಿರಿ!

ಶಿಶು ಜೀವನವು ಅತಿ ಕೋಮಲ ಹಾಗೂ ಅನಿಶ್ಚಿತ ಅದು ಕೇಳುತ್ತಿರುವುದು ಕಿಲ್ಕಿಯಂ ಫೂಸ್ಪರಸ್ ವಿಟಮಿನ್ (ಎ ಬಿ ಸಿ ಡಿ ಮತ್ತು ಪ್ರಾಟೀನ ಆಯುರ್ವೇದವು ಸರವಿಧ ಪನಳೀಪನವಾಯಕವಾದ ಹಿಂದೂದೇಶದ ಕೆಲವೊಂದು ಮೂಲಿಕೆಗಳ ಸಾರವನ್ನು

ಪ್ರಪಂಚವನ್ನೆಲ್ಲ ಹುಡುಕಿನೋಡಿ — ಇಂತಹ ಅದ್ಭುತಕರ ಮಿತ ಶೀಘ್ರ ಫಲದಾಯಕ ಶಾಸ್ತ್ರೀಕ್ಕ ಔಷಧ ದೊರೆಯದೇ ಎಂದು' ಈ "ಬೇಬಿಸ್ ಜುವೆನಲ ''ಗೆ ಆಲ್ ಇಂಡಿಯಾ ಸೈಂಟಿಫಿಕ್ ಎಂಡ್ ಪೆಟೆಂಟರಿ ಎಕ್ಸಿಬಿಷನಿನಲ್ಲಿ ಸ್ವರ್ಣಪದಕ ದೊರೆತಿರುವುದೇ ಅದರ ಗುಣಕ್ಕೊಂದು ಪುರಾವೆ

BABY'S Juvenol

RECOMMENDED BY EMINENT MEDICAL MEN.

ಎಲ್ಲ ಕೆಮಿಸ್ಟರಲ್ಲಿಯೂ ರೂ 2 ಮತ್ತು ರೂ 1½ಕ್ಕೆ ದೊರೆಯುತ್ತದೆ.

ಆಥವಾ

ಮೆಸರ್ಸ್ ಕೈ ಫಾರ್ಮಸಿ ಎಂಡ್ ಕಂಪೆನಿ,
ರಥಬೀದಿ, ಮಂಗಳೂರು.

ಸ್ಫುಟವಿಚಾರಗಳು

ದಿವಂಗತ ಹಾರಾಡಿ ಕೇಶವ ಭೈಗಳವರ ಸ್ಮಾರಕವೊಂದನ್ನು—

—ರಚಿಸಬಾರದೇ' ಎಂಬ ಶಿರೋನಾಮೆಯಿಂದ ನಮಗೊಂದು ಬಾಕ್ಸಿಯು ತಲುಪಿದ್ದು, ನಮ್ಮ ಜಿಲ್ಲೆಯ ಜನರ ಸ್ಮರಣೆಗೆ ಪಾತ್ರರಾದ ವರೆ ಸ್ಮಾರಕವನ್ನು ರಚಿಸುವುದು ಉಡುಪಿಯ ಸಾರ್ವಜನಿಕ ಸೇವಾಸಕ್ತರ ಅನಿವಾರ್ಯ ಕರ್ತವ್ಯವೆಂದು ಆ ಬಾಕ್ಸಿದಾರರ ಅಭಿಪ್ರಾಯವಿದೆ. ಇದನ್ನು ನಾವು ಪೂರ್ಣವಾಗಿ ಅನುಮೋದಿಸುವೆವು. ಸ್ಮಾರಕವು, ವಿದ್ಯಾರ್ಥಿಗಳಿಗೆ ಸಹಾಯಧನ ಸಲಿಸುವಂತೆ, ಅಥವಾ ಶಾಲೆಯಲ್ಲಿ ಕೆಲವು ಬಹುಮಾನಗಳಿಗಾಗಿ ವಿನಿಯೋಗವಾಗುವಂತೆ ಇರುವುದು ಸಾಮಾನ್ಯವಾಗಿದೆ. ಆದರೆ, ಯೋಗ್ಯ ವಾಚನಮಂದಿರವಾಗಲಿ ಗ್ರಂಥಾಲಯವಾಗಲಿ ಇಲ್ಲದಿರುವ ಉಡುಪಿಯವರು ದಿವಂಗತರ ಹೆಸರಲ್ಲಿ ಒಂದು ಸಾರ್ವಜನಿಕ ಗ್ರಂಥಾಲಯವನ್ನು ತೆರೆಯುವುದೇ ದಿವಂಗತರಿಗೆ ಯೋಗ್ಯ ಸ್ಮಾರಕವಾಗುವುದೆಂಬುದನ್ನು ಸೂಚಿಸಲೇಳಸುವೆವು.

ಇಪ್ಪತ್ತನೆಯ ಕರ್ಣಾಟಕ ಸಾಹಿತ್ಯ ಸಮ್ಮೇಳನವು—

—ರಾಯಚೂರಿನಲ್ಲಿ, ಕಳೆದ ತಿಂಗಳ ಕೊನೆಯ ವಾರದಲ್ಲಿ, ಯಥಾಯೋಗ್ಯವಾಗಿ ಜರಗಿತು. ಸಮ್ಮೇಳನದ ಅಧ್ಯಕ್ಷರಾಗಿ ಶ್ರೀ. ವಂಡೀ ಮುಂಗೇಶರಾಯರವರು, ಈಗ ವಿಶೇಷವಾಗಿ ನಡೆಯುವ ಹಳೆ-ಹೊಸ ಕವಿತೆಗಳ ವಿಷಯಕಸಾದ ವಾದ-ವಿವಾದಗಳಿಗೆ ಉತ್ತರರೂಪವಾಗಿಯೆಂಬಂತೆ ವಿಚಾರವರ್ಧಕವಾದ ಭಾಷಣ ಮಾಡಿರುವರು. ಛಂದೋಬದ್ಧವಾಗಿ ರಚಿಸಿದ ಕವಿತೆಯಲ್ಲಿ ಸುಖ್ಯನಾಗಿ ಬೇಕಾಗಿರುವ ಧ್ವನಿಶಕ್ತಿಯೆಂದರೇನೆಂದು ಅವರು ಸುಲಭ ಗ್ರಾಹ್ಯವಾಗುವಂತೆ ವಿವರಿಸುತ್ತ, ಮುಂದೆ ವ್ಯಾಸದ ವಿಚಾರವನ್ನೆತ್ತಿ, 'ಪ್ರಾಸವಿಲ್ಲದೆ ವದ್ಯರಚನೆಯೊಗುವುದಾದರೆ, ಗದ್ಯಪದ್ಯಗಳೊಳಗಿನ ಭೇದವೇ ತಪ್ಪಿ ಹೋಗಿ, ಬಗೆಗುರುದರ ತುಂಡು ವದ್ಯಗಳೂ, ನಾಲಗೆ ವೆಳವರ ಎಂದಲು ಹಾಡುಗಳೂ ಬೆಳ್ಳಕ್ಕಂಗರ ಅಳಗಬ್ಬಗಳೂ ತುಂಬಿಹೋಗಿ ಕಾವ್ಯಾಭ್ಯಾಸಿಯ ದಾರಿಯಲ್ಲಿ ಮುಳ್ಳಿಪ್ಪಂತಾಗಿ ಅವ್ಯವಸ್ಥೆಯುಂಟಾಗಲಿಕ್ಕಿಲ್ಲವೇ?' ಎಂಬ ಸ್ಪಷ್ಟಿಗುತ್ತರವನ್ನು ತಮಗೆ ಸಹಜವಾದ ಸರಳ ನುಡಿಯಲ್ಲಿ ವಿವರಿಸುತ್ತ, 'ಪ್ರತಿಭೆಯಿಲ್ಲದೆ ಪ್ರಾಸಬದ್ಧವಾದ ಕವಿತೆಗಳು ಹಳೆಯವಾದರೂ ಸರ್ವಮಾನ್ಯವಾಗಿ ಉಳಿಯಲಾರವು—ಹಾಗೆಯೇ ನವೀನ ಕವಿತೆಗಳಲ್ಲಿ ಕೆಲವಾದರೂ ಪ್ರಾಸಬಿಟ್ಟಿನೆಯೆಂಬ ಒಳ್ಳೆದೇ ಕಾರಣದಿಂದ ಅಳಿಯಲಾರವು' ಎಂದು ತಮ್ಮ ತೀರ್ಮಾನವನ್ನು ಹೇಳಿರುವರು. ಭಾಷಣವು ಕೇವಲ ಅಲಂಕಾರಿಕ ಶಬ್ದಗಳಿಂದೊಡಗೂಡಿರದೆ—ನೂತನ ಮಾರ್ಗಾವಲಂಬಿಗಳಿಗೂ ಹಳೆ ಗ್ರಂಥಗಳ ಅಂಧಪ್ರೇಮಿಗಳಿಗೂ ಉಪಯುಕ್ತ ಸಲಹೆಗಳನ್ನೂಳಗೊಂಡಿದೆ.

'ಗಾಂಧಿಜಿಯವರು ಕ್ರೈಸ್ತನ ಅವತಾರ'

—ವೆಂದು ಪತ್ರಿಕೆಗಳು ಬರೆದುದನ್ನು ಸಹಿಸಲಾರದೆ, ಪೋಪ್ ಸ್ವಾಮಿಯವರ ಪತ್ರಿಕೆಯು ಅದನ್ನು ಪ್ರತಿಭಟಿಸಿ, ವರಮಪೂಜ್ಯ ಕ್ರಿಸ್ತನ ಪಾವನ ಚರಿತೆಯನ್ನೂ ಗಾಂಧಿಜಿಯವರ ''ನೆರೆಮನೆಗೆ ಹೋಗುವ ನಾಟಕದ ವೇಷ' ಗಳನ್ನೂ ಹೋಲಿಸುವುದು ತಪ್ಪು—ಎಂದು, ನೊಂದುಕೊಂಡು ಬರೆಯುತ್ತಿದೆ. ಯೇಸು ಸ್ವಾಮಿಯೇ ಗಾಂಧಿಯೆಂದು ಸಂಬಂಧಿಸುವವರು ಹೆಚ್ಚು ಮಂದಿಯಿರಬಹುದು. ಆದರೆ, ಯೇಸು ಸ್ವಾಮಿಯ ತತ್ವಗಳನ್ನು ಹೊಸತೊಂದು ಶೈಲಿಯಲ್ಲಿ ಗಾಂಧಿಜಿಯೆವರು ನುಡಿಯುತ್ತಿಲ್ಲವೆನ್ನುವವರಾರು? ಗಾಂಧಿಕ್ಷಯವ್ವರು ರಾಜಕೀಯ ಚಳವಳಿಗಾರರಹುದು; ಆದರೆ, ಯೇಸು ಸ್ವಾಮಿಯು ಅಂದೋಲನವಿಲ್ಲದೆ. ತನ್ನ ಅಸ್ತಿತ್ವವನ್ನು ರುಜುಗೊಳಿಸಿಲ್ಲ; ಜನರ ಬುದ್ಧಿ—ರೀತಿ-ನೀತಿಗಳ ಮಾರ್ಪಾಟನ್ನು ಸಾಧಿಸಿದುದು ಅಂದೋಲನವಲ್ಲವೇ? ಯೇಸು ಸ್ವಾಮಿಯನ್ನು ಯಹೂದ್ಯರೂ ರೊಮನ್ ಸಾರ್ವಭೌಮ—ನೌಕರಶಾಹಿಯೂ ಏಕೆ ಪೀಡಿಸಿತು ಎಂಬ ಸ್ಪಷ್ಟಿಯೆದ್ದರೆ—ರಾಜಕೀಯ ಕಾರಣಗಳು ಇದ್ದಿರಲೇ ಬೇಕು. ಅಸಾಮಾನ್ಯವಾದ ಕೃತಿಗಳಿಂದ, ಒಂದು ಜಾತಿಯಲ್ಲಿ ನೂತನವಾದ ಮಾರ್ಪಾಟನ್ನು ತರುವವರನ್ನು ಮಹಾ ಪುರುಷರೆಂದು ಕರೆದು, ಪೂರ್ವಕಾಲೀನ ಸುಹಾಪುರುಷರಿಗೆ ಹೋಲಿಸುವುದೋ ಅಥವಾ ಅವರು ದ್ವಿತೀಯ ಅವತಾರರಿನರೆನ್ನುವುದೋ ಸಹಜವಾಗಿರುವಾಗ, ಪೋಪ್ ಸ್ವಾಮಿಯವರ ಪತ್ರಿಕೆಯು ಗಾಬರಿಪಡುವುದು ತೀರ ಅನುಚಿತವೇ ಆಗಿದೆ.

ಸಿಲೋನ್ ದ್ವೀಪವೆಲ್ಲ

—ಮಲೆಯ್ಯರರಾಕ್ಷಸನ ಹಿಡಿತದಲ್ಲಿ ಸಿಲುಕಿ ನರಳುತ್ತಿರುವ ಭಯಂಕರ ವಾರ್ತೆಯನ್ನು ನಾವು ಕೇಳುತ್ತಿರುವೆವು. ಕಳೆದ ಕಾಲು ಶತಮಾನದಿಂದ ಕಂಡೂ ಕೇಳದಂತಹ ಪ್ರಾಣನಾಶದ ಭೀಕರ ನೃತ್ತಾಂತ! ಭೀಕರತೆಯನ್ನು ದ್ವಿಗುಣಿಸಲು—ಕ್ಷಾಮವು ಜತೆಯಲ್ಲಿ ಹೊರಡಿದೆ. ಕಾರಣ, ಕೃಷಿಪ್ರಧಾನ ಪ್ರದೇಶಗಳಲ್ಲಿ, ಬೇಸಾಯಗಾರರಲ್ಲಿ ಅಧಿಕಾಂಶ ಜನರು ಮಲೆಯ್ಯರನೀಡಿತರು? ಸರಕಾರದವರು, ವ್ಯಾಧಿನಿವಾರಣಾರ್ಥ ಕೈಕೊಂಡ ಶ್ರಮವು ಸಫಲವಾಗುತ್ತಿದೆಯಾಗಿಅನಂದದ ಸುದ್ದಿಯಿದೆ. ಆದರೆ, ಕಾರ್ಯವು ಸುಸೂತ್ರವಾಗಿ ನಡೆಯಲಿರಲು ಧನಾಭಾವನೊಂದು ದುಃಖ ಆತಂಕವಾಗಿದೆ. ಇದಕ್ಕೆ ಸಹಾಯ ಧನವು ಹಿಂದೂ ದೇಶದಿಂದಲೂ ಹೋಗಬೇಕಾದ ಅವಶ್ಯವಿದೆ. ಐದು ಮಿಲ್ಲಿಯ ಜನರು ರೋಗಬಾಧೆಯಲ್ಲಿರುವುದನ್ನು ಸರಕಾರವು ಸಕಾಕಿಯಾಗಿ ಹತ್ತೀಟಿಗೆ ಕರಲಾರದೆಂಬುದರಲ್ಲಿ ಎರಡಭಿಸ್ಮಾ ಯವಿಲ್ಲ.

ರೆ! ಪೂಥ್ಯೂರವರ ಪ್ರಲಾಪ.

ಮಲೆಯ್ಯರ ಪೀಡಿತ ಸಿಂಹಳಿಗಳಿಗೆ, ಚಾಥ್ಯಾ ಸೆಂಟ್ ಪೆಟ್ರಿಕ್ ಕಾಲೇಜಿನ ರೆಕ್ಟರರಾದ ಎಸ್. ಮಾಥ್ಯೂರವರು ಬಹು ಲಾಭಕರವಾದ ಉಪದೇಶವನ್ನು ಕೊಡುತ್ತಿರುವರು:—ಸಿಲೋನಿಗೊಂದು ವಿಶ್ವವಿದ್ಯಾಲಯವು ಬೇಕೆಂದುದಕ್ಕೆ ಹಣವನ್ನು ಸುರುವುತ್ತಿರುವುದಲ್ಲ: ದ್ವೀಪವೆಲ್ಲಾ ಜ್ವರದಿಂದ ನರಳಿ, ಹೊಟ್ಟೆಗೂ ಬಟ್ಟೆಗೂ ಇಲ್ಲದೆ ಕೈಲಾಸ ಯಾತ್ರೆ ಮಾಡುವುದನ್ನು ತಡೆಯಬೇಕೆಂದಿರುವಿರಾದರೆ— ಆ ಹಣವನ್ನು ಹೊಳೆಗಳ ಮೇಲಿನ ಯುದ್ಧಕ್ಕೆ ವಿನಿಯೋಗಿಸಿರಿ!'—ವಿದ್ಯಾಸಂಸ್ಥೆಯ ಜವಾಬುದಾರಿ ಹುದ್ದೆಗಳಲ್ಲಿರುವವರೇ ಹೀಗನ್ನುವರು! ಅದರ ಮೇಲೆ ಟೀಕೆ ಇಲ್ಲ. ಸಿಲೋನಿಗೆ ಒಂದು ವಿಶ್ವವಿದ್ಯಾಲಯದ ಅವಶ್ಯಕತೆಯು ಬಹು ಕಾಲದಿಂದ ಕಂದಿದ್ದು, ಅದನ್ನು ಸ್ಥಾಪಿಸಬೇಕೆಂಬ ಉತ್ಸಾಹವು ಎಂದಿಗಿಂತಲೂ ಇಂದು ಹೆಚ್ಚಿರುವಾಗ—ಮಾಥ್ಯೂರಂತಹವರ ಭಾಷಣಗಳು ಎರಡು ಕಡೆಗಳಿಗೂ ಸಹಾಯಧನ ಸಲ್ಲದಂತೆ ಮಾಡಲಾರವೇ? ವಿದ್ಯಾಧಿಮಾನಿಗಳೂ ಭೂತೆದಯಾಪರರೂ ಯಾವ ಕಾರಣದಿಂದಲೂ ತಮ್ಮ ಕೊಡುಗೈಯನ್ನು ನಿಷ್ಪಯೋಜಕವಾಗಿರಿಸಲಾರರೆನ್ನುವ! 'ವಿಶ್ವವಿದ್ಯಾಲಯವನ್ನು ಇಲ್ಲೆ ರಚಿಸುವ ಬದಲಾಗಿ, ಹತ್ತಿಪ್ಪತ್ತು ನುರಿತಯನ್ನು ಲಂಡನಿಗೆ ಅಥವಾ ಕೆಂಬ್ರಿಜಿಗೆ ಕಳುಹಿಸಿ, ಅರ್ಧ ಮಿಲ್ಲಿಯ ಪವನನ್ನು ಉಳಿಸಿರಿ!' ಎನ್ನುವ ಮಾಥ್ಯೂರವರ ಮಾತಿನ ಅರ್ಥವು ಜನರಿಗೆ ಹೊಳೆಯದಿರದು. ಮಲೆಯ್ಯರ ಪೀಡಿತರ ಸಹಾಯಕ್ಕೆ ಹಣಬೇಕು; ಆದರೆ, ಶಿಕ್ಷಣವೂ ಅಲಕ್ಷಿಸಲ್ಪಡಬಾರದೆಂಬುದು ನಿಜವಲ್ಲವೇ?

---

೨೦ ವರುಷ ವಯಸ್ಸಿನ ಮಗುವು ಈಗ ಕೂಗಲಾರಂಭಿಸಿದೆ!

ಕರ್ನಾಟಕ ಸಾಹಿತ್ಯ ಪ್ರಚಾರ ವಿಚಾರದಲ್ಲಿ ಕ್ರಾಂತಿಯಾಗಬೇಕು!

ಕರ್ಣಾಟಕ ಸಾಹಿತ್ಯ ಪರಿಷತ್ಪತ್ರಿಕೆ ಸಂಪಾದಕ ಮಂಡಲಿಯ ಮಾನ್ಯ ಅಧ್ಯಕ್ಷರಿಗೆ

ಶ್ರೀ। ಡಿ. ಕೆ. ಭಾರದ್ವಾಜರ ಬಹಿರಂಗ ಪತ್ರ.

ಕರ್ಣಾಟಕ ಸಾಹಿತ್ಯ ಪರಿಷತ್ಪತ್ರಿಕೆಯ ಸಂಪಾದಕ ಮಂಡಲಿಯ ಮಾನ್ಯ ಅಧ್ಯಕ್ಷರಿಗೆ,—ಈ ದಶಂಬರ ತಿಂಗಳಲ್ಲಿ ಶುಕ್ರವಾರ ತಮ್ಮ ಪತ್ರಿಕೆಯ ಅಕ್ಟೋಬರ ಸಂಖ್ಯೆಯಲ್ಲಿ 'ಹಿಂದೀ ತೆಲುಗು' ಎಂಬ ಶಿರೋನಾಮೆಯ ಕೆಳಗೆ 'ಭಾರತ' ಎಂಬ ತೆಲುಗು ಪಾಸಪತ್ರಿಕೆಯ ಸಂಪಾದಕೀಯ ಲೇಖನ ಎಂಬುದರ 'ಭಾಷಾಂತರ' ವೆಂಬ ಲೇಖನವೂ ಅದರ ಮೇಲೆ ಸಂಪಾದಕೀಯ ಟಿಪ್ಪಣಿಯೂ ಪ್ರಕಟವಾಗಿದೆ. ಅದು ತಮ್ಮ ಮಿತ್ರ ಪರಿಷತ್ಪತ್ರಿಕೆಯ ಸಂಪಾದಕ ಮಂಡಲಿಯ ಇತರ ಸದಸ್ಯರ ಗಮನಕ್ಕೂ ಬಂದಿದೆಯೊ ಇಲ್ಲವೊ ನನಗೆ ತಿಳಿಯದು. ಆ ಭಾಷಾಂತರ'ವೆಸಿಸುವ ಲೇಖನದಿಂದಲೂ ಸಂಪಾದಕೀಯ ಲೇಖನದಿಂದಲೂ ಕರ್ಣಾಟಕದಲ್ಲಿ ಹಿಂದೀ ಪ್ರಚಾರಕರಾಗಿ ಕನ್ನಡಾಭಿಮಾನಿಗಳ ವಿಚಾರದಲ್ಲಿ ತಪ್ಪು ಅಭಿಪ್ರಾಯಗಳುಂಟಾಗಲವಕಾಶವಿರುವುದರಿಂದ ಅದನ್ನು ನಿವಾರಿಸಲು ನಾನು ಈ ಬಹಿರಂಗ ಪತ್ರವನ್ನು ಬರೆಯಬೇಕಾಗಿ ಬಂದಿದೆ.

ಸಂಪಾದಕೀಯ ಟಿಪ್ಪಣಿಯ ಲೇಖಕರು ಮೈಸೂರಿನ ಹೊರಗಡೆ ಪ್ರವಾಸದಲ್ಲಿ ಏನು ಜರವಳಿ ನಡೆಯುತ್ತಿದೆ ಕಾಂಗ್ರೆಸ್ ಎಂಬ ರಾಷ್ಟ್ರೀಯ ಸಭೆಯು ಭರತ ಖಂಡವು ಸ್ವಾತಂತ್ರ್ಯ ಸಂಯುಕ್ತ ರಾಷ್ಟ್ರವಾಗಬೇಕೆಂದು ಜವಹರ್ಲಾಲ ಪರಮಹಗಳಿಂದ ಹೊಗಾಡುತ್ತಿದೆಯೆಂದೂ ಆ ಸಭೆಯೇ ಹಿಂದಿಯು ವಿಶ್ವಮಾತ್ರವಾದ ರಾಷ್ಟ್ರಭಾಷೆಯಾಗಲರ್ಹವೆಂದು ಅಂಗೀಕರಿಸಿ ಕಳೆದ ೮-೯ ವರ್ಷಗಳಿಂದ ಅದರ ಪ್ರಚಾರ ಮಾಡಲಾರಂಭಿಸಿದೆಯೆಂದೂ 'ಇಂಗ್ಲೀಷು ಸಮುದ್ರ ದಾಟ ಆಚೆ ಹೋಗಬೇಕೆಂದು. ಆದರ ಇರಯವಾಗಿ ನೆಂದೂ ಅರಿಯದೆ ತಮ್ಮ ಲೇಖನಿಯನ್ನು ಮುಂದಾಲೋಚನೆಯಿಂದ ಸೊತ್ತಾಗುತ್ತಿದೆ. ಈ ಕಾರಣದಿಂದಲೆ ಆ ಲೇಖಕರು ಈಗ ಪ್ರಾಯಶಃ ತಮಗೆ ಇಂಗ್ಲೀಷಿನಿಂದ ದೊರೆತಿರಬಹುದಾದ 'ರಾಜಕೀಯ ಸ್ಥಾನ, ಮಾನ, ಗೌರವಗಳೂ ಲಾಭ ಪ್ರಯೋಜನಗಳೂ ಹಿಂದೀ ಪ್ರಚಾರದಿಂದ ಹೋಗಿಬಿಡಬಹುದೊಲು ಭೀತಿಯಿಂದ ಭ್ರಾಂತಿಗೊಂಡಂತೆ ಕಾಣುವುದು.

ಮಹಾತ್ಮ ಗಾಂಧಿಯವರು ಪ್ರಚಾರ ಮಾಡುವುದಕ್ಕಿಂತ ಮುಂಚೆ ಹಿಂದೀ ಪ್ರಚಾರವು ದಕ್ಷಿಣ ಭಾರತದಲ್ಲಿ ವಿಶೇಷ ಆಗಿರಲಿಲ್ಲ, ಅವರಿಂದ ಕೆಲವು ಪ್ರಚಾರಕ್ಕೆ ಅವಕಾಶವಾಯಿತೆಂಬುದು ನಿಜ ಆದರೆ ಅದಕ್ಕೆ ಮೊದಲಿರುವ ಸ್ವಾಭಾವಿಕ ಆವರಿಂದ ಮೂತ್ರವೇ ಉಂಟಾದುದಲ್ಲ. ಹಿಂದಿ ಭಾಷೆಯನ್ನು ರಾಷ್ಟ್ರಭಾಷೆಯೆಂದು ಕೊಂಗ್ರೆಸ್ ಸಭೆಯು ಸ್ವೀಕರಿಸದರಿಯಿಂದಲೂ ಅದಕ್ಕೆ ಆ ಸ್ಥಾನವು ದೊರೆತಿದೆ. ಈಗ ಜನಾಂಗವೇ ಅದನ್ನು ರಾಷ್ಟ್ರಭಾಷೆಯೆಂದು ಸ್ವೀಕರಿಸಿದೆ. ಈ ದೃಷ್ಟಿಯಿಂದ ಪ್ರಾಂತಾಭಿಮಾನ, ದೇಶಾಭಿಮಾನ, ಭಾಷಾಭಿಮಾನಗಳಲ್ಲಿ ಬೇರೆ ಎಲ್ಲ ಭಾಷೆಗಳವನ್ನೂ ಮಿಂಚಿನಂತೆ ಬಂಗಾಳಿಗಳ ಮನಃಪಂಜರ, ಮಾರವರ್ ರಿಪ್ಯೂ ಎಂಬ ಪ್ರಸಿದ್ಧ ಇಂಗ್ಲೀಷ ವಾರಪತ್ರಿಕೆಗಳ ಸಂಪಾದಕರೂ ಆದ ಶ್ರೀ। ರಾಮಾನಂದ ಚಟರ್ಜಿಯವರು ಕೂಡ ಹಿಂದಿಯಲ್ಲಿ ''ವಿಕಾಲ ಭಾರತ'' ಎಂಬ ದೊಡ್ಡ ಹಿಂದಿ ಪಾಸಪತ್ರಿಕೆಯನ್ನು ಪ್ರಕಟಿಸುತ್ತಿರುವರು. ಈ ದೃಷ್ಟಿಗಳಿಂದಲೇ ಕೊಂಗ್ರೆಸ್ ಸೇವಕರಲ್ಲೊಬ್ಬನಾದ ನಾನು ದೇಶೀಯ ಸಂಸ್ಥಾವರಲ್ಲಿ ಕೇವಲ ರಚನಾತ್ಮಕವಾದ ಕಾಂಗ್ರೆಸ್ಸಿನ ಕಾರ್ಯಕ್ರಮದಲ್ಲಿ ಮತ್ತಾವ ರಾಜಕೀಯ ಕೊಡಕುಗೂ ಸಂಬಂಧಿಸದಿರುವ ಹಿಂದಿ ಪ್ರಚಾರ ಕಾರ್ಯವನ್ನು ಕೈಗೊಂಡಿರುವೆನು ದಕ್ಷಿಣ ಭಾರತ ಹಿಂದೀ ಪ್ರಚಾರ ಸಭೆಯನ್ನೊಂದಿಗೆ ಸಹಕರಿಸಿ, ಕೆಲವು ವರ್ಷ ಅವರ ವಿವಿಧ ಪರೀಕ್ಷೆಗಳಿಗೆ ಪರೀಕ್ಷಕನಾಗಿಯೂ, ಸ್ವತಂತ್ರ ಭಾಷಾ ಪ್ರಚಾರಕನಾಗಿಯೂ ಕೆಲಸ ಮಾಡುತ್ತಿದ್ದೇನೆ; 'ಹಿಂದೀ ಭಾಷಾಸಾರ' ಮೊದಲಿನ ''ಹಿಂದೀ ಕನ್ನಡ ಸ್ವಯಂ ಬೋಧಿನಿ'' ಎಂಬ ಪುಸ್ತಕಗಳನ್ನೂ ಪ್ರಕಟಿಸಿದೆನು. ಈಗ ಕರ್ನಾಟಕದಲ್ಲಿ ಹಿಂದಿ ಪ್ರಚಾರ ಮಾಡುವವರಲ್ಲಿ ಮುಖ್ಯರು ಪಾಲು ಜನ ನನ್ನ ವಿದ್ಯಾರ್ಥಿಗಳಾಗಿದ್ದವರು ಅಥವಾ ಆ ವಿದ್ಯಾರ್ಥಿಗಳ ಶಿಷ್ಯರಾದವರು. ನಾವೆಲ್ಲರೂ ನಮ್ಮ ಭಾಷೆ ನಾಡು ಇತ್ಯಗಳಿಗೆ ಪರಕ್ರಾಂತ್ಯಗಳಂದ ಒಂದು ಗೌರವ ಸ್ಥಾನವು ದೊರೆಯಬೇಕೆಂದು ಕೆಣಗಾಡುತ್ತಿದ್ದೇವೆ. ಆದಕ್ಕಾಗಿ ಹಿಂದಿ ಪತ್ರಿಕೆಗಳಲ್ಲಿ ಕರ್ನಾಟಕಕ್ಕೆ ಸಂಬಂಧಿಸಿದ ಲೇಖನಗಳು ಆಗಾಗ್ಗೆ ಹೋಗುತ್ತಿವೆ. ಮುಂದೆ ಇತರರಿಗಿಲ್ಲ ಸೇರಲಿರುವ ಅಖಿಲ ಭಾರತ ಕರ್ತೀಯ ಹಿಂದೀ ಸಮ್ಮೇಳನ ಕಾಲದಲ್ಲಿ ಅಖಿಲ ದಕ್ಷಿಣ ಭಾರತ ಭಾಷೆಗಳ ಗ್ರಂಥಪ್ರದರ್ಶನ ವೊಂದನ್ನು ಏರ್ಪಡಿಸಲು ಅವರು ಪ್ರಯತ್ನಿಸುತ್ತಿರುವರು. ಮತ್ತೆ ಈಗ ಬೆಂಗಳೂರು ನಗರದಲ್ಲಿ ಹಿಂದೀ ಪ್ರಚಾರ ಕಾರ್ಯದಲ್ಲಿ ಕಂಕಣ ಕಟ್ಟಿ ನಿಂತಿರುವ ಪ್ರಸಿದ್ಧ ಕನ್ನಡ ಪುಸ್ತಕ ಪ್ರಕಾಶಕರೂ, ಸಹ್ಯಪೋಷಣ ಪುಸ್ತಕ ಭಂಡಾರದ ಮಾಲೀಕರೂ ಆದ ಶ್ರೀ। ಸಿ.ಪಿ.ಕೃಷ್ಣಕುಮಾರ್, ಬಿ. ಎಸ್. ಸಿ., ಬಿ. ಎಲ್., ಆಡ್ವೋಕೇಟ್ ಅವರ ನೇತೃತ್ವದಲ್ಲಿ ಕೆಲಸ ನಡಾಯಿಸುವ 'ಹಿಂದಿ ಪ್ರೇಮಿ' ಮಂಡಲಿಯವರು ಕನ್ನಡಿಗರಾಗಿಯೂ ದೇಶಭಾಷಾ ಪ್ರೇಮಿಗಳಾಗಿಯೂ ಇರುವರು. ಸರ್ವತಾ ದಕ್ಷಿಯ ಟಿಪ್ಪಣಿ ಲೇಖಕರು ಇಂತಹವರಿಂದ ಕನ್ನಡ ಭಾಷೆಗೆ ಅಪಕಾರವಾಗುತ್ತಿದೆಯೆಂದು ಭ್ರಮಿಸಿರುವುದು ವಿಷಾದಕರ.

ಗ್ರಾಮ ವ್ಯವಸಾಯ ಸಂಘವೂ ಸರಕಾರವೂ	೧೦
ವರ್ತಮಾನ ಸಂಗ್ರಹ	೧೨
ಮುಂಗಳೂರು, ಬಾಲಕಿಯರಗಂಜ	೧೩
ವಿವಿಧ ಸಮಾಚಾರಗಳು	೧೫
ಗ್ರಾಹಕರ ಸಂಖ್ಯೆಯ ನಿಂಬಾಸರಿಕೋಷ್ಟ	೧೬
ಸಂಪಾದಕೀಯ ಚಿಲ್ಲರೆಗಳು ಇತ್ಯಾದಿ	೧೮

ಸ್ವದೇಶಾಭಿಮಾನಿ.

ಶಾ. ೧೮ನೇ ಶುಕ್ರವಾರ ಜನವರಿ ೧೫

ಗ್ರಾಮ ವ್ಯವಸಾಯ ಸಂಘವೂ ಸರಕಾರವೂ.

ಭಾರತೀಯ ಸರಕಾರದ ರಾಜಕೀಯ ಖಾತೆಯ ಕಾರ್ಯದರ್ಶಿಗಳಾದ ಮಿ। ಎಮ್. ಜಿ. ಹಾಲೆಟ್‌ರವರ ಸಹಿಯಿಂದ, ಪ್ರಾಂತಿಕ ಸರಕಾರಗಳಿಗೆ ಒಂದು ಗುಪ್ತ ಸರ್ಕಿಲಾರು ಹೊರಡಿದುದು ಇದೀಗ ಪೂರ್ಣ ಬಯಲಾಗಿದೆ. ಒಂದೆರಡು ಪತ್ರಿಕೆಗಳು, ಆ ಸರ್ಕಿಲಾರಿನ ಯಥಾ ಪ್ರತಿಯನ್ನು ಹೇಗೋ ಪಡೆದು ಪ್ರಕಟಿಸಿವೆ. ಇದು, ರಾಜಕೀಯ ಸ್ವಾತಂತ್ರ್ಯಕ್ಕಾಗಿ ಜನರ ಕೃಪೆಯು ಹೆಚ್ಚಿದ ಕಾಲದಲ್ಲಿ ಹಾಗೂ ಜಾಯಿಂಟ್ ಪಾರ್ಲಿಮೆಂಟರಿ ಕಮಿಟಿ ವರದಿಯು ಪ್ರಕಟವಾದ ವೇಳೆಯಲ್ಲಿ ಜನಾಂಗಕ್ಕೆ ಅತಿ ಮಹತ್ವದ ದಾಖಲೆಯಾಯಿತೆನ್ನಬೇಕು.

ಈ ಗುಪ್ತ ಸರ್ಕಿಲಾರು, ಮಹಾತ್ಮಾಜಿಯವರು ನಿಸ್ಪೃಹತೆಯಿಂದ ಕಥಾಪಿ ಬಡ ಗ್ರಾಮ ಜೀವಿಗಳ ಮೇಲ್ಮೆಯ ಹಿತಚಿಂತನೆಯಿಂದ ಸ್ಥಾಪಿಸಿದ ಗ್ರಾಮ ವ್ಯವಸಾಯ ಸಂಘದ ಕಾರ್ಯ ಕಲಾಪಗಳಲ್ಲಿ ಸರಕಾರೀ ನೌಕರರಾರೂ ಯಾವ ವಿಧದಿಂದಲೂ ಸಹಾಯ ಮಾಡಬಾರದೆಂದು ಎಚ್ಚರಿಸುತ್ತದೆ! ಕಾರಣಗಳೂ ಕೊಡಲಾಗಿವೆ. ಅಸಾಮಾನ್ಯ ರಾಜಕಾರಣ ಪಟುಗಳೆನಿಸಿದ ಮಹಾತ್ಮಾಜಿಯವರು, ತಮ್ಮ ಶಾಸನನಿರೋಧ ಚಳವಳಿಯನ್ನು ಕಳೆದ ಚಳವಳಿಕೈಂತಲೂ ಉಜ್ವಲವೆನಿಸುವಂತೆ ಪುನಃ ಎಂದಾದರೊಮ್ಮೆ ಆರಂಭಿಸುವ ದುರುದ್ದೇಶವನ್ನಿಟ್ಟುಕೊಂಡೇ,-ಗ್ರಾಮವಾಸಿಗಳನ್ನು ತರಬೇತುಗೊಳಿಸುವುದಕ್ಕಾಗಿಯೂ ಯೋಗ್ಯ ಸಾಧನವಾಗಿ ಈ ಸಂಘವನ್ನು ಸ್ಥಾಪಿಸಿದರೆಂದು ಸರಕಾರಕ್ಕೆ ದಿನಿಲುಂಟಾಗಿದೆ. ಬೊಂಬಾಯಿ ಕೊಂಗ್ರೆಸ್ ಅಧಿವೇಶನವು ಮುಗಿವ ತನಕ, ಕೊಂಗ್ರೆಸ್ಸಿನೊಳಗೆ ಒಡಕುಂಟಾಗುವುದೆಂದೇ ಸರಕಾರವು ನಿರೀಕ್ಷಿಸಿತ್ತು. ಒಡಕುಂಟಾದ ಸಂಘೆಗಳು ನಿರ್ಬಲವೆಂದು ನಮ್ಮ ಜಾಣ ಸರಕಾರಕ್ಕೆ ತಿಳಿದಾಗಿ ಗೊತ್ತು. ಆದರೆ, ದುರ್ದೈವವಶಾತ್ ಈ ನೀರೀಕ್ಷೆಗಳು ಕೈಗೂಡಲಿಲ್ಲ. ಆ ತರುವಾಯ ಮಹಾತ್ಮಾಜಿಯವರು ಕೊಂಗ್ರೆಸ್ಸಿನಿಂದ ನಿವೃತ್ತರಾದ ವಿಚಾರ. ಇದನ್ನೂ ಸರಕಾರವು ಸಂದೇಹದಿಂದಲೇ ದೃಷ್ಟಿಸಿದೆ. ಅವರ ನಿವೃತ್ತಿಯ ವಿಚಾರವೂ ಗ್ರಾಮ ವ್ಯವಸಾಯ ಸಂಘ ಸ್ಥಾಪನೆಯ ವಿಷಯವೂ ಮಹಾತ್ಮಾಜಿಯವರ ವೈಯಕ್ತಿಕ ವಿಷಯವೆಂದೇ ಸರಕಾರವು ಗುರು ಮಿಕ್ಕ ಕೊಂಗ್ರೆಸ್ ಕಮಿಟಿಗಳಿಗೆ ಎಚ್ಚರಿಕೆಯೂ ಸರಕಾರಕ್ಕೆ ಹಿತಕರವಾಗಿ ತೋರಿಲ್ಲ. ಏನೆಂಬುದನ್ನು ಜಗಳಗಂಟಿ ಸರಕಾರನ್ನು ಮುಂದೊಡಲು ಈ ಬದರಾವಣೆಗಳು ಮಾಡಿರುವುದು ಸರಕಾರಕ್ಕೆ ಮೆಚ್ಚುಗೆಯಾಗಿ ಬಹುದೆಂದು ಎಣಿಸಿದವರೂ ಇಲ್ಲವೆನ್ನಿ. ಗ್ರಾಮ ವ್ಯವಸಾಯ ಸಂಘವು ಕೊಂಗ್ರೆಸ್ ಕಲಸಗಾರರಿಗೆ ಉದ್ಯೋಗವನ್ನೊದಗಿಸುವುದು, ಜನ ಸಾಮಾನ್ಯದ ಪರಿಚಯಕ್ಕೂ ಇಂಬು ಮಾಡಿಕೊಡುವುದು. ಸೋಶಲಿಸ್ಟ್ ಪಕ್ಷದವರೂ, ಸಮಯ ಮೂಡಿದಾಗ ತಮ್ಮ ಶಕ್ತಿ—ಯುಕ್ತಿಗಳನ್ನು ವಿನಿಯೋಗಿಸಿ, ರಾಷ್ಟ್ರೀಯ ಸಂಗ್ರಾಮದಲ್ಲಿ ನೆರವಾಗುವವರೆಂಬ ಹೀಗೆ, ಯಾವ ವಿಧಾಗಗಳು ನಿಶ್ಚಕ್ತವಾಗಿ ಬೇರ್ಪಟ್ಟು ಇರುವುವೆಂದು ಸರಕಾರವು ಎಣಿಸಿತ್ತೋ—ಅವುಗಳೇ ಇಂದು ಸೆಬಲವಾಗಿ, ರಾಷ್ಟ್ರೀಯ ಶಕ್ತಿಗಳಾಗಿ —ವಿಚಕ್ಷಣನೊಬ್ಬನ ನಿರೀಕ್ಷಕಕಕ್ಷೆದಲ್ಲಿರುವುದನ್ನು, ಚುರುಕಾದ ಸರಕಾರವು ಚೆನ್ನಾಗಿ ಕಂಡಿದೆ. ಸರಕಾರದ ಗೃಹ ಇಲಾಖೆಗೆ ದಿನಿಲುಂಟಾದುದರಲ್ಲಿ ಆಶ್ಚರ್ಯವಿಲ್ಲ.

ಗಾಂಧಿಜಿಯವರು ಇನ್ನೂ ಸರಕಾರದ ದೃಷ್ಟಿಯಲ್ಲಿ "ನಂಬ್ರ ಒನೇ ಶತ್ರು"ವಾಗಿ ತೋರುತ್ತಿರುವರು. ಅದು ಕಾರಣವೇ ಅವರು ನೇತೃಗೆಳಾಗಿರುವ ಸಂಘವೂ ಒಳಸಂಚುಗಾರರ ಸಂಘೆದಂತೆ ತೋರಬಹುದು. ಸರಕಾರದ ಪಕ್ಷ ದೃಷ್ಟಿಯು ಭೀಳೆದಂತೆ "ರಾಜಕೀಯಗಳಿಗಾಗಲಿ ಸಂಬಂಧಿಸದ ಸಂಘ"ವಿದೆಂದು ಇದನ್ನು, ಕೊಂಗ್ರೆಸ್ಸಿನ ಯಾವ ಮೇಲ್ವಿಚಾರವೂ ಇಲ್ಲದೆ ಸ್ಥಾಪಿಸಲಾಯಿತಾದರೂ ಸರಕಾರದ ಸಂದೇಹವು ಮತ್ತಷ್ಟು ಬಲಗೊಳ್ಳುವಂತಾದುದು ವಿಷಾದಕರ.

ಗಾಂಧಿಜಿಯವರ ಗ್ರಾಮ ವ್ಯವಸಾಯ ಸಂಘವನ್ನು ಬಹಿಷ್ಕರಿಸಿರೆಂದು ಸಾರುವ ಆ ಗುಪ್ತ ಸರ್ಕಿಲಾರ್, ಸರಕಾರೀ ನೌಕರರು ಗ್ರಾಮಾಂತರಗಳಿಗೆ ಹೋಗಿ ಗ್ರಾಮ ಪುನರ್ಘಟನಾ ಕಾರ್ಯದಲ್ಲಿ ಹೆಚ್ಚಿನ ಆಸಕ್ತಿ ವಹಿಸಬೇಕೆಂದೂ, ಸರಕಾರವು ಜನರಿಗಾಗಿ ಮಾಡುವ ಸದ್ಯೆಷ್ಟಗಳನ್ನು ವಿವರಿಸಿ ಜನರಲ್ಲಿ ರಾಜಭಕ್ತಿಯನ್ನು ಹೆಚ್ಚಿಸಬೇಕೆಂದೂ ನಿರ್ದೇಶಿಸುತ್ತದೆ. ಇದು ಸ್ತುತ್ಯಾರ್ಹವಾದುದೇ. 'ಆದರೆ, ಸರಕಾರೀ ನೌಕರರ ಎಂತಹ ಸರ್ಕಿಟುಗಳಿಂದ ಆ ಬಡಜನರು ಒಂದು ವಿಧದ ಭೀತಿಗೊಳಗಾಗಿ ಚುನಾವಣೆಗಳಲ್ಲಾ ಕೂಡ ಭಾಗವಹಿಸದೆ ಮೌನವಾಗುವರೋ ಎಂಬ ಸಂದೇಹವು ತೋರುವುದು' ಎಂದು ಇಂಡಿಯನ್ ಎಕ್ಸ್‌ಪ್ರೆಸ್ ಪತ್ರಿಕೆಯು ಪಡುವ ಅಭಿವ್ಯಾಯದಲ್ಲಿ ಸತ್ಯಾಂಶವಿದೆ.

ವ್ಯವಸಾಯದ ವಿಷಯವು, ಭಾವೀ ಸುಧಾರಣೆಗಳು ಜ್ಯಾರಿಗೆ ಬರುವಾಗ, ಮಂತ್ರಿಗಳ ಕೈಗೆ 'ಸ್ವತಂತ್ರ'ವೆಂಬ ಮೊಹರು ಪಡೆದೇ ಬರುವುದೆಂದು ನಾವು ಓದಿದೆವು. ಹೀಗಿರಲು ಗ್ರಾಮ ವ್ಯವಸಾಯ ಸಂಘವನ್ನು ಸರಕಾರೀ ನೌಕರರು ಬಹಿಷ್ಕರಿಸಬೇಕೆಂದರೆ ಹೇಗಾಗಬಹುದು? ಸರ್ಕಿಲಾರು ಈ ವಿಷಯವನ್ನೂ ಕಂಚಿತ್ತಾದರೂ ಸ್ಪಷ್ಟೀಕರಿಸಿದೆ. ಇಂತಹ ಸಂಭವದಲ್ಲಿಯೂ ಆ ಮಂತ್ರಿಗಳೆಂಬವರೂ ಗ್ರಾಮ ವ್ಯವಸಾಯ ಸಂಘದೊಡನೆ ಸಹಕರಿಸುವ 'ಅಪಾಯ'ಗಳನ್ನರಿತೇ ನಡೆಯಬೇಕೆಂದು ಎಚ್ಚರಿಸಿದೆ. ಆ 'ಮಂತ್ರಿ'ಗಳು ಕೊಂಗ್ರೆಸ್ ಪಕ್ಷೀಯರಿರಬಾರದೇಕೆಂಬುದನ್ನುಮಾತ್ರಸರ್ಕಿಲಾರು ಊಹಿಸಿಲ್ಲದುದು ವಿಚಿತ್ರ.

ಈ ಸರ್ಕಿಲಾರಿನಿಂದ ಹಿಂದೀ ಜನತೆಯು ಒಳ್ಳೆಯ ರಾಜಕೀಯ ಪಾಠವನ್ನು ಕಲಿಯಬೇಕು. ಗ್ರಾಮ ವ್ಯವಸಾಯ ಸಂಘವು ಜನತೆಯ ಮೇಲ್ಮೆಗಾಗಿಯೇ ಇದೆಯೆಂಬುದನ್ನು ಸರಕಾರಕ್ಕೆ ಸ್ಪಷ್ಟೀಕರಿಸುವ ಕಾರ್ಯದಲ್ಲಿ ನಿರತರಾಗಬೇಕು. ಸರಕಾರದ ಸಂದೇಹಗಳು ಜನರ ಕೃತಿಯಿಂದಲೇ ನಿವಾರಣೆ ಹೊಂದಬೇಕು. ಸ್ವರಾಜ್ಯವೇ ಹಿಂದೀಯರ ಧ್ಯೇಯ; ಆ ಧ್ಯೇಯ ಸಾಧನೆಗೆ ಗ್ರಾಮೋದ್ಧಾರವೇ ಮುಖ್ಯ ಕರ್ತವ್ಯ. ಸಂಬಂಧಪಟ್ಟ ಸರಕಾರೀ ನೌಕರರು ಮೇಲಧಿಕಾರಿಗಳು ನಿರ್ದೇಶಿಸುವುದಕ್ಕಿಂತ ಮೊದಲೇ ನಡೆಕೊಳ್ಳುವುದು ಧರ್ಮವಾಗಿದೆ. ಆದರೆ ಜನರು ಉದ್ಯೋಗಿಸಿಕೊಳ್ಳದೆ, ಗ್ರಾಮ ವ್ಯವಸಾಯ ಸಂಘದ ಕಾರ್ಯಕಲಾಪಗಳು ಯಶಸ್ವಿಯಾಗಿ ನಡೆಯಂತೆ ಸರಕಾರ ಯತ್ನಿಸಲೇಬೇಕು!

ಪ್ರಾಂತಿಕ ಪರಿಷತ್ತಿನ ಆವಶ್ಯಕತೆ ಇದೆಯೇ?

ನಮ್ಮ ಜಿಲ್ಲಾ ಕೊಂಗ್ರೆಸ್ ಕಮಿಟಿಯು ಒಂದು ಸಭೆಯು, ಕರ್ನಾಟಕ ಪ್ರಾಂತಿಕ ಪರಿಷತ್ತನ್ನು ಮಂಗಳೂರಿಗೆ ಆಮಂತ್ರಿಸುವ ಮತ್ತು ಇನ್ನಿರುಡು ವಿಷಯಗಳನ್ನು ಚರ್ಚಿಸುವ ಸಲುವಾಗಿ ಇದೇ ಭರುವ ರವಿವಾರ ಸೇರಲಿದೆ. ಈ ಸಂದರ್ಭದಲ್ಲಿ ನಮ್ಮದೊಂದು ಸೂಚನೆಯನ್ನು ಕೊಡಲಿಚ್ಛಿಸುವೆವು. ಪ್ರಕೃತಕ್ಕೆ ಯಾವ ಮಹತ್ವದ ವಿಷಯವೂ ಚರ್ಚಿಸಲ್ಪಡಬೇಕಾದುದಿಲ್ಲವಾದ ಕಾರಣ ಪ್ರಾಂತಿಕ ಪರಿಷತ್ತಿನ್ನು ಜರಗಿಸುವ ಆವಶ್ಯಕತೆ ನಮಗೆ ತೋರುವುದಿಲ್ಲ. ಪರಿಷತ್ತನ್ನು ಜರಗಿಸಿ ತುಂಬ ಶ್ರಮಪಡಬಹುದು; ಹಣ ಕೀಳಿಸಿ ವ್ಯಯಮಾಡಬಹುದು! ಇದರ ಬದಲಾಗಿ, ಕೊಂಗ್ರೆಸ್ ಕೆಲಸಗಾರರನ್ನು, ಗ್ರಾಮಗಳಿಗೆ ಪ್ರಚಾರ ಕಾರ್ಯಕ್ಕಾಗಿ ಕಳುಹಬಾರದೇ? ದಿಸ್ಟ್ರಿಕ್ಟ್ ಬೋರ್ಡು ಚುನಾವಣೆಗೆ ಕೊಂಗ್ರೆಸ್ ಕುಮೇದ್ವಾರರನ್ನು ನಿಲ್ಲಿಸಿ, ಚುನಾಯಿಸಲ್ಪಡುವಂತೆ ಸಾಧಿಸುವುದು ಅವಶ್ಯವಿದೆಯೆಂದು ನಮಗೆ ತೋರುತ್ತದೆ. ಅಖಿಲಭಾರತ ಕೊಂಗ್ರೆಸ್ ಕಮಿಟಿಯವರು ಮುಂದಿಟ್ಟ ಕಾರ್ಯಸೂತ್ರಗಳಂತೆ ನಡೆಕೊಳ್ಳುವುದೇ ಸೂಕ್ತವಾಗಿದೆ. ಕೊಂಗ್ರೆಸ್ ಪಕ್ಷೀಯರ ಯಾವ ವಿಧದ ಚಟುವಟಿಕೆಯೂ ಜನರಿಗೆ ಕಾಣುತ್ತಿಲ್ಲ. ಕೇವಲ ಒಂದು ಪರಿಷತ್ತನ್ನು ಜರಗಿಸುವುದರಿಂದ ಯಾವ ಮಹತ್ಕಾರ್ಯವನ್ನೂ ಮಾಡಿದಂತಾಗದು. ನಾಡದು ಸೇರುವ ಸಭೆಯಲ್ಲಿ ಕೊಂಗ್ರೆಸ್ ಕೆಲಸಗಾರರು ಈ ವಿಷಯವನ್ನು ಚೆನ್ನಾಗಿ ಪರ್ಯಾಲೋಚಿಸುವರೆಂಬ ಭಾವಿಸುತ್ತೇವೆ.

ಹೆತ್ತವರಿಲ್ಲದ ಮಗು.

ಕಳೆದ ಒಕ್ಟೋಬರ್‌ತಿಂಗಳ ೨೪ರಲ್ಲಿ ದೆಹಲಿಯಲ್ಲಿ ನಡೆದ ಕೊಂಗ್ರೆಸ್ ಸ್ಮಾರಕ ಚಿಕಿತ್ಸಾಲಯದಲ್ಲಿ ಹೆಣ್ಣುಮಗುವೊಂದು ಜನಿಸಿತು. ಮಗುವಿನ ತಂದೆಯು ಜಬಲಪುರ ತಿಂಗಳಲ್ಲಿ ಸೇರಿನಲ್ಲಿ ಮುಳುಗಿ ತೀರಿ ಹೋದನು. ಮಗುವಿನ ತಾಯಿಯು ಮಗುವನ್ನು ಜನಿಸಿಸುವುದಕ್ಕೆ ೧೦ ನಿಮಿಷಗಳ ಮೊದಲು ಮೃತಳಾದಳು. ಆಸ್ಪತ್ರೆಯಲ್ಲಿ ಜಾಗ್ರತೆಯಾಗಿ ಚಿಕಿತ್ಸೆ ನಡೆಸಿದುದರಿಂದ ಮಗುವು ಬದುಕಿತು.

"ಹರಿಜನರಿಗೆ ಏನುಂಟು?"

ಮಹಾತ್ಮಾ ಗಾಂಧಿಯವರು ಸ್ಯೂ ದಿಲ್ಲಿಯಲ್ಲಿ ವಾಯು ವಿಹಾರಕ್ಕೆ ತೆರಳಿದಾಗ ಅವರನ್ನು ಕಾಣಲು ಸಾವಿರಾರು ಜನರು ಗುಂಪು ಕೂಡಿದರು. ಮಹಾತ್ಮರು ಅವರಿಗೆಲ್ಲ "ನೀವು ಹರಿಜನರಿಗಾಗಿ ಏನು ತಂದಿರು ಏರಿ? ತಂದಿದ್ದರೆ ನನಗೆ ಕೊಡಿಂ" ಎಂದು ಪ್ರಶ್ನೆಯಿಟ್ಟರು. ಜನರಿತ್ತುದ್ದನ್ನು ಮಹಾತ್ಮರು ಕೈಚಾಚಿ ತೆಗೆದು ಕೊಂಡರು.

ಕವಿಯ ಆಗಮನ.

ಪ್ರಖ್ಯಾತ ಆಂಗ್ಲ ಕವಿಗಳೂ ಗ್ರಂಥ ಕರ್ತೃಗಳೂ ಆದ ಮಿ। ಜೋಸೆಫ್ ಎಸ್ಟ್ಲೀಯವರು ಹಿಂದೂ ಮತದ ಇತಿಹಾಸವನ್ನೂ ಅದರ ಶ್ರೇಷ್ಠತೆಯನ್ನೂ ತಿಳಿಯುವುದಕ್ಕಾಗಿ ಮೊನ್ನೆ ವಿಲಾಯತಿಯಿಂದ ಮದ್ರಾಸಿಗೆ ಬಂದಿರುವರು. ೧೯ನೇ ಶತಮಾನದ ಅಂತ್ಯದಲ್ಲಿ ಇವರ ಚಿಕ್ಕಪ್ಪನಾದ ಸರ್. ಎಂ. ಇ. ಗ್ರಾಂಟ್ ಡಫ್ ಎಂಬವರು ಮದ್ರಾಸು ಗವರ್ನರರಾಗಿದ್ದರು.

ಆಲೂರು ವೆಂಕಟರಾಯರು.

ಕರ್ನಾಟಕದ ಪ್ರಸಿದ್ಧ ದೇಶಭಕ್ತರಾದ ಆಲೂರು ವೆಂಕಟರಾವ್, ಬಿ. ಎ., ಎಲ್. ಎಲ್. ಬಿ.ಯವರು ಬೆಂಗಳೂರಿಗೆ ಹೋಗಿದ್ದು ಅಲ್ಲಿಯ ಶ್ರೀ ರಾಘವೇಂದ್ರ ಮಠದಲ್ಲಿ ಗೀತಾ ಶಕಸ್ಥಿಯ ಮೇಲೆ ಉಪನ್ಯಾಸ ಮಾಡಿದರು.

ಸೈನಿಕರ ಸಮಾಧಿ.

ಮೈಸೂರಿನ ಪ್ರಸಿದ್ಧ ವಿದ್ವಾಂಸರೂ ಎಂ. ಮೈಸೂರು ಶ್ರೀಕಂಠಯ್ಯನವರ ಪುತ್ರರತ್ನಗಳಲ್ಲಿ ಒಬ್ಬರಾದ ಡಾ. ಎಸ್. ರಾಮಚಂದ್ರ ಎಂಬವರು ಸೈನಿಕರ ಮೇಲೆ ಮೈಸೂರಿನಲ್ಲಿ ಇಂದ ಹೊರಟು ಮದ್ರಾಸು, ರಾಜಮಹೇಂದ್ರಿ ಕಾಕಿನಾಡ ಮೊದಲಾದ ಕಳ್ಳಕಾಪ್ಪಲ್ಲಿಗೆ ಬಂದರು.

ಅಧ್ಯಕ್ಷ ಪದವಿಗೆ ರಾಜೀನಾಮೆ ಕೊಡಿ.

ಕೊಂಗ್ರೆಸ್ಸಿನ ಅಧ್ಯಕ್ಷರಾದ ಬಾಬು ರಾಜೇಂದ್ರ ಪ್ರಸಾದರವರು ಸಿಂಧ್ ಪ್ರಾಂತಿಕ ಸಮಿತಿಯು ಅಧ್ಯಕ್ಷ ಪದವಿಗೆ ಒಬ್ಬರು ಶಕ್ತ ಅರೆಯು ಅವರು ಪ್ರಾಂತಿಕ ಅಧ್ಯಕ್ಷ ಪದವಿಗೆ ರಾಜೀನಾಮೆ ಕೊಡಬೇಕೆಂದು ತಿಳಿಸಿದ್ದಾರೆ. ಕೊಂಗ್ರೆಸ್ ಅಧಿಕಾರಿಗಳ ಮೇಲೆ ಸಿಧ್ಧ್‌ನಲ್ಲಿ ಬರುತ್ತಿರುವ ಆಕ್ಷೇಪಣೆಗಳು ನಿಲ್ಲಬೇಕಾದರೆ ಇದೇ ಸುಲಭೋಪಾಯ. ನಾರಾಯಣ ದಾಸರು ರಾಜೀನಾಮೆ ಕೊಡದಿದ್ದರೆ ಕೊಂಗ್ರೆಸ್ ವರ್ಕಿಂಗ್ ಕಮಿಟಿಯು ಆ ವಿಷಯವಾಗಿ ತೀರ್ಮಾನಿಸಲಿರುವುದು.

ಮಹಾತ್ಮರ ಮುಂದೆ ಸತ್ಯಾಗ್ರಹ.

ನ್ಯೂ ದಿಲ್ಲಿಯ ಬಟ್ಟೆಯ ಗಿರಣಿಯೊಂದು ನಗರದಲ್ಲಿ ಕೆಲವು ಚಿಲ್ಲರೆ ಬಟ್ಟೆ ವ್ಯಾಪಾರದ ಅಂಗಡಿಗಳನ್ನೇ ಪಡೆದಿಸಿ, ಬಟ್ಟೆಯನ್ನು ರಕ್ತಿಯಲ್ಲಿ ಹೊಕ್ಕುಕೊಂಡು ತಿರುಗುತ್ತಿದ್ದ ಬಡ ವ್ಯಾಪಾರಿಗಳಿಗೆ ಘಾತಕವಾಗಿದೆಯೆಂದು. ಶಾಪು ಸುಂದರಂ ಎಂಬವನು ಮೆಹಾತ್ಮಾ ಗಾಂಧಿಯವರ ಗುಡಿಸಲಿನ ಮುಂದೆ ಸತ್ಯಾಗ್ರಹ ಮಾಡುತ್ತಿದ್ದಾನೆ. ಮಹಾತ್ಮರು ಈ ಗಿರಣಿಯ ಈ ಕೃಪು ಮನ್ನು ನಿಲ್ಲಿಸುವ ಏರ್ಪಾಡನ್ನು ಮಾಡಬೇಕೆಂದು ಅವನ ಹಟ. ಮಹಾತ್ಮರು ಇಶ್ವರ ತನಕ ಏನನ್ನೂ ಮಾಡಿರುವುದಿಲ್ಲ.

ಸರ್ ಜೋನ್ ಎಂಡರ್ಸನರವರು.

ಇವರು, ಲೋರ್ಡ್ ವಿಲ್ಲಿಂಗ್ಡನ್‌ರ ಸೇವಾರ ಹಿಂದೂ ದೇಶದ ವೈಸರಾಯರಾಗಿ ನೇಮಕ ಹೊಂದುವರೆಂದು ದಿಲ್ಲಿಯಲ್ಲಿ ವಾರ್ತೆಯಿದೆ.

ವಿಧವೆಯರು ಕುಂಕುಮ ಹಚ್ಚಬೇಕು.

ಲಿಕೋಲಾದಲ್ಲಿ ಒಂದು ಸಾರ್ವಜನಿಕ ಸಭೆ ಕೂಡಿತು. ವಿಧವೆಯರು ಕುಂಕುಮ ಹಚ್ಚಕೊಳ್ಳಬಹುದೋ—ಅಥವಾ ಕೂಡದೋ ಎಂಬ ವಿಷಯವಾಗಿ ಚರ್ಚೆ ನಡೆಯಿತು. ಕೊನೆಗೆ ಆ ಚರ್ಚೆಯ ವಿಷಯವನ್ನು ಓಟಿಗೆ ಹಾಕಲಾಗಿ ವಿಧವೆಯರು ಕುಂಕುಮ ಹಚ್ಚಬೇಕೆಂದು ೆರಾವ್ತಿ ಮಂಜೂರಾಯಿತು. ಪುನಃ ಇನ್ನೊಂದು ಸಭೆ ೇರಿ ವಿಧವೆಯರನ್ನೆಲ್ಲಾ ಆಹ್ವಾನಿಸಿ ಅವರಿಗೆ ಕುಂಕುಮ ಹಚ್ಚಿ, ಆ ವಿದ್ಯಮಾನವನ್ನು ಆಚರಣೆಯಲ್ಲಿ ತಂದಿರುವರು.

ವಿಮಾನವು ಬಿತ್ತು.

ಕರಾಚಿಯಿಂದ ಹತ್ತು ಮೈಲು ದೂರದಲ್ಲಿ ಧಯಂಕರ ವಿಮಾನ ಅವಘಡವಾಗಿ ೧೧ ಮಂದಿ ಶಿಪಾಯಿಗಳು ಮೃತಪಟ್ಟರುವರು. ೧೫ ಮಂದಿಗೆ ವಿಶೇಷ ಜಖಂ ಉಂಟಾಯಿತೆ.



ಜೇಮ್ಸ್ ಇಟ್ಟು ನಿಂತವರು ಸರ್. ಜೋಸೆಫ್ ಸೈಮನರು—ಪ್ರಕಂಡದ ಶಾಂತಿ ರಕ್ಷಣೆಗಾಗಿ ದಿಲ್ಲಿಯಿಂದ ಬಂದಿರುವವರು. ಬಲಬಯಲ್ಲಿ ನಿಂತಿರುವವರು ಆಕಸ್ಮಿಕ ನಿರ್ದೇಶಕರು.

ಸಮುದ್ರಕ್ಕೆ ಬಿದ್ದನು.

ಕಳೆದ ವಾರ ರಾಮೇಶ್ವರದ ಬ್ಯಾಂಬರ್ ಸ್ಟೇಷನ್ನಿನ ಸಮೀಪದಲ್ಲಿ ಪ್ರಯಾಣಕ್ಕಾಗಿ ಸಮುದ್ರಕ್ಕೆ ಸೇತುವೆಯ ಮೇಲೆ ಹೋಗುತ್ತಿದ್ದಾಗ ಸಮುದ್ರಕ್ಕೆ ಬಿದ್ದನು. ಸೇತುವೆಯ ಎತ್ತರವಾದ ಕೊರೆಗಳ ನಡುವಾಗಿ ಇವನು ಸಮುದ್ರಕ್ಕೆ ಬಿದ್ದುದು ಆಶ್ಚರ್ಯಕರವಾಗಿತ್ತು. ಅವನಿಗಂತೂ ಸಮುದ್ರದ ಇವನು ನಿಶ್ಚಲನಾಯಿದ್ದನೆಂದು ತೋರುತ್ತಿರಲಿಲ್ಲ. ಅವನನ್ನು ಸಮುದ್ರದಿಂದ ಹೊರಗೆ ತೆಗೆಯಲಾಯಿತು.



ಶ್ರೀ। ಸುಭಾಷ್ಚಂದ್ರ ಬೋಸರು.

ಇವರು ಕಳೆದವಾರ ದೇಹ ಚಿಕಿತ್ಸೆಗಾಗಿ ಐರೋಪ್ಯಕ್ಕೆ ಪ್ರಯಾಣಿಸಿದರು.

ಕೋಲಾರದಲ್ಲಿ ಪ್ಲೇಗು.

ಇದೇ ತಾ. ೩೧ ಅಂಕಿತವಾದ ಒಂದು ವಾರದಲ್ಲಿ ಕೋಲಾರದಲ್ಲಿ ೭೮ ಮಂದಿಗೆ ಪ್ಲೇಗು ತಗಲಿ, ೪೨ ಮಂದಿ ಮೃತರಾದರು. ಕಳೆದ ವಾರ ೪೩ ಮಂದಿಗೆ ತಗಲಿ ೩೬ ಮಂದಿ ಕಾಲವಾದರು. ಮೈಸೂರು ಸಿಟಿಯಲ್ಲಿ ೩ ಮಂದಿಗೆ ತಗಲಿ ಇಬ್ಬರು ಸತ್ತರು. ಕೋಲಾರದ ಚಿನ್ನದ ಗಣಿಯಲ್ಲಿ ೧೩ ಮಂದಿಗೆ ತಗಲಿ ೭ ಮಂದಿ ಕಾಲವಾದರು.

'ಖಾದಿಪತ್ರಿಕೆ' ನಿಂತಿತು.

ಕಾನ್‌ಪುರದಲ್ಲಿ ೧೯೩೪ನೇ ಫೆಬ್ರುವರಿಯಲ್ಲಿ ಶ್ರೀಮತಿ ಪಿ. ಜೆರಾಜಾಯರ ಸಂಪಾದಕತ್ವದಲ್ಲಿ ಹೊರಬಿದ್ದ ಒಂದು ಖಾದಿಪತ್ರಿಕೆಯು ಈ ಫೆಬ್ರುವರಿ ತಿಂಗಳಿನಿಂದ ನಿಂತುಹೋಗುವುದೆಂದು ಪ್ರಕಟವಾಗಿದೆ. ಇದರ ಪ್ರೋತ್ಸಾಹದ ಪರಿಣಾಮವಂತೆ ಇದು.

ಮಿಸ್ ಸುಲ್ತಾನಳ ಮೇಲೆ ಮೊಕದ್ದಮೆ.

ಸಿನೆಮಾ ನಟಿ ಮಿಸ್. ಸುಲ್ತಾನಳೂ ಮತ್ತಿಬ್ಬರೂ ಕೂಡಿ ೭೫೦೦ ರೂಪ್ಯಾ ಬೆಲೆಬಾಳುವ ವಜ್ರದ ಉಂಗುರ ಮತ್ತು ಎರಡು ಕಿವಿಯ ಓಲೆಗಳು ಇವುಗಳ ಸಂಬಂಧವಾಗಿ ಸಂತಾಕ್ರೂಜುವಲ್ಲಿಯ ಆಲ್ಟಾಫರ್, ಹೈದರಾಲಿ ಎಂಬವನಿಗೆ ಮೋಸಮಾಡಿರುವರೆಂಬ ಆಪಾದನೆಯು ಕುರ್ಲಾ ಕೋರ್ಟಿಗೆ ಬಂದಿದೆ. ಈಗ ಆಲ್ಟಾಫರ್‌ನು ತೀರಿಕೊಂಡುದರಿಂದ ಕಕ್ಷಿದಾರಿಗೆ ಆಧಾರವಿಲ್ಲವೆಂದು ಪ್ರತಿವಾದ.

ಸುಟ್ಟುಹೋಯಿತು.

ಮುಂಬಾಯಿಯ ಶಿವಡಿ ಎಂಬಲ್ಲಿ ಹತ್ತಿಯ ೧೫ ಸಾವಿರ ದೊಡ್ಡ ದೊಡ್ಡ ಮೂಟೆಗಳಿಗೆ ಬೆಂಕಿಬಿದ್ದು ೧೬ ಸಾವಿರ ರೂಪಾಯಿಗಳ ನಷ್ಟವುಂಟಾಗಿದೆ. ೫ ಫೈಯರ್ ಟ್ರೇಡುಗಳು ಕೂಡಿ ಬೆಂಕಿಯನ್ನು ನೀಂದಿಸಿದುವು. ಬೆಂಕಿಬಿದ್ದ ಕಾರಣವು ತಿಳುಬಂದಿಲ್ಲ.

ಮರಣ.

ಲಂಡನ್ನಿನಲ್ಲಿ ನೈಮ್ಯಾಗಿ ಕೆಲಸಮಾಡುತ್ತಿದ್ದ ಡಾಕ್ಟರ್ ಜತೀಂದ್ರನಾಥ ಡೇ ಎಂಬವರು ಆಕಸ್ಮಾತ್ ಮರಣ ಹೊಂದಿದರು. ವಿಚಾರಣೆಯಾಗಿ ಬುದ್ಧಿಭ್ರಮಣದ ಪರಿಣಾಮವಾಗಿ ಆತ್ಮಹತ್ಯೆ ಮಾಡಿಕೊಂಡರೆಂದು ತೀರ್ಮಾನ.

ವಿಗ್ರಹಗಳ ಕಳವು!

ದೇವರಶೆಟ್ಟಿ ಕಳವು ಮಾಡಿದವರಿಗಾದರು. ಗ್ವಾಲಿಯರಿನಲ್ಲಿ ಒಂದು ಜೈನದೇವಾಲಯದಲ್ಲಿ ೪ ಸಾವಿರ ತೊಲೆ ಗಳಷ್ಟು ತೂಕದ ಬೆಳ್ಳಿಯ ಮೂರು ವಿಗ್ರಹಗಳು ಗುಡಿಯೊಳಗಿನ ಪರಾರಿಯಾಗಿವೆ. ಗುಡಿಯ ಬಾಗಿಲು ಒಡೆಯಲ್ಪಟ್ಟುದರಿಂದ ಕಳ್ಳರು ಎತ್ತಿ ಒಯ್ದುರೆಂದು ಊಹೆ. ದೇವಸ್ಥಾನಕ್ಕೆ ಬೆಂಕಿ ಬಿದ್ದಿದ್ದರೂ ಅಮೂಲ್ಯವಾಗಿ ನಷ್ಟವಿಲ್ಲ.

ಡಾ। ಟಿ. ಕೃಷ್ಣ ಮೇನನ್‌ರವರ ನಿಧನ.

ಮದರಾಸಿನ ಪ್ರಸಿದ್ಧ ರೋಪ್ರಸೀಅರೂ ಆಗಿದ್ದ ಡಾ। ಟಿ. ಕೃಷ್ಣ ಮೇನನ್‌ರವರು ಇದೇ ತಾ. ೧೫ರಲ್ಲಿ ಹೃದಯ ರೋಗದಿಂದ ನಿಧನಹೊಂದಿದರು. ಇವರು ವಿದೇಶಗಳ ಸರ್ ಶಂಕರನ್ ನಾಯರ್‌ರವರ ಅಳಿಯ. ಬಡಬಗ್ಗರಿಗೆ ಇವರು ನಿಷ್ಠುಲಸಹಾಯವನ್ನಿತ್ತಿದ್ದರು.

ಶ್ರೀಮತಿ ಕಮಲಾನೆಹರುರವರು.

ಪಂಡಿತ ಜವಾಹರಲಾಲ ನೆಹರುರವರನ್ನು ಅಲ್ಮೋರಾ ಜೈಲಿನಿಂದ ಬೋವಾಲಿಗೆ ಅವರ ಧರ್ಮಪತ್ನಿ ಶ್ರೀಮತಿ ಕಮಲಾ ನೆಹರುರವರನ್ನು ಸ್ವಾಗತಿಸುವುದಕ್ಕಾಗಿ ಆರತಿ ಬೆಳಗಿಯಾಯಿತು. ಪಂಡಿತರು ಪತ್ನಿಯೊಡನೆ ಒಂದು ದಿನವಿದ್ದರು. ಎರಡು ವಾರಗಳಿಗೊಂದಲವರ್ತಿಯಾದರೂ ಜವಾಹರಲಾಲರಿಗೆ ಪತ್ರಿಯ ಭೇಟಿತೊಡಬೇಕೆಂದು ಡಾಕ್ಟರರು ತಿಳಿಸಿರುವರು. ಬೋವಾಲಿಗೆ ಬಂದಂದಿನ ನಿಂದ ಶ್ರೀಮತಿ ನೆಹರುರವರು ಸೊಮ್ಮಿಗೊಳ್ಳುತ್ತಿರುವರು.

ಇಂಡಿಯಕ್ಕೆ ಆಸ್ಟ್ರೇಲಿಯಾ ಟೀಮಿನ ಆಗಮನ.

೧೯೩೫-೩೬ರಲ್ಲಿ ಆಸ್ಟ್ರೇಲಿಯಾ ಕ್ರಿಕೆಟ್ ಆಟಗಾರರು ನಾಲ್ಕು ತಿಂಗಳ ಕಾಲ ಇಂಡಿಯಾ ದೇಶದ ಮುಖ್ಯ ನಗರಗಳಲ್ಲಿ ಸಂಚರಿಸಿ ಆಲ್ಲಲ್ಲಿ ತಮ್ಮ ಶ್ರೇಷ್ಠ ಕೌಶಲ್ಯವನ್ನು ಪ್ರದರ್ಶಿಸುವರು. ಕಾರ್ಯಕ್ರಮದ ಪ್ರಕಾರ ಆಸ್ಟ್ರೇಲಿಯಾ ಟೀಮಿನವರು ಮುಂಬಾಯಿ ಲಾಹೋರ್ ಮತ್ತು ಮದ್ರಾಸುಗಳಲ್ಲಿ ನಾಲ್ಕು ದಿವಸಗಳ ಪಂದ್ಯಗಳನ್ನಾಡಿದರು.

ಆಳ್ವಕಂಗಿಯರ ಮರಣ.

ಲಂಡನ್ ಪಬ್ಲಿಕ್ ಪಿಕ್ಚರ್ಸ್ ಮಂಡಿಳರ್ ಅಳಿಯರೂ ನಿರುವ ಡಾ। ಎ. ಕೃಷ್ಣಮೂರ್ತಿಯವರ ಕುಮಾರ್ತಿಯು ಇತ್ತೀಚೆಗೆ ಪ್ರಸವಕಾಲದಲ್ಲಿ ಪ್ರಸವದಿಂದ ಮರಣಹೊಂದಿದರು. ಒಬ್ಬನು ಮದರಾಸಿನಲ್ಲಿಯೂ ಇನ್ನೊಬ್ಬನು ಲಂಡನ್ನಿನಲ್ಲಿಯೂ ಇದ್ದರು.

ಸಾರ್ ಜರ್ಮನಿಗೆ ದೊರೆಯಿತು.

ಮಹಾ ಯುದ್ಧವು ನಡೆದ ಪರಿಣಾಮವಾಗಿ ವರ್ಸಲೆ ಸಂಧಿಯುಂಟಾಗಿ, ಸಾರ್ ಸಂಸ್ಥಾನವನ್ನು ಲೀಗ್ ಒಫ್ ನೇಶನ್ಸ್‌ನ ಅಧೀನದಲ್ಲಿಟ್ಟು ಆಪಿನ್ನು ಫ್ರಾನ್ಸಿಗೆ ಪ್ರಯೋಜನಕ್ಕೆ ಮಿಸಲಾಗಿಡಲಾಗಿದ್ದಿತು. ಸಾರ್ ದೇಶಕ್ಕೆರು ಜರ್ಮನಿಗೆ ಸೇರಬೇಕೋ ಫ್ರಾನ್ಸಿಗೋ ಎಂಬ ಕುರಿತಾದ ಪೋಟು ವೊನ್ನೆ ನಡೆದು ೬೭೬೦೧೯ ಪೋಟುಗಳು ಜರ್ಮನಿಯ ಪರವಾಗಿಯೂ, ೨,೧೩೪ ಪೋಟುಗಳು ಫ್ರಾನ್ಸಿನ ಪರವಾಗಿಯಂ ಮೊರೆತು 'ಸಾರ್ ಸಂಸ್ಥಾನವು ಜರ್ಮನಿಗೆ ದೊರೆಯಿತು. ಬಹು ಪತ್ಯೇಯ ಸಾರ್ ದೇಶಸ್ಥರು ಜರ್ಮನಿಗೆ ಪೋಟು ತೊಟ್ಟುದನ್ನೂ ಹರ್ಷ ಹಿಟ್ಟರರು ಕೇಳಿ ಸುಹಾನಂದಭರಿತರಾಗಿ—'ಈಗ ಲಾದರೂ ಜರ್ಮನಿಯು ಜಗತ್ತಿನ ಶಾಂತಿಗೆ ಸನ್ನದ್ಧವಾಗಿದೆ' ಎಂದು ಸೂಚಿಸಿದರು.

ಸ್ಪೇನ್ಗಿ ಬಾಲ್ವಿನ್ನರ ಸಂದೇಶ.

ಕನ್ಸರ್ವೇಟಿವ್ ಮುಖಂಡರಾದ ಪಿ। ಸ್ಪೇನ್ಗಿ ಬಾಲ್ವಿನ್ನರು ಜೂನಿಯರ್ ಇಂಪೀರಿಯಲ್ ಲೀಗಿನ ವಾರ್ಷಿಕ ಸಭೆಯಲ್ಲಿ ಯುವಕರಿಗೊಂದು ಸಂದೇಶವನ್ನಿತ್ತು—"ಬ್ರಿಟಿಷ್ ಸಾಮ್ರಾಜ್ಯವು ಸುಹರ್ತರವಾದುದು. ಶಾಂತಿ, ನೀತಿ ಮತ್ತು ಸ್ವಾತಂತ್ರ್ಯಗಳ ಸಂರಕ್ಷಣೆಗಳಲ್ಲಿ ಅದು ನೆಲೆನಿಂತಿರುವಿತು. ಇತರರಲ್ಲಿ ಭಕ್ತಿಯು ಕಡಮೆಯಾಗು

ಉಡುಪಿ ತಾಲೂಕು ಕೈತರ ಪರಿಷತ್ತು

ತಾ. ೨೦—೨೭—೧೯೩೫ನೇ ಆದಿತ್ಯವಾರ ಅಪರಾಹ್ನ ೨ ಗಂಟೆಗೆ ಶ್ರೀ ರಾಮಕೃಷ್ಣ ಬಿಲ್ಡಿಂಗ್ಸಿನ ಪಡಸಾಲೆಯಲ್ಲಿ ತಿಯೇಟರಿನಲ್ಲಿ ನಮ್ಮಾನಿನ ರಾವ್‌ಸಾಹೇಬ್ ಡಾ। ಎಸ್. ಯು. ಅನಂತರಾಯರ ಅಧ್ಯಕ್ಷತೆಯಲ್ಲಿ ಜರಗಲಿರುವುದು. ಹಂದೂ ಕೃಷ್ಣ ಮುಸಲ್ಮಾನ ಪ್ರತಿನಿಧಿಗಳ ಸಂಸ್ಥಾಗತ ಸಮಿತಿಯೊಂದು ಪರಿಷತ್ತಿನ ಉದ್ದೇಶ ನಿಲನ್ನು ಸಾರಂಗಗೆಕಿಸುವರೆ ವಿಚಾರಿಸಲಾಗಿದೆ. ಈಗಿನ ವರ್ಷಕ್ಕಿಂತಲೂ ಕಮ್ಮಿಯಾಗದೆ ಮಕ್ತ್ಯ ವನ್ನು ಯಾಗುತ್ತಿರುವ ಆರ್ಥಿಕ ಮುಸ್ಕಿತಿಯ ದೆಸೆಯಿಂದ ಜಾಲ್ತಿ ಫಸಲಿಯ ಸರಕಾರಿ ತೀರ್ವೆಯಲ್ಲಿ ಎಕ್ಕರಮಟ್ಟಿಗೆ ಮಾಫಿ ಸಿಗಬೇಕೆಂಬ ವಿಷಯವನ್ನೂ ಕೈತರ ಇತರ ಸಂಕಷ್ಟಗಳನ್ನೂ ಆಲೋಚಿಸಿ ಅಗತ್ಯವಿರುವ ನಿರ್ಧಾರಗಳನ್ನೂ ನಿರ್ಣಯಗಳನ್ನೂ ಮಾಡುವುದೇ ಈ ಅಧಿವೇಶನದ ಮುಖ್ಯೋದ್ದೇಶವೆಂದು ಜಾಹೀರುಪ್ರಕಟಣೆಯಿಂದ ಭಾಸವಾಗುತ್ತದೆ.

ಭಗವಾನ್ ಶ್ರೀ ಕೃಷ್ಣಸನ್ನಿಧಾನದಲ್ಲಿ ಮಧ್ಯಮಕರ ಸಂಕ್ರಮಣ ಜಾತ್ರೆಯು

ಇದೇ ತಾರೀಕು ೨೨ನೇ ಮಂಗಳವಾರ ಆರಂಭವಾಗಿ ತಾ. ೧೧ನೇ ಸೋಮವಾರ ಪರ್ಯಂತವಿದ್ದು ಕೊಪೆಗೊಂಡಿತು. ಈ ವರುಷ ಯಾತ್ರಿಕರ ಸಂಖ್ಯೆಯು ವಿಶೇಷವಾಗಿದ್ದಿಲ್ಲ. ಎದು ಮುಂದಿ ಶ್ರೀಕಾರ್ಯಂಗಳವರು ಮಾತ್ರ ಹಾಜರಿದ್ದರು. ಚೂಡೆಸೇವೆಯ, ಅವಭೃತ ಸ್ನಾನಾದಿಗಳು ಮುಂದಿದ ಬಳಿಕ ಪರ್ಯಾಯ ಸಿಂಹಾಸನಾರೂಢರಾಗಿ ಕಾಯಾವಾಚಾ ಹುಸಸಾ ಸನ್ಯಸನದೀಕ್ಷೆಯನ್ನು ಪರಿಪಾಲಿಸುತ್ತಿರುವ ಶಾಖಾಮಠದ ಭಾವಿ ಶ್ರೀ ವಿದ್ಯಾಸಿಂಹತೀರ್ಥ ಶ್ರೀ ಪಾದಂಗಳವರ ನೇತೃತ್ವದಲ್ಲಿ ವಿದ್ವಾಂಸ ಸಾವಿರ ಬ್ರಾಹ್ಮಣ ಸುವಾಸಿನಿಯರು ಮಹಾಪ್ರಸಾದ ಯುಕ್ತವಾದ ಮಹಾ ಸದಸಾರಾಧನೆಯಲ್ಲಿ ಸಹಭಾಗಿಗಳಾದರು.

೧೨ನೇ ಪುಟದಿಂದ ಮುಂದುವರಿದುದು

ನಡತೆಯನ್ನೂ ಸಾಹಿತ್ಯಪರಿಷತ್ಕಮೇಳವು ಖಂಡಿಸ ಬೇಕೆಂದು ನಿರ್ಣಯವನ್ನು ತಂದಿದ್ದರು. ಇವರ ಅಭಿ ಪ್ರಾಯವನ್ನೂ ತಿಳಿಯಬೇಕಾದದ್ದೇ. "ಬಾಲಪ್ರಸಂಚ್‌ಕೆ ಎಷ್ಟು ಮಂದಿ ಚಿರೆಯಾದಾರರು ದೊರೆತಿದ್ದಾರೋ ನಮಗೆ ತಿಳಿಯದು. ಸಚ್ಚಿಪುಸ್ತಕಗಳನ್ನು ಬಿಟ್ಟರೆ ಉಳಿದವು ಎಷ್ಟು ಲಾಭವನ್ನು ದೊರೆಕಿಸಿಬೆಯೋ ತಿಳಿಯದು.

ಇನ್ನು ಪರಿಷತ್ತು ಮಾಡಬೇಕಾದ ಕೆಲಸಗಳು. ಬುದ್ಧಿ ಮಾದವನ್ನು ಹೇಳತಕ್ಕ ನೂರು ಜನರಲ್ಲಿ ಹತ್ತು ಜನರು ... ಗೆ ಒದಲು ಹುಂದ ... ಪ್ರ ಅಭಿಪತ್ತು ಮ ... ಮಾಡಿತೋ ನೀರೋ! ಕಾಲ್ಪತ್ತು ವರ್ಷದ ಮ ... ಈಗ ಕೂಗಾಡುತ್ತಿದ್ದಾರೆ! ಇಷ್ಟು ದಿವಸ ಆದ. ಬದುಕಿದ್ದು ಈಗ ತಗಲು. ಮೊದಲುಮಾಡಿದ ಯಲ್ಲಿ—ಅದೇ ಒಂದು ದೊಡ್ಡ ಪುಣ್ಯ. ಅದಕ್ಕೆ ಹೊಟ್ಟೆಗೆ ಹಾಕಿ ಬೆಳೆಸುವ ಪ್ರಯತ್ನವನ್ನು ಶ್ರೀಯುತರು ಮಾಡಿದ್ದಾರೆ. ತಮಗೆ ಜೀವನಸರ್ವಸ್ವವಾದ ಹಿಂದಿಯನ್ನು ಸ್ವಲ್ಪ ಹಿಂದೆ ಇಡಿರೆಂದು ಆ ಮಾಗು ಸ್ವಲ್ಪ ಕೂಡಿದ್ದಕ್ಕೆ ಆಜೀವಸದಸ್ಯರಾದ ಶ್ರೀಯುತರು ಪೊಕ್ಕಳ ತೆಗೆದುಕೊಂಡು ಮುಂದೆ ಬಂದಿದ್ದಾರೆ. ಇದು ತಮ್ಮ ಕರ್ತವ್ಯವನ್ನು ಅರಿಯದಂತೆ ಮಾಡಿದ ಹಿಂದೀ ವಿರೋಧ ಮಹತ್ವದ ಮಹತ್ವವಲ್ಲವೇ? ಇನ್ನು ಪರಿಷತ್ತಿನವರಿಗೆ ಉಳಿದಿರುವ ಕೆಲಸವೊಂದೇ. ಪರಿಷತ್ತನ್ನು ಶ್ರೀಯುತರಿಗೂ ಆ ಹಿಂದೀ ದ್ವೇಷಿಗಳಿಗೂ ಒಪ್ಪಿಸಿ ಕರ್ನಾಟಕ ಸಾಹಿತ್ಯ ಪರಿಷತ್ತಿನಲ್ಲಿಯೆಯನ್ನು ಹಿಂದೀ ಭಾಷೆಯಲ್ಲಿ ಪ್ರಕಟಿಸುವುದಕ್ಕೂ ತನ್ಮೂಲಕ ಕನ್ನಡದ ತೀರ್ಥಯನ್ನು ಉತ್ತರ ಹಿಂದೂಸ್ಥಾನದಲ್ಲಿ ಪ್ರಚಾರಗೊಳಿಸುವುದಕ್ಕೂ ಶ್ರೀಯುತರಿಗೆ ಅವಕಾಶವನ್ನು ಕೊಡಬೇಕಾಗಿದೆ.

ಕನ್ನಡಿಗರು ಮತ್ತು ಪರಿಷತ್ತು ಇವರವರಿಗೂ ಮಾರಾಟ ಮತ್ತು ತಲೆಗು ಭಾಷೆಗಳ ಉಜಿಬೆಳವಣಿಕೆಯ ಮಾತ್ರ ಸಹಿಸಬೇಕಾಗಿತ್ತು. ಈಗ ಹಿಂದಕ್ಕುವಾಗಿ ಬಂದಿರುವ ಹಿಂದೀ ಭಾಷೆಯು ದಂಡಯಾತ್ರೆಯನ್ನೂ ಎದುರಿಸಬೇಕಾಗಿದೆ. ಕನ್ನಡಿಗರಲ್ಲಿ ಸತ್ಯವಿದ್ದರೆ ತಮ್ಮ ಭಾಷೆಯನ್ನು ಉಳಿಸಿಕೊಳ್ಳುತ್ತಾರೆ, ತಮ್ಮ ಪರಿಷತ್ತನ್ನು ಉಳಿಸಿಕೊಳ್ಳುತ್ತಾರೆ. ಸೆಂಟರ್ ಮೇಲೆ ಅತಿ ಆಕ್ಷೆಯ ಮೇಲೆ ಶ್ರೀತ" ಎಂಬ ಮನೋಧರ್ಮಕ್ಕೆ ಈ ವಿಷಮ ಸಮಯದಲ್ಲಿ ಎಡೆಯಿಲ್ಲ. ಪೊಡಮಟ ಕನ್ನಡ. ಕನ್ನಡಕ್ಕೆ ಎತ್ತಕ್ಕಂದಲೂ ಕೊಂದರೆ ಬರಬಾದು. ಅವನ್ನು ಕ್ಷಣಾದರೂ ರಕ್ಷಿಸಿಕೊಳ್ಳಬೇಕು—ಎಂಬುದೇ ಒಂದು ಲಕ್ಷ ಕಂಠಿಸಿದ್ದಾರೆ. ಕನ್ನಡಿಗರೆಂದು ಹೇಳಿಕೊಳ್ಳುವ ಹಿಂದೀ ಭಾಷಾ ಕೆಲಸಗಳು ಇನ್ನೊಂದು ಕಡೆ ನಡೆ ಜ್ಞಾಪಕ. ಕನ್ನಡಾಭಿಮಾನಿಗಳ ಕರ್ತವ್ಯ ಸ್ಪಷ್ಟವೇ ಆಗಿದೆ.

ಬಿ. ಪೆಜ್ಜಪಸ್ಥ.

ಶ್ರೀ। ವೆಂಕಟಾಲಂಚಿಟ್ಟಿಯವರು.

ಇವರು, ಕಾ. ತಿಂಗಳಿನ ಸ್ಯೂಥಿಲ್ಲಿಯಲ್ಲಿ ಜರಗಲಿರುವ ಕೇಂದ್ರ ನ್ಯಾಯವಿಧಾಯಕ ಸಭೆಗೆಂದು ಮೊನ್ನೆ ಮದ್ರಾಸಿನಿಂದ ಹೊರಟಿರುವರು. ಈ ಸಂದರ್ಭದಲ್ಲಿ ಅವರಿಗೆ ಶುಭವನ್ನು ಬಯಸಿ ವಿದಾಯ ಸತ್ಕಾರಗಳಾಯಿವು.

ಶ್ರೀ। ಸತ್ಯಮೂರ್ತಿಯವರು.

ಚಿಕ್ಕಮಗಳೂರಲ್ಲಿ ಉದಾರ ದಾನ.

ಚಿಕ್ಕಮಗಳೂರಿನಲ್ಲಿ ಒಂದು ಗರ್ಲ್ಸ್ ಹೈಸ್ಕೂಲನ್ನು ಸ್ಥಾಪಿಸುವುದಕ್ಕಾಗಿ ಧರ್ಮ ಪ್ರಕಾಶ್‌ಜಿಯಂಪ್ರೇ ಗೌಡರವರು ೧೬ ಸಾವಿರ ರೂಪಾಯಿಗಳ ಈವಾರ ದೃವ ಸಹಾಯ ವನ್ನಿತ್ತಿರುವರು.

ಸಂಪಿಗೆ ವೆಂಕಟಪತಯ್ಯನವರು.

ಬಾದವಾರದ ಕಾರಾಗೃಹದಿಂದ ಬಂಧಮುಕ್ತರಾದ ಶ್ರೀ ಸಂಪಿಗೆ ವೆಂಕಟಪತಯ್ಯನವರು ಕಳೆದ ವಾರ ಕುಪ್ಪಳಕ್ಕೂರಿಗೆ ಬಂದರು. ಅವರನ್ನು ಸಾವಿರಾರು ಜನರು ಸ್ವಾಗತಿಸಿದರು. ಶ್ರೀಯುತರು ಪೂರ್ಣ ಆರೋಗ್ಯ ದಿಂದಿರುವರು.

೨೫ ವರ್ಷ ಪಾರ್ಲಿಮೆಂಟ್ ಸದಸ್ಯರು.

ಪಾರ್ಲಿಮೆಂಟಿನಲ್ಲಿ ೨೫ ವರ್ಷಗಳ ತನ್ನ ಅವ್ಯಾಹತವಾಗಿ ಡರ್ಬಿ ಪ್ರತಿನಿಧಿಯಾಗಿ ಸದಸ್ಯರಾಗಿ ಸೇವೆ ಮಾಡಿದ ಮಿ. ಜೆ. ಎಚ್. ಥೋಮ್ಸ್‌ರವರು ಮುಂದಿನ ತಿಂಗಳಲ್ಲಿ ತಮ್ಮ ಸೇವೆಯ ಖಾನೆ ವರ್ಷವನ್ನು ಮುಗಿಸುವರು. ಲಂಡನ್ನಲ್ಲಿ ಇವರಿಗೆ ತನ್ಮಾನವಾಯಿತು.

ಶಿವಮೊಗ್ಗ ದಂಗೆಗಾರರ ಪಲಾಯನ.

ಶಿವಮೊಗ್ಗ ದೊಂಬಿಯ ಸಂಬಂಧವಾಗಿ ಹೈ ಕೋರ್ಟಿಗೆ ಅಪೀಲು ಮಾಡಿ ಅಲ್ಲಿಯೂ ಶಿಕ್ಷೆ ವಿಧಿಸಲ್ಪಟ್ಟ ಅಪರಾಧಿಗಳಲ್ಲಿ, ಅನೇಕ ಅಪರಾಧಿ ಸೈಯದ್ ಮಹಮದ್, ಅತನೇ ಅಪರಾಧಿ ಶಂಷುದ್ದೀನ್ ಮತ್ತು ಸತ್ಯಿಲ್ಲೆ ದಾಮು ಸಾಬ್, ಈ ಮೂವರೂ ಪೋಲೀಸರ ಕೈಯಿಂದ ತಪ್ಪಿಸಿಕೊಂಡಿರುವರು. ಇವರಿಗೆ ಜಾಮೀನು ನಿಂತವರುಗಳ ಮೇಲೆ ಫಸ್ಟ್‌ಕ್ಲಾಸ್ ಮೆಜಿಸ್ಟ್ರೇಟ್ ಕೋರ್ಟಿನಲ್ಲಿ ಸತ್ಕಾರು ನಡೆಯಲಿರುವುದೆಂದು ಸೂಚನೆಗಿದೆ. ಆರೋಪಿಗಳ ಪತ್ತೆಯಾಗುತ್ತಿಲ್ಲ.

ಸಂಕೀರ್ಣ

ಮಂಗಳೂರು, ಮೇ ೨೫: ಸಾಮಾನ್ಯ ಜನರಿಗೆ ಕಡಿಮೆ ದರದಲ್ಲಿ ಉತ್ತಮ ಚಿಕಿತ್ಸೆ ನೀಡುವ ಉದ್ದೇಶದಿಂದ ಸ್ಥಾಪಿಸಲಾಗಿರುವ 'ಜನ ಔಷಧಿ ಕೇಂದ್ರ'ಗಳು ಜನರ ಆರೋಗ್ಯ ಕಾಪಾಡುವಲ್ಲಿ ಪ್ರಮುಖ ಪಾತ್ರ ವಹಿಸಲಿವೆ ಎಂದು ಜಿಲ್ಲಾಧಿಕಾರಿ ಡಾ. ಕೆ. ಜಗದೀಶ್ ಅಭಿಪ್ರಾಯಪಟ್ಟರು. ಅವರು ಇಂದು ಬೆಳಿಗ್ಗೆ ಕೆನರಾ ಜನೌಷಧಿ ಕೇಂದ್ರವನ್ನು ಉದ್ಘಾಟಿಸಿ ಮಾತನಾಡುತ್ತಿದ್ದರು. ಕೆನರಾ ಜನೌಷಧಿ ಕೇಂದ್ರದ ಮಾಲೀಕ ಶ್ರೀ ರಾಮಚಂದ್ರ ಭಟ್ ಉಪಸ್ಥಿತರಿದ್ದರು. ಜಿಲ್ಲಾ ಪಂಚಾಯತ್ ಸದಸ್ಯೆ ಶ್ರೀಮತಿ ಸುಮಿತ್ರಾ ಕರಿಯ ಅವರು ಮೊದಲ ಮಾರಾಟವನ್ನು ಸ್ವೀಕರಿಸಿದರು. ಕಾರ್ಯಕ್ರಮದಲ್ಲಿ ಹಲವಾರು ಗಣ್ಯರು ಭಾಗವಹಿಸಿದ್ದರು.

ಕಾರ್ಕಳ, ಜುಲೈ ೧೨: ಪುರಸಭೆಯ ಸಾಮಾನ್ಯ ಸಭೆಯು ಇಂದು ಪುರಸಭಾ ಅಧ್ಯಕ್ಷೆ ಶ್ರೀಮತಿ ಸುಜಾತಾ ಶೆಟ್ಟಿ ಅವರ ಅಧ್ಯಕ್ಷತೆಯಲ್ಲಿ ನಡೆಯಿತು. ಪಟ್ಟಣದ ಕುಡಿಯುವ ನೀರಿನ ಸಮಸ್ಯೆ, ಬೀದಿ ದೀಪಗಳ ನಿರ್ವಹಣೆ ಮತ್ತು ಹೊಸ ಬಸ್ ನಿಲ್ದಾಣದ ಕಾಮಗಾರಿಯ ಪ್ರಗತಿ ಕುರಿತು ಸದಸ್ಯರು ಪ್ರಶ್ನೆಗಳನ್ನು ಕೇಳಿದರು. ಮುಖ್ಯಾಧಿಕಾರಿ ಶ್ರೀ ಮಹೇಶ್ ಕುಮಾರ್ ಅವರು ಉತ್ತರಿಸಿದರು. ಸಭೆಯಲ್ಲಿ ಒಟ್ಟು ೧೪ ವಿಷಯಗಳನ್ನು ಚರ್ಚಿಸಲಾಯಿತು.

ಬೆಳ್ತಂಗಡಿ: ತಾಲೂಕಿನ ಕಡಿರುದ್ಯಾವರ ಗ್ರಾಮದ ಕೃಷಿಕ ಶ್ರೀ ಮಂಜಯ್ಯ ಗೌಡ (೬೨) ಅವರು ಅಲ್ಪಕಾಲದ ಅನಾರೋಗ್ಯದಿಂದ ನಿಧನರಾದರು. ಮೃತರು ಪತ್ನಿ, ಮೂವರು ಪುತ್ರರು ಮತ್ತು ಬಂಧುಗಳನ್ನು ಅಗಲಿದ್ದಾರೆ. ಸಂತಾಪ ಸೂಚಕವಾಗಿ ಗ್ರಾಮದ ಅಂಗಡಿಗಳು ಮುಚ್ಚಲ್ಪಟ್ಟಿದ್ದವು.

ಮಂಗಳೂರು, ಜುಲೈ ೨೮: ಕರಾವಳಿ ಜಿಲ್ಲೆಗಳಲ್ಲಿ ಮುಂಗಾರು ಮಳೆ ಚುರುಕುಗೊಂಡಿದ್ದು, ಕಳೆದ ೨೪ ಗಂಟೆಗಳಲ್ಲಿ ಸರಾಸರಿ ೭೨ ಮಿಲಿಮೀಟರ್ ಮಳೆಯಾಗಿದೆ. ಜಿಲ್ಲಾಧಿಕಾರಿ ಶ್ರೀ ಕೆ. ಜಗದೀಶ್ ಅವರು ಮಳೆಯಿಂದ ಹಾನಿಗೊಳಗಾದ ಪ್ರದೇಶಗಳಿಗೆ ಭೇಟಿ ನೀಡಿ ಪರಿಶೀಲಿಸಿದರು. ಮಂಗಳೂರು ತಾಲೂಕಿನ ಕೆಲವು ಕಡೆ ಮನೆಗಳಿಗೆ ನೀರು ನುಗ್ಗಿದ್ದು, ಸುಮಾರು ೩೫ ಕುಟುಂಬಗಳನ್ನು ಸ್ಥಳಾಂತರಿಸಲಾಗಿದೆ. ಕಡಲ್ಕೊರೆತ ತಡೆಗಾಗಿ ಸುಮಾರು ೨.೫ ಕಿ.ಮೀ. ಉದ್ದದ ತಡೆಗೋಡೆ ನಿರ್ಮಾಣಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿದೆ ಎಂದು ಅವರು ತಿಳಿಸಿದರು.

ಪಂಜೆಗುಡ್ಡೆ ಪೇಟೆಯಲ್ಲಿ ಆಗಾಗ್ಗೆ ರಾತ್ರಿಶಾಲೆಯಲ್ಲಿ ಓಡಾಡುವ ಪುಟ್ಟ ಶಾಲಾಮಕ್ಕಳಿಗಾಗುತ್ತಿರುವ ತೊಂದರೆಯ ಬಗ್ಗೆ ಪತ್ರಿಕೆಯಲ್ಲಿ ಬಂದ ವರದಿಯ ಬಗ್ಗೆ ಪ್ರತಿಕ್ರಿಯಿಸಿದ ಶಾಲಾ ಮುಖ್ಯೋಪಾಧ್ಯಾಯರಾದ ಶ್ರೀ ಕೆ. ಎಸ್. ಭಟ್ ಅವರು, ಶಾಲೆಯ ಸುತ್ತಲೂ ಸೂಕ್ತ ಬೆಳಕಿನ ವ್ಯವಸ್ಥೆ ಮಾಡಲಾಗಿದೆ ಎಂದು ತಿಳಿಸಿದ್ದಾರೆ. ಪಂಚಾಯತ್ ಅಧ್ಯಕ್ಷೆ ಶ್ರೀಮತಿ ಲಲಿತಾ ಪೂಜಾರಿ ಅವರು ಸಹ ಸ್ಥಳಕ್ಕೆ ಭೇಟಿ ನೀಡಿದ್ದಾರೆ.

ಕಾರ್ಕಳ ತಾಲೂಕಿನ ಮಿಯಾರು ಗ್ರಾಮದ ಕೃಷಿಕ ಶ್ರೀ ಮಂಜಯ್ಯ ಗೌಡ (೬೨) ಅವರು ಅಲ್ಪಕಾಲದ ಅನಾರೋಗ್ಯದಿಂದ ನಿಧನರಾದರು. ಮೃತರು ಪತ್ನಿ, ಮೂವರು ಪುತ್ರರು ಮತ್ತು ಬಂಧುಗಳನ್ನು ಅಗಲಿದ್ದಾರೆ. ಸಂತಾಪ ಸೂಚಕವಾಗಿ ಗ್ರಾಮದ ಅಂಗಡಿಗಳು ಮುಚ್ಚಲ್ಪಟ್ಟಿದ್ದವು.

ಮಂಗಳೂರು ಮುನಿಸಿಪಾಲಿಟಿಯ ಸಾಮಾನ್ಯ ಸಭೆಯೊಂದು ಇದೇ ಬರುವ ತಾ ೨೦ನೇ ಸೋಮವಾರ ಸಾಯಂಕಾಲ ಘಂಟೆ ೫ ೩೦ಕ್ಕೆ ಮುನಿಸಿಪಲ್ ಆಫೀಸಿನ ಸಭೆಯಲ್ಲಿ ಜರಗುವುದು

ಶ್ರೀ ಕೃಷ್ಣ ಸಿನಿಮಾದಲ್ಲಿ ಈ ದಿನ ಮೊದಲ್ಗೊಂಡು ಇಂಡೀಪೆಂಡೆಂಟ್ ಫಿಲ್ಮ್ ಕಂಪನಿಯವರ 'ರುಕ್ಮಿಣಿ ಹರಣ' ಮೊದಲಾದ ಮಾತಾಡುವ ಚಲನ್ಚಿತ್ರವು ಪ್ರದರ್ಶಿಸಲ್ಪಡುವುದು ಇದರಲ್ಲಿ ಮುಸ್ತಾರಿ ಪಂಡಿತ ನಗರಕಾರ್, ಜಿಲ್ಲಾ ಮೊದಲಾದವರು ಅಭಿನಯಿಸಿರುವರು ಎಂಬ ಆಡಳಿತ ಗಾರರು ತಿಳಿಸುತ್ತಾರೆ

ಏ। ಎಫ್. ಸೇಯರ್ಸ್, ಡಿಸ್ಟ್ರಿಟ್ ಇನ್ಸ್‌ಪೆಕ್ಟರ್ ಆಫ್ ಪೋಲೀಸ್' ಇವರು, ಈ ದಿನ ಮಂಗಳೂರಿಗೆ ಬಂದು, ನಮ್ಮ ಜಿಲ್ಲೆಯಲ್ಲಿ ಸಂಚರಿಸಲಿರುವರೆಂದು ತಿಳಿದುಬರುತ್ತದೆ.

ತಂ ತಂಗಳೂರಿಂದ ಗಣಪತಿ ಹೈಸ್ಕೂಲಿನಲ್ಲಿ ಹಿಂದೀ ಪ್ರಾಥಮಿಕ ವರ್ಗವೆ ಆರಂಭಿಸಲ್ಪಟ್ಟಿದ್ದು, ಪ್ರತಿ ಸೋಮವಾರ, ಬುಧವಾರ, ಮತ್ತು ಶುಕ್ರವಾರಗಳಲ್ಲಿ ಬೆಳಿಗ್ಗೆ ೪ರಿಂದ ೫ರ ತನಕ ಪಾಠಹೇಳಲಾಗುವುದು.

ಮಂಗಳೂರು ಮುನಿಸಿಪಾಲಿಟಿಯ ಸಾಮಾನ್ಯ ಸಭೆಯೊಂದು ಇದೇ ಬರುವ ತಾ ೨೦ನೇ ಸೋಮವಾರ ಸಾಯಂಕಾಲ ಘಂಟೆ ೫ ೩೦ಕ್ಕೆ ಮುನಿಸಿಪಲ್ ಆಫೀಸಿನ ಸಭೆಯಲ್ಲಿ ಜರಗುವುದು

ಶ್ರೀ ಕೃಷ್ಣ ಸಿನಿಮಾದಲ್ಲಿ ಈ ದಿನ ಮೊದಲ್ಗೊಂಡು ಇಂಡೀಪೆಂಡೆಂಟ್ ಫಿಲ್ಮ್ ಕಂಪನಿಯವರ 'ರುಕ್ಮಿಣಿ ಹರಣ' ಮೊದಲಾದ ಮಾತಾಡುವ ಚಲನ್ಚಿತ್ರವು ಪ್ರದರ್ಶಿಸಲ್ಪಡುವುದು ಇದರಲ್ಲಿ ಮುಸ್ತಾರಿ ಪಂಡಿತ ನಗರಕಾರ್, ಜಿಲ್ಲಾ ಮೊದಲಾದವರು ಅಭಿನಯಿಸಿರುವರು ಎಂಬ ಆಡಳಿತ ಗಾರರು ತಿಳಿಸುತ್ತಾರೆ

ಏ। ಎಫ್. ಸೇಯರ್ಸ್, ಡಿಸ್ಟ್ರಿಟ್ ಇನ್ಸ್‌ಪೆಕ್ಟರ್ ಆಫ್ ಪೋಲೀಸ್' ಇವರು, ಈ ದಿನ ಮಂಗಳೂರಿಗೆ ಬಂದು, ನಮ್ಮ ಜಿಲ್ಲೆಯಲ್ಲಿ ಸಂಚರಿಸಲಿರುವರೆಂದು ತಿಳಿದುಬರುತ್ತದೆ.

ತಂ ತಂಗಳೂರಿಂದ ಗಣಪತಿ ಹೈಸ್ಕೂಲಿನಲ್ಲಿ ಹಿಂದೀ ಪ್ರಾಥಮಿಕ ವರ್ಗವೆ ಆರಂಭಿಸಲ್ಪಟ್ಟಿದ್ದು, ಪ್ರತಿ ಸೋಮವಾರ, ಬುಧವಾರ, ಮತ್ತು ಶುಕ್ರವಾರಗಳಲ್ಲಿ ಬೆಳಿಗ್ಗೆ ೪ರಿಂದ ೫ರ ತನಕ ಪಾಠಹೇಳಲಾಗುವುದು.

ಉರ್ವದಲ್ಲಿರುವ ಮೆಸರ್ಸ್ ಮಿಶಾರ್‌ಕಂ'ರವರ ಗೇಟುಫೀಜದ ಕಾರ್ಖಾನೆಯಲ್ಲಿ ನಿನ್ನೆ ಮಧ್ಯಾಹ್ನ ಗೇಟು ವೀಜವನ್ನು ಸುಲಿವ ವಿಭಾಗದ ಚಟ್ಟಿಯದ ಮಾಡು ಬಿದ್ದು ಕೆಲಸಕ್ಕೆ ಕುಳಿತವರಲ್ಲಿ ಸುದಾರು ೩೩ ಜನರುಗಾಯ ಜಖಂ ಹೊಂದಿದ್ದಾರೆಂದೂ, ಕೆಲವರು ಪ್ರಾಣಕ್ಕೆ ಕೈಮಣಿ ಸ್ಥಿತಿಯಲ್ಲಿರುವರೆಂದೂ ತಿಳಿದುಬರುತ್ತದೆ

ಸ್ವೀಕಾರ:—ಡಾ ಎನ್. ಡಿ ಸುವರ್ಣ, ಎಮ್. ಬಿ ಎಂಡಾ ಎಜ್ ಎಸ್ ಅರ್ಜಿಚಿತ್ರಾ ಭವನ, ಮತ್ತು ಶೈಲೋಕ್ಯ ಸ್ಟೀಲ್ ಟ್ರಂಕ್ ವರ್ಕ್ಸ್ ಬೇಕರಿ ಇವರು ಕಳುಹಿಸಿದ ಗಣೇಶನೇ ಇನಿಯ ಅಂದವಾದ ಕ್ಯಾಲೆಂಡರುಗಳನ್ನು ಆದರದಿಂದ ಸ್ವೀಕರಿಸಿರುವೆವು

ಜೀವೀಯ ವೈದ್ಯರ ಸಮಿತಿಯ ಸಭೆ.

ತಾ. ೧೩-೧೧-೧೯೩೩ನೇ ಶನಿವಾರ ಸಂಜೆ ೪-೩೦ಕ್ಕೆ ಶ್ರೀರಾಮಭಕ್ತಿಯ ಧರ್ಮವೈದ್ಯಾತ್ಮಜರುದ್ದೆ ಜೀವೀಯ ವೈದ್ಯರ ಸಮಿತಿಯ ವಿಶೇಷ ಸಭೆಯು ಜರಗುವುದೆಂದು ಕಾರ್ಯದರ್ಶಿಗಳಾದ ಶ್ರೀ. ಎಂ ಕೆ. ವೈದ್ಯರು ತಿಳಿಸಿ ಸಭೆಯಲ್ಲಿ ಹಾಜರಿರಬೇಕೆಂದು ಕೋರಿಕೊಂಡಿರುವರು. ಸಭೆಯಲ್ಲಿ ಆಯುರ್ವೇದ ಸಂಬಂಧವಾದ ಕೆಲವು ಮುಖ್ಯ ವಿಷಯಗಳನ್ನು ಚರ್ಚಿಸಲಾಗುವುದು. ಆದುದರಿಂದ ಸಭೆಗೆ ಎಲ್ಲರೂ ತಪ್ಪದೆ ಬರಬೇಕೆಂದು ಕಾರ್ಯದರ್ಶಿಗಳಾದ ಶ್ರೀ ಎಂ. ಕೆ. ವೈದ್ಯರು ತಿಳಿಸಿರುವರು.

ಮಂಗಳೂರು, ಜುಲೈ ೧೫: ಕರಾವಳಿ ಜಿಲ್ಲೆಗಳಲ್ಲಿ ಮುಂಗಾರು ಮಳೆ ಚುರುಕುಗೊಂಡಿದ್ದು, ಕಳೆದ ೨೪ ಗಂಟೆಗಳಲ್ಲಿ ಸರಾಸರಿ ೭೨ ಮಿಲಿಮೀಟರ್ ಮಳೆಯಾಗಿದೆ. ಜಿಲ್ಲಾಧಿಕಾರಿ ಶ್ರೀ ಕೆ. ಜಗದೀಶ್ ಅವರು ಮಳೆಯಿಂದ ಹಾನಿಗೊಳಗಾದ ಪ್ರದೇಶಗಳಿಗೆ ಭೇಟಿ ನೀಡಿ ಪರಿಶೀಲಿಸಿದರು. ಮಂಗಳೂರು ತಾಲೂಕಿನ ಕೆಲವು ಕಡೆ ಮನೆಗಳಿಗೆ ನೀರು ನುಗ್ಗಿದ್ದು, ಸುಮಾರು ೩೫ ಕುಟುಂಬಗಳನ್ನು ಸ್ಥಳಾಂತರಿಸಲಾಗಿದೆ. ಕಡಲ್ಕೊರೆತ ತಡೆಗಾಗಿ ಸುಮಾರು ೨.೫ ಕಿ.ಮೀ. ಉದ್ದದ ತಡೆಗೋಡೆ ನಿರ್ಮಾಣಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿದೆ ಎಂದು ಅವರು ತಿಳಿಸಿದರು.

ಜ ದೇಶೀಯ ವೈದ್ಯರಿಲ್ಲಾ ಅದಷ್ಟು ಬೇಗನೇ ರಿಜಿಸ್ಟರ್ ಆಗಬೇಕು ೩ ಸರಕಾರದವರು ಮಾಡಿರುವ ಹೊಸ ನ್ಯೂಲು ಈ ಸೂದಲು ಡಿ। ದೋರ್ಜಿ ವ ತ್ಯು ಎಂಬ ನಿಸಿ ಪಾಲಿಟಿಗಳಲ್ಲಿ ಕೆಲಸ ಮಾಡುವವರಿಗೆ ಅನ್ವಯ ಸರಾಗುವುದಿಲ್ಲ ೧೯೩೮ನೇ ಫೆಬ್ರವರಿ ೧೫ನೇ ಈ ಅಧಿಕಾರಿಗಳು ರಿಜಿಸ್ಟ್ರಿ ಮಾಡಿಕೊಳ್ಳಬೇಕೆಂಬ ಆದೇಶವನ್ನು ಇನ್ನು ೩ ವರ್ಷ ದ ಎಂದು ನಿಸಿಬೇಕು ೪ ಈ ದೇಶೀಯ ವೈದ್ಯ ಸಮಿತಿಯನ್ನು ಸರಕಾರವು ಮಂಜೂರು ಮಾಡಿರುವುದಲ್ಲದೆ ವೈದ್ಯಶಾಲೆಯಲ್ಲಿ ಕಲಿಯುವವರಿಗೆ ರಿಜಿಸ್ಟ್ರಿ ಮಾಡಿಕೊಳ್ಳಲು ಸರ್ಟಿಫಿಕೇಟನ್ನು ಕೊಡುವ ಅಧಿಕಾರವನ್ನು ಸರಕಾರವು ಈ ಸಮಿತಿಗೆ ದಯೆಪಾಲಿಸಬೇಕು ೪ ಬಿ ತರಗತಿಯಲ್ಲಿ ರಿಜಿಸ್ಟ್ರಿ ಆಗುವವರು ಮದ್ರಾಸಿನ ಇಂಡಿಯನ್ ಸ್ಕೂಲ್ ಓಫ್ ಮೆಡಿಸಿನ್ ಶಾಲೆಯಲ್ಲಿ ೩ ತಿಂಗಳು ತರಬೇತಿಯನ್ನು ಹೊಂದಿದರೆ ಇ ವ ಬೆಲ್ಲಂಯಲ್ಲಿಯ ಸರಕಾರಿ ಆಸ್ಪತ್ರೆಯಲ್ಲಿ ೧ ವರ್ಷ ಸರ್ವಿಸ್ ಮಾಡಿದರೆ ಎ ತರಗತಿಯವರನ್ನಾಗಿ ರಿಜಿಸ್ಟರ್ ಮಾಡಬೇಕು ೫ ಸರಕಾರದವರು ಸ್ಥಾಪಿಸಿರುವ ಸೆಂಟ್ರಲ್ ಬೋರ್ಡಿನ ಸದಸ್ಯರನ್ನು ಜಲ್ದಿಗೆ ಬ್ಯರೆಂಬ ಜಿಲ್ಲಾ ನಿಯಮವನ್ನು ಆನುಸರಿಸಿ ಸರಕಾರವು ನಿಯಮಿಸಬೇಕು ೬ ಎ ತರಗತಿಯಲ್ಲಿ ರಿಜಿಸ್ಟರ್ ಆದವರಿಗೆ ಕಡಿಮೆ ಎಂದರೆ ಎಲ್ ಎಂ ಪಿ ಗಳ ಸಂಖ್ಯೆಯನ್ನೂ ಕೊಡಬೇಕು.

ಇದಾದ ಮೇಲೆ ಡಿ। ಎಂ ಪಿ ಶಾಸ್ತ್ರಿಗಳು ಅಧ್ಯಕ್ಷೆ ರಾಗಿಯೂ ಡಿ। ಕೆ ಎಂ ಶೆಟ್ರು ಉಪಾಧ್ಯಕ್ಷರಾಗಿಯೂ, ಡಿ।ಗಳಾದ ಬಿ ಆರ್ ಹರಿದಾಸರೂ ಕೆ ನಾರಾಯಣ ಛಂಡಾರರು (L.I.M) ಇವರು ಜೊತೆಕಾರ್ಯದರ್ಶಿಗಳಾಗಿಯೂ, ಡಿ।ಗಳಾದ ಎಂ ಕೆ ವೈದ್ಯರು ಕರ್ನಾಟ್ಯಾಗಳಾಗಿಯೂ ೧೦ ಜನರು ಕಾರ್ಯಕಾರಿಮಂಡಲಿಯ ಸದಸ್ಯರಾಗಿಯೂ ಆರಿಸಲ್ಪಟ್ಟು ಸಭೆಯು ವಿಸರ್ಜನೆಯಾಯಿತು.

ಆಪ್ತರು:—ಇದೇ ಬರುವ ತಾ. ೨೦ನೇ ರವಿವಾರ ಕಾಮ ಘಂಟೆ ೬ಕ್ಕೆ ಇಲ್ಲಿಯ 'ಶ್ರೀ ಮಹಾಲಿಂಗೇಶ್ವರ ಸೇವಾ' ಸಭ್ಯರಿಯಲ್ಲಿ ಸದರಿ ಜೀವಸಮಿತಿಯ ಆಜೀವಸದಸ್ಯರಾದ ಶ್ರೀಯುತ ಎ. ತಿಮ್ಮಪ್ಪ ಪೂಂಜರ ತೃತೀಯ ಪುತ್ರಿಯ ಶುಭವಿವಾಹವು ನಡೆಯಲಿದ್ದು ಆಪ್ತೇಷ್ಟರು ಆಗಮಿಸಿ ಆಶೀರ್ವದಿಸಬೇಕೆಂದು ಕೋರಲಾಗಿದೆ.

ತಾಲೂಕು ಕುಗ್ರಾಮಗಳಿಂದ

ಕಾರ್ಕಳ—ತಾ ೧೫-೧೨-೧೯೩೮ ದಿನ ಸಾಯಂಕಾಲ ೫ ಗಂಟೆಯವರೆಗೆ ಇಲ್ಲಿಯ ಟೌನ್‌ಹಾಲಿನಲ್ಲಿ ಸೇವಾ ಪ್ರೇಮಿಗಳ ಒಂದು ಸಭೆಯು ಜರುಗಲಿದ್ದು, ಪ್ರಾಜ್ಞರಾದ ಸ್ವಾ. ರಾಮಕಾಮತ್‌ರವರು ಶ್ರೀ ಭಗವದ್ಗೀತೆಯ ಮಹತ್ವ ಮತ್ತು ಅದರ ಅಧ್ಯಯನದ ಆವಶ್ಯಕತೆಯ ಕುರಿತು ಒಂದು ಗಂಟೆಯ ವರೆಗೆ ಒಲವುಭರಿತವಾಗಿ ಭಾಷಣವನ್ನು ಕೆಲ್ಲಿರು.

ಜ್ಞಾನವೃದ್ಧರೂ ವಯೋವೃದ್ಧರೂ ಆದ ಪಕ್ಕಲ ಶ್ರೀಯುತ ಲಕ್ಷ್ಮಣಗೌಡರವರು ಶ್ರೀಯುತ ಬಿ. ಗಣಪಯ್ಯ, ಸಿ. ಪುಂಜಾಲಿನಾಥ ಶಾಸ್ತ್ರಿಯವರ ಮೊದಲಾದವರ ಪ್ರೋತ್ಸಾಹಗಳಿಂದ ಗೀತಾಶಾಸ್ತ್ರಾಸಕ್ತರನ್ನು ತಿರಿದಿದ್ದು, ಶ್ರೀ ಅದಿಕ್ಕಳ ಪಾಲಿಂದ ೫ ಗಂಟೆಯ ಕಡೆ ಪಾಠಪ್ರವಚನವು ನಡೆಯುವುದಾಗಿ ನಿಶ್ಚಯವಾಗಿ ಕಾರ್ಯಾರಂಭವಾಗಿರುವುದು. ಎಲ್ಲರಿಗೂ ಸುಸ್ವಾಗತವಿದೆ.

ತಾ. ೧೫ರಲ್ಲಿ ನಡೆದ ಧರ್ಮಸ್ಥಳ ಕಾಲೇಜು ಜಿಲ್ಲಾ ಕಾರ್ಕಳ ಸೆಂಟರಿನ ಉದ್ಘಾಟ್ಯಾಯರ್ ಮಹಿಳಾ ಸಭೆಯು ಶ್ರೀ ಕಟಪಾಡಿ ಶ್ರೀಪಡಾನ ತಿಮ್ಮಿಯವರ ಅಧ್ಯಕ್ಷತೆಯಲ್ಲಿ ಜರಗಿತು. ಮಾಮೂಲು ಪ್ರಕಾರ ಶ್ರೀ ಡೊಂಬ ಹೆಗ್ಡೆರ ಮನ್ದಾರ ಹಾಡಿ, ಶಾಲಾವಿಶ್ಯಳ ಕೋಲಾಟ ಮೊದಲಾದುವು ಸಾಂಗವಾಗಿ ಜರುಗಿದ್ದವು. ಮುಂದಿನ ಸಭೆಯನ್ನು ಶ್ರೀ। ಎಂ ಸರ್ವೋತ್ತಮ ಶಾಮಂತ್, ಬಿ ಎ ಎಲ್ ಬಿ ಯವರು ಆವಂತಿಸಿದ ಮೇರೆಗೆ ಫೆಬ್ರವರಿ ತಿಂಗಳ ತಾ ೧೨ನೇ ದಿನ ಮಧ್ಯಾಹ್ನ ಶ್ರೀ ವೆಂಕಟರಮಣ ಹಾ। ಎ। ಶಾಲೆಯಲ್ಲಿ ಜರಗಿಸುವ ದೆಂದು ನಿರ್ಣಯವಾಯಿತು

ತಾ ೧೪ರಲ್ಲಿ ಸಂಜೆ ವಿಕ್ಟೋರಿಯಾ ಜುಬಿಲಿ ಯೂನಿಯನ್ ಕ್ಲಬ್ಬಿನಲ್ಲಿ ವಕೀಲ ಶ್ರೀ ಲಕ್ಷ್ಮಣ ಕುಡುವರ ಅಧ್ಯಕ್ಷತೆಯಲ್ಲಿ ಒಂದು ಸಾರ್ವಜನಿಕ ಸಭೆಯು ಜರಗಿ, ವಕೀಲ ರಾ। ಹುಗೇಜ ಸಾಹೇಬ್ ಇವರು ಇಸ್ಲಾಂ ಧರ್ಮದಲ್ಲಿ ಸ್ತ್ರೀಯರ ಸ್ಥಾನವೆಂಬ ಕುರಿತು ಅರ್ಥಗರ್ಭಿತವಾದ ಭಾಷಣವನ್ನು ಕೊಟ್ಟರು ಮುಂದಿನ ಅದಿಕ್ಕವಾರ ಇದೇ ಸ್ಥಳ ಮತ್ತು ಸಮಯಕ್ಕೆ ಇಂಡಿಯಾ ಶ್ರೀಯುತ ವಕೀಲ ಸದಾಶಿವಭಟ್ಟರವರು ಗಾಂಧಿಜಿಯವರ ಹರಿಜನೋದ್ಧಾರಕಾರ್ಯ ಮತ್ತು ಪುನರುಜ್ಜೀವನ ಕಾರ್ಯದಲ್ಲಿ ಸರ್ವ ಸಾಧಾರಣ ಜನತೆಯು ಮಾಡಬೇಕಾದಾದ ಸಹಕಾರಿಂದ ಕುರಿತು ಮುಖ್ಯವಾಗಿ ಮಾತನಾಡುವರು ಪ್ರಶ್ನೋತ್ತರ ಗಳು ಇರುವುವು ಎಲ್ಲರಿಗೂ ಸುಸ್ವಾಗತವಿದೆ.

ಉಳ್ಳಿಯ ಸೇಟಿಯಲ್ಲಿ ಈ ವರೆಗೂ ಇಲ್ಲದ ಒಂದು ಶಿವಪ್ಪನಾಯ್ಕರ ಊಟದ ಹೊಟೇಲು ಶ್ರೀ ಮಾರ್ಗ ಸ್ಥಿತಿ ನೆಲ್ಲಿ (ಕೆಳ್ಕಾರು ಮಾರ್ಗದಲ್ಲಿ) ತೆರೆಯಲ್ಪಟ್ಟಿರುವುದು

ಕಡಬ—ಇಲ್ಲಿ ಹೋಟೆಲ್ ಫಂಡ್ ಆಸ್ಪತ್ರೆಯು ತೆರೆಯಲ್ಪಟ್ಟಿರುವುದಿಂದ ಡಾಕ್ಟರರಾಗಿ ಕೆಸಮಮಾಡುತ್ತಿದ್ದು, ಜನಪ್ರೀತರಾದ ಶ್ರೀಮಾನ್ ಎಂ. ಎನ್. ಆಳೇಕಲರು ಇಲ್ಲಿಂದ ವರ್ಗವಾಗಿ ಬಾಂಕೂರಿಗೆ ಹೋಗುವ ಸಂದರ್ಭ ಅವರಿಗೆ ವಿದಾಯಪತ್ರವನ್ನೀಯಲು ಒಂದು ಸಾರ್ವಜನಿಕ ಸಭೆಯು ತಾ ೫-೧೦-೩೩ನೇ ಸಂಜೆ ಗಂಟೆ ೪ಕ್ಕೆ ಬಂಟ್ರ ಪಟೇಲ್ ರಾ ಕೊರಗಪ್ಪ ರೈಗಳವರ ಅಧ್ಯಕ್ಷತೆಯಲ್ಲಿ ನೆರೆಯಿತು ಕಾಫಿ ಫಲಾಹಾರವಾಗಿ, ಹೋಟೆಲ ತೆರೆಯಲಾಯಿತು ಆ ಮೇಲೆ ಶ್ರೀಯುತರಿಗೊಂದು ಬೆಳ್ಳಿಯ ಕಪ್ಪು ಕೃತಜ್ಞತಾ ಪೂರ್ವಕವಾಗಿ ಊರವರಿಂದ ಕೊಡಲ್ಪಟ್ಟಿತು ಆಲ್ಲದೆ ಇಲ್ಲಿಯ ಆಸ್ಪತ್ರೆಗೊಂದು ಫೀರೋಗಿಗಳ ವಾರ್ಡನ್ನು ಕಟ್ಟಿಸಬೇಕೆಂಬ ಶ್ರೀಯುತರ ಆತೆಯನ್ನು ಈಡೇರಿಸಲು ಸಭಿಕರಿಂದ ರೂ ೩೦೦ಕ್ಕೆ ಮಿಕ್ಕಿ ವಾಗ್ದಾನ ಮಾಡಲ್ಪಟ್ಟು, ಕಾರ್ಯಕ್ಕೆ ಶೀಘ್ರದಲ್ಲೇ ಕೈ ಹಚ್ಚಲು ಬೇರೆ ಬೇರೆ ಗ್ರಾಮಗಳ ಪ್ರತಿನಿಧಿಗಳಿಂದ ಕೂಡಿದ ಒಂದು ಕಲುಬಿಯನ್ನು ಸ್ಥಾಪನೆಯಾಯಿತು ಕಟ್ಟಿ ಸಲ್ಪಡುವ ವಾರ್ಡು 'ಆಳೇಕಲ್‌ವಾರ್ಡು' ಎಂದು ತರೆಯಲ್ಪಡಬೇಕೆಂದು ಸಭೆ ನಿರ್ಣಯವಾಯಿತು. ಜಲವು ಸಭಿಕರ ಮತ್ತು ಶ್ರೀಯುತರ ಭಾಷಣಗಳಾಗಿ, ವಂದನೋಕ್ತಿಯ ನಂತರ ಸಭೆ ಕೊನೆಗೊಂಡಿತು. ಸಭೆಗೆ ಸುಮ್ಮು ಮುನ್ನೂರಿನ ಜನ್ಮರು ಸೇರಿದ್ದರು. ಗ್ರಾಮಗಳ ಮುಂಬಂಗರು ಕೂಡಿ ೧೩೦ಕ್ಕೆ ಮಿಕ್ಕಿ ಜನರು ನೆರೆದಿದ್ದರು.

ತಾ. ೩೦ ಬೆಳಿಗ್ಗೆ ಸ್ಥಳೀಕ ಚಿತ್ಕಲಂಜನ ಸೋಕಿಯಲ್ಲಿ ಶ್ರೀಮತಿಯರು ಸಭಿಕೂಡಿ ಶ್ರೀಯುತ ಆಳೇಕಲರನ್ನು ಕಾಫಿ ಫಲಾಹಾರಿಗಳಿಂದ ಸತ್ಕರಿಸಿ, ಬೀಳ್ಕೊಟ್ಟರು.

ಆಮಂತ್ರಣ ಮೇರೆಗೆ ನಾ। ರಾ। ಶಾ। ಎ ರಾಮಚಂದ್ರ ಜೆಡ್ಡಿಯವರ ಅಧ್ಯಕ್ಷತೆಯಲ್ಲಿ ಒಂದು ಭಜನಾ ಮಂಡಳಿಯು ತೆರೆಯಲ್ಪಡುವುದು.

ಅಮೇರಿಕಾದ ಕಲಾಶಾಲೆಗಳಲ್ಲಿ ಸ್ತ್ರೀ ಶಿಕ್ಷಣ

ಅಮೇರಿಕಾದ ಸಂಯುಕ್ತ ಸಂಸ್ಥಾನಗಳಲ್ಲಿರುವ ಅನೇಕ ಕಲಾಶಾಲೆಗಳಲ್ಲಿಯೂ ಸಹ ಶಿಕ್ಷಣದವುಗಳೇ ಇಗವೆ. ಈ ವಿದ್ಯಾಶಾಲೆಗಳಲ್ಲಿ ಹುಡುಗಿಯರ ಸಂಖ್ಯೆಯು ಪ್ರತಿವರ್ಷವೂ ಹೆಚ್ಚುತ್ತಲೇ ಇರುವುದರಿಂದ ಮುಮ್ಮನು ದಡೇಯ ಬಾಲಿಕೆಯರಿಗೆ ಕಲಾಶಾಲೆಯ ವಿದ್ಯಾಜ್ಞನೆಯು ದೊರೆಯುವುದಕ್ಕೆ ಕುಂದುಬರಾಗುವುದೋ ಎಂಬ ಶಂಕೆಯು ತಲೆದೋರಬಹುದು. ಅವರಲ್ಲಿ ಅತ್ಯಂತ ಆಸಕ್ತಿಯೂ ಆಸೆಯೂ ಇರುವ ಹುಡುಗಿಯರಿಗೆ ಕಲಾಶಾಲೆಯಲ್ಲಿ ಜಾಸನೇವೆಗೆ ಅತ್ಯುತ್ತಮವಾದ ಶಿಕ್ಷಣವು ದೊರೆಯುವುದು. ಕಲಾಶಾಲೆಯ ವಿದ್ಯೆಯಿಂದ ಸಂಪಾದನಾ ಶಕ್ತಿಯು ವೃದ್ಧಿಯಾಗುವುದೊಂದೇ ಅಲ್ಲದೆ ಉತ್ತಮ ತರದ ಸ್ತ್ರೀಯರಾಗುವುದಕ್ಕೂ, ಜೀವನಾನಂದಲ್ಲೂ ಸಂಭವಿಸಬಹುದಾದ ಎಂತಹ ಕಠಿಣ ಪ್ರಸಂಗವನ್ನೂ ಎದುರಿಸಲಿಕ್ಕೂ, ವ್ಯಾಪಾರ ಕೈಗಾರಿಕೆಗಳಲ್ಲಿ ಚಮತ್ಕಾರವನ್ನೊದಗಿಸಿಕೊಳ್ಳುವುದಕ್ಕೂ ಶೀಘ್ರವಾದ ನಾತೆಯರೂ ಗೃಹಿಣಿಯರೂ ಆಗುವುದಕ್ಕೂ ಸಹಕಾರಿಯಾದುದೆಂದು ಅಲ್ಲಿ ಸ್ತ್ರೀಯರೆಲ್ಲರೂ ನಂಬಿರುವರು.

ಆ ದೇಶದಲ್ಲಿ ನುರಿತ ಸ್ತ್ರೀಯರೇ ವಿಶೇಷವಾಗಿ ಬೇಕಾಗಿರುವರು. ಗೃಹಕೃತ್ಯಗಳನ್ನೇ ನೋಡಿಕೊಳ್ಳುವುದಕ್ಕೂ ಕಾಫಿ ಮತ್ತು ಇತರ ಊಟದ ಅಥವಾ ಫಲಾಹಾರ ಮಂದಿರಗಳಲ್ಲಿಯ ಯಜಮಾನಿಯರಾಗುವುದಕ್ಕೂ, ವ್ಯಾಪಾರೋದ್ಯಮಗಳಲ್ಲಿ ಆಲೋಚನೆಗಳನ್ನು ಕೊಡುವುದಕ್ಕೂ, ವರ್ತಮಾನ ಪತ್ರಿಕೆಗಳನ್ನು ವಿಚಕ್ಷಣೆಯಿಂದ ನಡಿಸಲಿಕ್ಕೂ ವಿದ್ಯಾವತಿಯರಾದ ಸ್ತ್ರೀಯರಿಗೇ ಹೆಚ್ಚು ಪ್ರಾತಸ್ಯವುಂಟಾಗಿ ಅವರೇ ಆರಿಸಲ್ಪಡುತ್ತಿರುವರು. ಆದರೂ ಬೇಕಾದಷ್ಟು ಮಂದಿ ನುರಿತ ಸ್ತ್ರೀಯರು ಸಿಕ್ಕುತ್ತಿರದೆ ಇಲ್ಲಿ. ಅದುದರಿಂದ ಇಂಥವರನ್ನು ತಯಾರಿಸುವುದಕ್ಕಾಗಿ ವಿಶ್ವವಿದ್ಯಾಲಯದ ಕಲಾಶಾಲೆಗಳಲ್ಲಿ ಗೃಹಕಲಾಶಿಕ್ಷಣ ತರಗತಿಗಳನ್ನು ಅತ್ಯಂತ ಸಮರ್ಥರಾದ ಉಪಾಧ್ಯಾಯರನ್ನೊಳಗೊಂಡವುಂದ ಏರ್ಪಡಿಸಿರುವರು. ವಿಜ್ಞಾನಶಾಸ್ತ್ರ, ಅರ್ಥಶಾಸ್ತ್ರ ರಾಜಕಾರಣಶಾಸ್ತ್ರಗಳು ಎಷ್ಟರ ಮಟ್ಟಿಗೆ ವಿಶ್ವವಿದ್ಯಾಲಯಗಳಲ್ಲಿ ಪ್ರಾತಸ್ಯವನ್ನು ಪಡೆದಿರುವುವೋ ಅಷ್ಟೇ ಪ್ರಸಿದ್ಧಿ ಗೌರವಗಳನ್ನು ಈ ಗೃಹಕಲಾಶಿಕ್ಷಣ ಶಾಖೆಯೂ ಪಡೆದಿರುವುದು. ಸ್ತ್ರೀಯರು ಈ ಸಂಬಂಧವಾಗಿ ನಾನಾ ಭಗೆಯ ಶಾಖೆಗಳಲ್ಲಿ ದಕ್ಷತೆಯನ್ನು ಸಂಪಾದಿಸುವುದಕ್ಕಾಗಿಯೇ ಕಲಾಶಾಲೆಗಳನ್ನು ಸೇರುವರು. ವೈದ್ಯಶಾಸ್ತ್ರದಂತವೈದ್ಯಗಳನ್ನು ತರುಣಿಯರು ವಿಶೇಷವಾಗಿ ಅಭ್ಯಸಿಸುವರು. ಕೆಲವರು ಮಾತ್ರ 'ಲಾ' ಅಥವಾ ಕಾಯದೆಗಳನ್ನೂ ಲಲಿತಕಲೆ ಶಿಲ್ಪ ಶಾಸ್ತ್ರಗಳನ್ನೂ ವ್ಯಾಸಂಗಮಾಡಲು ಹೋಗುತ್ತಾರೆ.

ಕಲಾಶಾಲೆಗಳಲ್ಲಿ ಮುಖ್ಯವಾಗಿ 'ಗೃಹ ಕಲಾಭಾಗವನ್ನು ಹೆಚ್ಚಾಗಿ ಮಂದಿಯವರು ಓದುವುದು. ಈ ಶಾಖೆಗಳಲ್ಲಿಯೇ ಕೇವಲ ವಿದ್ಯಾವಂತರಾದ ಉಪಾಧ್ಯಾಯರೂ, ಉತ್ತಮವಾದ ಸಲಕರಣೆಗಳೂ ಇರುವುದರಿಂದ ವಿದ್ಯಾರ್ಥಿನಿಯರೂ ಅಧಿಕವಾಗಿರುವರು.

ಅಮೇರಿಕಾ ದೇಶದ ಪಬ್ಲಿಸ್ ನಗರದಲ್ಲಿರುವ ನ್ಯೂಸಾಯ ಮತ್ತು ಯಾಂತ್ರಿಕ ಕಲೆಯ ಕಲಾಶಾಲೆಯು ಪ್ರಸಿದ್ಧವಾದುದು. ಇದರಲ್ಲಿ ಅತ್ಯಂತ ಶ್ರೇಷ್ಠವೆನಿಸಿಕೊಂಡಿರುವ 'ಗೃಹಕಲಾ ಶಿಕ್ಷಣ' ಶಾಖೆಯೊಂದಿರುವುದು. ಇದಕ್ಕಿಂತಲೂ ಉತ್ತಮವಾದ ಕಲಾಶಾಲೆಯೇ ಇಲ್ಲವೆಂದು ಅಲ್ಲಿನ ಸಂಸ್ಥಾನದ ಬಾಲಕಿಯರ ಅಧಿಸ್ಯಾಯ; ಅಲ್ಲಿನ ಶಿಕ್ಷಣದಲ್ಲಿ ಉತ್ಕೃಷ್ಟ ಕ್ರಮಗಳೂ ಆಗವೆ.

Established,] [1900.

ಅತ್ಯುತ್ತಮವಾದ ಪಕ್ಕಾಬಣ್ಣದ ಸರ್ವಾಂಗಸುಂದರ ಶೀರೆಗಳು.

ಬೊಂಬೇ ಫ್ಯಾಶನ್ ವಾರ್ ಕಂಪನಿ ಆಫ್ ಟು ಡೇಟು ಶೀರೆಗಳು, ೧ಕ್ಕೆ ರೂ. ೪—೪—೦.

ಪೂನಾ ಫ್ಯಾಶನ್ ಫ್ಯಾನ್ಸಿ ಕರಗಿನ ಸ್ಯಾಶನೆಬಲ್ ಶೀರೆಗಳು ವಾರ್ಡ್‌ರೋಬ್ ರೂ. ೫-೦-೦.

ಇದರ ಜೊತೆಗು ಜರತಾರೀ ಅಂಚು ಮತ್ತು ಜರತಾರೀ ಕೆರಗಿನ ಹೊಸ ಹೊಸ ಫಾಡೀ ಶೀರೆಗಳು ದರ ರೂ. ೧೦೦೦ ದಿಂದ ೫೦೦ ವರೆಗೆ ಸಿಗುವುವು.

ಮ್ಯಾಲ್ ವಿ. ಪಿ. ಮೂಲಕ ಕಳುಹಿಸಲ್ಪಡುವುದು. ಪೋಸ್ಟೇಜು ಮತ್ತು ಪ್ಯಾಕಿಂಗ್ ಬಾಬ್ತು ಪ್ರತ್ಯೇಕ. ಸ್ಯಾಂಪಲ್ ತುಂಡುಗಳು ಕಳುಹಿಸಲಿಕ್ಕೆ ಬರುವಂತಿಲ್ಲ.

Tel 'Honesty' D. K. Dhakappa Bros., Cloth Merchants, P. O. Sirsi Dist., N. Kanara.

LOOK SHARP! LOOK AHEAD!

Murdeshwar's Banking Institute.

Pioneer Institute on the West Coast.

Opens out Careers for Business men, Graduates, Under-graduates, and S. S. L. C.'s and also for those who have not passed any University examination.

Coaches students for the Specialised Banking Courses (C. A. I. B. & C. A. I. I. B.) and also for Accountancy; Secretarial, and Insurance Courses (L. A. A., A. C. R. A., F. C. R. A., F. I. S. A., A. C. I. I., etc.)

Classes for the Cambridge School Certificate (Senior Cambridge) Examination for 1935 and for the Bombay Advocates Examination are also held.

Ladies are also admitted.

Enrol yourself NOW. Classes are in full swing. Expert tuition (Oral or Postal) by well-qualified and experienced Lecturers.

FEES VERY MODERATE.

For further particulars apply to:—

D. R. Murdeshwar,
Dip. Econ; F. R. Econ; S. (Lond.)
Principal.
Ganapathy High School Street,
Mangalore.

The Canara Public Conveyance Company, Ltd., Mangalore.

WE TAKE UTMOST CARE OF PASSENGERS.

Read the following letter:—

Modern Hindu Hotel,
Calicut, 17—6 1934.

Dear Sir,

We wish to thank you for all that you did for us to make our stay at Mangalore comfortable. It is extremely nice of you to have looked after us as you did.

Yours faithfully,
(Sd.) **A. V. Ramaswami.**

The same service is offered to all. We call for reports from passengers, if they have failed to receive similar attention and assure to take prompt action to see that inconvenience is not repeated.

Chikmagalur Public Conveyance Motor Service, Chikmagalur.

ಚಿಕ್ಕಮಗಳೂರು ಪಬ್ಲಿಕ್ ಕನ್ವೆಯನ್ಸ್ ಮೋಟರ್ ಸರ್ವಿಸ್.

ಚಿಕ್ಕಮಗಳೂರು

ಮುಂಬಾಯಿಯಿಂದ – ಮಂಗಳೂರಿಗೆ.
ಮಂಗಳೂರಿನಿಂದ – ಮುಂಬಾಯಿಗೆ.

ಅಲ್ಲದೆ

ಹುಬ್ಬಳ್ಳಿ, ಧಾರವಾಡ, ಗೋವಾ, ಮುಂಬಾಯಿ ಮತ್ತು ದಕ್ಷಿಣ ಕನ್ನಡ ಜಿಲ್ಲೆಯ ಎಲ್ಲಾ ಭಾಗಗಳಿಗೆ ಪ್ರಯಾಣ ನಡಿಸಲಿಕ್ಕೆ
ಮಂಗಳೂರು – ಕಡೂರು ಹಾದಿಗಿಂತ ಉತ್ತಮ ಬೇರೆ ಹಾದಿಯಿಲ್ಲ!

ಹೊಸ ಬಸ್ಸುಗಳು. ಅನುಕೂಲ ಪ್ರಯಾಣ ಸೌಕರ್ಯಗಳು

ಕಡೂರು ಜಿಲ್ಲೆಯೊಳಗಿನ ಎಲ್ಲಾ ಕಾಫಿ ತೋಟಗಳಿಗೆ
ಕೂಲಿಕಾರರನ್ನು ತರಲಿಕ್ಕೂ ಅಲ್ಲಿಂದ ಕೊಂಡುಹೋಗಲಿಕ್ಕೂ ನಾವು ಎಲ್ಲಾ ತರದ ಸಹಾಯವನ್ನೂ ಕೊಡುತ್ತೇವೆ

ಚಿಕ್ಕಮಗಳೂರಿನಿಂದ – ಶಿವಮೊಗ್ಗಕ್ಕೆ, ಬೇರೂರಿಗೆ, ಕಡೂರಿಗೆ.
– ಮೂಡಗೆರೆಗೆ, ಸಕಲೇಶಪುರಕ್ಕೆ.
–ಮಂಗಳೂರಿಗೆ, ಮೂಡಬಿದ್ರೆಗೆ, ಪುತ್ತೂರಿಗೆ, ಮಲ್ಪೆಗೆ.
—ಧರ್ಮಸ್ಥಳಕ್ಕೆ, ನೇಣೂರಿಂಗೆ, ಸುಬ್ರಹ್ಮಣ್ಯಕ್ಕೆ.

ವಿಶಾಯೂಸದ ಪ್ರಯಾಣ! ಉತ್ಸಾಹದ ಸೌಕರ್ಯ

ಬೇಕಾದ ನಮೂನೆಗೆ ಇಮ್ಮಲಭೇಸಿಸಿ ಬರೆದು ತರಿಸುಕೊಳ್ಳಿರಿ.

(ಅ ಟೆಲಿಗ್ರಾಫ್ ಸಂವಾದದಾತರಿಂದ)

ಹಿಟ್ಲರ್ ಸರ್ಕಾರವು ಯುದ್ಧಕ್ಕೆ ಬೇಕಾದ ಸಿದ್ಧತೆಗಳನ್ನು ಮಾಡುತ್ತಿರುವುದರಲ್ಲಿ ಜರ್ಮನಿಯ ಮತ್ತು ಪ್ರಪಂಚದ ಮಿತ್ರರಾಷ್ಟ್ರಗಳನ್ನು ಮುಂಬರಿದರು. ಜೆಕ್ ರಾಷ್ಟ್ರವು ಸಮಾಧಾನವನ್ನು ಸರ್ವ ತೋಮುಖದಿಂದ ಸರಿದಿರುವುದಕ್ಕೆ ಹರಿದಿದೆ.

ಸೈನ್ಯ ತಿಟ್ಟಣಕ್ಕೆ ಪ್ರಥಮಸ್ಥಾನ.

ಯುದ್ಧವು ತಲೆದೋರಿದರೆ ಮನುಷ್ಯನು ಮಹುಷ್ಯನೆಂತಾಗಬೇಕು. ಯುವಕರೆಲ್ಲ ಸೈನಿಕರಂತಿರಬೇಕೆಂದು ಜರ್ಮನಿಯ ಅಧಿಕಾರಿಗಳ ಮತ. ಸ್ವಾತಂತ್ರ್ಯದ ಕಾಲದಲ್ಲಿ ಜರ್ಮನಿಯು ಭರಿಯ ಸ್ಥಾನಾರ್ಜನೆಗಾಗಿ ಮಾತ್ರ ಹಾತೊರೆಯುತ್ತಿತ್ತು. ಆದರೆ ಈಗ ಅಲ್ಲಿ ಯುದ್ಧಕ್ಕೆ ಹೆದರುವ ಅಧ್ಯಾಸವನ್ನು ಕೈಬಿಡಲಾಗಿದೆ. ಶಾಂತಿಗಾಗಿ ಬಾಯಾರಿ ನಿಲ್ಲುವ ಕ್ರಮವು ದೂರವಾಗಿದೆ. ಯುದ್ಧದಲ್ಲಿ ಮೈತೊರಾದವರು ದುರದೃಷ್ಟಕಾಲಿಗಳೆಂಬೆಣಿಸಲ್ಪಡುತ್ತಿಲ್ಲ. ಅವರನ್ನು ವೀರಾಧವೀರರು—ರಾಷ್ಟ್ರಭೃತ್ತರು ಎಂದು ನಾಮಕರಣಮಾಡಲಾಗಿದೆ. ಯುವಕ ಜನಾಂಗವು ಇವರನ್ನೆಲ್ಲ ಪೂಜಿಸುವಂತೆ ಪ್ರೇರಣೆಯಾಗುತ್ತಿದೆ. ಮೃತರಾದವರ ಉದಾಹರಣೆಯನ್ನು ಯುವಕ ಜನಾಂಗವು ಅನುಸರಿಸುವಂತೆ ಉಪದೇಶವಾಗುತ್ತಲಿದೆ. ದೇಶವು ಪರರಾಷ್ಟ್ರಗಳಿಂದ ಮುತ್ತಿಗೆ ಹಾಕಲ್ಪಟ್ಟಿತೆಂದರೆ ದೇಶವನ್ನು ಸಂರಕ್ಷಿಸುವುದು ಯುವಕರ ಕರ್ತವ್ಯವೆಂದು ತಿಳಿಸಲಾಗಿದೆ. ಒಪ್ಪಂದ, ತರ್ಕ ನೊದಲಾದ ಶಾಂತತಾಭಾವ ಪ್ರದರ್ಶನದಿಂದ ದೇಶದಲ್ಲಿ ಶಾಂತಿಯನ್ನು ಪಡೆಯಲಾರದಾದುದರಿಂದ ದೇಶವನ್ನು ರಕ್ಷಿಸುವುದಕ್ಕಾಗಿ ಸಕಲರೂ ಸಿದ್ಧರಿರಬೇಕು. ಇದಕ್ಕಾಗಿಯೇ ಜರ್ಮನ್ ಸರ್ಕಾರವು ತಿಕ್ಷಣದಲ್ಲಿ ಪ್ರಥಮಸ್ಥಾನವನ್ನು ಅಂಗಸಾಧನೆಗೆ ಕೊಟ್ಟಿರುತ್ತಿದೆ.

ಅಂಗಸಾಧನೆಗೆ ಒತ್ತು ಕೊಟ್ಟ ಸ್ಥಳ.

ಜರ್ಮನಿಯು ವ್ಯಾಯಾಮಕ್ಕೆ ಸ್ವಸೌಖ್ಯವಲ್ಲಿ ಪ್ರಥಮ ಸ್ಥಾನಗಳಿಸಿದೆ; ಇದೀಗ ಈಗಲೆ ಅದರ ಧಾಮಿಲೆ. ಎಲ್ಲೆಲ್ಲಿಯೂ ನಾನಾ ವಿಧದ ವ್ಯಾಯಾಮಗಳು, ಸಂಘಾಟಗಳು. ಅಂಗಸಾಧನೆಯಲ್ಲಿ ಪ್ರಾಣತ್ಯಾಗದವರು ದರ್ಜನಿದೇಶದ ಪ್ರತಿಯೊಂದು ಚದರ ಮೈಲಿಗಲ್ಲಿ ಒಬರೂರಿರುವರು!

ಪ್ರಸಂಚದ ಯಾವ ದೇಶದ ಇತಿಹಾಸದಲ್ಲಿಯೂ ಗೋಚರಿಸದ—ದೇಹಾರೋಗ್ಯ ವರ್ಧಕ ಸಾಧಕ ಯತ್ನಗಳೆಂದು ಜರ್ಮನಿಯಲ್ಲಿ ಗೋಚರಿಸುತ್ತಿವೆ. ಈ ಬಗ್ಗೆ ಪ್ರಚಾರ ಕಾರ್ಯವೂ ಅವ್ಯಾಹತವಾಗಿ ನಡೆದೇ ಇದೆ.

ಕೆಲವು ವರ್ಷಗಳ ಹಿಂದೆ, ಜರ್ಮನಿಯು ಶಾರೀರಿಕ ಪುಷ್ಟಿಯಲ್ಲಿ ಬಲು ಹಿಂದುಳಿದಿತ್ತು. ಈಗ ಅಂಗಸಾಧನೆ ಸಂಸ್ಥೆಗಳಲ್ಲಿ ಹೆಸರು ದಾಖಲು ಮಾಡಿಸಿಕೊಂಡವರು ಸುಮಾರು ೭೦ ಲಕ್ಷ ಮಂದಿ ಇರುವರು.

ಜರ್ಮನಿಯಲ್ಲಿಂದು ಈ ಅಂಗಸಾಧನಾ ಚಟುವಟಿಕೆಗಳ ನೇತೃತ್ವವಾಗಿ ನೇಮಕವಾದವರು 'ನುಂತ್ರಿ' ಎಂಬ ಅಭಿಧಾನದ ಗೌರವ ಪದವಿಯುಳ್ಳವರೇ. ಇವರಿಗೆ ಮಂತ್ರಿ ಮಂಡಲದಲ್ಲೊಂದು ಸ್ಥಾನವಿದೆ. ಇವರ ಕೈಕೆಳಗೆ ಬೇರೆ ಬೇರೆ ವ್ಯಾಯಾಮ ಇಲಾಖೆಗಳಿವೆ. ಪ್ರತಿಯೊಂದು ಇಲಾಖೆಗೆ ಒಬ್ಬೊಬ್ಬ ಮುಖಂಡ ನಿರುವನು. ಇಂತಹ 'ಮುಖಂಡ'ರಿಗೆ ಸಂಬಳವಿಲ್ಲದಿರುವುದೊಂದು ವಿಶೇಷ. ಆದರೆ, ಸರ್ಕಾರದವರು ಇವರನ್ನು ಜುನಾಯಿಸಿ ನೇಮಿಸುವ ಕ್ರಮಲೇ ಇವರು ಆ ಸ್ಥಾನದಲ್ಲಿ ಜಾರ್ಜು ನಹಿಸಲೇಬೇಕು. ಸ್ಥಾನದ ಜವಾಬುದಾರಿ ತುಂಬ ಅನೇಕ ವೇಳೆ ಈ 'ಮುಖಂಡ'ರು ತಮ್ಮ ಸ್ವಂತ ಧಂಡಾರದಿಂದಲೂ ಹಣ ವಿಚ್ಚಮಾಡಿದು ದಿದೆ.

ಜರ್ಮನಿಯ ಬೇರೆ ಬೇರೆ ಕೇಂದ್ರಗಳಲ್ಲಿ ವ್ಯಾಯಾಮದ ಬಗ್ಗೆ ಆಟದರಂಗಗಳನ್ನೇರ್ಪಡಿಸಲಾಗಿದೆ. ಈ ಆಟದರಂಗಗಳು,—ಶ್ರೇಕ್ಷಕರು ನಿಂತುನೋಡುವುದಕ್ಕಲ್ಲ, ಆಡುವುದಕ್ಕಾಗಿಯೇ ಇವೆ. ಜರ್ಮನಿಯ ಪ್ರತಿಯೊಂದು ನಗರದಲ್ಲಿ ಇಂತಹ ಆಟದರಂಗವಿದೆ.

ಯಾವ ಜರ್ಮನನೂ ಎರಡು ಅಥವಾ ಮೂರಾಣೆಯ ನಾಮಮಾತ್ರವಾದ ಫೀಜನ್ನು ತೆತ್ತು ಉಪಯೋಗಿಸಿಕೊಳ್ಳಬಹುದು.



ಲಿಬರಲ್ ಫೆಡರೇಶನಿನ ಯಗುವು ದಂಗೆಯೆದ್ದುದನ್ನು ನೋಡಿ ಸರಕಾರವು ಡೊಮಿನಿಯನ್ ಸ್ಟೇಟಿನ ಹಾಲನ್ನು ಕೊಡಿಸಲು ಪ್ರಯತ್ನಿಸುತ್ತಿದೆ. ಹಿರಿಯ ಲಿಬರಲರು ಇದನ್ನು ಆನಂದದಿಂದ ನೋಡುತ್ತಿದ್ದಾರೆ.

ಮೈಸೂರಿನ ಹರದೇಶ ವ್ಯಾಪಾರ.

೧೯೩೪ಳ ಲಂಕೆಶಯರಿನ ಭಾಗ್ಯೋದಯದ ವರುಷ

ವಿಡಿನಿನ ನಿರ್ಗತ ವ್ಯಾಪಾರ.

೧೯೩೪—ಳಿಗೇ ವರ್ಷದ ವಿಡಿನ ವ್ಯಾಪಾರದ ಅಂಕಸಂಖ್ಯೆಗಳು ಉತ್ತೇಜಕವಾಗಿಲ್ಲ. ಮುಂಚಿನ ವರ್ಷಕ್ಕಿಂತ ವರಧಿಯು, ಅಲ್ಲಿಯ ಮುಖ್ಯ ವ್ಯಾಪಾರದಲ್ಲಿ ಸುಮಾರು ೬,೫೧, ೫೯೦ ರೂಪಾಯಿಗಳ ವ್ಯಾಪಾರವು ಕಡಮೆಯೊಡಂತೆ ತಿಳಿದು ಬರುತ್ತದೆ.ವಿದೇಶೀ ವ್ಯಾಪಾರವು ೩,೭೦,೯೨,೪೫೮ರಿಂದ ೭,೫೬,೦೬,೯೪೫ಕ್ಕೆ ಇಳಿಯಿತು. ಆದರೆ ಇಂಡಿಯದೊಡನೆ ವಿಡಿನ ವ್ಯಾಪಾರವು, ರೂ. ೧೫,೨೧,೫೪೦ರಿಂದ ರೂ. ೧೮,೪೪,೬೭೦ಕ್ಕೆ ಏರಿದೆ.

Canara Bank Ltd. City, Mangalore.
ಕೆನರಾ ಬ್ಯಾಂಕ್ ಲಿಮಿಟೆಡ್,
ಓಲ್ಡ್, ಮಂಗಳೂರು.

ನೋಟೀನು.

ಈ ಕೆಳಗೆ ಹೆಸರು ಕಾಣಿಸಿದವರು ಸದರೀ ಬೇಂಕಿನಿಂದ ಚಿನ್ನಾಭರಣಗಳ ಈಡಿನ ಮೇಲೆ ಸಡಿಪ್ಪಗೆಯಲಬಲಗಿನ್ನಾಗಲೀ ಆದರ ಬದ್ಧಿಯನ್ನಾಗಲೀ ವ್ಯಾಜಿಗೆ ಕೊಡದೆ ಇದ್ದರಿಂದ ಬೇಂಕಿನ ಕ್ರಮಗಳಿಗನುಸಾರವಾಗಿ ಸದರಿಯವರಿಗೆ ಕೊಟ್ಟ ಟಪ್ಪಾಲು ರಿಜಿಸ್ಟ್ರಿ ನೋಟೀಸನ್ನು ಅವರು ಪಡಕೊಳ್ಳುವರೆ ನಿರಾಕರಿಸಿರುವದರಿಂದ ಸದರಿಯವರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ:—

ಸದರೀ ಸಾಲಗಾರರು ಬೇಂಕಿಗೆ ಬಹಾ ಅಸಲು ಬಡ್ಡಿಹಣಗಳನ್ನು ೧೯೩೫ನೇ ಇಸವಿ ಜನವರಿ ತಾರೀಕು ೨೩ನೇ ಬುಧವಾರ ಮಧ್ಯಾಹ್ನ ೩ ಘಂಟೆ ವಳಗೆ ಬೇಂಕಿನಲ್ಲಿ ಕಟ್ಟಿ ಅವರು ಅಡವಿಟ್ಟ ನಗಗಳನ್ನು ಬಿಡಿಸಿಕೊಂಡು ಹೋಗುವರೆ ತಪ್ಪಿದ್ದಲ್ಲಿ ಇದೇ ೧೯೩೫ನೇ ಇಸವಿ ಜನವರಿ ತಾರೀಕು ೨೫ನೇ ಶುಕ್ರವಾರ ಮಧ್ಯಾಹ್ನ ೨ ಘಂಟೆಗೆ ಸದರಿ ಅಡವಿಟ್ಟ ನಗಗಳನ್ನು ಬೇಂಕಿನ ಡೊಂಗರಕೇರಿ ಆಫೀಸಿನಲ್ಲಿ ಬಹಿರಂಗವಾಗಿ ಹರಾಜು ಮಾಡಿ ಹುಟ್ಟಿದ ಹಣವನ್ನು ಸದರೀ ಸಾಲಕ್ಕೆ ಜಜಾಮಾಡಿ, ಉಳಿಕೆ ಬ್ಯಾಲೆನ್ಸ ನಮಗೂನಿಲಿನಲ್ಲಿ ಬಗ್ಗೆ ಸಾಲಗಾರರ ಮೇಲೆ ಅಲ್ಯಾದಾ ಸಿವಿಲ್ ದಾವಾ ನಡಿಸಲಾದೀತು.

ಲೋನ್ ನಂಬ್ರ 822/33. ಸಾಲಗಾರರ ಹೆಸರು ಯಂ. ಎ. ಸುವರ್ಣರು ಕೆಂಚಪ್ಪನವರ ಮಗ ಮಠೋಳಿಯಲ್ಲಿರುವವರು. ಸಾಲದ ಬ್ಯಾಲೆನ್ಸು 125; ಬಡ್ಡಿ ಮತ್ತು ಖರ್ಚು ಬಹಾದ್ದು 7-7-0.

ಮುಕ್ಕು ಈ ನೋಟೀಸಿನ ಖರ್ಚು ಸಹಾ ಬರಬೇಕು.

ಬೇಂಕಿನ ಆಫೀಸು
ತಾ. 15-1-1935 } M. Mukunda Kini,
Agent.

ನೋಟೀಸು.

ಕಾರ್ಕಳ ಡಿಸ್ಟ್ರಿಕ್ಟ್ ಮುನ್ಸೀಫ್ ಕೋರ್ಟಿನಲ್ಲಿ.

S. C. No. 821/1934.

ಕೊಗ್ಗ ನ್ಯಾಕಾ... ವಾದಿ

ಮತ್ತು

ಕೊಗ್ಗಂಣ ಗಡಿಯಾರಾ—ಪ್ರತಿವಾದಿ.

ಇವನೊಳಗೆ

ಸದ್ರಿ ದಾವೆಯ ವಾದಿಗೆ ಪ್ರತಿವಾದಿಯು ತಾರೀಕು 27-10-'31ರಲ್ಲಿ ರೂಪಾಯಿ 31ಕ್ಕೆ ಬರಕೊಟ್ಟ ಡಿಮಾಂಡ್ ಪ್ರೊಮಿಸರಿ ನೋಟಿನ ಅಸ್ಸಲ್ ಬಡ್ಡಿ ಖರ್ಚಿಗೆ ವಾದಿಯು ಸದ್ರಿ ಪ್ರತಿವಾದಿಯ ಮೇಲೆ ದಾಕ್ಲು ಮಾಡಿದ ಮೇಲ್ಕಂಡ ದಾವೆಯು ತಕ್ಕಿ ಬಗ್ಗೆ ಇದೇ 1935ನೇ ಇಸವಿ ಜನವರಿ ತಾ. 21ಕ್ಕೆ ಮುಂದರಿಸಿ ಇಡೋಣಾಗಿದೆ. ಸದ್ರಿ ದಿನ ಪೂರ್ವಾಹ್ನ 10 ಘಂಟೆ ಸಮಯಕ್ಕೆ ಸದ್ರಿ ಪ್ರತಿವಾದಿಯು ಮೇಲ್ಕಂಡ ಕೋರ್ಟು ಮುಂದೆ ಸ್ವತಹ ಯಾ ಒಬ್ಬ ವಕೀಲರ ಮುಖಾಂತರ ಹಾಜ್ರಾಗಿ ಕುದಾಹರಣೆ ದಾಕ್ಲು ಮಾಡದೆ ಹೋದರೆ ಅತನನ್ನು ಶಿವ್ಯಾ ನಾಡಿ ಅತನ ಗೈರು ಹಾದರಿಯಲ್ಲಿ ವಾದಿಯ ಗುಣಕ್ಕೆ ಡಿಕ್ರಿ ಕೋಡೋಣಾಗುವದು. ಎಂತ ಈ ಮೂಲಕ ಕೋರ್ಟು ಹುಕುಂ ಪ್ರಕಾರ ಪ್ರಕಟಿಸೋಣಾಗಿಯದೆ.

Karkala 8-1-1935 } K. Santhaya Kamath.
Pleader for Plaintiff.

ನೋಟೀಸು.

ಮಂಗಳೂರು ಶಹರಾ ಬೋಳೂರುಗ್ರಾಮದಲ್ಲಿರುವ ತಿಮ್ಮಪ್ಪ ಪೂಜಾರಿ ಮೊಮ್ಮಗ ಬಿ. ಧರ್ಮಣ್ಣನು ಈ ಮೂಲಕ ಸರ್ವರಿಗೂ ತಿಳಿಸುವುದೇನೆಂದರೆ:—

ನನ್ನ ಅಜ್ಜ ತಿಮ್ಮಪ್ಪ ಪೂಜಾರಿಯು ನಮ್ಮ ಕುಟುಂಬದ ಯಜಮಾನನಾಗಿದ್ದಾಗ್ಗೂ ಹೆಚ್ಚಿನ ವೈದ್ಯಾವಸ್ಥೆಯು ಮತ್ತು ಕಾಯಿಲೆಯ ದೆಸೆಯಿಂದ 1982ನೇ ಇಸವಿ ಲಗಾಯ್ತು ನನ್ನ ಕುಟುಂಬದ ಬಾಬ್ತು ಎಲ್ಲಾ ಆಸ್ತಿಯ ಆದೇಶವನ್ನು ಸದ್ರಿಯವರ ಒಪ್ಪಗೆಯಿಂದ ನಾನೇ ನೋಡಿಕೊಂಡು ಸದ್ರಿ ತಿಮ್ಮಪ್ಪ ಪೂಜಾರಿ ಬಗ್ಗೆ ರೀದಿಗಳನ್ನು ನನ್ನ ದಸ್ಕತು ನಿಶಾ ಕೊಡುತ್ತಾ ಬರುತ್ತಿದ್ದೆ.

ಕೆಲವು ದಿನಗಳ ಹಿಂದೆ ಸದ್ರಿ ತಿಮ್ಮಪ್ಪ ಪೂಜಾರಿಯು ನಮ್ಮ ಕುಟುಂಬದ ಮನೆಯಿಂದ ಹೊರಟು ಕೆಲವು ದಿನಗಳ ಹಿಂದೆ ಮುಳ್ಳಕಟ್ಟೆ ಮನೆಯಲ್ಲಿದ್ದಾಗ್ಗೆ ಬೋಳೂರಿನ ಮೂರು ನಾಲ್ಕು ಜನ ಗೃಹಸ್ಥರು ಬಂದು ನನ್ನು ಮನೆಯ ಸೊಸೆ ಮುಸಿಸಾಲಿಟಿಯವರು ದೀಪವನ್ನು ಇಡಿಸುವ ಬಗ್ಗೆ ಅರ್ಜಿ ಮಾಡುವರೆ ಸದ್ರಿ ತಿಮ್ಮಪ್ಪ ಪೂಜಾರಿಯು ದಸ್ಕತು ಪಡೆಯುವರೆ ನಾನು ಹೇಳಿದ್ದೇನೆಂದು ಸದ್ರಿಯವರನ್ನು ನಂಬಿಸಿ ನಂಜಿಸಿಯಿಂದ ಅವರ ಎಡಕೈಯ ಹೆಬ್ಬೆಟ್ಟಿನ ಗುರುತನ್ನು ಎರಡು ಕಾಗದಗಳಲ್ಲಿ ಪಡೆದುಕೊಂಡು ಹೋಗಿರುತ್ತಾರೆಂದು ನಾನು ಈಗ ಸದ್ರಿ ತಿಮ್ಮಪ್ಪ ಪೂಜಾರಿಯಿಂದ ತಿಳಿದು ಬರುತ್ತೇನೆ.

ದೀಪ ಇಡಿಸುವ ಬಗ್ಗೆ ಮುನಿಸಿಪಾಲಿಟಿಗೆ ಅರ್ಜಿ ಮಾಡಿದ್ದೂ ಇಲ್ಲ, ಮತ್ತು ನನ್ನ ಅಜ್ಜನ ಎಡ ಹೆಬ್ಬೆಟ್ಟಿನ ಗುರುತನ್ನು ಪಡೆದು ಕೊಳ್ಳಲಿಕ್ಕೆ ನಾನು ಬೇರೆಯವರ ಕೂಡಿ ಹೇಳಿದ್ದೂ ಇಲ್ಲ. ನಾನು ನನ್ನ ಕುಟುಂಬದ ಕೆಲವು ಒಕ್ಕಲುಗಳಿಗೆ ನಕೀಲರ ಮುಖಾಂತರ ತಿಮ್ಮಪ್ಪ ಪೂಜಾರಿ ಕಡೆಯಿಂದ ಕೆಲವು ನೋಟೀಸುಗಳನ್ನು ಕಳುಹಿಸಿರುತ್ತೇನೆ. ಆದ್ದರಿಂದ ನಮಗೆ ಸಲ್ಲತಕ್ಕ ಗೇಣಿಯನ್ನು ದಕ್ಕಿಸಿಕೊಳ್ಳುವ ಇರಾದೆಯಿಂದ ಸುಳ್ಳು ಕೆತಾಯಿಸಿ ರಚಿಸಿದ ನಗ್ಯೆರೆಯನ್ನು ತಯಾರಿಸುವ ದುರಾಲೋಚನೆಯಿಂದ ಈ ರೀತಿಯಲ್ಲಿ ತಿಮ್ಮಪ್ಪ ಪೂಜಾರಿಯನ್ನು ಮೋಸಪಡಿಸಿರುವರೆಂದು ನಂಬಲಿಕ್ಕೆ ಕಾರಣವಿದೆ. 1982ನೇ ಲಾಗಾಯ್ತು ಸದ್ರಿ ತಿಮ್ಮಪ್ಪ ಪೂಜಾರಿಯು ಒಕ್ಕಲುಗಳಿಗೆ ರಚಿಸಿದ ಕೊಟ್ಟದ್ದಾಗಲೀ ಅಥವಾ ಪರರಿಗೆ ಯಾವ ತರದ ದಸ್ತವೇಜುಗಳನ್ನು ಬರಕೊಟ್ಟದಾಗಿಯೂ ಇಲ್ಲ. ಆದ್ದರಿಂದ ತಿಮ್ಮಪ್ಪ ಪೂಜಾರಿಯನ್ನು ನಂಜಿಸಿ ಪಡಕೊಂಡ ಎಡ ಹೆಬ್ಬೆಟ್ಟಿನ ಗುರು ತಿರುವ ರಚೀದಿಯಾಗಲೀ ಅಥವಾ ಬೇರೆ ತರದ ದಸ್ತವೇಜು ಬಗ್ಗೆರೆಯಾಗಲೀ ಸಿಂಧಾಗತಕ್ಕ ದ್ದೆಲ್ಲ.

ಬೋಳೂರು,
10—1—35. } B. Dharmanna.

ನೋಟೀಸು

ಕುಂದಾಪುರ ಡಿಸ್ಟ್ರಿಕ್ಟ್ ಮುನ್ಸೀಫ್ ಕೋರ್ಟಿನಲ್ಲಿ.

O. P. No. 135/1934

ಅರ್ಜದಾರ—ಕೃಷ್ಣ ಪ್ರಭು.

ಅರ್ಜದಾರನ ಮಗ ಇತ್ತೀಲಾಗೆ ಮೃತವಾದ ಪುಂಡಲೀಕ ಪ್ರಭು ಎಂಬವನು ಆತನು ಸ್ವಂತ ಸಂಪಾದನೆಯಿಂದ, The Bombay Life Assurance Co, Ltd., ಎಂಬ ಕಂಪೆನಿಯಲ್ಲಿ ರೂ. 1000—0—0ಕ್ಕೆ ಪೊಲಿಸಿ ನಂಬ್ರ 26988ನೇಗೆ ಪೊಲಿಸಿ ನಡೆದಿದ್ದಾನೆ. ಅರ್ಜದಾರನ ಮಗ ಮೇಲೆ ಹೇಳಿದ ಪುಂಡಲೀಕ ಪ್ರಭುವು ಬೊಂಬಾಯಿಯಲ್ಲಿ ಮೃತವಾಗಿದ್ದಾನೆ. ಆದ್ರಿಂದ ಸದ್ರಿ ಇನ್ಶೂರೆನ್ಸ ಬಾಬ್ತು ಅಸಲು ರೂ. 1000—0—0 ವ ಬೋನಸ್ ಬಾಬ್ತು ರೂ. 85—2—0 ಕೂಡಾ ರೂ. 1085—2—0ರ ಬಗ್ಗೆ ಅರ್ಜದಾರನ ಹೆಸರಿಗೆ ಸಕ್ಸೆಸನ್ ಸರ್ಟಿಫಿಕೇಟು ಕೊಡಿಸಬೇಕಾಗಿ ಅರ್ಜದಾರನು ಕೊಟ್ಟ ಮೇಲ್ಕಂಡ ಅರ್ಜಿಯು ತಾ. 30—1—35ಕ್ಕೆ ತನ್ನಿಗೆ ಇಟ್ಟಿದೆ. ಆ ಕುರಿತು ಆಕ್ಷೇಪಯಿದ್ದವರು ಆ ತಾರೀಕಿಗೆ ಬೆಳಿಗ್ಗೆ 11 ಘಂಟೆಗೆ ಹಾಜ್ರಾಗಿ ಮೇಲ್ಕಂಡ ಕೋರ್ಟಿನಲ್ಲಿ ಹೇಳಿಕೆಕ್ಕದ್ದು.

ಮೊಕ್ಕಾಂ ಕುಂದಾಪುರ,
ತಾ, 9—1—'35. } K. Narayana Shanal,
Pleader
ಅರ್ಜದಾರನ ಪರ ವಕೀಲ.

ನಾಯಕ್ ಬ್ರದರ್ಸರ

ಶ್ರೀಮದ್ಭುವನೇಂದ್ರ ಮಹೌಷಧಾಲಯ, ಕಟಪಾಡಿ, ದ.ಕ.

ಪಾರಂಪರ್ಯದ ಅನುಭವಸಿದ್ಧೌಷಧಗಳು! ಸ್ವರ್ಣ, ರಜತ ಪದಕಗಳನ್ನು ಪಡೆದ ದಿವ್ಯೌಷಧಗಳು!

ಮೃಧ್ವಿಕಾಸವ—(ನಿಶ್ರಾಣಕ್ಕೆ ಅತ್ಯಂತ ಗುಣಕಾರಿ)
ಮಹಾಮದನ ಕಾಮೇಶ್ವರೀ ಲೇಹ್ಯ—(ನಪುಂಸಕತ್ವ, ಧಾತುಕ್ಷೀಣತೆಗೆ ಅತ್ಯುತ್ತಮ)
ಹಿಮಸಾಗರ ತೈಲ್ಯ—(ನಿದ್ರಾನಾಶಕ್ಕೆ ಅತೀ ಉಪಯುಕ್ತ)
ಮಹಾಮಾಷ ತೈಲ್ಯ—(ಪಕ್ಷವಾತಕ್ಕೆ ಅತ್ಯಂತ ಗುಣಕಾರಿ)
ಗರ್ಭಪಾಲ—(ಗರ್ಭಶೂಲ, ಗರ್ಭಸ್ರಾವಗಳಿಗೆ ದಿವ್ಯೌಷಧ)
ಗುಡ ಪಿಪ್ಪಲಿ—(ಲೀವರ್ ರೋಗಕ್ಕೆ ಅತ್ಯುತ್ತಮ)

ಇವುಗಳಲ್ಲದೆ ಶಾಸ್ತ್ರೀಯ ರೀತ್ಯಾ ತಯಾರಿಸಿದ ಆರಿಷ್ಟಗಳು, ಆಸವಗಳು, ಲೇಹ್ಯಗಳು, ಭಸ್ಮಗಳು, ತೈಲ್ಯಗಳು ಇತ್ಯಾದಿ ಯಾವಾಗಲೂ ಮಾರಾಟಕ್ಕೆ ಸಿದ್ಧವಿರುತ್ತವೆ. ಹೆಚ್ಚಿನ ಮಾಹಿತಿಗೂ ಕೆಟಲಾಗಿಗೂ ಈ ಕೆಳಗಿನ ವಿಳಾಸಕ್ಕೆ ಬರೆದುಕೊಳ್ಳಬಹುದು.

ನಾಯಕ್ ಬ್ರದರ್ಸರ ಶ್ರೀಮದ್ಭುವನೇಂದ್ರ ಮಹೌಷಧಾಲಯ, ಕಟಪಾಡಿ, ದ. ಕನ್ನಡ.

The Vegetable Soap Works.
Props:—
SAIT N. P & Co.
CALICUT

Distributors for South Kanara:—
Raghavendra Ranga Pai, Car Street, Mangalore.

ಇಂದೇ ಆರಂಭಿಸಿರಿ!
ಸುಪ್ರಸಿದ್ಧ ಆತಂಕನಿಗ್ರಹ ಮಾತ್ರೆ
ಗಳನ್ನು ಉಪಯೋಗಿಸಲಿಕ್ಕೆ.
ಜೀವನದ ಜಯಶೀಲತೆಯು ವಿನಯಶೀಲರಾಗಿ, ಲೋಕದಲ್ಲಿ ಸಾವಿರಾರು ಜನರು ಅದನ್ನು ಪ್ರತಿದಿನವೂ ಉಪಯೋಗಿಸುತ್ತಿದ್ದಾರೆ.
ನರ ಮತ್ತು ಶಾರೀರಿಕ ದೌರ್ಬಲ್ಯಕ್ಕೆ ಭದ್ರತೆಯು.
ಆರೋಗ್ಯಕ್ಕೆ ಕವಚವು
32 ಮಾತ್ರೆಗಳ ಟಿನ್ನಿಂದಕ್ಕೆ ರೂ. 1
ಹೆಚ್ಚಿನ ವಿವರಕ್ಕೆ, ಧರ್ಮಾರ್ಥ ಹಾಗೂ ಟಿಪ್ಪಣಿಗಾಗಲು ವಿನಯ ಕಳುಹಿಸಲ್ಪಡುವ ನಮ್ಮ
ಕಾಮಶಾಸ್ತ್ರವನ್ನೋದಿರಿ.
Agents:—Shah Company, Mangalore.
" Pearl & Sons, Mangalore.
Atank Nigrah Pharmacy.
Chickpet, Bangalore.
ಆತಂಕನಿಗ್ರಹ ಫಾರ್ಮಸಿ,
ಚಿಕ್ಕಪೇಟೆ, ಬೆಂಗಳೂರು

ಎಲ್ಲಾ ಚಂದಾದಾರರು ಜನ್ಮ ಪತ್ರವ್ಯವಹಾರದೊಂದಿಗೆ ಅವರವರ ಚಂದಾ ಸಂಬಂಧಗಳನ್ನು ಅಗತ್ಯವಾಗಿ ನಮೂದಿಸತಕ್ಕದ್ದು. ಸಂ. ಸ್ಥ.

BUY ADVERTISED GOODS

A Recurring Pleasure *To Smoke them*

REGISTERED

TRADE MARK

Mangalore Darbar Beedies

Thousands enjoy them daily all over India.
When buying see our Trade Mark!

Regd. Trade Mark.

ಮಂಗಳೂರು ದರ್ಬಾರ್ ಬೀಡಿಗಳು

ಇವುಗಳನ್ನು ಸೇದುವುದೆಂದರೆ ಆನಂದ!
ಯಾವ ಕೂಟದಲ್ಲಾ ಸಿಗರೇಟುಗಳ ಸ್ಥಾನವನ್ನು ಭೋಗ್ಯವೆನಿಸುವಂತೆ ಮಹಿಮವ ಬೀಡಿಗಳನ್ನೆಯುವವಾದರೆ—ಅವುಗಳು

Regd. ದಿ ಗ್ರೇಟ್ ದರ್ಬಾರ್ ಬೀಡಿ ವರ್ಕ್ಸ್ ರಥಬೀದಿ, ಮಂಗಳೂರು.

ಇವರಿಂದ ತಯಾರಿಸಲ್ಪಟ್ಟವುಗಳು.

ಡಾಕ್ಟರ ವಾಮನ ಗೋಪಾಳರವರ



ಐಓಡಾಯಿಡ್ ಪಾರ್ಕರಿಲಾ.
ಕೆಟ್ಟ ರಕ್ತಕ್ಕೆ ಪರಮೌಷಧ.
೫೦ ವರ್ಷದ ಅನುಭವ.
ಉಪಯೋಗಿಸಿದವರೇ ಹೇಳ್ತಾರೆ.
ಡಾ॥ ಗೌತಮ ರಾವ್ ಕೇಶವರವರ
ಫೊಸ್ಫರಸ್ ಗುಳಿಗೆಗಳು.
ಅತ್ಯುತ್ತಮ ಟಾನಿಕ್.
ಡಾಕ್ಟರ್ ಗೌತಮ ರಾವ್ ಕೇಶವ
ಅಂಡ್ ಸನ್ಸ್, ಧಾರವಾಡ್ಕರ ಮುಂಬಾಡು ಪೋಸ್ಟ್ ಆಫೀಸ್ ಮಂಗಳೂರು.
(ಪತ್ರವ್ಯವಹಾರ ಇಂಗ್ಲೀಷ್ ಅಥವಾ ಮರಾಠಿಯಲ್ಲಿ.

ವಿವಿಧ ವಿಷಯ.

ಇಮ್ಮಡಿ ದೇವರಾಯರಿಗೆ ಧೂಮ್—

"ಕೊಚಾಪ್" ಪತ್ರಿಕೆಯವರು ಅಭ್ಯುದಯಾ ಎಂಬ ಪತ್ರಿಕೆಯೊಂದನ್ನು ಸಹ ಪ್ರಕಟಿಸಿದ್ದಾರೆ. ಹೆಚ್ಚು ಚುರುಕುಬುದ್ಧಿಯವರೇ! ಇತ್ತಲಿಗೆ ಕಮ್ಮಿ ಪತ್ರಿಕೆಗಳಿದ್ದವು ಸಾಲದೆಂದು ಅದೊಂದು ತೀರ ಸಾಮಾನ್ಯವಾದ ಪತ್ರಿಕೆಯಂತೆ! ಇವರು, ಕಮ್ಮಿಯೇ ಇದೆ ಒಂದು ಭಾಷೆಯನ್ನು ಮಾತಾಡುವರು; ನಾಗರಿಕ ಸ್ವಭಾಷೆಯ ಸಂಖ್ಯೆಗಳಲ್ಲಿ ಪದವು ವಿಶೇಷವಾದ ಅಧಿಕಾರವನ್ನೆನವರು. ಕೆಲವು ರಷ್ಯನ್ ನೈಹಿಲಿಸ್ಟರು ಆತ್ಮಹೋಗಿ ಇವರನ್ನು ಕಂಡುಬಂದಿದ್ದಾರೆ.

ಅಮೆರಿಂಡದಲ್ಲಿ ಹಳೇ ರಬ್ಬರನ್ನು—

ಎರಡನೇ ಬಾರಿ ಕರಗಿಸಿ ಪುನಃ ಹೊಸದಾಗಿ ಮಾಡಿ ಕೆಲವು ಗೃಹೋಪಯೋಗದ ಸಾಮಾನುಗಳನ್ನು ಕಯಾರಿಸುವರು. ಸಾಮಾನುಗಳನ್ನು ಅನೇಕರು, ಹೊಸ ರಬ್ಬರಿನ ಸಾಮಾನುಗಳಿಗಿಂತ ಹೆಚ್ಚು ಆದರದಿಂದ ಕೊಂಡುಕೊಳ್ಳುವರು. ಕಾರಣ,—ಕ್ರಯವೂ ಕಡಿಮೆ; ಉಪಯೋಗದಲ್ಲೂ ಸುಖವಿದೆ. ಇದರಿಂದ ಅಲ್ಲಿಯ ಹಳೇ ಮೋಟಾರು ಟಾಯರುಗಳಿಗೆ ಒಳ್ಳೇ ಬೆಲೆ ಬರುತ್ತಿದೆ.

ಶುದ್ಧಗಾಳಿಯನ್ನು ಹುಡುಕಬೇಕಾಗಿಲ್ಲ!

ಪೋಲಂಡಿನ ಪ್ರೊಫೆಸರ ಇಗ್ನೇಸ್ ಮೊರಿಕೆ ಎಂಬ ವರು, ಉತ್ತರದ ಹವೆಯುಳ್ಳ ಪರ್ವತಗಳ ಮೇಲಿನ ಗಾಳಿಯನ್ನು ನಿಮಗೆ ನಿಮ್ಮ ಕೊಠಡಿಯಲ್ಲೇ ತಯಾರಾಗಿ ಕೊಡುವರು! ಈ ಗಾಳಿಯು ಕ್ಷಯರೋಗಿಗಳ ಚಿಕಿತ್ಸೆಗಾಗಿ ಧಾರಾಳವಾಗಿ ಉಪಯೋಗಿಸಲ್ಪಡುತ್ತಿದೆ. ಪ್ರೊಫೆಸರ್ ಮೊರಿಕೆಯವರು ಸುಮಾರು ೨೦ ಬಗೆಯ ವೈಜ್ಞಾನಿಕ ಶೋಧಗಳನ್ನು ಮಾಡಿದವರು.

ಮೂತಾಡುವ ಜಾಹೀರಾತು ಪತ್ರಿಕೆಗಳು!

ಇದು ಈ ವರ್ಷದ ಹೊಸ ಆಕರ್ಷಣ ಲಂಡನಿನಲ್ಲಿ! ಜಾಹೀರಾತುಗಳನ್ನು ಗೋಡೆಗೆ ಅಂಟಿಸಿರುವಾಗ,—ವಿದ್ಯುಚ್ಛಕ್ತಿ ಮೂಲಕ ಅವು—ದರ್ಶಕರಿಗೆ ಶ್ರವಣ ಸುಖವನ್ನು ಕೊಡುವಂತೆ ಲೌಡ್ ಸ್ಪೀಕರುಗಳ ಮೂಲಕ ಮಾತಾಡಿ, ಸರಕುಗಳ ಉತ್ಕೃಷ್ಟತೆಯನ್ನು ವರ್ಣಿಸುತ್ತವೆ.

ತಿನ್ನದವನು, ತಿನಿಸುವನು!

ಅಂದರೆ, ನಮಗೆ ಸುಲಭದಲ್ಲಿ ಅರ್ಥವಾಗದು. ವೂಲ್ವರ್ಹ್ಯಾಂಪ್ಟನ್ ಎಂಬಲ್ಲಿ ಕಸಾಯಿಗಳದೊಂದು ಸಂಘವಿದೆ. ಅಲ್ಲಿಯ ಕಸಾಯಿಗಳಿಗೆ ಮಾರಾಟದ ಬಗ್ಗೆ ಮಾಂಸವನ್ನೊದಗಿಸುವ ಕಂಟ್ರಾಕ್ಟುದಾರರಿದ್ದಾರೆ. ಅವರಲ್ಲೊಬ್ಬ ಕಂಟ್ರಾಕ್ಟುದಾರನು, ಮಾಂಸವನ್ನೊದಗಿಸುವವನಾದರೂ ತಾನು ಮಾತ್ರ ಸಸ್ಯಾಹಾರಿಯಂತೆ! ಈ ಅದ್ಭುತಕರವಾದ ಭಯಂಕರ ಸತ್ಯವನ್ನು ಕಂಡು ಆ ಸಂಘಕ್ಕೆಡರು ಅವನನ್ನು ತಮ್ಮ ಸಂಘದಿಂದ ತೆಗೆದು ಹಾಕಿದವರು. ಕಂಟ್ರಾಕ್ಟುದಾರರು ಕೇವಲ ಮಾಂಸವನ್ನು ಒದಗಿಸಿದರೆ ಸಾಲದು; ತಾವೂ ತಿನ್ನಬೇಕು. ನನ್ನುವರಲ್ಲಿ ಕೆಲವರು ಖಾದಿ ಧಾರಣೆಯಾಗಿ ವಿದೇಶೀ ವಸ್ತ್ರಗಳನ್ನು ವಿಶ್ರಯಿಸುವರಲ್ಲ,—ಅದೂ ಇಂತಹದೇ ಒಂದು ವಿನೋದ!

'ಭ್ರಾಂತಿವಿಲಾಸ'ವನ್ನು ನೀವು ಓದಿರುವಿರಾ?

ಅವಳಿ-ಜವಳಿ ಮಕ್ಕಳು, ಒಂದೇ ರೂಪ—ಒಂದೇ ಆಕಾರವುಳ್ಳವರಾಗಿದ್ದು—ಊರಿನ ಅನೇಕರನ್ನು ಭ್ರಾಂತಿ ಸಾಗರದಲ್ಲಿ ಬಿಡುವ ತಮಾಷೆಯದು. ಅಂತಹ ಭ್ರಾಂತಿ ವಿಲಾಸವೇ ಈಸ್ಟ್ ಲೇನ್ ಎಂಬಲ್ಲಾದಂತು. ಮಿಸೆಸ್ ಮೇರಿ ಜೇನ್ ಬ್ಲಿಸ್ ಎಂಬಾಕೆ, ೧೯೩೫ರಲ್ಲಿ ವಿಲ್ಲಿಯಂ ಜೇನ್ ಬ್ಲಿಸ್ ಎಂಬಾತನನ್ನು ವಿವಾಹವಾದಳು, ಅವನು ಕೆಲಕಾಲದಲ್ಲೇ ಕಾಣೆಯಾದನು. ಆತ ಆಕಸ್ಮಿಕವಾಗಿ ಮೊನ್ನೆ, ತಾನೇ ಒಂದು ಕಡೆಯಲ್ಲಿ ಕಂಡುಹಿಡಿದು, "ಇವನೇ ನನ್ನ ಗಂಡ; ನನಗೆ ಪರಿಹಾರವನ್ನು ಕೊಡಿಸಿರಿ" ಎಂದು ಕೋರ್ಟಿಗೆ ಮುಂದೆ ತಂದಳು. ಮಾಜಾಪ್ರಯಾಸದ ನಂತರ, ಅವನು ನಿಜವಾಗಿಯೂ ಆಕೆಯ ಗಂಡನೆಂದೂ, ಆ ಪರಾಂ ಗಂಡನಲ್ಲವೆಂದೂ ಕಾನೂನಿನ ಮುಕ್ತಿಪ್ಪು ವಿಚಕ್ಷಣರೆಂದೂ ರುಜುವಾಯಿತು. ಬಡಪಾಯಿ ಬಚಾವಾದನು.

ಪ್ರಚಲಿತಸಮಾಚಾರ.

ಪತ್ರಿಕಾಪ್ರಪಂಚವು—

—ದಿನೇ ದಿನೇ ಪ್ರಗತಿಯಾಗುತ್ತಿದೆ—ಎನಿಸುತ್ತಿದೆ! —ಇದೀಗ ಈಗಷ್ಟೆ ಸೂಗು! ವರ್ತಮಾನ ಸಂಗ್ರಹಕ್ಕಾಗಿ ಪ್ರಪಂಚದ ಎಲ್ಲಾ ಭಾಗಗಳಲ್ಲಿಯೂ (ಪತ್ರಿಕೆಯು ಪಿತೃಳ ಭಾಷ್ಯಾಕಾರರ ಹೊರತು) ಪ್ರತ್ಯೇಕ ಸಂಸ್ಥೆಗಳೇ ಇವೆ. ಅವುಗಳಲ್ಲಿ "ರ್ಯೂಟರ್" ಮತ್ತು "ಎಸೋಸಿಯೇಟೆಡ್" ಸಂಸ್ಥೆಗಳು ಪ್ರಖ್ಯಾತವಾದುವು. ಈ ರೂಪಿರ ಸಂಸ್ಥೆಯ ಮುಖ್ಯಸ್ಥರಂದ ಮಿ: ಸ್ಟೀಟ್‌ವುಡ್ ಮೇಯವರು ಲಂಡನಿನ ಪೋಸ್ಟಾಫೀಸು ಮತ್ತು ಟೆಲಿಗ್ರಾಫ್ ಸೊಸೈಟಿಯವರಿಗೆ ತಮ್ಮ ಕಾರ್ಯಾಲಯಗಳನ್ನು ವಿವರಿಸುತ್ತ—ಇಲ್ಲಿಂದರೆಲ್ಲಾ ಪ್ರೆಸಿಡೆಂಟ್ ಲಿಂಕನರ ಕೊಲೆ ಯಾಗಲು, ಆ ವಾರ್ತೆಯು ದೂರದೇಶಗಳಿಗೆ ತಲಪಲು ಇತರ ಸಾಧನಗಳಿಗಿಂತ (ಶುದ್ಧರೆ ಬಂಡಿ ಇತ್ಯಾದಿ) ೬ ದಿನ ಮುಂಚಿತವಾಗಿ ನಮ್ಮ ವಾರ್ತೆಯು ತಲಪಲ್ಪಟ್ಟಿದ್ದ ಯೆಂತು. ಆದರೆ, ಇತ್ತೀಚಿಗೆ ಯುನೈಟೆಡ್ ಪ್ರೆಸ್‌ನವರು ಅಲೆಕ್ಸಾಂಡರ್ ನೈಹಿತಗಳ ಕೊಲೆಯಾದಾಗ, ಇತರರಿಗಿಂತ ೬ ನಿಮಿಷ ಮಾತ್ರ ಮುಂಚಿತವಾಗಿ ನಮ್ಮ ವಾರ್ತೆ ತಲಪಿತೆಂ ಎಂದರು.

ಸೇಲರ 'ಮುನಿಸಿಪಾಲಿಟಿ'ಯವರು—

—ತಮ್ಮ ನಗರ ಸೌಂದರ್ಯದ ಕಡೆಗೆ ಹೆಚ್ಚಿನ ಗಮನ ಕೊಡುತ್ತಿರುವುದೂ, ಆ ಸೌಂದರ್ಯವರ್ಧನೆಯ ಕಾರ್ಯಕ್ಕಾಗಿ ಅಲ್ಲಿ ಹಣವಿರುವುದೂ ಸಂತೋಷದ ಮಾತು. ನಗರದ ಕೆಲವು ಕಡೆಗಳಲ್ಲಿ ಚಿಕ್ಕ ಉದ್ಯಾನಗಳನ್ನು ರಚಿಸುವ ಬಗ್ಗೆ ಅಲ್ಲಿ ೭೦ ಸಾವಿರ ರೂಪಾಯಿ ಮಂಜೂರಾಗಿದೆ. ಆದರೆ, ಅಲ್ಲಿಯ ರಸ್ತೆಗಳ ಶೋಚ್ಯ ವನ್ನೋ ತೀರ್ದಿಲ್ಲ. ಮುಂಗಳೂರಿನ ರಸ್ತೆಗಳು ಇತರ ಕೆಲವು ಮುನಿಸಿಪಾಲಿಟಿಗಳಿಗೆ ಹೋಲಿಸಿ ನೋಡಿದ್ದಲ್ಲಿ ಶುಚಿಯಾಗಿವೆಯೆಂದು ಕಂಡುಬರುವುದೆ, ಉದ್ಯಾನಗಳಿಗಾಗಿ ಮಾತ್ರ ಇಲ್ಲಿ ಹಣವಿಲ್ಲದುದು ವಿಷಾದಕರ. ಪೆಗರ ಉದ್ಯಾನವೆಂಬ ಹೆಸರಿನಂದ ಕರೆಯಂತಹ ಸ್ಥಳವೇ ಇಲ್ಲಿಲ್ಲ.

ಪ್ರಾಯದ ಲೆಕ್ಕ ಅವರಿಗಿಲ್ಲ!

ಚೀನದ ನಾಂಕಿಂ ಆಲ್ಪ್ಸ್ (ಆಲ್ಪಿಯಂತೆಯೇ) ಪರ್ವತಗಳು ಮಂಗಳೂರನ್ನು ರೈಲ್ವೇ ಬಂಡಿಯಲ್ಲಿ ಕರಕೊಂಡು ಹೋಗುವಾಗ ಪ್ರಾಯದ ವಿಷಯ ಜಗಳಗಳೇಳುತ್ತವೆ. ರೈಲ್ವೇ ಅಧಿಕಾರಿಗಳಿಗೆ ಕೆಲವರ ಪ್ರಾಯವನ್ನು ನಿರ್ಧರಿಸುವುದೇ ಕಷ್ಟವಾಗುವುದು. ಆದಕ್ಕಾಗಿ ಅಲ್ಲಿಯ "ಸಿನಿಸ್ಟಿ ಆಫ್ ರೈಲ್ವೇಸ್" ಇವರು ಜನರ ವಿಶ್ವರಕ್ಷಣೆಗಾಗುವಂತಾಗಿ ಟಿಕೇಟುಗಳನ್ನು ನಿರ್ಣಯಿಸುವ ಅಲೋಚನೆ ಮಾಡಿದ್ದಾರು. ಎಂದೂವರೆ ಅಡಿಗಿಂತ ಉದ್ದವಾಗಿ ಸಾಲ್ಕು ಕಾಲು ಅಡಿಯೋಳಿದ್ದವರಿಗೆ ಅರ್ಧ ಬಾರ್ಜು, ಅದಕ್ಕಿಂತ ಎತ್ತರವಿದ್ದವರು ಪೂರ್ಣ ಚಾರ್ಜು ತೆರಬೇಕು ಇದನ್ನು ಅಲ್ಲಿಯ ಸ್ಟೇಶನ್-ಮಾಸ್ಟರಾಯಿ ರೈಲ್ವೇಯಲ್ಲಿ ಮಾತ್ರ ಜ್ಞಾನಿಗೆ ತಂದಿದ್ದುವರು. ಫಲಕಾರಿಯೆಂದು ಕಂಡರೆ ಇತರ ಎಲ್ಲ ರೈಲುಗಳಿಗೂ ವಿಸ್ತರವಾಗಿಸುವರು. ನಮ್ಮ ದೇಶಾಲ ಪ್ರಾಂತ್ಯದಲ್ಲಿ ಜನರು ಸುಕಾಯರು. ಅಲ್ಲಿ ಅಂತಹ ಕ್ರಮವನ್ನು ಜ್ಯಾರಿಗೆ ತಂದರೆ ರೈಲ್ವೇ ಕಂಪೆನಿಗಳು ಒಳ್ಳೇ ಲಾಭ ಪಡೆಯುವಿವು.

ಬಿಹಾರದಲ್ಲಿ ಭೂಕಂಪವಾಗಿ—

—ಒಂದು ವರ್ಷ ಇದಿಗ ಮುಗಿಯುತು. ಅಂದಿನ ಆ ಭೀಷಣ ದೃಶ್ಯ! ಅದನ್ನು ನೆನೆದಾಗಲೆಲ್ಲ, ಮೈ ಝುಮ್ಮೆನಿಸುತ್ತದೆ. ಅಂದಿನಿಂದ ಪುನರ್ವಾರ್ಷಿಕ ಹೆಸರಿನಲ್ಲಿ ನಡೆದುದೇನು? ಎಂದು ಯಾರಾದರೂ ಕೇಳಿದರೆ—ಹತ್ತರಲ್ಲೊಂದಂಶ ದುರುಸ್ತಿ ಕೆಲಸ ಮುಗಿದಿದೆ ಯೆಂದು ಒಂದು ಮಾತನ್ನಲ್ಲೇ ಮುಗಿಸಬಹುದು. ಪುನರ್ನಿರ್ಮಾಣ ಕಾರ್ಯಕ್ಕಾಗಿ ಸರಕಾರದವರು ತೆರೆದ ಆಫೀಸು ಈಗಲೀಗ ಮುಚ್ಚಲ್ಪಡುವುದು; ಇನ್ನು ಇಂತಹ ಆಫೀಸಿನ ಅವಶ್ಯಕತೆಯಿಲ್ಲವೆಂದು ಸರಕಾರಕ್ಕೆ ತಿಳಿದು ಬಂದ ಕಾರಣ, ಕೆಲವೊಂದು ಚಕ್ರವರ್ತಿ ಕೆಲಸಗಳನ್ನು ಸರಕಾರದ ಬೇರೆ ಬೇರೆ ಇಲಾಖೆಗಳಿಗೆ ಹಂಚಿಕೊಡುವರು. ಡಾ॥ ಸಿನಿಸ್ಟೋಲರು ಮಾತ್ರ, ಯೂರೋಪಿನಿಂದ ತಮ್ಮ ಸ್ವಯಂಸೇವಕ ದಳವೊಂದಿಗೆ ಬಂದು ಬಡವರಿಗೆ ನೆರವಾಗುತ್ತಿದ್ದಾರೆ. ಇವರು ಬಾಬುರಾಜೇಂದ್ರ ಪ್ರಸಾದ ರವರ ಸೆಂಟ್ರಲ್ ರಿಲೀಫ್ ಕಮಿಟಿಯ ಕಾರ್ಯಕಾರಿ ಮಂಡಲದೊಂದಿಗೆ ಸಹಕರಿಸಬೇಕೆಂದು ಕೇಳಿಕೊಳ್ಳಲಾಗಿದೆ.

ಮಕ್ಕಳಿಗೆ ಧರ್ಮಾರ್ಥ ಸಾರಾಯಿ!

ಎಂತಹ ಪ್ರಯತ್ನಗಳ ವಾರ್ತೆಯಿದು! ಬೊಂಬಾಯಿ ನಗರದ ಬಳಿ, ಬಾಂದ್ರಾದಲ್ಲಿ, ಬಂಡ್ರು ಗಡಗಿಂ ತೆರೆಯಲ್ಪಟ್ಟು, ಚಿಕ್ಕ ಮಕ್ಕಳಲ್ಲಿ ಮದ್ಯಪಾನ ಪ್ರಚಾರವಾಗಲೆಂಬ ಮಹದುದ್ದೇಶದಿಂದ ಮಕ್ಕಳಿಗೆಲ್ಲ "ಧರ್ಮಾರ್ಥ"ವಾಗಿ ಸಾರಾಯಿ ಹಂಚಲಾಗುತ್ತಿದೆಯಂತಿ ಸ್ಟುದ್ದಿ ಹರಡಿದೆ! ಮದ್ಯಪಾನ ನಿಷೇಧಕ್ಕಾಗಿ ಸರ್ವತೋಮುಖವಾಗಿ ಶ್ರಮಿಸುತ್ತಿರುವ ಈ ಕಾಲದಲ್ಲಿ ಇಂತಹ ವಾರ್ತೆಗಳು ಜನರಿಗೆ ಭೀತಿಕರವಾಗಿ ತೋರುವುದರಲ್ಲಿ ಆಶ್ಚರ್ಯವಿಲ್ಲ. ಹೀಗೆ, ಕೆಲವು ದಿನಗಳ ಹಿಂದೆ ಧರ್ಮಾರ್ಥ ಸಾರಾಯಿ ಹಂಚಿದ ಫಲವಾಗಿ ಅನೇಕ ಬಾಲಕರು ಸಾರಾಯಿ ವ್ಯಸನದಿಂದ ಸುರಾದೇವಿಯ ದಾಸರಾದರಂತೆ. ಬಾಂದ್ರಾ ನಿವಾಸಿಗಳು ಇದನ್ನು ನಿಜೀ ಫಿಸಿದಂತೆಯೂ, ಸರ್ವಾಧಿ ಸುಧಾರಕರು ಸರಕಾರ್ಯರ ಅಧಿಕಾರಿಗಳಿಗೆ ಬರೆದುಕೊಂಡಂತೆಯೂ ವಾರ್ತೆಯಿದೆ.

ಕ್ಷಯರೋಗವು—

—ದಿನೇ ದಿನೇ ಹಿಂದುದೇಶದಲ್ಲಿ ಭರದಿಂದ ಹರಡುತ್ತಿರುವುದು ಭೀತಿದಾಯಕವಾಗಿದೆ. ಈ ದೇಶದಲ್ಲಿದ್ದ ಕ್ಷಯರೋಗ ಪೀಡಿತರು ಪ್ರಪಂಚದ ಮತ್ತಾವ ಭಾಗದಲ್ಲಿಯೂ ಇಲ್ಲವೆಂದು ಸಾಧಾರವಾಗಿ ತೋರಬಹುದು. ಆರಂಟೆ ನಗರದ ಒಂದು ಲೆಕ್ಕವಾದಾಗ, ಅಲ್ಲಿ ೩೦ ಸಾವಿರ ಜನರು ಕ್ಷಯರೋಗ ಪೀಡಿತರೆಂದು ತಿಳಿದು ಬಂತು. ಈ ಸಂಖ್ಯೆಯು ಮತ್ತಷ್ಟು ಏರುವ ಚಿಹ್ನೆ ಗಳನ್ನೆ ತೋರುತ್ತಿದೆ.

"ವಿಧಿವಿಲಾಸ"ವೆನ್ನುವಿರಲ್ಲಾ—

ಏನನ್ನೆಲಿ! ಅಯೋಧ್ಯೆಯ ರೈಲುಹೂರ್ ಲಾಲಾ ವೃಜಕಿಶೋರ (ಮಾಜಿ ಎಮ್. ಎಲ್. ಎ.) ಇವರು ನಶಂಬರ ತಾ ೧೧ರಲ್ಲಿ ಕಾಲವಾದರು. ಸಾರ್ವಜನಿಕ ಸಭೆಗೂಡಿ, ಅವರ ನಿಧನಕ್ಕಾಗಿ ಸಂತಾಪವನ್ನು ಸೂಚಿಸುತ್ತಿರುವಾಗಲೇ ಹೊಸಸರ್ಪದ ಬರುದು—"ಓ. ಬಿ. ಇ." —ಈ ಲಾಲರಿಗೇ ಬಂತು! ದೈವವೇ!

"ಪುಂಡ ತೆರಿಗೆ"ಯೆಂದರೆ—

—ನಿಮಗೆ ತಿಳಿದಿರಬಹುದು. "ರೈಸಿಟವ್ ಟೇಕ್ಸ್" ಎಂದು ಇದನ್ನು ಅಂಗ್ಲ ಭಾಷೆಯಲ್ಲಿ ಕರೆಯುವರು. ಬ್ರಿಟಿಷರ ಅಳ್ವಿಕೆಯಲ್ಲೇ ಇಸವಿಗೆ ತಕ್ಕಿಸುಬಂದ ಶಿಷ್ಟ ವಿದು. ಯಾವುದಾದೂ ಒಂದು ನಗರದಲ್ಲಿ ಇಲ್ಲವೇ ಹಳ್ಳಿಯಲ್ಲಿ ಪುಂಡಾಟಿಕೆಗಳು ಹೆಚ್ಚಿದರೆ ಎಲ್ಲ ನಿವಾಸಿಗಳ ಮೇಲೆ (ಸರಕಾರೀ ನೌಕರರ ಹೊರತು) ಒಂದು ವಿಶೇಷ ತೆರಿಗೆಯನ್ನು "ಪುಂಡತೆರಿಗೆ" ಎಂಬ ಹೆಸರಲ್ಲಿ ವಿಧಿಸುವರು. ಇದನ್ನು ನಿರಪರಾಧಿಗಳೂ ತೆರಬೇಕಾಗುವುದುಂಟು. ಹೀಗೆ, ಕುಡ್ಲಾಪುರದಲ್ಲಿ ಕಳೆದರಡು ವರ್ಷಗಳಲ್ಲಿ ಪಸೂಲುಮಾಡಲ್ಪಟ್ಟ ತೆರಿಗೆ ೧,೧೬,೦೦೦. ಇನ್ನೂ ಕೃತ್ತಿಗಂ ವಸೂಲಾಗದೆ ಉಳಿದಿರಲು,—ಸರಕಾರದವರು ವಾರಾಂಟುಗಳನ್ನು ಜೊರಡಿಸಿವ್ವಾರೆ. ಕಾನಪಭಂಗ ಚಳವಳದ ಕಾಲದಲ್ಲಿ ಗಡಿಪ್ರಾಂತ್ಯದ ಅನೇಕ ತಳ್ಳಿಗಳಲ್ಲಿ ಇಂತಹ ತೆರಿಗೆ ವಿಧೀಕರಿಸಲ್ಪಟ್ಟಿತ್ತು.

ಮಿಡ್ಡಾಪುರದ ಡಿಸ್ಟ್ರಿಕ್ಟ್ ಮೆಜಿಸ್ಟ್ರೇಟರು—

—ಗಾಂಧಿಜಿಯವರ ಅಹಿಂಸಾಧರ್ಮವನ್ನೆ ಜನರಿಗೆ ಬೋಧಿಸಹತ್ತಿರುವರಲ್ಲ (ಆದರೆ, ಇವರು ಗಾಂಧಿಜಿಯವರ ಅನುಯಾಯಿಗಳೆಂಬ ಅರ್ಥವಲ್ಲ.) ಕಮ್ಮಿ ಊರಲ್ಲಲ್ಲಿ ಒಂದು ದರ್ಬಾರ್ ಸೇರಿಸಿ, ಧರ್ಮೋತ್ಪಾದಕ ಚಳವಳದ ಅನರ್ಥಗಳನ್ನು ವಿವರಿಸುತ್ತ, "ಹಿಂದೂ ಧರ್ಮದ ಕಳಪದಿಯು ಅಹಿಂಸೆಯೆಂದೂ ಆ ಪಂಥಾನಗದ ಕಲ್ಲುಗಳನ್ನೆ ಈ ಧರ್ಮೋತ್ಪಾದಕರು ತೆತ್ತು ಹಾಕುತ್ತಿರುವರೆಂದೂ" ನುಡಿದು, ಶಾಲಾ ಅಧ್ಯಾಪಕರೂ ಹಿರಿಯರೂ ಈ ಚಳವಳದ ನಿರ್ಮೂಲನಕ್ಕಾಗಿ ಶಕ್ತಿಮೀರಿ ಯತ್ನಿಸಬೇಕಾಗಿದೆಯೆಂದು ಬೋಧಿಸಿದರು. (ಒಬ್ಬ ಉಪಾಧ್ಯಾಯನು ತನ್ನ ಶಿಷ್ಯರಿಗೆ—'ಭಯೋತ್ಪಾದಕ ಚಳವಳವು ಅದನ್ನು ವೃದ್ಧಿಪಡಿಸುವ ವಿಧಾನಗಳೂ' ಎಂಬ ವಿಷಯದ ಮೇಲೆ ಪ್ರಬಂಧವನ್ನು ಬರೆದಂತೆ ಪರೀಕ್ಷಾ ಪ್ರಶ್ನೆ ಕೊಟ್ಟಿದ್ದನಂತೆ!)

ಇನ್ನು ಬೆಂಕಿಯ ಭಯ ಕಡಮೆ—

—ಯಾಗುವುದು. ಮನೆಗಳಾಗಲಿ, ವಿಮಾನಗಳಾಗಲಿ ಬೆಂಕಿ ತಗಲಿದರೆ ಒಳಗಿದ್ದವರನ್ನು ಹೊರಗೆ ಹೊತ್ತು ತರುವವರು ಯಾರ ಅಪಾಯಕ್ಕೂ ಒಳಗಾಗದಂತೆ ಒಂದು ವಿಧದ ಕವಚವು ಲಂಡನಿನಲ್ಲಿ ಸಿದ್ಧವಾಗಿದೆ. ಈ ಕವಚದೆನ್ನು ತೊಟ್ಟುಕೊಂಡವರಿಗೆ ೧೦೦ ಡಿಗ್ರಿ ಉಷ್ಣದಲ್ಲಿಯೂ ಹೊಕ್ಕಿ ಕೆಲವು ನಿಮಿಷ ಯಾವ ಅಪಾಯವೂ ಇಲ್ಲದೆ ಉಳಕೊಂಡು, ಸುರಕ್ಷಿತರಾಗಿ ಹೊರಗೆ ಬರಬಹುದು.

ತುಂಡು ಸುದ್ದಿ.

ಇಮ್ಮಡಿ ಸದುಲಾದೇವಿಯವರು, ಶರಾಬುಂಡಿ ಜೊಂಬಾಯಿಗೆ ಪುರಜದರೇ ಅಸ್ಪೃಶ್ಯರಾಗಿರುವರು. ಅವರೂ, ಪುರೇದೇವರಿಂದ ಬಂದ ಪ್ರಜ್ಞಾಕ್ಷರ ಬೇಕೆಂದೆ ಎಷ್ಟೇಬಾಮ್ಮು ಸ್ವಾಗತಿಸಲಿದ್ದರು.

ವೈಸರಾಯರವರು ಸಮಸ್ತೀಕರಿಗಿ ಬಳಗಾಲ್ ಪ್ರಾಂತ್ಯದಲ್ಲಿ ಸಂಚರಿಸುತ್ತಿರುವರು. ಸಂಚಾರವು ಹೆಚ್ಚಾಗಿ ವಿಮಾನದಲ್ಲೇ ಆಗುತ್ತಿದೆ.

ಲಂಡನಿನ ಪ್ರಖ್ಯಾತ ರೊಕ್ಕ್ಸ್ ಚೈಲ್ಡ್ ಮನೆತನದ ಪ್ರಭುವು ಸ್ವಭು (ರೋಡ್ಸ್) ವಿನ ಪತ್ನಿಯವರು ಇತ್ತಲ ಬಾದರು.

ಕಳೆದ ವರ್ಷ ಜನವರಿ ತಿಂಗಳಲ್ಲಿ ಬಂದಂತಹ ತೀವ್ರ ವಾತಕರಂಗದೇ ಈ ವರ್ಷವೂ ಗುಜರಾತ್-ಬೊಂಬಾಯಿ ಗಳಲ್ಲಿ ಜೋಸುತ್ತಿದೆ. ರೈತರು ಯೋಚನೆಗೊಳಗಾಗಿರುವರು.

೧೯೩೪ರಲ್ಲಿ ಸಿಖಿಲಪ್ರಪಂಚದ ಪತ್ರ ಬೆಳೆ ಒಟ್ಟು ೨೩ ಮಿಲ್ಲಿಯ ಬೇಲು; ಇದು ೧೯೩೩ರ ಬೆಳೆಗಿಂತ ಎಷ್ಟೋ ಕಡಿಮೆ!

ಜನೇವದಲ್ಲಿ "ನಡೆಯಲಿರುವ ಅಂತರ್ರಾಷ್ಟ್ರೀಯ ಮಹಾಸಭೆ ಪರಿಷತ್ತಿಗೆ ಬೊಂಬಾಯಿಯ ಶ್ರೀ ಜಮ್ನಾದಾಸ್ ಮೆಹತಾರವರಿಗೆ ಆಮಂತ್ರಣ ಬಂದಿದೆ.

ಪಂಥ್ಯಾಪಾಂತ್ಯದ ಕೊಂಗ್ರೆಸ್ ಮುಖಂಡರಾದ ಶ್ರೀ. ಅಭ್ಯಂಕರರ ನಿಧನಕ್ಕಾಗಿ ಪುಟಿ ಸೂಚಿಸಲು ಬಂಡಾದೇಶದ ಪ್ರಾಮುಖ್ಯ ನಗರಗಳೆಲ್ಲೆಲ್ಲ ಸಭೆಗಳು ಇರಗಿದುವು.

ಸಿಲೋನಿನ "ಲಲ್ಲನ್ ಎಸ್ಟೇಟ್ ಶೀ ಫ್ಯಾಕ್ಟರಿ"ಗೆ ಬೆಂಕಿದಿದ್ದು ಸುಟ್ಟುಹೋಯಿತು. ಇನ್ಸೂರ್ ಇದೆ.

ಜರ್ಮನ್ನರ ಪತ್ನಿಯವರು ಮಾದರಾಸಿನಿಂದ ರಂಗೂನಿಗಾಗಿ ಜಾಪಾನ್ ಕಡೆ ಪುಯಾಣಬೆಳೆಸಿದರು.

ಪಂಡಿತಾನು ಸಿರೋನ್ ಬೆಲಿಭೋಜನ ಕಾರುಗಾರಿಯೆಲ್ಲ ಮುಗಿಯಿತು. ನೇರಾದ ಸರ್ವೀಸು ಸದ್ಯದಲ್ಲೇ ಆರಂಭವಾಗುವುದು.

ನಾಗಪುರದಲ್ಲಿ, ಎರಡು ಮನೆಗಳಲ್ಲಿ ಜಬ್ಬಿನಡಿಸಿ, ಪೋಲೀಸರು ಕೆಲವು ಶ್ರಕಕನಾಮ್ಯಗಳ ಅಚ್ಚುಗಳನ್ನು ವಶಪಡಿಸಿಕೊಂಡಿದ್ದಲ್ಲದೆ ಸೂಚಕರನ್ನು ದಸ್ತಗಿರಿ ಮಾಡಿರುವರು.

ಫ್ರಾನ್ಸ್—ಇಟೆಲಿಗಳ ಒಪ್ಪಂದವನ್ನು ಫ್ರೆಂಚ್ ಮಂತ್ರಿ ಮಂಡಲವು ಒಪ್ಪಿದೆ

ಬೊಂಬಾಯಿಯಲ್ಲಿ ಅಸ್ಪೃಶ್ಯವಾಗಿರುವ ಶ್ರೀಮತಿ ಕಮಲಾದೇವಿ ಚಟ್ಟೋಪಾಧ್ಯಾಯರವರು ಎಳ್ಸೇರೆ ಪಂಚಕ್ಕೆ ಪಾತ್ರರಾಗಿಸಿಕೊಂಡರು.

ಅಹಮ್ಮದಾಬಾದಿನ ಮಜೂರ ವಿವಾದವನ್ನು ಗಾಂಧಿಯವರೂ ತೀರ್ಮಾನಿಸುವಂತೆ ಕೇಳಿಕೊಳ್ಳಲಾಗಿದೆ.

ಬಸ್ ಕಂಪೆನಿಗಳ ಸ್ಪರ್ಧೆಗೆ ಉತ್ತರವಾಗಿ ಸೌತ್ ಇಂಡಿಯನ್ ರೈಲ್ವೆ ಕಂಪೆನಿಯವರು ತಿನ್ನವೆಲ್ಲಿ ಮತ್ತು ತಿರುಚೆಂದೂರು ಲೈನಿನಲ್ಲಿ ದರಗಳನ್ನಿಳಿಸುವ ಆಲೋಚನೆಯಲ್ಲಿರುವರು.

ಗಾಂಧಿಜಿಯವರು ಇದೇ ತಾ. ೨೩ರ ತನಕ ರಿಷ್ಟಿ ಯಲ್ಲಿ ಉಳಕೊಳ್ಳುವರಾಗಿ ತಿಂದುಬಂದಿದೆ.

ಕಳೆದ ವಾರ, ಡಾಕ್ಟಾ ಸಂಪ್ರಿಲ್ ಹೈಡ್ರೊಜನ್‌ಳಿಗೆ ಒಂದು ವ್ಯಕ್ತಿಯುವ ಹೇಗೋ ಒಂದು, ನಿವಾಸಿಗಳನ್ನು ಗಾಬರಿಪಡಿಸಿತು. ಗುಂಡಿಟ್ಟು ಕೊಂದೇ ಆ ಪೀಡಾ ಏನರಕೆಯನ್ನು ಪರಿಹರಿಸಿಯಾಯಿತು.

ಅಲಿಘಾರ್ ಮುಸ್ಲಿಂ ಯುನಿವರ್ಸಿಟಿಯ ಇಪ್ಪರು ವಿದ್ಯಾರ್ಥಿಗಳ ಮೇಲೆ ಮೈಲು ಸೈಕಲ್ ಹಿಂದಿ ಬಹುಮಾನ ಪಡೆದಿರುವರು.

ಬಂಗಾಳ ಪ್ರಾಂತ್ಯದ ಭತ

WANTED

Energetic, Active and Influential men to work as organisers and Agents on very attractive terms in areas mentioned below—

1. Mysore, Hassanand Kadur districts.
2. Coorg, South Canara, Shimoga and Chitaldrug districts.
3. Tumkur, Kolar, Bangalore and civil and Military Stations, Bangalore Cantonment.

Please apply in person or by letter,

C. H. SHAMBULINGAPPA,
The South Indian General Assurance Co. Ltd.
1, Purniah Chatram Road, Balepet,
BANGALORE CITY.

1876ನೇ ಇಸವಿಯಿಂದಲೂ ಪ್ರಸಿದ್ಧಿ ಹೊಂದಿದ

ಎಮ್. ಗಣಪಯ್ಯ ಎಂಡ್ ಸನ್ಸ್, ಮಂಗಳೂರು.

ಇವರ ಶಾಸ್ತ್ರೀಯ ಮತ್ತು ಅನುಭವಸಿದ್ಧ ಔಷಧಗಳು.

ಧಾತುಪುಷ್ಟಿ ಲೇಹ—ಇದು ಬಲಹೀನರಿಗೆ ಅದ್ಭುತವಾದ ಔಷಧ. ನುಲಬದ್ಧತೆ, ಅಜೀರ್ಣತೆ, ಸೊಂಟನೋವು, ಎದೆನೋವು, ಕೈಕಾಲು ಬಚ್ಚುವುದು, ಬೆಳ್ಳುರ, ನಿದ್ರಾಹೀನತೆ, ರಕ್ತಹೀನತೆ, ಜ್ವಾಪಕಶಕ್ತಿ, ಕಡಿಮೆಯಾಗುವಿಕೆ, ಸ್ವಪ್ನಪಸ್ಕ, ಶರೀರದ ಉಷ್ಣತೆ, ಧಾತುವು ಮೂತ್ರದೊಡನೆ ಹೊರಹೋಗುವಿಕೆ. ಮುಂತಾದುವುಗಳನ್ನು ಹೋಗಲಾಡಿಸಿ ವೀರ್ಯವೃದ್ಧಿಯನ್ನೂ ಉಂಟುಮಾಡಿ ಪೂರ್ಣ ಆರೋಗ್ಯವನ್ನೂ ಉತ್ಸಾಹವನ್ನೂ ವೃದ್ಧಿಗೊಳಿಸುವುದು.

ಬಾಟ್ಲಿ 1ರ ರೂ. 2-8-0. ಬಾಟ್ಲಿ 3ರ ರೂ. 7-0-0.

ಮೇಹ ಕುಠಾರ:—ಪ್ರಮೇಹ, ಮೂತ್ರಕೃಚ್ಛ್ರ, ಮೂತ್ರ ಹೋಗದಿರುವಿಕೆ, ಮೂತ್ರ ಹೋಗುವಾಗ ಉರಿ, ಮೂತ್ರದ್ವಾರದಿಂದ ಕೀವು ಬರುವುದು, ಮೂತ್ರ ದಿಂದ ಧಾತು ಹೋಗುವುದು, ಮೂತ್ರ ಆಗಾಗ ಬಂದು ತಡಿಯಲಕ್ಕೆ ಸಾಧ್ಯವಿಲ್ಲದಿರುವುದು ಇವೇ ಮೊದಲಾದ ಹಲವು ಮೂತ್ರಕೋಶದ ರೋಗಗಳಿಗೆ ಸಿದ್ಧೌಷಧ.

ಡಬ್ಬಿ 1ಕ್ಕೆ ರೂ. 2 8—0. ಡಬ್ಬಿ 3ರ ರೂ. 7-0-0.

ಕಸ್ತೂರಿ ಮಿಶ್ರಣ ದಶಮೂಲಾರಿಷ್ಟ:—ಇದು ಬಾಣಂತಿಯರಿಗೆ ಅತ್ಯದ್ಭುತಕರವಾದ ಶಕ್ತಿವರ್ಧಕ ರಸಾಯನವಾಗಿರುತ್ತದೆ. ಪ್ರಸವಿಸಿದ ನಂತರ ಅವರ ಶರೀರವನ್ನು ಹೊಸಗೆಲಾಡಿಸಿ ಗರ್ಭಕೋಶದ ವೇದನೆಗಳನ್ನು ನಿವಾರಿಸಿಕೊಡುವುದು. ಗರ್ಭಕೋಶದಲ್ಲಿ ಕೆಡುಕು ರಕ್ತವು ನಿಲ್ಲದಂತೆ ಮಾಡಿ, ಅಗ್ನಿಮಾಂದ್ಯ, ಅರುಚಿ, ಪೀನಸ ಜ್ವರ, ರಕ್ತಹೀನತೆ, ನಿದ್ರಾಭಂಗ ಮೊದಲಾದುವುಗಳನ್ನು ಹೋಗಲಾಡಿಸಿ, ದೇಹವನ್ನು ಶಕ್ತಿವಂತವೂ ಆರೋಗ್ಯವಂತವೂ ಮಾಡುವುದು. ಬಾಣಂತಿಯರು ಪುಷ್ಟಿಹೊಂದಿ, ಶಿಶುವಿಗೂ ಧಾರಾಳವಾಗಿ ಹಾಲು ಸಿಕ್ಕುವಂತೆ ಮಾಡುವುದು.

ಬಾಟ್ಲಿ 1ಕ್ಕೆ ರೂ. 1—8—0. ಬಾಟ್ಲಿ 2ರ ರೂ. 3-0-0

Shiromani Narayanacharya
Chowkhamba, Benares City

ಶಾಸ್ತ್ರಗಳೇ ಪೂರ್ಣವಾಗಿ ಅರಿತ ಗುರುವೇ ಆದರೂ ಹೇಗಿರಬೇಕು? ರಾಸಾಯನ್ಯವಿದ್ಯೆಯೇ ಪೂರ್ಣವಾಗಿ ಅರಿತವರಿಗೇ ಸಿಗುವಾದ ಆರೋಗ್ಯ ಆಪತ್ಕಾರಾಣವೇನು? ಅವರು ರುದ್ರಾಕ್ಷಿಯನ್ನು ಬಿಡದ ಯೋಗಗಳೂ ಧಾರಣೆಮಾಡುತ್ತ ಇದ್ದರು. ಅದರಿಂದ ಏನು ಫಲ? ಅದನ್ನು ಧರಿಸಿದರೆ ಬೌದ್ಧಿಕಶಕ್ತಿ, ಬುದ್ಧಿಶಕ್ತಿ, ವಿದ್ಯಾಭಿವೃದ್ಧಿ, ವೀರ್ಯವೃದ್ಧಿ ಸಂಪತ್ತು ಕೀರ್ತಿ ಇವುಗಳೆಲ್ಲಾ ಆಗುತ್ತವೆ. ಹಾಗಾದರೆ ನಮಗೆ ಅಂತಹ ರುದ್ರಾಕ್ಷಿ ಎಲ್ಲಿ ದೊರೆಯುತ್ತದೆ? ಆದು ದೋಷಪರಿಹಾರ ಹೊಂದಿದ ನಮ್ಮ ಕಾಶೀ ಚೌಖಂಬಾ ಶಿರೋಮಣಿ ನಾರಾಯಣಾಚಾರ್ಯರಲ್ಲಿಯೇ ಯೋಗ್ಯವಾದ ಕ್ರಯಕ್ಕೆ ಉತ್ತಮ ತರದ ರುದ್ರಾಕ್ಷೀ ದೊರೆಯುವುದು.

ಸಣ್ಣ ಅಡ್ಡೆ ಪ್ರಮಾಣದ ಕಂಠಿಸರ 1ಕ್ಕೆ ಆಣೆ 1ರಿಂದ ರೂ. 2ರ ವರೆಗೆ, 10ಕ್ಕೆ ರುದ್ರಾಕ್ಷಿಗಳುಳ್ಳ ಸರ 1ಕ್ಕೆ ಆಣೆ 3ರಿಂದ ರೂ. 5ರ ವರೆಗೆ. ಗೌರೀಶಂಕರ ರುದ್ರಾಕ್ಷಿ 1ಕ್ಕೆ ರೂ. 3ರಿಂದ ರೂ. 5ರ ವರೆಗೆ. ಮುಕ್ಕು 3—4—5—6—7—8 ಮುಖಗಳ ಕಾಳು 1ಕ್ಕೆ ಆಣೆ ತ್ರಿಂದ ರೂಪಾ 1ರ. ಮುಕ್ಕು 9—10—11 ಮುಖಗಳುಳ್ಳ ಕಾಳು 1ಕ್ಕೆ ರೂ 2ರಿಂದ 3ರ ವರೆಗೆ 12—1 ಮುಖ 1ಕ್ಕೆ ರೂಪಾ 5ರಿಂದ 100ರ ವರೆಗೆ. ಸಣ್ಣ ರುದ್ರಾಕ್ಷೀ ಆವರೇಕಾಳಿಗಿಂತ ಸಣ್ಣವಾಗುತ್ತ ಶ್ರೇಯ ಜಾಸ್ತಿ. ದೊಡ್ಡ ರುದ್ರಾಕ್ಷೀ ಆವತೆಕಾಳಿಗಿಂತ ದೊಡ್ಡದಾಗುತ್ತ ಕ್ರಯ ಜಾಸ್ತಿ ಆಗುವುದು (ವಿವರಕ್ಕೆ ಕಟಲಾಗಿ ಬರೆದರೆ ಇನಾಮಾಗಿ ಕಳುಹಿಸುತ್ತೇವೆ ಇತರೆ ಸ್ವಾಂಪುಗಳುಹಿಸಿದರೆ 3 ಇನಾಮುಗಳು—1 ವಿಶೇಷ ಕಟು, 1 ಕಾಶೀ ನಕ್ಷೆ, 1 ಕಟಲಾಗಿ ನೊಡಣಿ 3 ಇನಾಮುಗಳು).

ಶಿರೋಮಣಿ ನಾರಾಯಣಾಚಾರ್ಯ
ಚೌಖಂಬಾ, ಬೆನಾರಸ್ (ಕಾಶೀ)

[ಗುಣಬಾರದಿದ್ದರೆ ಹಣ ವಾಪಾಸು]

ಪ್ರಸಿದ್ಧ ವೈದ್ಯರಾದ ಎಮ್. ಕೆ. ಜಪ್ಪಿತ ಇವರ

ಸಂಪಕಿ ಪ್ರತಿಬಂಧಕ ಚೂರ್ಣ (ರಿಜಿಸ್ಟರ್ಡ್)

ಬಹಳ ಕಾಲದಿಂದಲೂ ಪೆದೆಯಲ್ಲಿ-ಹೊಗರು ಆತಿಯಾಗಿ ಅತಿಕ್ಲೇಶವಾಗುತ್ತದೆ. ಬಹಳ ಬಡವರಲ್ಲಿ ವಿಶೇಷ ಮಕ್ಕಳಾಗುವುದರಿಂದ ಮುಂದಾಗುವುದೆ ಈ ಚಿಂತೆಯಿಂದಲೇ ಅಥವಾ ಬೇರೆ ಕಾರಣದಿಂದಲೂ ಮಕ್ಕಳನ್ನು ಪಡೆಯುವುದು ಭಂದವಾಗಬೇಕೆಂದು ಇಚ್ಛಿಸುವವರು ಈ ಚೂರ್ಣವನ್ನು ಉಪಯೋಗಿಸಬೇಕು. ಇದರ ಸೇವನೆಯಿಂದ ಮುಟ್ಟಾಗುವಿಕೆಯು ನೇಮದಂತೆ ಸುರುವಿರುವುದು. ಶರೀರಕ್ಕೆ ಏನೂ ಅಪಾಯವಾಗದೆ ಸಂಸಾರಸುಖವು ಪೂರ್ಣವಾಗಿದ್ದು ಕೂಡಲೇ ಗರ್ಭಧಾರಣ ಬಂದಾಗುವುದು. ಇದನಿಂದ ಏನು ದುಷ್ಪರಿಣಾಮವೂ ಸುರುವಾಗುವುದಿಲ್ಲ. ಕೂಡಲೇ ಪೂರಾ ವಿವರ ಮತ್ತು ಔಷಧ ಬೇಕಾ. ಮುಟ್ಟು ಸರಿಯಿಲ್ಲದೆ ಡಾಕ್ಟರ್ ಬಿ. ಎ. ವೈದ್ಯ, ಎಲ್. ಸಿ. ಪಿ. ಎಸ್. ಕೆಲವಾರುಮಂದಿ ಪಾಸರೇ ಈ ಚೂರ್ಣದಿಂದ ಯಾವ ತರದ ಅಪಾಯವಾಗದು. ಗರ್ಭಧಾರಣವೂ ಆಗುವುದೆಲ್ಲ ಪೂರ್ಣ ಗುಣಕಾರಿ ದಬ್ಬಿ ಕಿಮ್ಮತ್ತು ರೂ. ೪-೦-೦. ವಿ. ಪಿ. ಆಣೆ ೪.

ವಿಳಾಸ:—ಸಂಜೀವಿನೀ ಔಷಧಾಲಯ ಮು. ಪೊ. ವಿರಜಿ, S. M. C.

ಸ್ತ್ರೀಪುರುಷರ ಪ್ರಿಯರಹಸ್ಯ.

(ಕರೀರ ಸುರ್ಮಶಾಸ್ತ್ರ)

ಎತ್ತಲ್ಪಡುವುದೆಂದು ಯಾರೂ ನಿರೀಕ್ಷಿಸಿಲ್ಲವಾದರೂ, ಮುಂಬಾಯಿ ಸಂಸ್ಥಾನದಲ್ಲಿ 'ವಂದೇ ಮಾತರಂ' ಗೀತೆಯು ನ್ಯಾಗಲೀ ರಾಷ್ಟ್ರೀಯ ಧ್ವಜವನ್ನಾಗಲೀ ಗೌರವಿಸಬಾರದಾಗಿ ಮುಂಬಾಯಿ ಸರಕಾರವು ತನ್ನ ನೌಕರರಿಗೆ ಸೂಚನೆಯಿತ್ತಿರಬೇಕೆಂಬ ವಾರ್ತೆಯಿದೆ. ಬಂಕಿಮ ಚಂದ್ರಬಾಬುಗಳ ಕಾಲದಿಂದ 'ವಂದೇ ಮಾತರಂ' ಗೀತೆಯು ಹಿಂದೀಯರ ರಾಷ್ಟ್ರಗೀತೆಯಾಗಿದೆ. ಆದರಲ್ಲಡಕವಾಗಿರುವ ವಿಕಾಸವಾದ, ತತ್ಕ್ಷ, ರಾಷ್ಟ್ರಪ್ರೇಮಗಳು ಹಿಂದೀಯರನ್ನು ಮುಗ್ಧಗೊಳಿಸಿ, ಮಹಾಕಾಶೀಯವರಂತಹವರ ದೇವತಾ ಪ್ರಾರ್ಥನೆಗಳೂ ಕೂಡಾ ರಾಷ್ಟ್ರೀಯರ ಸರ್ವತೋಮುಖವಾದ ಅನುಸರಣೆಗೆ ಪಾತ್ರವಾಗದಂತಾಗಿದೆ. ಬ್ರಿಟಿಷರ 'ನೇಶನಲ್ ಎಂತೆಮ್' ಅವರಿಗೆಷ್ಟು ಪ್ರಯೋಜನವೋ 'ವಂದೇ ಮಾತರಂ ಗೀತೆಯೂ ಹಿಂದೀಯರ ಪ್ರೇಮಾದರಗಳಿಗೆ ಅಷ್ಟು ಪಾತ್ರವಾಗಿದೆ. 'ಈ ಗೀತೆಯು ಹಿಂದೂಗಳ ಭಜನೆಯೆಲ್ಲದೆ ಹಿಂದೀಯರ ಗೀತೆಯಾಗಿಲ್ಲ; ಇದು ಮತಸಂಬಂಧವಲ್ಲದ ಪದ; ಬ್ರಿಟಿಷರ ಮೇಲಿನ ದ್ವೇಷನ್ಮೂಲದಿಂದ ಬರೆಯಲ್ಪಟ್ಟುದೆಂದು ಸರಕಾರದ ತೀರ್ಮಾನ. ಹಿಂದೀಯರು ಅನೇಕ ಸಂಕಷ್ಟಕ್ಕೀಡಾಗಿದ್ದಾರು. ಆದರೆ ರಾಷ್ಟ್ರಗೀತೆಯನ್ನೇ ರಿಕ್ತರಿಸಿದ ಯಾವ ಉದ್ಧಟತನವನ್ನೂ ಅಂತಹ ಅವಮಾನವನ್ನೂ ಅವರು ಕಾಣಲಿಲ್ಲ. ಆಯಾಯ ದೇಶಭಕ್ತರು ತಂತಮ್ಮ ಭಕ್ತಿ ವಿಶ್ವಾಸಗಳಿಗನುಸಾರವಾಗಿ ತಮ್ಮ ತಮ್ಮ ಆಯಾಯ ರಾಷ್ಟ್ರೀಯ ಗೀತೆವನ್ನೂ ಧ್ವಜವನ್ನೂ ಆರಿಸಿಕೊಂಡು ತಮ್ಮ ದೇಶವಾತ್ಸಲ್ಯವನ್ನು ಆ ಮೂಲಕ ಪ್ರದರ್ಶಿಸುವುದು ಜಗತ್ತಿನಲ್ಲೇ ವಾಡಿಕೆ. ಪರದೇಶಿಗನಿಗೆ ಈ ವಿಚಾರವಾಗಿ ಬಾಯಿ ಎತ್ತಲು ಹಕ್ಕಿರುವುದಿಲ್ಲವೆಂಬುದು ನ್ಯಾಯವೆಂದಾದರೆ, ಮುಂಬಾಯಿ ಸರಕಾರವು ತಪ್ಪಿದ್ದಿದೆಯೆನ್ನಬಹುದು.

ರಿಸೆಟ್ಲ್‌ಮೆಂಟಿನ ಕುರಿತು ಉಂಟಾದ ರವಿನ್ಯೂ ನಂಬ್ರ 42 (೬-೧-೧೯೩೫)ನೆಯ ಸರಕಾರಿ ಹುಕುಮಿನ ಮೇಲೆ ಇದೇ ತಾ. 20-1-1935ರಲ್ಲಿ ಉಡುಪಿಯಲ್ಲಿ ರಾವ್‌ಸಾಹೇಬ್ ಡಾಕ್ಟರ್ ಯು. ರಾಮರಾಯರ ಅಧ್ಯಕ್ಷತೆಯಲ್ಲಿ ಜರಗಿದ ರೈತರ ಸಮ್ಮೇಳನದಲ್ಲಿ ಅಂಗೀಕರಿಸಿದ ನಿರ್ಣಯಗಳು—

ದಕ್ಷಿಣ ಕನ್ನಡ ಭೂಮಾಲಿಕರ ಸಂಘದ ಪರವಾಗಿ ಮಾನ್ಯ ಗವರ್ನರರ ಬಳಿಗೆ ರವಾನಿಸಿದ ಡೆಪ್ಯುಟೇಶನಿನವರು ಅಲ್ಲಿ ನೂಡಿದ ಬನ್ನ ನತ್ತಳೆಗಳನ್ನೂ, ಜಿಲ್ಲೆಯ ಬೇರೆ ಸಂಘಗಳ ಮನವಿಗಳಲ್ಲಿ ಕಾಣಿಸಿದ ಸಂಗತಿಗಳನ್ನೂ ಪುಷ್ಟೀಕರಿಸುವ ಉದ್ದೇಶದಿಂದಲೇ ಈ ಪತ್ರಿಕೆ ಜರಗಿಸಲ್ಪಟ್ಟಿತು. ತನ್ಮಧ್ಯೆ ಮಾನ್ಯ ಸರಕಾರದವರು ರಿಸೆಟ್ಲ್‌ಮೆಂಟಿನ ಕುರಿತು ಹುಕುಮನ್ನು ಹೊರಡಿಸಿದರು. ಸರಕಾರದವರು ಹೊರಡಿಸಿದ ಈ ಹುಕುಮು ನಮ್ಮ ಕೈಸೇರಲ್ಲ; ಆದರೆ, ಆ ಕುರಿತು ತಾ. ೧೧-೧-೩೫ರ ಹಿಂದೂ ಪತ್ರಿಕೆಯಲ್ಲಿ ಪ್ರಕಟವಾದ ವರದಿಯಿಂದ ರಿಸೆಟ್ಲ್‌ಮೆಂಟನ್ನು ಈ ಜಿಲ್ಲೆಯಲ್ಲಿ ಜಾರಿಗೆ ತರುವ ಕುರಿತು ಸೂಚಿಸಿರುವ ಕಾರಣಗಳು ಕೃಪ್ತಿಕರವಾಗಿಲ್ಲ.

ಭೂಕಂದಾಯ ಮತ್ತು ಕಾನೂನು.

೧೯೧೯ನೇ ಇಸವಿಯ "ಡಿಸೆಂಟ್ರಲ್ಯಾಜೇಶನ್ ಕಮಿಶನ್"ನವರು ತಿರಿಗೆಗಳನ್ನು ಬರೀ ಸರಕಾರೀ ಹುಕುಮುಗಳ ಮೂಲಕ ಹೊರಿಸಬಾರದೆಂದೂ, ಕಾನೂನು ಮೂಲಕವೇ ಹೊರಿಸುವಂತಾಗಬೇಕೆಂದೂ ಸರಕಾರಕ್ಕೆ ಶಿಫಾರಸು ಮಾಡಿರುತ್ತಾರೆ. ಆದರೆ ಈ ಶಿಫಾರಸು ಕಾರ್ಯರೂಪಕ್ಕೆ ಬಂದಿರುವುದಿಲ್ಲ. ೧೯೧೯ನೇ ಇಸವಿಯ "ಜೈಂಟ್ ಪಾರ್ಲಿಮೆಂಟರಿ ಕಮಿಟಿ"ಯವರೂ ಇದೇ ರೀತಿ ಶಿಫಾರಸು ಮಾಡಿರುತ್ತಾರೆ. ೧೯೨೦ರಲ್ಲಿ ಮದರಾಸು ಸರಕಾರದ ವರು ಭೂಕಂದಾಯದ ಬೀಲನ್ನು ಕಯಾರಿಸುವರೆ ಸರಕಾರಿ ಉದ್ಯೋಗಸ್ಥರನ್ನೂ, ಲೆಜಿಸ್ಲೇಟಿವ್ ಕೌನ್ಸಿಲು ಮೆಂಬರರನ್ನೂ ಒಳಗೊಂಡ ಒಂದು ಕಮಿಟಿಯನ್ನು ಸರ್ ಮಹಮ್ಮದ್ ಹಬಿಬುಲ್ಲರ ನೇತೃತ್ವದಲ್ಲಿ ಏರ್ಪಡಿಸಿದರು. ಆದರೆ ಈ ಕಮಿಟಿಯವರ ರಿಪೋರ್ಟೂ, ಬೀಲೂ ಸರಕಾರದವರಿಗೆ ಸರತೋರಲಿಲ್ಲ. ಇದರ ಬದಲಾಗಿ ವೃಕ್ಷತ ಜಾಂಯಲ್ಲಿರುವ ಕೃಷಿ ಆಚರಣೆಗಳಿಂದೊಡಗೂಡಿದ ಮತ್ತೊಂದು ಬೀಲು ಕೌನ್ಸಿಲಿನ ಮುಂದೆ ಇರಿಸಲಾಯಿತು. ಅಧಿಕಾರಿಗಳ ಹುಕುಮುಗಳಿಗೆ ಕೌನ್ಸಿಲಿನ ಮಂಜೂರಾತಿಯನ್ನು ಪಡೆಕೊಳ್ಳುವ ಪ್ರಯತ್ನವೆಂಬ ಕಾರಣದಿಂದ ಸ್ವಾಭಾವಿಕವಾಗಿ ಕೌನ್ಸಿಲಿನವರು ಈ ಬೀಲನ್ನು ತಿರಸ್ಕರಿಸಿದರು.

ಭೂಕಂದಾಯದ ಕಾನೂನನ್ನು ಏರ್ಪಡಿಸಬೇಕಾಗಿ ಆನಂತರವೂ ಸರಕಾರದವರನ್ನು ಒತ್ತಾಯಪಡಿಸಿದಾಗ ಅದರ ಮಸೂದೆಯನ್ನು ಹೊರಡಿಸಲು ಮಾನ್ಯ ವ್ಯಾಸರಾಯರ ಸಮ್ಮತಿಯನ್ನು ಕೇಳಿಕೊಳ್ಳೋಣವಾಗಿದೆಯಾಗಿ ಮದರಾಸು ಸರಕಾರದವರು ಪ್ರಕಟಣೆ ಹೊರಡಿಸಿದರು. ಜಾರಿಯಲ್ಲಿರುವ ಆಚರಣೆಯನ್ನು ಬಿಟ್ಟು ಹೊಸ ರೀತಿಯ ಪ್ರವರ್ತನೆಯಾಗಬೇಕೆಂಬ ಕಾರಣದಿಂದ ಮಾನ್ಯ ವ್ಯಾಸರಾಯರು ಇಂಥಾ ಮಸೂದೆಯನ್ನು ಏರ್ಪಡಿಸಲು ಒಪ್ಪಿಗೆಯನ್ನು ಕೊಡವೆ ನಿರಾಕರಿಸುವುದಾಗಿ ೧೯೩೪ರಲ್ಲಿ ಮತ್ತೊಂದು ಪ್ರಕಟಣೆಯನ್ನು ಸರಕಾರದವರು ಹೊರಡಿಸಿದರು. ಡಿಸೆಂಟ್ರಲ್ಯಾಜೇಶನ್ ಕಮಿಶನ್ ಮತ್ತು ಜೈಂಟ್ ಪಾರ್ಲಿಮೆಂಟರಿ ಕಮಿಟಿಯಂಥಾ ಅಧಿಕಾರಯುಕ್ತ ಕಮಿಟಿಯವರು ಕೂಲಂಕಷ ವಿಚಾರಿಸಿ ಕಾನೂನನ್ನು ಏರ್ಪಡಿಸುವ ಅವಶ್ಯಕತೆಯ ಕುರಿತು ಕೊಟ್ಟ ಸೂಚನೆಯನ್ನು ನಿರಾಕರಿಸುವಂಥಾ ಈ ರೀತಿಯ ತೀರ್ಮಾನವನ್ನು ಮಾನ್ಯ ವ್ಯಾಸರಾಯರು ಕೊಟ್ಟುವಾದರೂ ಹೇಗೆಂಬುದು ತಿಳಿಯುವುದಿಲ್ಲ.

ಅದು ಹೇಗೂ ಇರಲಿ, ಈ ಬಗ್ಗೆ ಅಂದಿನಿಂದ ಚಳವಳಿಯು ನಡೆಯುತ್ತಿರುವುದಾದರೂ ಆ ಕುರಿತು ಸರಕಾರವು ಏನನ್ನೂ ಮಾಡಿರುವುದಿಲ್ಲ.

ಆದರೂ, ಈ ಕುರಿತು ಇದುವರೆಗೆ ತಾವು ನಡೆಸಿದ ಆನೇಕ ಪ್ರಯತ್ನಗಳು ಜಯವಾಗಲಿಲ್ಲವಾಗಿ ಸರಕಾರದವರು ತಿಳಿಯಪಡಿಸಿರುವರು. ಮೇಲೆ ನಮೂದಿಸಿದ ಕಾರಣಗಳಿಂದ ಸರಕಾರದವರು ತಾವು ಮಾಡಿರುವುದಾಗಿ ಸೂಚಿಸಿದ ಪ್ರಯತ್ನಗಳು ಮನಃಪೂರ್ವಕ ವಾದುವುಗಳಲ್ಲವೆಂದೂ, ಕಾನೂನನ್ನು ಏರ್ಪಡಿಸಲು ಸರಕಾರದವರು ಆತುರರಾಗಿಲ್ಲವೆಂದೂ ತೋರಿಬರುತ್ತದೆ. ರೈತರ ಹಿತದೃಷ್ಟಿಯಿಂದ ಈ ವಿಷಯದಲ್ಲಿ ಸರಕಾರವು ಮನಃಪೂರ್ವಕ ಪ್ರಯತ್ನಪಟ್ಟಿರುವುದಾಗಿದ್ದರೆ, ಇಷ್ಟೊಳಗೇ ಕಾನೂನನ್ನು ಏರ್ಪಡಿಸಬಹುದಾಗಿತ್ತು; ಇಲ್ಲವೆ ಹೊಸ ಕೌನ್ಸಿಲಿನ ರಚನೆಯಾಗುವ ತನಕ ರಿಸೆಟ್ಲ್‌ಮೆಂಟಿನ ಪ್ರಶ್ನೆಯನ್ನು ಮುಂದುವರಿಸಬಹುದಿತ್ತು. ರಿಸೆಟ್ಲ್‌ಮೆಂಟನ್ನು ಜಾರಿಗೆ ತರುವ ಸರಕಾರದ ಈ ಉದ್ದೇಗವು ಸರಕಾರಕ್ಕೆ ಈ ಪ್ರಶ್ನೆಯನ್ನು ಕಾನೂನಿಗೆ ಒಳಪಡಿಸಲು ಇಷ್ಟವಿಲ್ಲ ನೆಂಬುದನ್ನು ತಿಳಿಯಪಡಿಸುತ್ತಿದೆ.

Wanted.

Wanted well connected and influential young men to work as Agents by an Old Established Life Insurance Company of Very Good Standing, on Liberal Commission or Pay or Both. Organisor expected this side about the middle of February. Applications may be sent to care of this Paper

X

C/o Swadeshabhimani,
Mangalore.

ನೋಟೀಸು.

ಕುಂದಾಪುರ ಡಿಸ್ಟ್ರಿಕ್ಟ್ ಮುನ್ಸೀಫ್ ಕೋರ್ಟಿನಲ್ಲಿ.

I. P. ನಂಬ್ರ 1/1935.

ಕೆ. ನಾರಾಯಣ ಕಾಮತ್—ಅರ್ಜಿದಾರರ.

ವಿರ್ದ್ರ.

ಡೊಂಗರಕೇರಿ ಅಣ್ಣಪ್ಪ ಪೈ, ವೈಕುಂಠ ಪೈ ಬ್ರದರ್ಸ್ ಕೂಡಾ-ರಿಸ್ಪಾಂಡೆಂಟರು-ಕೈದಿಟರರು.

ಮೇಲಿನ ಅರ್ಜಿದಾರನು ತನ್ನನ್ನು ಸಾಲದ ಕಗದಿಯಿಂದ ನಿರ್ಮೋಚನೆಪಡಿಸಿ ದಿವಾಳಿಯೆಂತೆ ಸ್ಥಾಪಿಸಬೇಕಾಗಿ ದಾಖಲು ಮಾಡಿದ ಮೇಲಿನ ಅರ್ಜಿಯು ತಾ. ೬-೨-೧೯೩೫ಕ್ಕೆ ತಕ್ಕಿಗೆ ಇಟ್ಟಿರುವುದರಿಂದ ಆ ದಿವಸ ಸದ್ರಿ ಅರ್ಜಿಯನ್ನು ಸಾಧಿಸುವವರು ಕೋರ್ಟಿಗೆ ಮುಂದೆ ಪೂರ್ವಾಹ್ನ ಘಂಟೆ ೧೦ಕ್ಕೆ ಹಾಜರಾಗುವರೆ ಕಪ್ಪುದ್ದಿ ಸದ್ರಿ ಅರ್ಜಿಯನ್ನು ವಿಳಕ್ಷವಾಗಿ ತೀರ್ಮಾನಿಸಲ್ಪಡುವುದು.

Mangalore, 29-1-35. } K. Ramohan Rao, *Vakil for Petitioner.*

Unique Opportunity for Expert Business Training.

Mr. D. R. Murdeshwar, Dip. Econ., F. R. Econ. S. (Lond.), is prepared to take in six students *for being trained as live businessmen* and not mere clerks. Course to last only two months—three lectures a week. For fees and prospectus apply to:—The Principal, Murdeshwar's Banking Institute, 'Radha Nivas', Old Court Road, Mangalore

ಅಮೃತಪ್ರಾಪ್ತಿ ... ೨
ಸಂಪಾದಕೀಯ ವಿಷಯಗಳು
ಪಂಚಾಂಗ ... ೨
ಪತ್ರಿಕೆ ... ೩
ಸಭಾ ವೃತ್ತಾಂತ ... ೪
ಒಂದು ಲಕ್ಷ ... ೫
ಸುವಿಚಾರಗಳು ... ೬
ಅಗ್ರಲೇಖ
ಪಶುಪಕ್ಷಿಗಳ ರಕ್ಷಣೆ ... ೮
ವರ್ತಮಾನ ಸಂಗ್ರಹ ... ೮
ಮೂಲೆಗಳು, ಕಾಲಿಕಗಳಿಂದ ... ೧೦
ಪತ್ರೀ ಬೇಡಿಕೆ ... ೧೨
ವಿವಿಧ ಸಮಾಚಾರಗಳು ... ೧೪
ರಾಷ್ಟ್ರೀಯ ಸಮುತ್ಥಾನದ ಇತರರಲ್ಲಿ ಜರ್ಮನ್ ... ೧೫

ಸ್ವದೇಶಾಭಿಮಾನಿ

ಶಾ. ೧೫ ಕುಕ್ಕುಟವಾರ ಫೆಬ್ರವರಿ ೧೯೧೨

ವನಮೃಗಗಳ ರಕ್ಷಣೆ.

ಮೊನ್ನೆ ದಿನ (ಶಾ. ೨೮ಕ್ಕೆ) ದಿಲ್ಲಿಯಲ್ಲಿ ಸರ್ ಫಸ್ಲಿ–ಹುಸೇನರ ಅಧ್ಯಕ್ಷತೆಯಲ್ಲಿ ಅಖಿಲ ಭಾರತದ ಮೃಗ ರಕ್ಷಣೆಯ ಸಲುವಾಗಿ ಒಂದು ವರಿಷತ್ತು ನಡೆಯಿತು. ಹಿಂದುಸ್ಥಾನದ ವಿವಿಧ ಪ್ರಾಂತಗಳಲ್ಲಿರುವ ಹಲವು ತರದ ಮೃಗಪಕ್ಷಿಗಳನ್ನು ಬೇಟಿಗಾರರ ಬಾಯಿಯಿಂದ ರಕ್ಷಿಸುವುದೇ ಈ ಮಹಾ ಸಭೆಯ ಗುರಿಯು. ಇದಕ್ಕೆ ವಿವಿಧ ಪ್ರಾಂತಗಳಿಂದ ೬೦ ಮಂದಿ ವೃತಿನಿಧಿಗಳು ಹೋಗಿದ್ದರೆಂದರೆ ಜನಸಾಮಾನ್ಯರಿಗೆ ಆಶ್ಚರ್ಯವಾದೀತು. ಅದರ ಕಾರಣ ವಿಸ್ಮೆ–ನಮ್ಮಲ್ಲಿನ ಜನಸಾಮಾನ್ಯರಿಗೆ ಇಂಥ ಒಂದು ಪ್ರಶ್ನೆಯ ಮಹತ್ವವೇ ಏನೆಂದು ತಿಳಿದಿಲ್ಲ. ಬೇಕಾದ ಬೇಟೆಗಾರನು ತನ್ನಿಷ್ಟ ಕಂಡಂತೆ ಏಕೆ ಪ್ರಾಣಿಗಳನ್ನು ಕೊಲ್ಲಬಾರದು? ಹುಲಿ, ಚಿರತೆಗಳಂತಹ ಹಿಂಸ್ರ ಪಶುಗಳಿಂದ ರೈತನಿಗೆ ಅಪಾಯವಿಲ್ಲವೆ–ಎಂಬ ವಾದವೂ ಇದೆ. ಒಂದು ರೀತಿಯಿಂದ ಕಾಡುಮೃಗಗಳ ಹಾವಳಿತಪ್ಪಿಸಲೆಂದೂ, ಇನ್ನೊಂದು ರೀತಿಯಿಂದ ಊಟವೂ, ವಿಲಾಸವೂ ನಡೆಯಲೆಂದೂ, ಶಿಕಾರಿ ಮಾಡುವುದು ಜನರ ಹವ್ಯಾಸವಾಗಿದೆ.

ನಮ್ಮ ಜಿಲ್ಲೆಯೂ ಈ ಹಿಂಸೆಯಲ್ಲಿ ಹಿಂದುಳಿದಿಲ್ಲ. ಈಗೀಗ "ಸರ್ಚ್‌ಲೈಟು" ಗಳ ಹಾವಳಿಯಿಂದ ರಾತ್ರಿ ಶಿಕಾರಿಯು ಮಾಡುವುದು ಹಳ್ಳಿಗಳಲ್ಲಿ ವಿಶೇಷವಾಗಿದೆ. ಬರೇ ಮೃಗಗಳ ಕಣ್ಣನ್ನು ನೋಡಿ ಕೊಂದರಾಯಿತು. ಮುಂದೆ ಕೊಂದ ನ್ಯಾಣೆಯು ಎಂಥದು ಎಂದು ನೋಡುವ ವಿಚಾರ. ಹೀಗೆ ದನಕರುಗಳನ್ನೂ ಜನರನ್ನೂ ಕೊಂದ ಕಥೆಗಳು ನಮ್ಮ ಜಿಲ್ಲೆಯಲ್ಲಿ ಕಡಮೆಯಾಗಿಲ್ಲ. ಹೀಗಿರಲು—ಮೇಲಿನ ವರಿಷತ್ತಿನ ಮಹತ್ವವನ್ನೂ ನಾವು ತಿಳಿಯಬೇಕಾಗಿದೆ.

ಪ್ರಾಣಿಗಳ ಜೀವನವು ಇಂದಿನ ವಿಜ್ಞಾನದೆಲ್ಲಿ ಪ್ರಾಮುಖ್ಯ ಸ್ಥಾನವನ್ನು ಪಡೆದಿದೆ. ಎಷ್ಟೋ ಪ್ರಾಣಿಗಳಿಂದ, ನಮಗೆ ಹಾನಿಯೆಂದು ಕಂಡುಬಂದರೂ, ತುಂಬಾ ಉಪಕಾರವಿದೆ. ಪ್ರಾಣಿಗಳು ಒಂದರ ಮೇಲೊಂದು ಹೊಂದಿರುವ ಪ್ರಾಣಿಗಳು. ಯುರೋಪಿನ ಒಂದು ಕಡೆಯಲ್ಲಿ ಜನರ ಗಿಡುಗನ ಶಿಕಾರಿಯನ್ನು ಆತಿಯಾಗಿ ಮಾಡಿದರು. ಇದರಿಂದ ಅಲ್ಲಿ ನೊಲಗಳ ಹಾವಳಿಯು ವಿಶೇಷವಾಗಿ ರೈತರಿಗೆ ಹಾನಿಯುಂಟಾಯಿತು. ಸಿಂಗಿಗೆ ಆದಿಪತ್ಯ ಪಡಕ್ಕೊಂಡ ಸಿಂಗಿಗಳು ಬಂಧನದಿಂದ ಪ್ರಾಣಿಗಳ ಹತ್ಯೆಯು ಅನರ್ಥಕ್ಕೆ ಕಾರಣವಾಗಬಹುದು. ಅಲ್ಲದೆ ಕಪ್ಪಲ್ಲಿ ವಿಜ್ಞಾನದ ಅರಿವಿಲ್ಲದವರು ಬಹಳ. ಪ್ರಾಣಿಜೀವನವಾಗಲಿ, ನಿಸರ್ಗ ಸ್ವೀಮವಾಗಲಿ ವಿಜ್ಞಾನದ ವರಿಶೀಲನೆಗೆ ಅನಿವಾರ್ಯವಾದ ವಿಷಯಗಳು. ಇದರ ಅವಶ್ಯಕತೆಯನ್ನು ಅಂತ ಪ್ರತಿಯೊಬ್ಬರೂ, ಈ ರೀತಿಯ ಹತ್ಯೆಯನ್ನು ಖಂಡಿಸುತ್ತಿದ್ದಾರೆ. ಬೇಟೆಗಾರರ ಹಾವಳಿಯಿಂದ ಎಷ್ಟು ಸುಂದರ ಮೃಗಪಕ್ಷಿಗಳ ಹುಟ್ಟು ಅಡಗಿಹೋಗಿದೆ. ಇಂದು ನಮ್ಮ ಕಾಡುಗಳಲ್ಲೂ ವಿಜಾತೀಯವಾದ ಮೃಗಗಳೂ ಗುಂಡಿಗೆ ತುತ್ತಾಗಿ ನಾಮಶೇಷವಾಗುತ್ತಿವೆ. ಖಡ್ಗ ಮೃಗಗಳ ಸಂಖ್ಯೆಯು ಹಿಂದೂಸ್ಥಾನದಲ್ಲಿ ಬೆರಳಿಂದೆಣಿಸುವಷ್ಟಿಲ್ಲ. ವಿಚಾರಹೀನ ಬೇಟೆಯ ಪರಿಣಾಮವಿದು. ಪರಿಣಾಮವಾದ (Evolution theory) ದಂಥ ಪ್ರಾಮುಖ್ಯ ವಾದಗಳ ನಿರ್ಣಯಕ್ಕೆ–ಈ ನಾನಾಶೇಷವಾದ ಸ್ಥಾನಗಳು ಎಷ್ಟೋ ಸಹಾಯವಾಗುತ್ತಿದ್ದುವು.

ಈಗಾಗಲೇ ನಮ್ಮ ಕಾಡುಗಳಲ್ಲಿ 'ಬರಿಕೆ' ದಂಥ ಪ್ರಾಣಿಗಳ ವಿಚಾರಹೀನ ಶಿಕಾರಿಯಿಂದ ಸಂಖ್ಯೆಯು ಕಡಿಮೆಯಾಗುತ್ತಿದೆ. ಕರಾವಳಿಯಲ್ಲಿ ಕೋಗಿಲೆಗಳ ಹುಟ್ಟು ಅಡಗುತ್ತ ಬಂದಿದೆ. ನನಗೆ ಅದು ತಿಳಿಯದೆ ಹೋದರೂ ಇನ್ನು ಮುಂದೆ ಬರುವ ನನ್ನ ಮುಂದಿನ ನಿಸರ್ಗ ಪ್ರೇಮಿಗಳ ಸಲುವಾಗಿ ಈ ಪ್ರಾಣಿಗಳನ್ನು ಕಾಯುವುದು ಅವಶ್ಯವಾಗಿದೆ.

ಆನಂದದ ದೃಷ್ಟಿಯಿಂದಲೂ ನಿಸರ್ಗವು ಕಡಲೆಯ ಉದ್ಯಾನವಲ್ಲ. ಹಿಂದೊಮ್ಮೆ ಕೋವಿಗಳನ್ನು ಹಿಡಿಯುತ್ತಿದ್ದ ಬೇಟೆಗಾರರು, ಈಗ ವಿದೇಶಗಳಲ್ಲಿ ಕೆಮರಾಗಳನ್ನು ಹಿಡಿದು, ವನಮೃಗಗಳ ಜೀವನಚಿತ್ರವನ್ನು ವರಿಶೀಲಿಸಿ ತಮ್ಮ ಆನಂದನನ್ನು ಹೆಚ್ಚಿಸುವುದಲ್ಲದೆ, ಜಗತ್ತಿನ ಜ್ಞಾನವನ್ನೂ ವಿಂಗಿಸುತ್ತಿದ್ದಾರೆ.

ನಮ್ಮಲ್ಲಿನ ಪಠ್ಯಪುಸ್ತಕಗಳಲ್ಲಿ, ಚಿಲುಮೆ ವನ ವೃಕೃತಿ ವಿಜ್ಞಾನದ ವಾಕಗಳೆಷ್ಟಿವೆ? ಪ್ರಾಣಿ ಜೀವನ ಶೋಧನೆಯ ವಿಚಾರವಿದೆಯೇ! ಮರಿಯಿಡುವ ಹಾವುಗಳಿರುವುವೇ–ಎಂದು ಕೇಳಿದರೆ ಯಾರಿಗೆ ತಿಳಿದಿದೆ? ಇದರ ಸಲುವಾಗಿ ಮೇಲಿನ ವರಿಷತ್ತಿನವರು—ನಮ್ಮ ಪಠ್ಯಪುಸ್ತಕಗಳಲ್ಲಿ ನಿಸರ್ಗದ ವಾಕಗಳು ಹೆಚ್ಚಬೇಕೆಂದು ಮಾಡಿದ ಸೂಚನೆಯು ವ್ಯರ್ಥವಾಗುವಲ್ಲ. ನಮ್ಮ ದೇಶದವರು ನ್ಯಾಣಜೀವನದ ವರಿಶೀಲನೆಯಿಂದ ಜೀವನದ ಸೊಬಗನ್ನು ಹೆಚ್ಚಿಸಿಕೊಳ್ಳಲು ಹಿಂದುಳಿಯಬೇಕೆ?

ನಮ್ಮ ಜಿಲ್ಲೆಯಲ್ಲೂ ಈ ರೀತಿ–ಕಾಡು ಮೃಗಗಳ ರಕ್ಷಣೆಗೂ, ರಾತ್ರಿ ಶಿಪಾರಿಯ ಬಗ್ಗೆ ನೈವಸ್ಥೆಯಾಗುವುದು ಅತಿ ಅವಶ್ಯವಿದೆ. ರೈತನಿಗೆ ಹಾನಿಯಾಗದ ರೀತಿಯಲ್ಲಿ, ಕಾಡುಮೃಗಗಳು, ಅವುಗಳು ಹುಲಿಯಂಥ ಕ್ರೂರ ಮೃಗಗಳೇ ಇರಲಿ, ರಕ್ಷಣೆಯು, ನಾಡಿನ ಕರ್ತವ್ಯವು. ವಿಜ್ಞಾನವೆಂಬುದು, ಹಿಂದಿನ, ಇಂದಿನ ಇನ್ನು ನುಂದಿನ ಸಂಪತ್ತು. ಆ ದೃಷ್ಟಿಯಿಂದ ನಮ್ಮ ಕಾಡುಗಳಲ್ಲಿ, ಬೇಲಿಯಲ್ಲಿ ಕಿರುಗುವ ಹಕ್ಕಿಗಳ ಜೀವಗಳು—ನಮ್ಮ ನಾಡಿನ ಐಶ್ವರ್ಯವೆಂದು ನಾವು ರಕ್ಷಿಸಬೇಕಾಗಿದೆ.

ಉಪಾಧ್ಯಾಯರ ಮುಷ್ಕರ!

ನಾರ್ವಾ ಜಿಲ್ಲಾ ಕೌನ್ಸಿಲರ ಅಧೀನದಲ್ಲಿರುವ ಶಾಲೆಗಳ ೨೫೦ ಪ್ರಾಮುಖ ಉಪಾಧ್ಯಾಯರು ತಾ. ೧೫ರಲ್ಲಿ ಒಂದು ಮೆರವಣಿಗೆಯನ್ನು ಹೊಡಿಸುತ್ತಾ ಕೌನ್ಸಿಲ್ ಸದನದ ಬಳಿಗೆ ಬಂದರು. ಅವರನ್ನು ಸಿಟಿ ಸುಪರಿಂಟೆಂಡೆಂಟ್ ಆಫ್ ಪೋಲೀಸ್ ಇವರು ತಡೆದರು. ಪೊಲೀಸರಿಗೂ ಇವರಿಗೂ ಜಗಳ ಶುರುವು. ಅಷ್ಟರಲ್ಲಿ ನಾರ್ವಾ ಪ್ರಾಮುಖ ಉಪಾಧ್ಯಾಯ ಪರಿಷತ್ತಿಗೆ ಇತ್ತೀಚಿಗೆ ಆಯ್ಕೆಯಾಗಿದ್ದ ಶ್ರೀ ಎಸ್. ಎಮ್. ದೇಶಮುಖರವರು ಬಂದು ಈ ಉಪಾಧ್ಯಾಯರಿಗೆ ಬುದ್ಧಿ ಹೇಳಿ ಕಾನ್ಸ ಈ ಬಗ್ಗೆ ಕೌನ್ಸಿಲನಲ್ಲಿ ಕರಾರು ತರುವೆನೆಂದು ಆಶ್ವಾಸನೆಯಿತ್ತರು.

'ದಂಡೇ ದನಕರಂಗೆ ದುಷಸಂಬಂಧವು ಬಂತು!

ಕಳೆಯಕೆ ಮುಳ್ಳು ಪಾಪ ಉಳಿದ ಕೃತ್ಯಜುಂಡ ಮುಂಬಾಯಿ ಸರ್ಕಾರ ನೌಕರರಲ್ಲಿ ಬಂಗಿಯಂದ್ದ ಭಾರತೀಯರ 'ಸ್ವದೇಶಿ ದನಕರ' ರಾಷ್ಟ್ರಗೀತೆಯನ್ನು ಗೌರವಿಸಬಾರದೆಂದು ಅಪ್ಪಣೆ ಕೊಡಲಾಗಿದೆ. ಅದರೊಡನೆ ರಾಷ್ಟ್ರೀಯ ಸಮಾಚಾರವು ಸೂಚಿಸಿದೆ ಎಂದಾಗಿದೆ.

ತನ್ನ ನೇಮಕಾರಿಗೆ ಸರಕಾರವು ಹಲವು ಸೂಚನೆಗಳ ಪತ್ರಗಳನ್ನು ಕಳಿಸಿಸುತ್ತಾ—'ದಂಡೇ ದನಕರಂ ಗೀತವು ಪ್ರತಿಷ್ಠ ರಾಷ್ಟ್ರಗೀತೆಯ ಸ್ಥಾನದಲ್ಲಾಪ್ರಯೋಗ ಸಲ್ಲುತ್ತಿಲ್ಲ. ಬರೀಕಿಯರ ಗೀತೆಯಲ್ಲಿ ವೈಶಿಷ್ಟ್ಯವೇನಿಲ್ಲ ಇದ್ದರೂ ಆಶಯದ ಪ್ರತಿಷ್ಠ ವಿರೋಧ ಭಾವನೆಗಳಿರುವುದರಿಂದ ಆ ಗೀತೆಯು ಅಷ್ಟು ಪಶ್ಚಾರ್ಯಕ್ಕೆ ಬಂತೆಂದು ಸರಕಾರವು ಊಹಿಸುತ್ತದೆ" ಎಂದಿರುವರು. ಅಲ್ಲದೆ ಈ ರಾಷ್ಟ್ರಗೀತೆಯೆಂಬುದು ಹಿಂದೂಸ್ಥಾನ್ಕರ ಗೀತೆಯಾಗಿರುತ್ತದೆ. ಆದುದರಿಂದ ಅದನ್ನು ವಿರೋಧಿಸಬೇಕಾಗಿದೆ. ಈ ಗೀತೆಯು ಹಾಡಲ್ಪಡುವಾಗ ಸರಕಾರೀ ನೌಕರರು ಎದ್ದು ನಿಲ್ಲುವುದಾಗಲೀ ಅದನ್ನು ಮನಸಿನುವುದಾಗಲೀ ಕೂಡದು. ಅದನ್ನು ಹಾಡುವ ಸಮಯದಲ್ಲಿ ಸಭೆಯಿಂದ ಹೊರಗೆ ನಡೆಯತಕ್ಕದ್ದು. ಹೀಗೆಯೇ ರಾಷ್ಟ್ರಧ್ವಜವನ್ನೂ 'ಯೂನಿಯನ್ ಜೇಕ್'ನ ವಿರುದ್ಧವಾಗಿ ಉಪಯೋಗಿಸಲಾಗುತ್ತದೆ. ಇದೂ ಮತ ಭೇದಕ್ಕೆ ಕಾರಣವಾದುದು. ಯಾವ ಕಾರ್ಯಕ್ರಮಗಳಲ್ಲಾದರೂ ಈ ರಾಷ್ಟ್ರಗೀತೆ ಮತ್ತು ರಾಷ್ಟ್ರಧ್ವಜಗಳಿದ್ದರೆ ಆಂಥ ಕಾರ್ಯಕ್ರಮಗಳನ್ನು ಬಿಟ್ಟುಬಿಡಬೇಕು ಎಂದು ಮುಂಬಾಯಿಯ ಸರಕಾರವು ತಿಳಿಸಿರುತ್ತದೆ.

ನಿಲಿಯಾಧಿಪತಿಗಳು ಸಾಯುತ್ತಾರೋ–

ಎಂಬ ಸಂದೇಹದಿಂದಿರುವವರೂ ಈ ಲೋಕದಲ್ಲಿರಬಹುದು. ಅವರ ಸಂದೇಹ ನಿವಾರಣಾರ್ಥ ಒಂದು ವಾರ್ತೆಯಿದೆ. ಬ್ರಿಟನ್ನಿನಲ್ಲಿ ೧೯೩೦ರ ಜನಿವರಿಯ ತಿಂಗಳುಗಳಲ್ಲಿ ೧೧ ಮಂದಿ ಮಿಲಿಯನೇಯರು ಸತ್ತು ಕೊಂಡರು. ಪರಂಧಾಮವನ್ನೈದಿದರೆನ್ನಲೂ ಬಹುದು. ಇತ್ತೀಚೆಗೆ ಕಾಲವಾದವರಲ್ಲಿ ಪಿಟ್ ಜೋರ್ಜ್ ಹರೋಲ್ಡ್ ಎಂಟರ್‌ಟೋತಂ ಎಂಬವರು. ಇವಕ್ಕಿಂತ ಮೊದಲು ಟೋರ್ಡ್ ರಿಡೆಲ್, ಫೆರಿಂಗ್ಡನ್, ತ್ರಿಸಗಾರ್ ಮತ್ತು ಡಿವೆನ್ ಪೋರ್ಟ್ ಎಂಬವರು ದಿವಂಗತರಾದರು

ನೂರು ವರ್ಷ ಸ್ಥಾಯಿದ ಮುನಿಸಿಪಾಲಿಟಿ

ಇದೆಯೆಂದು ಇದನ್ನು ಓದಿದ ಮೇಲೆ ನಿಮಗೆ ತಿಳಿಯಬಹುದು. ಅಮೃತಾಬಾದ್ ಮುನಿಸಿಪಾಲಿಟಿಯ ಶತಮಾನೋತ್ಸವವು ಇದೇ ಮಾರ್ಚ್ ತಾ. ೨೦ಂದ ಪ್ರಾರಂಭವಾಗಲಿದೆ. ಸರದಾರ ವಲ್ಲಭಭಾಯಿ ಪಟೇಲರು ಅಧ್ಯಕ್ಷರು. ಪಸ್ತು ಪ್ರದರ್ಶನವನ್ನು ಶ್ರೀಮತಿ ಸರೋಜಿನಿ ನಾಯ್ಡುರವರು ತೆರೆಯುವರು.

ಭೂತದೆ ಬಾಧೆ

ಈ ವಾರ್ತೆಯನ್ನು 'ಹಿಂದೂ' ಪತ್ರಿಕೆಯಿಂದ ತೆಗೆಯಲಾಗಿದೆ "ತಾ. ೨೬ರಲ್ಲಿ ಕಡಪಾದಿಂದ ಬಂದ ಒಂದು ವಾರ್ತೆ ಹೀಗಿದೆ: ಈ ಊರಿನ ವಕೀಲರಾದ ಶ್ರೀ ಪಿ. ಸುಬ್ಬರಾಯ್ ಎಂಬವರ ಮನೆಯಲ್ಲಿ ಅದ್ಭುತ ಘಟನೆಗಳು ಸಂಭವಿಸುತ್ತವೆ. ಕೆಲವು ವೇಳೆ ಕೋಣೆ ಯೊಳಗೆ ನೀರು ಹರಿದು ಸುಬ್ಬರಾಯರ ತಾಯ್ಮಯವರು ಒದ್ದೆಯಾಗುತ್ತಾರೆ. ಕೆಲವು ವೇಳೆ ಕೋಣೆಯೊಳಗಿನ ಸಾಮಾನುಗಳ ಮೇಲೆ ಕಲ್ಲುಗಳು ಬೀಳುತ್ತವೆ. ಸಾಮಗ್ರಿಗಳನ್ನು ಎತ್ತಿಕೊಂಡು ಬೆಳಿಯ ಬಾಯಲ್ಲಿ ಎಸೆಯಲಾಗುತ್ತದೆ. ಯಾರೆಂದು ಕಾಣುವುದಿಲ್ಲ. ಕಂಡಕಂಡಂತೆ ಕಲ್ಲನೆ ಬೆಂಕಿಯೆದ್ದು ಸಾಮಾನುಗಳು ಸುಟ್ಟು ಹೋಗುತ್ತವೆ. ಶ್ರೀ ಸುಬ್ಬರಾಯರು ಕಲಾಟ ನಲ್ಲಿಟ್ಟ ರಿಕಾರ್ಡು ಒಂದನ್ನು ನಿನ್ನೆ ಸುಡಲಾಯಿತು. ಹಗ್ಗದ ಮೇಲಿದ್ದ ಒಂದು ವಸ್ತ್ರಕ್ಕೆ ಬೆಂಕಿ ಹಿಡಿಯಿತು. ಕಾರಣ ತಿಳಿಯುವುದಿಲ್ಲ. ಈ ದಿನ (ತಾ. ೨೬) ಅಲ್ಲಿಯ ಕಲೆಕ್ಟರರಾದ ಶ್ರೀ ನರಸಿಂಹ ಪಂತಲು ಮತ್ತು ನಾನು (ನಿಮ್ಮ ವಾರ್ತಾದಾಯಕ) ಅಲ್ಲಿಗೆ ಹೋದೆವು. ಸುಟ್ಟ ವಸ್ತ್ರ, ರಿಕಾರ್ಡು, ಬಿದ್ದ ಕಲ್ಲುಗಳನ್ನು ಕಂಡವು. ಒಂದು ಕಲ್ಲು ಗಡಿಯಾರದ ಮೇಲೆ ಬಿದ್ದಿದೆ. ಪಟಕ್ಕ ನೇಕೆಂದರೆ ಪ್ಲೇಟರ ಕೋಣೆಯಲ್ಲಿ ಇಂತಹ ಹಾವಳಿಯಾಗಿಲ್ಲ. ಯಾವ ಸಮಯದಲ್ಲಿ ಏನು ಘಟಿಸುತ್ತದೆಂದು ಹೇಳಲು ಸಾಧ್ಯವಿಲ್ಲ. ಮನೆಯವರೆಲ್ಲಾ ಬಹು ಭಯಕ್ಕೊಳಗಾಗಿರುವರು. ಜನರು ಗುಂಪು ಗುಂಪಾಗಿ ಬಂದು ನೋಡುತ್ತಿರುವರು. ಕೆಲವು ದಿನಗಳ ಹಿಂದೆ ಬ್ಯಾ ಳಿಕ್ಕೆಯನ್ನು ಸುಬ್ಬರಾಯರ ತಂದೆಯವರು ಕೈದು ಬಿಸಿದರು. ಅಂದಿನಿಂದ ಈ ಬಹಿಷ್ಕಾರಗಳು ನಡೆಯುತ್ತವೆ. ಭೂತದ ಬಾಧೆಯೆಂದು ಕೃತೀ ಯಿದೆ.

ನಮ್ಮ ದೇಶದ ಆಂಬಿಖಾತೆಗಳು

ನಷ್ಟಕ್ಕೊಳಗಾಗಿ ಆಯಗಳ ಪೌಕರು ಅಂತಿಕ್ಕ ಬಲಿ ಬೀಳುತ್ತಿರುವುದಾಗಿ ಬ್ರಿಟಿಷ ಇಂಡಿಯಾದಲ್ಲಿ ೬೦೦ ಕೆಲಸಗಾರರಿಗೆ ಒಟ್ಟು ಸು.೨,೦೦೦ ಬೆಲೆಯ ಹೊಸ ಸಂಬಳ ಕೊಡುವ ನಿರ್ಧಾರವಾಗಿದೆ. ಈ ೬೦೦ ಜನ ರಲ್ಲಿ ಸುಮಾರಿಂದ ೬೦೦ ವರೆಗೆ ಸುಪರಿಂಟೆಂಡೆಂಟ್ ಆಫೀಸರುಗಳು, ಇವರೆಲ್ಲರ ಕೆಲಸವನ್ನು ನೋಡಿ ಇವರಿಗೆ ಇನ್ನೂ ಹೆಚ್ಚು ಸಂಬಳ ಕೊಡಬೇಕಾದೀತೆಂದು ಹೌಸ್ ಆಫ್ ಕಾಮನ್ಸ್‌ರ ಸದಸ್ಯರಾದ ಸರ್ ಕಂಗ್ಸ್‌ಲಿ ವುಡ್‌ರವರು ತಿಳಿಸಿದರು.

ಶ್ರೀ ಎಮ್. ಕೆ. ಆಚಾರ್ಯರ ನಿಧನ!

ಗಿಂಡಿಯಲ್ಲಿ ಜೊನ್ನೆ ನಡೆದ ಗವರ್ನಮೆಂಟ್ ಹೌಸ್ ಪಾರ್ಟಿಗೆ ಹೋಗಿ ಹಿಂದಿರುಗಿದ ಮದ್ರಾಸಿನ ಪ್ರಸಿದ್ಧ ವೈದ್ಯರಲ್ಲೊಬ್ಬರಾದ ಶ್ರೀ ಎಮ್. ಕೆ. ಆಚಾರ್ಯರವರು ಹೃದ್ರೋಗದಿಂದ ಅಕಸ್ಮಿಕವಾಗಿ ತೀರಿ ಕೊಂಡರು. ಇವರು ಕಾಸಿನ ಸಭೆಯ ಸದಸ್ಯ ಮುಂಬಯಿ ರಾಜಧಾನಿಯ ಅನೇಕ ಸಾರ್ವಜನಿಕ ಸಂಸ್ಥೆಗಳಲ್ಲಿ ಕೆಲಸ ಮಾಡಿದವರು. ಅಲ್ಲದೆ ಸನಾತನಿಗಳ ಪರಿವಾರದ ಒಂದು ಮನೆಯನ್ನು ಲಂಡನಿಗೆ ಕೊಂಡೊಯ್ದು ಗಾಂಧಿಜೀಯವರ ದೇವಸ್ಥಾನ ಪ್ರವೇಶ ಚಳವಳಿಗೆ ವಿರೋಧವಾಗಿ ವರ್ತಿಸಿದವರು.

ತಾಜಮಹಾಲ್ ಹೊಟೆಲಿನ ಮಾಳಿಗೆಯಿಂದ—

ಮುಂಬಾಯಿಯ ಕ್ರೈಸ್ ಮತ್ತು ಕಂಪೆನಿಯ ಜನರಲ್ ಮೆನೇಜರರಾದ ಮಿ ಎಚ್. ಸಿ. ನೈಟ್‌ಹೌಸ್ ಎಂಬವರು ತಾ. ೨೯ರಲ್ಲಿ ಬೆಳ್ಳು ಮುಂಜಾವದಲ್ಲಿ ತಾಜಮಹಾಲ್ ಹೊಟೆಲಿನ ಮಾಳಿಗೆಯಿಂದ ದಿಢೀರೆಂದು ಬೀಳುವ ಪೂರ್ವ ಝಾಮ್ಯರ್ಯಾಮವಾಗಿ ಅವರು ಕ್ಷಣದಲ್ಲಿ ಪ್ರಾಣ ಬಿಟ್ಟರು.

ಶ್ರೀ ಗೋವಿಂದ ರಾಘವ ಐಯರರ ನಿಧನ.

ಮದ್ರಾಸಿನ ಪ್ರಸಿದ್ಧ ವಕೀಲರಾದ ದಿವಾನ್ ಬಹದ್ದೂರ್ ಎಲ್. ಗೋವಿಂದ ರಾಘವ ಅಯ್ಯರರು ತಾ. ೨೯ರಲ್ಲಿ ತಮ್ಮ ೬೫ನೆಯ ವರ್ಷದಲ್ಲಿ ಕಾಲವಾದರು. ಇವರ ಮರಣದಿಂದ ದುಃಖಿಗೊಂಡು ಕೋರ್ಟುಗಳಲ್ಲಾ ಸಾರ್ವಜನಿಕ ಸಂಸ್ಥೆಗಳಲ್ಲೂ ಸಂತಾಪ ಸೂಚನೆ ಯಾಯಿತು. ಎಡ್ವೊಕೇಟು ಜನರಲರು ಇವರ ಪಾವನವೂ ಪ್ರಯೋಜನಕಾರಿಯೂ ಆದ ಜೀವನವನ್ನು ಪ್ರಶಂಸಿಸಿ ಮಾತನಾಡಿದರು.

ಐಯರ್ಲೆಂಡ್–ಜರ್ಮನಿಗಳು

ಒಂದು ವಾಣಿಜ್ಯ ಕರಾರನ್ನು ಮಾಡಿಕೊಂಡಿವೆ. ಐಯರ್ಲೆಂಡಿನ ದನಕರು, ಉಣ್ಣೆ, ಚರ್ಮ ಮೊದಲಾದವುಗಳನ್ನು ಜರ್ಮನಿಗೆ ಕೊಂಡೊಯ್ದು ಮಾರಲಿಪ್ಪಂದೂ ಜರ್ಮನಿಯ ಸಾಮಾನುಗಳನ್ನು ಐಯರ್ಲೆಂಡಿನಲ್ಲಿ ವಿಕ್ರಯಿಸಬಹುದೆಂದೂ ಒಪ್ಪಂದವಾಗಿದೆ ಜರ್ಮನಿಯು ಸರಳುಗಳನ್ನು ಪಡೆಯದೆ ಅವನ್ನು ಕಚ್ಚಾಕೃತಿಯು ಮಾಡಬೇಕೆಂದು ಬಗೆದ ರಾಷ್ಟ್ರಗಳು ಆಕ್ಷೇಪಿಸಿದೆ.

ಚರ್ಚಿಲ್‌ರವರ ಪಟ್ಟಾಭಿಷೇಕದ—

ರಾಜತೆಕ್ಕಾಕ್ಷದ ದಿನ—ನೇ ಜನೇ ದಿನ—ಸ್ಥಳಕಾರ್ಮಿಕ ನೌಕರರಿಗೆ ಸಂಬಳ ಸಮೇತದ ರಜೆಯಿದೆಯೆಂದು ಮೆಕ್ಕೆನಾಲ್ಡರು ತಿಳಿಸಿರುವರು.

ಗಾಂಧಿಜೀಯವರು ದಿಲ್ಲಿಯಿಂದ ಹೊರಟರು.

ಮಹಾತ್ಮ ಗಾಂಧಿಯವರು ಕಸ್ತೂರಿಭಾಯಿ ಗಾಂಧಿ ನೊದಲಾದವರನ್ನು ಕೂಡಿಕೊಂಡು ನ್ಯೂದಿಲ್ಲಿಯಿಂದ ಬಾರ್ಡಾಕ್ಕೆ ತೆರಳಿದರು. ಪರಜನೋದ್ಧಾರ, ಅಸ್ಪೃಶ್ಯತಾ ನಿವಾರಣೆಗಳ ಸಂಬಂಧವಾದ ಚರ್ಚೆಗಳನ್ನು ಕಾಸನ ಸಭೆಯಲ್ಲೆತ್ತಬೇಕೆಂದು ಅವರು ಹಲವು ಸದಸ್ಯರಿಗೆ ಸೂಚಿಸಿದರು. ಶ್ರೀ ಪಲ್ಲಭಾಯಿ ಪಟೇಲ, ಶ್ರೀ ಭುಲಾಭಾಯಿ ದೇಸಾಯಿ ಮುತ್ತು ಶ್ರೀಮತಿ ಸರೋಜಿನಿ ನಾಯ್ಡುರವರು ಅವರನ್ನು ಜೀರ್ಕೊಂಡರು.

ಒಬ್ಬಯೂದ ಅಧ್ಯಕ್ಷರನ್ನಾಗಿ

ಜೋಸ್, ಬಗ್ಸ್, ಲಯಿಂಬದ ಆರ್ಡಿಷ್ಕಿಳ್ ಯೂನಿಯನ್ ಎಂಬವರನ್ನು ಯೂನಾಯ್ಟಸ್‌ಸ್ಟೇಟ್ಸ್‌ನ ಮುಂದಿನ ಎಲೆಕ್ಷನ್‌ನಲ್ಲಿ ಪ್ರಾರ್ಥಿಯಾಗಿ ನಿಲ್ಲುವಂತೆ ಕೇಳಿಕೊಳ್ಳಲಾಗಿದೆ. ಇವರ ತಂದೆಯವರು ಸುಮಾರು ೪೦ ವರ್ಷಗಳ ಹಿಂದೆ ಒಬ್ಬಯೂ ಪಟ್ಟಣದಲ್ಲಿ ಬಂದು ನೆಲೆಸಿದ್ದರು. ಇವರು ಸಹ ಅಲ್ಲಿಯೇ ಹುಟ್ಟಿ ಬೆಳೆದವರು. ಇವರು ಸಹ ಒಬ್ಬಯೂ ಪಟ್ಟಣದಲ್ಲಿ ಪ್ರಾರಂಭದಲ್ಲಿ ಕೆಲಸಮಾಡಿ ಕೊನೆಗೆ ಅಲ್ಲಿಯೇ ಒಂದು ಅಂಗಡಿಯನ್ನು ಇಟ್ಟುಕೊಂಡಿದ್ದರು. ಇವರು ಸಹ ಅಲ್ಲಿಯೇ ಹುಟ್ಟಿ ಬೆಳೆದವರು. ಇವರು ಸಹ ಅಲ್ಲಿಯೇ ಹುಟ್ಟಿ ಬೆಳೆದವರು. ಇವರು ಸಹ ಅಲ್ಲಿಯೇ ಹುಟ್ಟಿ ಬೆಳೆದವರು.

ಹಾಟಿಯಾಲದ ಮಹಾರಾಜರಾದ ಸರ್. ಭೂಪೇಂದ್ರ ಸಿಂಗರು.

ಇವರು ಸರೋಜ್ಯ ಮುಂಡದ ಚಾನ್ಸಲರರಾಗಿ ಆರಿ ಸಲ್ಪಟ್ಟಿದ್ದರು. ಇವರು ಸಾರ್ವಭೌಮರ ಪಟ್ಟಾಭಿ ಷೇಕದ ಉತ್ಸವಕ್ಕಾಗಿ ಇಂಗ್ಲಾಂಡಿಗೆ ಹೋಗಲಿದ್ದಾರು. ಈಗ ಫೆಡರೇಷನ್-ಆಲೋಚನೆಯು ರಹಸ್ಯವಾಗಿ ಆದುದರಿಂದ ಟ್ಯಾಯದಲ್ಲಿ ಹೆಚ್ಚಿನ ಅಂದೋಲನಕ್ಕೆ ಕಾರಣವಾಗಿದೆ.

ಸ್ವೀಯರ್ ಅಜಾಗ್ರತೆಯಿಂದುರಬ್ಬಾಗುವ

ಅಪಾಯವೆಂದರೆ ಅವರ ಬಸ್ತ್ರಕ್ಕೆ ಅಡಿಗೆ ಕೋಣೆಯಲ್ಲಿ ಬೆಂಕಿ ತಗಲುವುದು. ಮುಂಬಯಿ ಫುಲ್ಲಿ ಆ ತಿಂಗಳ ಹಿಂದೆ ವಿವಾಹಿತಳಾದ ೧೩ ವರ್ಷ ಪ್ರಾಯದ ಗುಜರಾತಿ ತರುಣಿಯೊಬ್ಬಳು ಅಡಿಗೆಕೋಣೆಯಲ್ಲಿ ಒಲೆಗೆ ಬೆಂಕಿ ಹತ್ತಿಸುವಾಗ ಅವಳ ಬಸ್ತ್ರಕ್ಕೆ ಬೆಂಕಿ ತಗಲಿತು. ದುರದೃಷ್ಟವಶಾತ್ ಅಡಿಗೆ ಕೋಣೆಯು ಬಾಗಿಲು ಹಾಕಲ್ಪಟ್ಟಿತ್ತು. ಆಪಳ ಬೊಬ್ಬೆಯು ನೆರೆಹೊರೆಯವರನ್ನೆಚ್ಚೆ ರಿಸಿದರೂ ಅವರಿಗೆ ಒಳಪ್ರವೇಶಿಸಲಾಗಲಿಲ್ಲ. ಅಸ್ಪರಲ್ಲಿ ಅವಳ ಭಾವನೆಯನು ಎಲ್ಲಂದರೋ ಹಿಂಬಂದು, ಜಾಗಿರಿಯಿಡಿದು ಅಡಿಗೆ ಕೋಣೆಗೆ ಧಾವಿಸಿದನು. ಆದರೆ ಹುಡುಗಿಯು ಪೂರ್ಣವಾಗಿ ಬೆಂದುಹೋಗುವುದರಲ್ಲಿದ್ದಳು. ಭಾವನೆಂಟನು ಕೂಡಿದಷ್ಟು ಪ್ರಯತ್ನಿಸಿದನು. ಅವನೂ ಬೆಂಕಿತಗಲಿತು. ಇವ್ವರನ್ನೂ ಆಸ್ಪತ್ರೆಗೊಯ್ಯಲು, ಅವರಿಬ್ಬರೂ ಶಾಲಂಫೀಸರಾದರು.

ಕಾರಣವು ತಿಳಿದಿಲ್ಲ—

ಕರಾಚಿಯ ಜನರಲ್ ಮೆಜಿಸ್ಟ್ರೇಟರಾದ ಶ್ರೀ ಎಸ್. ಸಿ ಸಿತ್ಲಾನಿಯವರು ಬಳಿಯಿದ್ದ ಗ್ಲಾಸ್ ಒಂದರ ನೀರನ್ನು ಕುಡಿದೊಡನೆ ತಾ. ೧೯ನೇ ದಿನ ಕೋರ್ಟಿನ ತನ್ನ ಆಫೀಸಿನಲ್ಲಿ ಕೆಳಗೆ ಬಿದ್ದು ಸಿಲ್ ಸರ್ಜನರಿಂದ ಆಸ್ಪತ್ರೆಗೊಯ್ಯಲ್ಪಟ್ಟರು.

ಆಕಾಶಗಂಗವಾದರೆ ಪರಿಣಾಮವೇನು?—

ಎಂದು ತಿಳಿಯಬೇಕಾದರೆ ಈ ಕತೆಯನ್ನು ಕೇಳಬೇಕು. ಫ್ರಾನ್ಸಿನ ಪ್ರಯೋಗಿಡೋವ್ ಎಂಬ ವೈದ್ಯನ ಪ್ರಕಾರ ಪ್ಯಾರಿಸ್‌ಮೇಲಂಡ ಎಂಬವನು ೬ ವರ್ಷಗಳ ಕಠಿಣ ಶಿಕ್ಷೆಗೊಳಗಾಗಿ ದಿನಪರತೆ ಮಾಡುತ್ತಿದ್ದನು. ಸುಸಾಧ್ಯ ತಾನೆಂದು ಅಧಿಕಾರಿಗಳಿಗೆ ಮನಗಾಣಿಸಿ ಅವರ ಮೆಚ್ಚುಗೆಗೆ ಪಾತ್ರನಾಗಿ ಬೇಗನೇ ನೆರೆಯಿಂದ ಹೊರಗಾಗುವನೆಂದು ಭಾವಿಸಲ್ಪಟ್ಟಿದ್ದನು. ಅವನು ನೆರೆಯಲ್ಲಿದ್ದಾಗ ಮೊನ್ನೆ ಅವನ ಪತ್ನಿಯು ದಾಂಪತ್ಯವಿಚ್ಛೇದ ಮಾಡಿ ಕೊಂಡಳು ಅವನಿಗೆ ಸಿಡಿಲು ಬಡಿದಂತಾಯಿತು. ಅದರೂ ಕನ್ನ ಮಕ್ಕಳಿಗೆ, ಅವುಗಳನ್ನು ತನ್ನ ತಾಯಿ ಸಾಕುವಳು ಎಂಬ ಸಮಾಧಾನವನ್ನು ತಾಳುತ್ತಿದ್ದಾಗ, ಆ ಮಕ್ಕಳನ್ನು ಅವನ ಪತ್ನಿಗೇ ಕೊಟ್ಟರೆಂಬ ವಾರ್ತೆ ಕಲಿತು. ಅದನಿಗೆ ಪ್ರಾಣವೇ ಭಾರವೆನಿಸಿತು. ಇದೇ ತಾ. ೨೦ರಲ್ಲಿ ಕೈದಿಗಳಾಗಿ ೦೦ ಗೆಲನು ಪದಾರ್ಥ ಬೇಯಿಸುತ್ತಿದ್ದ ಪಿಷಾದುಗೆ ಹಾರಿ ಬೆಂದು ಪ್ರಾಣ ಬಿಟ್ಟನು. ಕಲೆಯು ಪಾತ್ರೆಯೊಳಗಿತ್ತು. ಕಾಲುಗಳು ಮೇಲಿದ್ದುವು.

ದೊಡ್ಡ ಹುದ್ದೇದಾರರಾದರೇನು?

ಅವರು ಅಟವಾಡುವುದರಲ್ಲಿ ಮದ್ರಾಸು ಗವರ್ನರರಾದ ಲೋರ್ಡ್ ಎಲ್ಗಿನ್ ಸಾಹೇಬರು ತಾ. ೨೬ನೇ ದಿನ ಮದ್ರಾಸಿನ ಎಂ. ಸಿ. ಸಿ. ವಿ ಟೀಮು ನಲ್ಲಿ ಕೂಡಿಕೊಂಡು, ತಾನು ಕನ್ನನವಾಗಿ ಎಳ್ಳೆಂಬೈಲ್ಸ್ ಟೀಮಿನವರೊಡನೆ ಕ್ರಿಕೆಟ್ ಆಡಿದ್ದರು. ರಾಜಕಾರಣ ಪಟುಗಳು ಆಟದ ಪಟುಗಳಾಗುವುದು ಕ್ರೀಡ್ಯಕಂಗೆ ಆನಂದಜನಕ ವಿಷಯವಲ್ಲವೆ?

ಬಿಹಾರ್ ಭೂಕಂಪದ ಹಾವಳಿಯೆಷ್ಟು?

೧೧೫೬ ಮೈಲುಗಳಷ್ಟು ವಿಸ್ತೀರ್ಣದ ಭೂಮಿಯು ಭೂಕಂಪಕ್ಕೆ ಬಲಿಯಾಯಿತು. ಇಷ್ಟರಲ್ಲಿ ಶೇಕಡಾ ೧೫ರಷ್ಟು ಸ್ಥಳವು ಹೊಸದಾಗಿಯಂದ ತುಂಬಿಕೊಂಡಿದೆ. ೬ ಇಂಚ್ ಆಳಿಯ ವರೆಗೂ ಹೊಯಿಗೆ ಇದೆ. ಪ್ರತಿ ಮೂರು ತುಂಡು ಭೂಮಿಯಲ್ಲಿ ಒಂದು ತುಂಡು ಹಾಳಾಗಿದೆ. ಈ ವಿವರವು ಬಿಹಾರ ಮತ್ತು ಒರಿಸ್ಸಾ ಸರಕಾರದ ಸ್ವಕಾರಿಯಲ್ಲಿದೆ. ೧೯೨೪ರ ಮಾರ್ಚಿ ೧೦ರಲ್ಲಿ ಸರ್ವೆ ಕೆಲಸವು ಪ್ರಾರಂಭವಾಗಿ ಮೇ ತಾರೀಕು ೨೪ರಲ್ಲಿ ಕೊನೆಗೊಂಡಿತು.

ಭೀಕರ ಶೀತಪ್ರಹಾರ!

ಶಕೆವನಾರ ಯೂರೋಪು ಅಮೆರಿಕಾಗಳಲ್ಲಿ ಅಸಹ್ಯ ಪೀಯ ಶೀತಪ್ರಹಾರಕಾರಿಯಾಯಿತು. ಇಂತಹ ಚಳಿಯನ್ನು ಯೂರೋಪು ಖಂಡವು ಮುಂದೆಂದೂ ಅನುಭವಿಸಿಲ್ಲವೆಂದೂ ತಿಳಿಯಬರುತ್ತದೆ. ಹಿಮಬಿಸ್ಟು, ನೀರು ಗಟ್ಟಿಳಿಬ್ಬಿತ್ತು, ಅದರೊಡನೆ ಭಯಂಕರ ಸೆರೆಯೂ ಕಲೆಸೀರಿಯಂತ್ತಿದೆ. ಬ್ರಿಟಿಷರ ಅನೇಕ ಭಾಗಗಳಲ್ಲಿ ಹಿಮವು ಬಿತ್ತು. ೬೬ ಮೈಲು ವೇಗದ ಬಿರುಗಾಳಿಯೂ ಬೀಸಿತು. ಹೆರಿಯಾ, ನೈಟ್ ಹೆರಿಂಗ್ ಎಂಬ ಸ್ಟೀಮರು ಗಳೆರಡು ಸೀರಿನಿಂದ ಕೊಚ್ಚಿಕೊಂಡು ಒಯ್ಯಲ್ಪಟ್ಟವು. ಗಂಡಾ ಎಂಬ ಹಡಗವು ೨೦೦ಮಂದಿ ದಿನಪ ಪರಿಗೆ ಕಾಣಿಸಿದರೆ, ಮೂರು ದೇಶದ ಬಂದರುಕ್ಕೆ ಹೋಗಿ ತಲ್ಪ ಪಿತ. ಅಮೇರಿಕಾದಲ್ಲಿ ಬಿರುಗಾಳಿಯೆದ್ದು ೧೬೦ ಜನರು ಮೃತರಾದರು, ೫೦,೦೦೦ ಜನರು ನಿರಾಶ್ರಯರಾಗಲಾದರು. ದೆರುಗಾಳಿಗೆ ಸಿಕ್ಕಿನ ಒಂದು ವಿಮಾನವು ಪೆರಿಸ್ ಇಂಗ್ಲಾಂಡುಗಳ ಮಧ್ಯೆ ಹಾರುತ್ತಿದ್ದಾಗ ಆದರಲ್ಲಿ ೬೦೦೦ ಪೌಂಡು ಬೆಲೆಬಾಳುವ ಭಂಗಾರದ ಕೊರಗುಗಳು ಸಮುದ್ರಕ್ಕೆ ಬಿದ್ದುವು. ಕಂಪೆನಿಗಾದರು ಚಿಸಿದಂತೆ ಈ ಭಂಗಾರದ ಕ್ರಯ ೨೩೦೦೦ ಪೌಂಡು ಗಳಾಗುತ್ತದೆ.

ಶ್ರೀಲ ಪರಪ್ಪೆರಿದ್ದ ಬೋಸರು—

ತನ್ನ ದಿಗ್ಬಂಧನಕ್ಕಾಗಿ ಸರಕಾರವ ಬೇಟೆ ಮಾಡಿ ಹೂಡಿರಲಿದ್ದರು. ತನ್ನನ್ನು ಜನರು ಶಾಸನಸಭೆಗೆ ಚುನಾಯಿಸದಿದ್ದರೂ, ಗವರ್ನರ ಜನರಲರ ಅವಿಂಶ್ರಯವು ಬಂದಿದ್ದರೂ, ತನ್ನನ್ನು ಶರಾಂಧದಲ್ಲಿಟ್ಟು ತನ್ನ ಕರ್ತವ್ಯ ವನ್ನು ನೆರವೇರಿಸಲು ಸರಕಾರವು ಅನುಕೂಲಿಸದಿರು ವುದು ಯಾವ ಕಾರಣದಿಂದೆಂದು ವಿಚಾರಿಸುವುದಕ್ಕಾಗಿ ಶ್ರೀಯುತರು ತನ್ನ ವಕೀಲರಿಗೆ ಸೂಚನೆಯೆತ್ತಿರುವರು. ಈ ವಿಚಾರಣೆಯು ಕಲ್ಕತ್ತಾ ಹೈಕೋರ್ಟಿನಲ್ಲಿ ತನಿಖೆಗೆ ಬರುವುದು. ಶಾಸನಸಭೆಯಲ್ಲಿ ಲೇಬರ್ ಸುಂಬಂಧರು ಶ್ರೀಯುತ ಬೋಸರ ಬಂಧನದ ಪ್ರಶ್ನೆಯೆತ್ತಿ, ಆಗಕ್ಕೆ ಪಿದ್ದರೆ ಅವರು ನ್ಯಾಯಸ್ಥಾನದ ಆಶ್ರಯಕ್ಕೆ ಹೋಗಿ ಬಹುದೆಂದಿದ್ದರು.

ಸ್ವದೇಶಾಭಿಮಾನ-

ಇಲ್ಲವೆಂದು ಹೇಳಬೇಡಿ; ಲಂಡನ್ನ ಎಸೆಕ್ಸ್ ಹೋಲ್ ನಲ್ಲಿ ೩೦೦ ಮಂದಿ ಹಿಂದೀಯ ವಿದ್ಯಾರ್ಥಿಗಳು ಒಟ್ಟಾಗಿ "ಸ್ವಾತಂತ್ರ್ಯ ದಿನಾಚರಣೆ"ಯನ್ನು ಮಾಡಿ, ಕೊಂಗ್ರೆಸ್ಸಿನ ಆಲಯವನ್ನು ಪುನೈಸಿದರು. ವಿದೇಶದಲ್ಲಿರುವ ಹಿಂದೀಯರಿಗೆ ದೇಶಾಭಿಮಾನವಿಲ್ಲವೇನೆ?

ಸರ್. ಜೋನ್ ಸೈಮನರ ಮೇಲೆ ಮಹಾ ಆಪವಾದವು—

ಬ್ರಿಟಿನಿ ಬ್ರಿಟಿನಿನ ರಾಜಕೀಯ ಫೈಟರಿಗೆಗೂ, ಆದು ಶಸ್ತ್ರತ್ಯಾಗ ಮಾಡದಿರುವುದಕ್ಕೂ ಬ್ರಿಟಿಷ ರಾಜ ನೀತಜ್ಞರಿಗೆ ಶಸ್ತ್ರಸಿದ್ಧತೆಯು ಕಾರ್ಯನೀತಿಗಳಲ್ಲಿ ಒಳಗೆ ಇರುವುದೇ ಕಾರಣವೆಂದು ಈಗೀಗ ಬ್ರಿಟಿಷರಲ್ಲಿ ಅರೋ ಪಣೆಯಾಗುತ್ತಿದೆ. ವಿದೇಶೀಯ ಸಚಿವರಾದ ಸರ್ ಜೋನ್ ಸೈಮನರಿಗೆ ಶಸ್ತ್ರಸಂಗಡಿಯ ಕಾರ್ಯಾಗಾರಗಳಲ್ಲಿ ಅರ್ಥಿಕಸಂಬಂಧವಿದೆಯೆಂದು ಪೊಲ್ಲೆ ಬಂದಿಕಾರಿಲ್ಲಿ ಧುರೀಣರೊಬ್ಬರು ಭಾಷಣ ಮಾಡಿದ ಪರಿಣಾಮವಾಗಿ ಸೈಮನರು ಎಚ್ಚೆತ್ತು "ಅಂತಹ ಮಾತು ಸುಳ್ಳೆಂದು" ಪತ್ರಿಕೆಗಳ ಮೂಲಕ ಹೇಳುತ್ತಿರುವರು.

ಬರ್ಮದಲ್ಲಿ ಚಿಟ್ಟೆಯರರು—

ಕೆಟ್ಟುಕ್ಕಿದ್ದಾರೆಂದು ತೀರ್ಮಾನಿಸಿದ್ದಾರೆ. ಆದರಿಗೆ ಬರ್ಮ ಸರಕಾರವು ಹೆಚ್ಚಿನ ಸ್ಥೈರ್ಯಗಳನ್ನು ಕೊಟ್ಟಿಲ್ಲ. ಆದ್ದರಿಗೆ ಅಲ್ಲಿ ಸುಖಕ್ಕಂತ ಕಷ್ಟವೇ ಹೆಚ್ಚು. ಇದರ ನಿವಾರಣೆಗಾಗಿ ಮದ್ರಾಸಿನ ಶ್ರೀ ಆರ್. ರಮಣಾಥರ್ ಚಿಟ್ಟೆಯರರು ಇಂಗ್ಲಾಂಡಿಗೆ ತೆರಳಿ, ಅಲ್ಲಿ ರಾಜ್ಯಾಧಿಕಾರಿಗಳಿಗೆ ಸೂರೆಯಂಬಬೇಕೆಂದು ಹೊರಟುಹೋದರು.

ಮೊನ್ನಿನ ಚಳಿಯಿಂದುಂಟಾದ ಹಾವಳಿ.

ಎಂದೂ ಕಾಣಲಾಗದ ಚಳಿಯು ಹಿಂದೂಸ್ಥಾನದ ಸ್ವಾದರಿಸಿದೆಯೆಂದು ವಾರ್ತೆಯಿತ್ತಲ್ಲ. ಕಳೆದ ಸಾರ ನಾಸಿಕದಲ್ಲಿ ಚಳಿಗೆ ತುತ್ತಾಗಿ ಮೂವರು ಮೃತರಾದರು. ಗದ್ದೆಗಳು ಹಾಳಾದವು. ದ್ರಾಕ್ಷೆಗಳು ಉದುರಿ ಶೇಕಡಾ ೬೦ರಷ್ಟು ನಿಷ್ಪಯೋಗವಾಗಿದೆ. ಕರಾಚಿಯು ಕಾಡಿನಲ್ಲಿ ಮೂವರು ಚಳಿಯಿಂದಾಹುತಿಯಾದರು. ಕರಾಚಿಯಲ್ಲಿ ಚಳಿಯನ್ನು ಸಹಿಯಲು ಕೋಟಿಗೆ ಬಾಗಿಲು ಹಾಕಿ ಒಳಗೆ ಬೆಂಕಿ ಅತ್ಯಸಿ ಮಲಗಿದ ೬ ಮಂದಿ ಯುವಕರು ಬೆಳಗಾಗುವಲ್ಲರೇ ಅಸ್ಪತ್ರೆಗೊಯ್ಯಲ್ಪಟ್ಟರು. ಹೈದರಾಬಾದಿ ನಲ್ಲಿ ೪ ಜನರು ರೈಲ್ವೆಸ್ಟೇಷನಿನಲ್ಲಿ ಸತ್ತುಬಿದ್ದಿದ್ದರು. ಸಿಂಧ್ ದೇಶದಲ್ಲಿ ಸೈರುಪಟ್ಟಿಗಳ ಮೇಲೆ ಮುಂಜಾ ಸ್ಸೀಯ ಎಲ್ಲವೂ ಸಾರವಾಗಿವೆ. ಲಾಹೋರಿನಲ್ಲಿ ಚಳಿಯ ದೆಸೆಯಿಂದ ಏನೋ ನೀಯವು ತಲೆದೋರಿದೆ. ಗುಜರಾತಿನಲ್ಲಿ ಬೆಳೆಯು ಸಂಪೂರ್ಣ ಧ್ವಂಸವಾಗಿ ಜಲ್ಲಾ ಕೊಂಗ್ರೆಸ್ ಕಮಿಟಿಯು ಕಲ್ಲಭರಾಯಿ ಸಚೇಲರನ್ನು ಸಹಾಯಕ್ಕೆ ಕರೆದಿದೆ. ಉತ್ತರ ಹಿಂದೂಸ್ಥಾನದಲ್ಲೆಲ್ಲ ಜನರ ದೇಹಗಳು ಗಟ್ಟಿಬಟ್ಟುವಷ್ಟು ಚಳಿಯು ಹರಡಿದೆ.



ಬಡೋದೆಯ ಮಹಾರಾಜ ಗಾಯಕವಾಡರವರು.

(ಸಾರ್ವಭೌಮರ ಪಟ್ಟಾಭಿಷೇಕ ಮಹೋತ್ಸವದ ದಿನ ಇವರನ್ನು ಇವರ ಸಂಸ್ಥಾನಕ್ಕೆ "ಅರಸ"ರನ್ನಾಗಿ ಮಾಡಲಿರುವರು.)

ಮಿಸ್ ಕಜ್ಜನಳನ್ನು ನೋಡದವರು—

ಅವಳ ಹೆಸರನ್ನಾದರೂ ಕೇಳಬಹುದು. ಅವಳ ಹೆಸರು ಈಗ ಜಗದ್ವಿಖ್ಯಾತವಾಗಿದೆ. ಹೇಗೆಂದರೆ:—ಕಲ್ಕತ್ತದ ಉರ್ದೂ ಸಾಪ್ತಾಹಿಕವಾದ "ಹುಮಾಯೂ ಬಂಬ್" ಎಂಬವರ ಸಂಪಾದಕರಾದ ಮೌಲ್ವಿ ಮಹಾಮದ್ ಸಜೀದ್ ಎಂಬವರು ತನ್ನ ಪತ್ರಿಕೆಯಲ್ಲಿ ಕಜ್ಜನಳನ್ನು ಅವರಾಜಸನೋಚಿತವಾದ ಲೇಖನದಲ್ಲಿ ಪ್ರಕಟಿಸಿದ್ದರು. ತಂಗಳಿಗೆ ೫೦೦೦ ರೂಪಾಯಿ ಸಂಬಳಕ್ಕಿಂತ ಕಜ್ಜನವಾರಬೇಗಾದು ಯಾವ ಕಜ್ಜನಳಿಗೆ ಸಹಿಸಲಸಾಧ್ಯವಾಯಿತು. ಕೋರ್ಟಿನಲ್ಲಿ ಪಿರ್ಯಾದಿ ಮಾಡಿ ಕಜ್ಜನಳಿಗೆ ೧೫೦೦೦ ರೂಪಾಯಿಗಳನ್ನು ಪ್ರತಿ ವಾದಿಯು ಕೊಡುವಂತಾಯಿತು.

ಅಹ್ಮದಾಬಾದಿನಲ್ಲಿ ಪ್ರಚಂಡ ಮುಷ್ಕರ!

ತಮ್ಮ ಸಂಬಳದ ಮೇರೆದ್ದ ಶೇಕಡಾ ೧೦ರಷ್ಟು ಕಡಿತದ ಮೇಲೆ ಪುನಃ ಶೇಕಡಾ ೫೦ ಕಡಿತವನ್ನು ಮಾಡಿ, ತಲಸದ ತಾಸನ್ನು ೧೦ರಿಂದ ೧೪ಕ್ಕೆ ಸಲ್ಲಿಸಿ, ದಿಲ್ಲಿಯಲ್ಲಿ ನಿರಶನವ್ರತವನ್ನಾಚರಿಸಿದ್ದರಿಂಬುದರ ಪರಿಣಾಮವಾಗಿ ಅಹ್ಮದಾಬಾದಿನಲ್ಲಿ ಪ್ರಚಂಡ ಮುಷ್ಕರವು ತಲೆದೋರಿದೆ. ವೀವ್ಸ್ ಕೊಲೋನ್ ಎಂಬ ಕಂಪೆನಿಯವರು ಅಕಸ್ಮಿತವಾಗಿ ಕೈಚೆಲ್ಲಿ ಕುಳಿತರು. ಅಲ್ಲಿಯ ವಿಷಯವಿಲ್ಲ ಮುಚ್ಚಲ್ಪಟ್ಟಿತು. ಇದಂತೆ ಗಿರಣಿಯ ನೇತಾರರು ಕೆಲಸಕ್ಕೆ ಹೋಗಿರುವುದಿಲ್ಲ. ಎಚ್ಚೆಸ್ ಕೊಲೋನ್ ಮಿಲ್ಲಿನಲ್ಲಿ ಸಹಿತರು ಕೆಲಸಗಾರರು ಮುಷ್ಕರ ಸಡಿಸಿದರು. ಅಲ್ಲಿಯ ಕಲ್ಲಾಣಿಗಳೆಗಾದರೂ ಕಟ್ಟುನಿಟ್ಟಾಗಿರುವರು.

ಯುದ್ಧನಾವೆಗಳು ಧಿಕ್ಕರಿಸಿದುಕೊಂಡವು

ಲಂಡನ್ನಿನ ಸಮುದ್ರದಲ್ಲಿ "ಎಂಪ್ರೆಸ್" ಮತ್ತು "ಹೆಮೆಸ್" ಎಂಬ ಯುದ್ಧನಾವೆಗಳು ಬಾರಿ ಕಸ್ಟ ಪಡಿದು ಒಂದ ಕ್ಕೊಂದು ಧಿಕ್ಕರಿಸಿದುಕೊಂಡು ಅನೇಕ ಸ್ಥಾವರ ಜಂಗಮಗಳ ನಷ್ಟಕ್ಕೆ ಗುರಿಯಾಗಿವೆ. ಲಬ್ಯಾಲ್ಯಂನಲ್ಲಿ ನಿಜವಾದ ಸಮರವು ನಡೆಯುತ್ತಿದೆ.

ಗವರ್ನರರ ಪ್ರೀತಿಭೋಜನ.

ಮದ್ರಾಸು ಗವರ್ನರರು ತಾ. ೩೧ರಲ್ಲು ಒಂದು ಮಜಾ ಪ್ರೀತಿಭೋಜನವನ್ನು ಸಾಗರಿಕರಿಗೆ ಕೊಟ್ಟರು. ಗಿರಿಯು ಅವರ ಗೃಹಕ್ಕೆ ೧೫೦೦ ಆತಿಥಿಗಳು ಚಕ್ಕೈ ಸಿದ್ದರು. ಅನೇಕ ವಿನೋದ ವಿಹಾರಗಳು. ಸಮಯ, ಗವರ್ನರರು ಧನ್ಯವಾದಗಳನ್ನರ್ಪಿಸಿ ಸಭಾಂತ್ಯವಾಯಿತು.

ಸಿಲ್ಲ್ ಬಿಲಾಫತ್ ಕಮಿಟಿಯು—

ಕರಾಚಿಯಲ್ಲಿ ಸಭಿಸೇರಿ ಜಾಯಿಂಟ್ ರಾಜ್ಯಮಂಟಿರಿ ಕಮಿಟಿಯ ನವಸುಧಾರಣೆಗಳನ್ನು ತಿರಸ್ಕರಿಸಿತು. ಪರ್ಯಾಸ್ತಿಕರ ಸೌಕರ್ಯ, ಬಲಾಭಿವೃದ್ಧಿಯ ಸುಧಾರಣೆ ಗಳಿಗಾಗಿ ಕರಾವುಗಳಾದುವು.

ಮುರಬಾಯಿಯಲ್ಲಿ ವ್ಯಾಪಾರಿಗಳ ಭಯ

ತನ್ನ ಸಾಮಗ್ರಿಗಳಿಗಾಗಿ ತೀರಸಲಾಗದೆ ಮದ್ರಾ ಪಿಸ್ತಿಗೊಳಗಾಗಿರುವ ಒಂದು ಕಂಪೆನಿಯು ಪರಾನ ವಿಂದಾಗಿ ಮುಂಬಾಯಿಯ ಧಾನ್ಯದ ವರ್ತಕರಿಗೆ ಬಿದ್ದು ನೆಲಗಡಲೆ ವ್ಯಾಪಾರಿಗಳು ಕಂಗಾಲಾಗಿರುವರು. ಅಡಿಕೆಯ ವ್ಯಾಪಾರವೂ ದೆಬ್ಬಿದೆ.

ಲೋಕಲ್ ಬೋರ್ಡುಗಳೂ ಬಡ ಉಪಾಧ್ಯಾಯರೂ.

ಲೋಕಲ್ ಬೋರ್ಡುಗಳ ಅಧೀನದಲ್ಲಿರುವ ಶಾಲೆಗಳ ಉಪಾಧ್ಯಾಯರುಗಳ ಸಂಬಳ ವರ್ಗಾಯದ ಪ್ರಶ್ನೆಗಳು ಕಳೆದ ಶನಿವಾರ ಮದ್ರಾಸು ಶಾಸನಸಭೆಯಲ್ಲಿ ಚರ್ಚೆಗೆ ಗೊಳಗಾದುವು: (೧) ಲೋಕಲ್ ಬೋರ್ಡುಗಳ ಪದ ವಲ್ಲಿರುವ ಸಕೆಂಡರಿ ಶಾಲೆಗಳ ಉಪ್ಪಾಧ್ಯಾಯರಿಗೆ ವಿಶೇಷ ಭತ್ತೆ (Personal allowance) ಯನ್ನಾಗಿ ಅವರ ಈಗಿನ ಸಂಬಳ ಮತ್ತು ಹೊಸ ಸ್ಕೇಲ್ ಪ್ರಕಾರದ ಸಂಬ ಳದ ಅಧೀನ ಪರಿಸ್ಥಿತಿಗಳಿಗಿರುವ ವ್ಯತ್ಯಾಸವನ್ನು ಕೊಡುವ ಯೋಚನೆಯು ಸರಕಾರ್ಕಿದೆಯೋ (೨) ಈ ವಿಶೇಷ ಭತ್ತೆಯನ್ನು ಸೊಂಬಳದಂಗೆ ಮಾತ್ರ ಕೊಡಲಾಗುತ್ತದೆಯೇ ಅಥವಾ ಇದು ಒಂದು ವರ್ಷದ ವರೆಗೆ ಗಣಾತ್ಮವೋ, (೩) ಪಾಸಾಗಿ ಭತ್ತೆಯನ್ನು ಕೊಡು ವುದರಲ್ಲಿ ಸಂಭವದ ಕ್ರಮವನುಸರಿಸಲಾಗಲಿದೆಯೇ, ಎಂಬಿನೇ ಮೊದಲಾದ ಪ್ರಶ್ನೆಗಳೆದ್ದುವು. ಈ ಪ್ರಶ್ನೆಗಳ ಗೆಲ್ಲ ಸರಕಾರದ ಮನೋವೃತ್ತಿಯು ಅಂತರ್ಗತವಾಗುವ ವಾಗಿ ಉತ್ತರ ದೊರೆಯುತ್ತು. ಹೊಸ ಸ್ಕೇಲ್ ಬಂದು ತನ್ನ ಸಂಬಳವು ಕಡಿಮೆಯಾಗಿ ಸಂಸ್ಥಿಸ್ಥಳಗಳಾದ ದರ ಕುರಿತಾಗಿ ಎದ್ದ ಆಕ್ಷೇಪಕ್ಕೆ ಚೇಳ್ ಮಿನಿಸ್ಟರ್. ಸರ್ವಸ್ವತಾವಾದ ಉತ್ತರವಿತ್ತರಂದು ತೋರುವುದಿಲ್ಲ. ಈಗಿನ ಸ್ಕೇಲಿನ ಹೊಸ ಸ್ಕೇಲಿಗೂ ಇರುವ ವ್ಯತ್ಯಾಸದ ನೋಟವಾಗಿಲ್ಲ. ಭತ್ತೆಯನ್ನಾಗಿ ಸರಕಾರವು ಕೊಡುವ ಸಹಾಯವನ್ನು ಶಿಕ್ಷಕರಿಂದಲೆಯಂ ಅವರ ಹೇಳಿಕೆ. ಬಲ್ಲ ಸಂಭವಗಳಲ್ಲೂ ಈ ಯೋ ಜನೆಯು ಕಡಿಮೆ ಬಿದ್ದಿಲ್ಲ ಈ ಬೇಕಾಯಿ ಪತ್ರ ಪಾತ್ರ ಮಾಡಿದುದರಿಂದ ಸಚಿವರು ಉಪಾಧ್ಯಾಯರಿಂ ಕೃತಜ್ಞತೆಸ್ಪೂರ್ತಿಯನ್ನೆದುರಿಸಿದರು. ಒಳ್ಳೆಯ ಮಾತ್ಸ್ಯ ಸಂತೃಪ್ತಿಯನಿಂಗೆ ತಲಿದ್ದಿರಬೇಕು. ಕಾಸ್ಟಾಟ್ಟಿರುವುದು. ಬೋರ್ಡುಗಳಲ್ಲಿ ಸರಕಾರದ ಕೈಕಳಗದಲ್ಲಿ ಶಾಲೆಗಳಲ್ಲಿ ಕೆಲಸ ಮಾಡುವ ಉಪ್ಪಾಧ್ಯಾಯರ ಯೋಗ್ಯತೆಯೂ ಕೆಲಸವೂ ಸರಕಾರಿಯಂತಿರುವುದಾಗ ಈ ವ್ಯತಿಕ್ಯ ಸಂಬಳ ನಿರ್ಣಯವಾಗಬೇಕಾ ಗಿತ್ತು. ಸ್ಕೇಲಿಯ ಸಂಬಳ್ಳಿಗಳ ಬಾಬ್ತು ಸರಕಾರಿಯಲ್ಲಿ ಸರಕಾರ ಶಾಲಾ ನೌಕರರುಗಳಲ್ಲಿ ತನ್ನ ಸಂಬಳವನ್ನು ಯಲ್ಲಿ ಕಸ್ಟಕ್ಕೀಡಾಗುವುದಂದರೆ, ಇವರು ವಿಶ್ವಾಸವನ್ನಿ ಯಿಂದ ತೀರ ಅನಪೇಕ್ಷಿತ ಸಂ. ಇವರಿಗೆ ಭೇದಾ ಭೇದವು ಸಲ್ಲದು, ಶಾಲಾ ನೌಕರ. ಮಟ್ಟಿಗೆ ಸರ ಕಾರವು ಕೂಡಲೆ ಸಹಾಯಹಸ್ತವನ್ನು ಪ್ರಸ್ತುತಪಡಿಸಬೇಕಾಗಿದೆ. ಸರಕಾರದ ಸಲಹೆಯಂತೆ ಮುಂದಿನ ಸಕೆಂಡರಿ ಶಾಲೆಗಳ ಬೇಕಲ್ಲಿ ಒಟ್ಟು ಸುಮಾರು ೬ ಲಕ್ಷ ರೂಪಾಯಿ ಹೆಚ್ಚು ಬೆಳ್ಳನಾದಂತೆ ತೋರುತ್ತದೆಂದು ಬಗ್

ಮಂಗಳೂರು.

ಮಂಗಳೂರು ನಿವಿ ಅಧ್ಯ ಸಹಾಯ ಮಾಜಿಸಭೆಗೆ ಇತ್ತೀಚೆಗೆ ಬರುವ ಜನವರಿ ತಾ. ೭ನೇ ಆದಿತ್ಯವಾರ ಸಾಯಂ. ೫ಕ್ಕೆ ಟೌನ್ ಶಿಲ್ಪ ಶಾಲೆಯಲ್ಲಿ ಏರ್ಪಡಿಸಲಾಗಿದೆ. 'ಬಂಟ್ವಿ ಸಂಘಟನೆಯ ಇಂದು ಭಾಷಣ ಗಳಾಗುವುದು. ಸರ್ವರೂ ಸಭೆಯಲ್ಲಿಗಾಗಿ ಕಾರ್ಯದರ್ಶಿಗಳ ವಿನಂತಿಸಿದ್ದಾರೆ.

ಇದೇ ಜನವರಿ ತಾ. ೨೮ನೇ ರವಿವಾರ ಬೆಳಿಗ್ಗೆ ೫ಕ್ಕೆ ಶಾಲೆ ಭಕ್ತಿಯೋಗ ಸಂಘದಲ್ಲಿ ಗಣಪತಿಯ ಕುರಿತು ಭಾಷಣ ಮಾಡಲಿರುವರು. ಸರ್ವರೂ ಸಭೆಯಲ್ಲಿಗಾಗಿ ಕಾರ್ಯದರ್ಶಿಗಳ ವಿನಂತಿಸಿದ್ದಾರೆ.

ಇದೇ ಜನವರಿ ತಾ. ೨೮ನೇ ರವಿವಾರ ಬೆಳಿಗ್ಗೆ ೫ಕ್ಕೆ ಶಾಲೆ ಶಾಲೆಯ

WANTED

Energetic, Active and Influential men to work as organisers and Agents on very attractive terms in areas mentioned below—

1. Mysore, Hassanand Kadur districts.
2. Coorg, South Canara, Shimoga and Chitaldrug districts.
3. Tumkur, Kolar, Bangalore and civil and Military Stations, Bangalore Cantonment.

Please apply in person or by letter,

C. H SHAMBULINGAPPA,
The South Indian General Assurance Co Ltd.
1, Purnaih Chatram Road, Balepet,
BANGALORE CITY

Shiromani Narayanacharya
Choukhamba, Benares City

ಶಾಸ್ತ್ರಗಳೇ ಪೂರ್ವಕರು ಆದೋ ಗ್ಯರೇ ಆಧಾರ ಅಗಿದವರೇ? ರಾಮಣ್ಣಯ್ಯನವರೇ ಪೂರ್ವಕರ ಆದೋಗ್ಯವೇ ನಿಜವಾದ ಆರೋಗ್ಯ ಅದಕ್ಕೆ ಕಾರಣವೇನು? ಅವರು ಉದ್ರಾಕ್ಷಿಯನ್ನು ಬಿಡದೆ ಯಾವಾಗಲೂ ಧಾರಣೆಮಾಡುತ್ತ ಇದ್ದರು. ಅದರಿಂದ ಏನು ಫಲ? ಅವನ್ನು ಧರಿಸಿದರೆ ಜೀರ್ಣಶಕ್ತಿ, ಬುದ್ಧಿಶಕ್ತಿ, ವಿದ್ಯೋಭಿವೃದ್ಧಿ, ಕೀರ್ತಿವೃದ್ಧಿ, ಸಂಪತ್ತು ಕೀರ್ತಿ ಇವುಗಳೆಲ್ಲ ಆಗುವುವು. ಹಾಗಾದರೆ ನಮಗೆ ಅಂತಹ ರುದ್ರಾಕ್ಷಿ ಎಲ್ಲಿ ದೊರೆಯುವುದು? ಆದು ದೋಷಪ್ರಸಿದ್ಧಿ ಹೊಂದಿದ ನಮ್ಮ ಭಾರತೀ ಚೌಖಂಬಾ ಶಾಸ್ತ್ರೋಪಜೀವಿ ನಾರಾಯಣಾಚಾರ್ಯರಲ್ಲಿ ಹೋಗಲಾಗಿದ್ದ ಶ್ರಯಕ್ಕೆ ಉತ್ತಮ ತರದ ರುದ್ರಾಕ್ಷಿ ದೊರೆಯುವುದು

ಸಣ್ಣ ಆಡ್ಡೆ ಪ್ರಮಾಣದ ಕಾಯಿಸರ 1ಕ್ಕೆ ಆಣೆ 1ರಂದ ರೂ. 25ರ ವರೆಗೆ 108 ರುದ್ರಾಕ್ಷಿಗಳುಳ್ಳ ಸರ 1ಕ್ಕೆ ಆಣೆ 3ರಂದ ರೂ 25ರ ವರೆಗೆ ಗೌರೀಶಂಕರ ರುದ್ರಾಕ್ಷಿ 1ಕ್ಕೆ ರೂ. 3ರಂದರೂ 50ರ ವರೆಗೆ ಮುಖ 1-4-5-6-7-8 ಮುಖಗಳ ಕಾಳು 1ಕ್ಕೆ ಆಣೆ 4ರಿಂದ ರೂಪಾ 10. ಮುಖ 9-10-11 ಮುಖಗಳುಳ್ಳ ಕಾಳು 1ಕ್ಕೆ ರೂ 2ರಿಂದ 30ರ ವರೆಗೆ 12-13-14 ಮುಖದ ಕಾಳು 1ಕ್ಕೆ ರೂಪಾ 5ರಿಂದ 100ರ ವರೆಗೆ ಸಣ್ಣ ರುದ್ರಾಕ್ಷಿಗೆ ಅವರೆಕಾಳಿನಂತೆ ಸಣ್ಣದಾಗುತ್ತ ಶ್ರಯ ಇಷ್ಟ. ದೊಡ್ಡ ರುದ್ರಾಕ್ಷಿಗೆ ಅಡಕೆಯಿಂತ ದೊಡ್ಡದಾಗುತ್ತ ಶ್ರಯ ಜಾಸ್ತಿ ಅಗುವುದು (ಸಿಪಾಯಿಕ್ಕೆ ಕಟ್ಟಲಾಗಿಗೆ ಬರೆದರೆ ಇನಾಮಾಗಿ ಕಳುಹಿಸುತ್ತೇವೆ (ಆಣೆಸ್ವಾಂಪ್ಪಿಕಳುಹಿಸಿದರೆ 3 ಇನಾಮುಗಳು— 1 ವಿಕ್ಟೋರ್ಯರ ಸಣ್ಣ, 1 ಕಾಶೀ ನಕ್ಷೆ 1 ಕಟ್ಟಲಾಗಿ ಸೊಡನೆ 3 ಇನಾಮುಗಳು)

ಶಿರೋಮಣ್ಣಿ ನಾರಾಯಣಾಚಾರ್ಯರ್
ಚೌಖಂಬಾ, ಬೆನಾರಿಸ್ (ಕಾಶೀ)

The East & West Insurance Co., Ltd.

Established 1913

Head Office:—East & West Buildings Apollo Street Fort, BOMBAY

New business for the year 1933 shows an increase of 50% over that of 1932

First-class Service to Policy Holders, up to date contracts close co-operation between Head Office and field force, efficient and economic management are few of the factors responsible for the constant and steady growth of the Company

It will pay you to take out a Policy to day
Agency terms liberal—Treatment sympathetic

Please apply for Agency and particulars to—

Padubidri Bros
Chief Agents,
Padubidri P Bombay No 8

M N V Kamath & Sons
Golikatta Bazar,
Mangalore, S K

Dalal & Co, Secretaries

ಡಾಕ್ಟರ ವಾಮನ ಗೋಪಾಳರವರ

ಐಹಿಡಾಯಿಜ್ಡ್
ಸಾರ್ಸಪರಿಲಾ
ಕೆಟ್ಟ ರಕ್ತಕ್ಕೆ ಪರಮೌಷಧ
೫೦ ವರ್ಷದ ಅನುಭವ
ಉಪಯೋಗಿಸಿದವರೇ
ಹೇಳಿದ್ದಾರೆ
ಡಾ॥ ಗೌತಮ ರಾವ್
ಕೇಶವರವರ
ಪ್ರೊಪ್ರೆರಸ್ ಗುಳಿಗೆಗಳು.
ಅತ್ಯುತ್ತಮ ಟಾನಿಕ್

ಡಾಕ್ಟರ್ ಗೌತಮರಾವ್ ಕೇಶವ
ಅಂಡ್ ಸನ್ಸ್, ಥಾಳುದಕ್ಕಾರ, ಮುಂಬಾಯಿ ೨
ಸ್ಟೊಕಿಸ್ಟ್ ಹಾಗು ಏಜೆಂಟರು ಬೇಕಾಗಿದ್ದಾರೆ

(ಪತ್ರವ್ಯವಹಾರ ಇಂಗ್ಲಿಷ್ ಅಥವಾ ಮರಾಠಿಯಲ್ಲಿ)

[ಗುಣಖಾತರಿಪತ್ರದೆ ಹಣ ವಾಪಾಸು]

ಸಾಸ್ತ್ರಸಿದ್ಧ ವೈದ್ಯರತ್ನ ಎಮ್ ಕೆ ರಾಜಪೂಕ ಇವರ

ಸಂತತಿ ಪ್ರತಿಬಂಧಕ ಚೂರ್ಣ (ನಿಜಸ್ವದೇ)

ಬಹಳ ಸಾರಿ ಹಡಿಯುವುದರಿಂದ ಹೆಂಗಸರ ಆರೋಗ್ಯ ಕೆಡುವುದಷ್ಟಕ್ಕೆ ಬಹಳ ಖರ್ಚಿನವರೆಗೆ ವಿಶೇಷ ಮುಕ್ಕಳಾಗುವುದರಿಂದ ಮುಖವಾಗುತ್ತದೆ ಈ ಕಾರಣದಿಂದಲೂ ಅವರಾ ಬೇರೆ ಕಾರಣದಿಂದಲೂ ಮಕ್ಕಳನ್ನು ಹಡಿಯುವುದು ಬಂದಾಗಬೇಕೆಂದು ಇಚ್ಛಿಸುವವರು ಈ ಚೂರ್ಣವನ್ನು ಉಪಯೋಗಿಸಬೇಕು ಇದರ ಸೇವನೆಯಿಂದ ಮುಟ್ಟಾಗುವಿಕೆಯು ನೆಗುವುದಕ್ಕೆ ಸುರುವಾಗುವುದು ಶರೀರಕ್ಕೆ ಏನೂ ಅಪಾಯವಾಗದೆ ಸಂತಾನವನ್ನು ಪೂರ್ತಾ ನಿಲ್ಲಿಸಿದ್ದು ಇದರಲ್ಲಿ ಗರ್ಭಧಾರಣ ಬಂದಾಗುವುದು ಶರೀರಕ್ಕೆ ಏನು ಮಾಡಿದರೂ ಆಗುವುದಿಲ್ಲ. ನೋಡಲೇ ಪೂರಾ ವಿಚಾರ ಮಾಡಿ ಔಷಧ ಬೇಡಿರಿ ಮಲ್ಲಿ ಸರ್ಟಿಫಿಕೇಟು ಡಾಕ್ಟರ ಬಿ ಎ ನೈಕ್ಷ, ಎಲ್ ಎಂ ಎಸ್ ಕೆಲವಾರುಹಿಂದು ಬಾಡಿ - ಈ ಚೂರ್ಣದಿಂದ ಯಾವ ತರದ ಅಪಾಯವಿಲ್ಲದೆ. ಗರ್ಭಧಾರಣವೂ ಆಗುವುದಿಲ್ಲ. ಪೂರ್ತಿ ಗುಣಾವಾಗಿ ದಬ್ಬಿ ಕಿಮ್ಮತ್ತು ರೂ ೪-೦ ೦ ಪಿ ಪಿ ಆಣೆ ೮

ವಿಳಾಸ—ಸಂಜೀವಿನೀ ಔಷಧಾಲಯ ಮು ಪೊ ಮಿರಜೆ, S M C.

Established,] [1900

ಅತ್ಯುತ್ತಮವಾದ ಸಕ್ಕಾಬಣ್ಣದ ಸರ್ವಾಂಗಸುಂದರ ಶೀರೆಗಳು.

ಬೊಂಬೇ ಫ್ಯಾಶನ್ ವಾರ್ಪಿನಲ್ಲಿ ಅಪ್ ಟು ಡೇಟು ಶೀರೆಗಳು, ಗಿಳಿ ರೂ ೨—೬—೦

ಪೂನಾ ಫ್ಯಾಶನ್ ಸ್ಪೆಷಲ್ ಕರಗಿನ ಪ್ಯಾಕಸೆಬಲ್ ಶೀರೆಗಳು ವಾರ್ಪಿನಲ್ಲಿ ರೂ ೫-೦-೦

ಇದರ ಹೊರತು ಜರತಾರೀ ಅಂಚು ಮತ್ತು ಜರತಾರೀ ತೆರಗಿನ ಹೊಸ ಹೊಸ ಮಾದರೀ ಶೀರೆಗಳು ದರ ರೂ ೧೧೦ರಿಂದ ೧೫೦ ವರೆಗೆ ಬಗೆಬಗೆವು

ಮ್ಯಾಲು ಪಿ ಪಿ ಕೂಲಿ ಕಳುಹಿಸಲ್ಪಡುವುದು. ಪೋಸ್ಟೇಜು ಮತ್ತು ಪ್ಯಾಕಿಂಗ್ ಖರ್ಚು ಸ್ವತಃ ಸ್ಯಾಂಪಲ್ ಕಂಡುಗಳು ಕಳುಹಿಸಲಿಕ್ಕೆ ಬರುವಂಥಿಲ್ಲ

Tel Honesty

D K Dhakappa Bros,
Cloth Merchants, P O Sirsi Dist, N Kanara

The Popular Insurance Company, Ltd.

Head Office:—MANGALORE, S India.

The Pioneer Life Office of the West Coast.

Wanted influential District agents in Unrepresented areas

A few Press opinions

'INSURANCE HERALD,' CALCUTTA. This Company was started four years back in what may be called a mofussil town of Southern India and the steady way in which it has been working proves that our Presidency cities alone do not monopolise all the financial genius of the country. If the Directors of this Comany can continue in the present rate of progress and can control the finances with wisdom and care, they would make history. From a reference to the expenses of management, we are glad to find that the management is not doing themselves Grand but have kept establishment charges and management charges within quite reasonable bounds

'THE ARTISAN,' TRIVANDRUM. We are glad to see from the Fourth Annual Report and Balance Sheet of the Company that it has been making steady and satisfactory progress considering its age and the act of the economic depression prevailing throughout the country.

THE INDIAN INSURANCE, BOMBAY. Mangalore is noted for its enterprise, and the Popular Insurance Company Ltd., promoted by the local residents of that place, is steadily gaining ground. It is directed by influential people of Mangalore and managed by Mr. B Vittal Rao, who has developed in him a great deal of life insurance sense ...

ತಿರಿಯ ಸುರಿಯಲ್ಲಿ

ಒಳವಾ

ಅಂತರಂಗ

ಲೇಖಕರು:—ಶ್ರೀ ವಿಶಾಮ ಕಾರಂತರು.

೪. ಪತ್ನಿ ಪ್ರೇಮ.

ಲಾವಣ್ಯವನ್ನೋಡಿದವರು, ಇಲ್ಲವೇ ಕೇಳಿದವರು ನಮ್ಮ ದೇಶದಲ್ಲಿ ವೀರ ವಿರಳ. ಅದರಲ್ಲಿಯೂ ನನಗಾಗಿಯೆ ವೀರ ಹೆಚ್ಚಾಗಿ ಬೇಸರಿದ್ದ, ಪುತ್ತೂರಿನಲ್ಲಿ ಅದೆಂಥ ಕೊರತೆಯಿದ್ದರೂ, ಸೀತಾರಾಮರ ಆದರ್ಶದಾಂಪತ್ಯಕ್ಕೆ ವಿಚಾರ ತಿಳಿಯದ ಸಂಸಾರಗಳೇ ಇಲ್ಲವೆನ್ನಬಹುದು. ಆದರ್ಶಪತಿಯು ಶ್ರೀರಾಮ ಚಂದ್ರನು, ಆದರ್ಶಪತ್ನಿಯು ಸೀತಾದೇವಿಯು; ಎಂಬ ಮಾತಿಗೆ ಯಾರೂ ಎರಡಾಗ ರೆಂಬುದು ನಮ್ಮ ಮತ. ಅಂತೆಯೇ ಇರುವೆ ಸಂಸಾರಗಳು ನಮ್ಮ ಊರಿನಲ್ಲಿ ಇಲ್ಲವೆಂದಲ್ಲ. ಇರುವುದು ಅಪೂರ್ವ ವೆಂಬುದು ನಿಜ. ಅಪೂರ್ವವಾದರೂ ಖುಂಟು. ಅಂಥ ಒಂದು ಕುಟುಂಬವು ನಮ್ಮ ಊರಿನ ವಕೀಲ ಶ್ರೀನಿವಾಸ ರಾಯರದ್ದೆಂದು ಊರವರ ಮತ. ಅವರ ಕುಟುಂಬ ಪೂರ್ಣವಾಗಿರುವಾಗ ಅವರ ದಾಂಪತ್ಯವನ್ನು ಸೀತಾರಾಮ ರಿಗೆ ಹೋಲಿಸದೆ ಹೋದರೂ, ಅವರ ಪತ್ನಿ ಜಾನಕಿ ದೇವಿಯು ತೀರಿಕೊಂಡಂದಿನಿಂದ, ಅವರಿಗಾಗಿ ಮರುಗದವರಿಲ್ಲ. ಇದು ವರೆಗೆ ಶ್ರೀನಿವಾಸರಾಯರ ದಾಂಪತ್ಯ ಜೀವನವು ಅಖಂಡ ವಾಗಿದ್ದಾಗ, ಅವರಲ್ಲಿನ ಒಡಕಿನ ಗಾಳಿ ಸಹ ಬೀರಿಯವ ರಿಗೆ ತಿಳಿದಿರಲಿಲ್ಲ. ಅಂಥದು ಇದ್ದೇ ಇಲ್ಲವೆಂದು ಊರ ವರ ಮತ.

ಶ್ರೀನಿವಾಸರಾಯರಾದರೂ, ತಮ್ಮ ಗೆಳೆಯರೊಡನೆ ಆ ಕಾಲದಲ್ಲಿ ಮಾತನಾಡುತ್ತಿದ್ದಾಗ, ಅಂದರೆ ಅವರು ತಾರುಣ್ಯ ದಿಂದ ತುಂಬಿದ್ದಾಗ ತಮ್ಮ ಪತ್ನಿಯ ಗುಣಾತಿಶಯಗಳನ್ನು ಅಖಂಡವಾಗಿ ಶ್ಲಾಘಿಸುತ್ತಿದ್ದರು. ಜಾನಕಿ ಸಹ ತನ್ನ ಗೆಳ ತಿಯರೊಂದಿಗೆ ಮಾತನಾಡುವಾಗ, ತನ್ನ ಪತಿ ದೇವನ ಗುಣಾತಿಶಯಗಳನ್ನು ಕೊಂಡಾಡುತ್ತಿದ್ದಳು. ಇಂಥ ದಂಪತಿ ಗಳ ಜೀವನವು ನಮ್ಮ ಸಮಾಜಕ್ಕೆ ಆದರ್ಶವಾಗಿ ಕಂಡು ಬರಲ್ಲಾಗಲಿ, ಜಾನಕಿ ದೇವಿಯರ ಮರಣದ ನಂತರ ಶ್ರೀನಿ ವಾಸರಾಯರ ಕುಟುಂಬ ಒಡೆದುದಕ್ಕಾಗಲಿ ಪರಿತಾಪವನ್ನು ಸೂಚಿಸುತ್ತಿದ್ದುದರಲ್ಲಿ ತಪ್ಪೇನು?

ಅವರ ಎಷ್ಟೋ ಗೆಳೆಯರು ಸೂತಕದ ದಿನಗಳಲ್ಲಿ ಅವರ ಮನೆಯ ತನಕ ಬಂದು ಕಣ್ಣೀರು ಕರೆದು ಹೋದರು. ಇತ್ತರಾಯರು ಊರಿನ ಮುಖಂಡರಲ್ಲಿ ಒಬ್ಬರಾಗಿದ್ದುದ ರಿಂದಲೂ, ಸ್ತ್ರೀಯರ ಉನ್ನತಿಗಾಗಿ ಬಾಲಿಕಾ ಪಾಠಶಾಲೆ ಮೊದಲಾದ ಸಾರ್ವಜನಿಕ ಸಂಸ್ಥೆಗಳ ವಿಚಾರಗಳಲ್ಲಿ ತುಂಬಾ ಆದರ ತೋರುತ್ತಿದ್ದುದರಿಂದಲೂ—ಆ ಶಾಲೆ ಸಭೆ ಗಳು ಇವರ ಪತ್ನಿಯ ಮರಣಕ್ಕಾಗಿ ದುಃಖಸೂಚಕ ಸಭೆ ಗಳನ್ನು ಜರಗಿಸಿದುವು. ಜಾನಕಿದೇವಿಯರು ಬಾಳ್ವೆ ಮಾಡಿ ದಷ್ಟು ದಿನ ಪತಿಯ ಪರೋಪಕಾರೀ ಕೆಲಸಗಳಲ್ಲಿ ಉತ್ಸಾಹ ವಹಿಸುತ್ತಿದ್ದರು. ಹೀಗಾಗಿ ಅವರ ಮರಣ ವಾರ್ತೆಯು ಜಿಲ್ಲೆಯ ನಾಲ್ಕಾರು ಪತ್ರಗಳಲ್ಲಿ ಪ್ರಕಟವಾಯಿತು. ನಿಜಕ್ಕೂ ಅವರಿಂದ ಸಹಾಯ ಹೊಂದಿದ ಹಲವು ಹಿರಿಕಿರಿ ಯರು ಬಲುವಾಗಿ ನೊಂದರು. ಆದರೆ ಊರಿಂದೂರೇ ಅಳುತ್ತಿರುವಾಗ, ಎದೆಗಾರಿಕೆಯಿಂದ ಮನಸ್ಸನ್ನು ಕಲ್ಲು ಮಾಡಿ ಕಂಬನಿಯನ್ನು ಕರೆಯಿಸದಿದ್ದ ವೀರರೆಂದರೆ "ಶ್ರೀನಿ ವಾಸರಾಯರೊಬ್ಬರೇ." ಅವರ ಈ ಸ್ಥೈರ್ಯವನ್ನು ಕಂಡು ಅವರ ಗೆಳೆಯರು ಕೊಂಡಾಡದೆ ಇರಲಿಲ್ಲ. "ರಾಯರೇ ಅಂಥ ಭಾರ್ಯೆ ದೊರೆಯುವುದೆಂದರೆ ಪೂರ್ವ ಪುಣ್ಯ. "ಅದರಲ್ಲೂ ಅಂಥವರ ಮರಣದಿಂದ ಒಡಲು ಕರಗಿ ನೀರಾಗಿದ್ದರೂ, ಮನಸ್ಸನ್ನು ಧೈರ್ಯಮಾಡಿ ಕಣ್ಣೀ ರನ್ನು ಸುರಿಸದಿರುವುದು ಅಪೂರ್ವಸ್ಥೈರ್ಯ" ಎನ್ನುತ್ತಿದ್ದರು. ಪ್ರತಿಯಾಗಿ ಶ್ರೀನಿವಾಸರಾಯರು—"ಅಹುದು—ಹೋದ ಬದುಕಿಗಾಗಿ ಅತ್ತುದರಿಂದ ಯಾರಿಗೇನು ಲಾಭವಾಯಿತು? ಅಂಥ ಶ್ರೀರಾಮಚಂದ್ರನು ಸೀತೆಯ ವಿರಹವಾಗಲು ಅತ್ತನು ನಿಜ. ಆದರೆ ಅವನ ಅಳುವಿನಿಂದ ಸೀತೆ ಮರಳಿ ದೊರೆಯ ಲಿಲ್ಲ. ಹೀಗಿರಲು ಅಳುವಿನಿಂದೇನು ಪ್ರಯೋಜನವು?" ಎನ್ನುತ್ತಿದ್ದರು. ಅವರ ಈ ಮಾತನ್ನು ಕೇಳಿ ಶ್ರೀನಿವಾಸ ರಾಯರು ಶ್ರೀರಾಮಚಂದ್ರನಂತೆ ಆದರ್ಶಪತಿಯು ಮಾತ್ರ ವಲ್ಲ ಜನಕರಾಯನಂತೆ, ಸಂಸಾರದಲ್ಲಿ ಅಲಿಪ್ತರಾಗಿ ನಿಂತ ಕರ್ಮಯೋಗಿಗಳೇ ಎಂದು ತಿಳಿದರು.

ಎಷ್ಟೋ ಹೆಣ್ಣು ಮಕ್ಕಳ ತಂದೆಗಳಿಗೆ, ರಾಯರಿಗೆ ವಯಸ್ಸಾದರೂ, ತಮ್ಮ ಹುಡುಗಿಯರನ್ನು ಕೊಡಬೇಕೆಂದು ಮನಸಾಯಿತು. ಅಂಥವರ ಕೈಹಿಡಿದರೆ, ಪತ್ನಿಗೆ ಸಾಯುವ ಭೀತಿಯು ಖಂಡಿತವು ಎಂಬುದು ಅವರ ತಿಳಿವು. ಅಲ್ಲದೆ ಇಹ ಲೋಕದ ಸುಖವನ್ನು ಬಯಸುವ ಸಂಸಾರಗಳಿಗೆ, ಶ್ರೀನಿ ವಾಸರಾಯರು ಶ್ರೀಮಂತರೆಂದು ತಿಳಿದಿತ್ತು. ಆದರೆ ಭಾಗ್ಯ ಬಿಟ್ಟು ಕೇಳುವ ಧೈರ್ಯ ಯಾರಿಗೂ ಇರಲಿಲ್ಲ. ಸೂತಕವು ನಿಲ್ಲಾದ ಕೆಲವು ದಿನಗಳಲ್ಲಿ ಅವರ ಆಪ್ತ ಮಿತ್ರ ರೊಬ್ಬರು ಮಾತ್ರ ಅವರನ್ನು ಕೇಳಿಯೇ ಕೇಳಿದರು. 'ಶ್ರೀನಿ ವಾಸ, ನೀನು ಇನ್ನೊಂದು ಲಗ್ನವನ್ನು ಏಕೆ ಮಾಡಿಕೊಳ್ಳ ಬಾರದು?' ಎಂದರು. 'ಬಲು ಹೊತ್ತಿನ ಬಳಿಕ 'ಇನ್ನೊಂದು ಲಗ್ನವೇ?' ಎಂದು ರಾಯರು ಕೇಳಿದರು. ಎರಡನೆಯ ಬಾರಿಗೆ ಅದೇ ಪ್ರಶ್ನೆಯನ್ನು ಕೇಳಲು ತಿರುಗಿ ಬಂದ ಉತ್ತ ರವು ಅದೇ. ಅವರು ಸಾಹಸಮಾಡಿ ಮರುದಿನ ಬಂದು ತಿರುಗಿ ಆ ಪ್ರಶ್ನೆಯನ್ನು ಕೇಳಿದರು. ಆದರೆ ಮೂರನೆಯ ಬಾರಿಗೆ ಅಷ್ಟು ಉತ್ತರವೂ ಬರಲಿಲ್ಲ. ಇನ್ನೊಂದು ಲಗ್ನವೇ ಎನ್ನಲು "ಹಾಂ, ಏನೆಂದಿರಿ?" ಎಂದರು. ಬಂದ ಗೆಳೆ ಯರು ಹತಾಶರಾಗಿ ಮರಳಿದರು. ಇನ್ನಾರೊಬ್ಬರೂ ಅವ ರೊಡನೆ ಮಾತನಾಡಲು ಹೋಗಲಿಲ್ಲ.

ಅಂಥ ಆದರ್ಶ ಪತಿಯ, ಅರ್ಥಾತ್ ಶ್ರೀನಿವಾಸ ರಾಯರ ಸಾಂಸಾರಿಕ ಜೀವನವನ್ನು ಕೇಳುವುದರಿಂದ ಯಾರಿಗೆ ತಾನೇ ಆನಂದವಾಗಲಿಕ್ಕಿಲ್ಲ. ಅದಕ್ಕೆಂದೇ ಅದನ್ನು ಬಣ್ಣಿಸುವೆನು.

ಶ್ರೀನಿವಾಸರಾಯರು ಬೆಳ್ಳಾರೆ ನರಹರಿರಾಯರ ಏಕ ಮಾತ್ರ ಪುತ್ರರು. ನರಹರಿರಾಯರಿಗೆ ಸಾಧಾರಣ ಕುಬೇರನ ಗಿರುವ ಸಂಪತ್ತಿದೆಯೆಂದು ರೂಢಿ. ಅವರ ಜೀವನದಲ್ಲಿ ಅವರು ದರಿದ್ರರ ಮನೆಗೆ ಒಂದು ದಿನವಾದರೂ ಊಟಕ್ಕೆ ಹೋದವರಲ್ಲ. ಅವರ ವ್ಯವಹಾರ ಶಿಷ್ಟಾಚಾರಗಳೆಲ್ಲ ತಮ್ಮಂತೆ ಧನಿಕರಾದವರೊಡನೆ. ಪುತ್ತೂರಿನಲ್ಲಿ ಅವರಂತೆ ಧನಿಕರಾಗಿದ್ದವರೆಂದರೆ ಅವರೇ. ಹೀಗಾಗಿ ನರಹರಿರಾಯರು ಹೆಸರವರ ಮನೆಗೆ ಹೋಗುತ್ತಿದ್ದಿಲ್ಲವೆನ್ನಲೂಬಹುದು. ಊರ ವರೆಲ್ಲ ರಾಯರ ಮನೆಗೆ ಹೋಗಿ ಅವರೊಡನೆ ಮಾತನಾಡು ವುದೇ ಗೌರವವೆಂದು ತಿಳಿದಿದ್ದರು. ಅವರ ಹೊಟ್ಟೆಯಲ್ಲಿ ಹುಟ್ಟಿದ ಶ್ರೀನಿವಾಸರಾಯರಾದರೂ ತಂದೆಗೆ ತಕ್ಕ ಗುಣಾತಿ ಶಯಗಳಿಂದ ಒಪ್ಪುತ್ತಿದ್ದರು. ಅವರಿಗೆ 18 ವರುಷವಾಗಲು ನರಹರಿರಾಯರ ಗಮನವು ಮಗನ ಮದುವೆಯ ಕಡೆಗೆ ಹರಿಯಿತು. ಶ್ರೀನಿವಾಸರಾಯರಿಗೆ ತಮ್ಮ ಬಿ. ಎ. ಮುಗಿ ಯಲಿ ಎಂಬ ಮನವಿತ್ತು. ಬಿ. ಎ. ಮುಗಿದೊಡನೆ ವಕಾ ಲತ್ತು ನಡೆಯಿಸಬೇಕೆಂದು ನಿಶ್ಚಯಿಸಿದ್ದರು. ಇತ್ತ ನರಹರಿ ರಾಯರಿಗೆ ಸ್ವತಃ ಇಂಗ್ಲಿಷಿನಲ್ಲಿ ಪರಿಚಯವಿರಲಿಲ್ಲ. ಆದರೆ ಮಗನನ್ನು ವಿದ್ಯಾವಂತನನ್ನಾಗಿ ಮಾಡಬೇಕೆಂಬ ಮನವು ಬಲವಾಯಿತು. ಅದರಿಂದಲೇ ವಿದ್ಯಾಭ್ಯಾಸ ಕೊಡಿಸಿದರು. ಈಗ ಮಗನ ಇಂಟರ್ ಪರೀಕ್ಷೆ ಮುಗಿದಿತ್ತಷ್ಟೆ. ಇನ್ನು ಬರಿ ಎರಡು ವರ್ಷಗಳ ವ್ಯಾಸಂಗ. ಈಗಿನ ಕಾಲದಲ್ಲಿರು ವಂತೆ ಬಿ. ಎಲ್. ಎಂಬ ಸಿಕಲಾಟ ಇದ್ದಿರಲಿಲ್ಲ. ಬರೀ F. A. ಮಾಡಿದವರೇ ವಕೀಲಿಗೆ ಬರುತ್ತಿದ್ದರು. ಆದರೆ ಉಳಿದ ವಕೀಲರಿಗಿಂತಲೂ ಮೇಲೆನಿಸಿಕೊಳ್ಳುವುದಾದರೆ ಬಿ. ಎ. ಅವಶ್ಯವಾಗಿ ಆಗಬೇಕೆಂದು ಅವರು ಎಣಿಸಿದ್ದರು. ಇತ್ತ ಮಗನಿಗೆ ಬಿ. ಎ. ಆದ ಬಳಿಕವೇ ಲಗ್ನವಾಗಲಿ ಎಂಬ ವಿಚಾರದಲ್ಲಿ ವಿಶೇಷ ಆಕ್ಷೇಪವಿರಲಿಲ್ಲ. ಆದರೆ ನಡುವೆ ಒಂದು ಹೊಸ ಸಂಗತಿಯು ಅವರ ಗಮನಕ್ಕೆ ಬಂದಿತು. ಒಂದು ದಿನ ಅವರ ಮನೆಗೆ ಮಳೆಯಾಳದಿಂದ ಜೋಳುಸಂದಿಕ ನೆಂಬ ಜ್ಯೋತಿಷ್ಯ ಶಾಸ್ತ್ರಜ್ಞನು ಬಂದನಂತೆ. ಅವನೇನು ಉಪದೇಶವಟ್ಟು ಬಂದವನಲ್ಲ. ದಾರಿಹೋಕನಾಗಿ ಬಂದನು. ದೊಡ್ಡವರ ಮನೆಯೆಂದು ತಿಳಿಯಲು ಮಧ್ಯಾಹ್ನ ಗ್ರಾಸಕ್ಕೆ ಅಲ್ಲಿಗೇ ಹೋದನು. ಹೋದಾಗ ಅವರ ಮನೆಯ ಸಂಪ ತ್ತಿನ ಚಿನ್ಹೆಗಳನ್ನು ಕಂಡು, ಅಲ್ಲಿ ತನಗೆ ಗೌರವ ಸಿಕ್ಕುತೆಂದು ಊಹಿಸಿ—ಊಟಕ್ಕೆ ಮೊದಲು ಸ್ನಾನ ಮಾಡಿ ಎರಡು ತಾಸು ಗಳ ಅಖಂಡ ಜಪಮಾಡಿದನು. ಊಟವಾಯಿತು. ಆದ ಬಳಿಕ ರಾಯರ ಬಳಿಗೆ ಬಂದು ನಮಸ್ಕರಿಸಿ "ಸ್ವಾಮಿ, ನಿಮ್ಮ ಆತಿಥ್ಯದಿಂದ ಕೃತಾರ್ಥನಾದೆ. ಇಂತಹ ಚೆಲುವಿನ ಆದರ ನನಗೆಲ್ಲಿಯೂ ಸಿಕ್ಕಿರಲಿಲ್ಲ" ಎಂದನು. ಅವನ ಜಪತಪ-ನೇಮ-ನಿಷ್ಠೆಗಳನ್ನು ಕಂಡ ರಾಯರಿಗೆ ಅವನಲ್ಲಿ ಪ್ರಸನ್ನತೆಯಾಗಿ 'ಇನ್ನೊಂದು ಹೊತ್ತು ಇದ್ದು ಹೋಗಿರಿ' ಎಂದರು. ಅವರ ಆಗ್ರಹಕ್ಕಾಗಿ ಉಳಿದುಕೊಂಡನು. ಮಧ್ಯಾಹ್ನ ವಿರಾಮವಿದ್ದುದರಿಂದ ಅವರೊಳಗೆ ಮಾತುಕಥೆ ಗಳಾದುವು. ಅವನು ಜ್ಯೋತಿಷ್ಯನೆಂದು ತಿಳಿಯಲು ತಮ್ಮ ಜಾತಕವನ್ನು ಅವನ ಮುಂದಿರಿಸಿದರು. ಅವನು ಕಂಡ ದ್ದನ್ನು ಕಂಡ ಹಾಗೆ ಹೇಳಿದನು. ಅವನ ಹೇಳಿಕೆಯಿಂದ ರಾಯರಿಗೆ ತೃಪ್ತಿಯಾಯಿತು. ಒಂದೇ ಒಂದು ಅತೃಪ್ತಿಯ ವಿಷಯವೆಂದರೆ—"ಅವರ ಆಯುಷ್ಯಕ್ಕೆ ಸದ್ಯದಲ್ಲಿ ಭಯಂಕರ ಸಂಧಿಯಿದೆಯೆಂಬುದು." ಜೋಯಿಸನು ಒಂದೆರಡು ದಿವಸ ಗಳಿದ್ದು ರಾಯರಿಂದ ಅನಸ್ಯೆಬಹುಮಾನ ಪಡೆದು ಹೊರಟು ಹೋದನು.

ಇತ್ತ ರಾಯರ ಮನಸ್ಸಿನಲ್ಲಿ ತಾನು ಸಾಯುವಷ್ಟ ರೊಳಗೆ ಶ್ರೀನಿವಾಸನಿಗೆ ಕಲ್ಯಾಣ ಮಾಡಬೇಕೆಂದು ಬಂದಿತು. ಅದಕ್ಕಾಗಿ ಹುಡುಗಿಯನ್ನು ಹುಡುಕತೊಡಗಿದರು. ಆದರೆ ಬಡವರ ಮನೆಯ ಕನ್ಯೆಯನ್ನು ತರುವುದು ಅವರ ಮನಸಿ ನಲ್ಲಿದ್ದಿರಲಿಲ್ಲ. ಆದರೆ ಪುತ್ತೂರಿನಲ್ಲಿ ಅವರ ಹುಡುಗನ ಅಂತಸ್ತಿಗೆ ತಕ್ಕವರು ಸಿಗದೆ, ಮಂಗಳೂರಲ್ಲಿ ಶೋಧಿಸಬೇಕಾ ಯಿತು. ಶೋಧಿಸಿದರು. ಸಾಹುಕಾರ ರಘುವೀರರಾಯರ ಮಗಳು ಜಾನಕಿಯೇ ತಕ್ಕಳೆಂದು ನಿರ್ಣಯವಾಯಿತು. ರಘುವೀರ ರಾಯರು ಸಹ ಭಾರೀ ಶ್ರೀಮಂತರು. ಹೀಗಾಗಿ ವಿವಾಹಕ್ಕೆ ಯಾವ ಪ್ರತಿಬಂಧಕವೂ ಇದ್ದಿರಲಿಲ್ಲ. ನರಹರಿ ರಾಯರು ಜಾತಕಗಳನ್ನು ಅದೇ ಚೇಳು ವಂದಿತನನ್ನು ಶೋಧಿಸಿ ಕರೆಯಿಸಿ ಅವನ ಕೈಯಲ್ಲಿರಿಸಿದರು. ಅವನು ಬಾಯಿಯಿಂದ "ಸ್ವಾಮಿ, ಈ ರೀತಿ ಸರಬೇಳುವ ಜಾತಕ ಗಳು ಇನ್ನಿಲ್ಲ" ಎಂದನು. ಅವನ ವಾಕ್ಯವು ವರಮ ವಾಕ್ಯವು! ಲಗ್ನ ನಿಶ್ಚಯವಾಯಿತು. ಆಗಿಯೇ ಆಯಿತು.

ಮದುವೆಯು ಕೊಲ್ಲಾಹಲದಿಂದ ನಡೆಯಿತು. ಊಟ, ಉಡುಗೆ, ಆಭರಣ, ಉಡುಗೊರೆ ವಿಚ್ಯುಂಭಣೆಗಳು ಬಿರಿದು ಮೆರೆದುವು ಎಂದು ಹೇಳುವ ಕಾರಣವಿಲ್ಲ.....ಜನಕನ ಮಗಳ ಮದುವೆಯಂತಿತ್ತು ಶ್ರೀನಿವಾಸ ಜಾನಕಿಯರ ಮದುವೆ!

ಇತ್ತ ವಿವಾಹವಾದ ಆರು ತಿಂಗಳೊಳಗಾಗಿ ಎರಡು ದುಃಖ ಪ್ರಸಂಗಗಳು ಗೇದು—ಹೆಣ್ಣಿನ ಮನೆಗಳಲ್ಲಿ ಉಂಟಾ ದುವು. ಮೊದಲನೆಯ ಕೃತಿಯು ರಘುವೀರರಾಯರ ಜೀವ ನದ್ದು. ಒಮ್ಮೆಗೇ ರಾಯರ ವ್ಯಾಪಾರದಲ್ಲಿ ಅಪಾರ ನಷ್ಟ ವುಂಟಾಗಿ ಅವರು ದಿವಾಳಿಯಾಗುವ ಪ್ರಸಂಗ ಬಂದಿತು. ಊರವರು ಕನಸಿನಲ್ಲಿ ಎಣಿಸಿರಲಿಲ್ಲ. ರಘುವೀರರಾಯರು ಉಪಾಯಗಾಣದೆ ತಮ್ಮ ಅಂತಸ್ತಿಗೆ ಸರಿಯಾಗಿ ವಜ್ರವ ತ್ತಿಂದು ಪ್ರಾಣಬಿಟ್ಟರು: ಅದಾದ ಕೆಲವು ದಿವಸಗಳಲ್ಲಿ ಸ್ವತಃ ನರಹರಿರಾಯರ ಹಾಸಿಗೆ ಹಿಡಿದರು. ಆರಂಭದಲ್ಲಿ ಸ್ವಲ್ಪ ನ್ಯೆ ಬೆಚ್ಚಗಾಯಿತು. ಆದೇ ತನ್ನ ಸಾವಿನ ಸೂಚನೆಯೆಂದು ಸಂದಿತನ ಭವಿಷ್ಯವಾಣಿಯಂದ ತಿಳಿದರು. ಆ ಕಾಹಿಲೆಯಲ್ಲಿ ತಾವು ಸಾಯುವುದು ಖಂಡಿತವೆಂದು ಊಹಿಸಿದರು. ಚಿಂತೆ ಬಲವಾದಂತೆ ಕಾಯಿಲೆಯೂ ಬಲವಾಯಿತು. ಒಂದು ದಿನ ವಿಧಿಯ ಆಜ್ಞೆಗೆ ಸರಿಯಾಗಿ ಅವರು ಹೊರಟೇ ಹೋದರು.

ಹೀಗೆ ತಂದೆಯನ್ನೂ ಮಾವಂದಿರನ್ನೂ ಏಕ ಸಮಯ ದಲ್ಲಿ ಶ್ರೀನಿವಾಸರಾಯರು ಕಳೆದುಕೊಂಡು ಬೇದಕ್ಕೀಡಾ ದರು. ಆಗ ಜಾನಕಿಗೆ ೧೪ ವಯಸ್ಸು. ಅಷ್ಟಿದ್ದರೂ ಪತಿಯ ಮುಃಖಸಮಾಧಾನಕ್ಕಾಗಿ ಕತಪ್ರಯತ್ನ ಮಾಡಿದಳು. ಆದರೆ ಸಾವಿನ ನೆನಪನ್ನು ಯಾವಜ್ಜೀವ ಕಟ್ಟಿಕೊಂಡರೆ ಬದುಕಲು ಬಂದೀತೇ?

ಜಾನಕಿಯೂ ಈಗ ಶ್ರೀನಿವಾಸರಾಯರ ಮನೆಯಲ್ಲಿ ಯೋಗ್ಯ ಪದವಿಯನ್ನು ಹೊಂದಿದಳು. ಶ್ರೀನಿವಾಸರಾಯರ ಸಕ್ಕಸ್ಯೇಮವು ಬೆಳೆಯುತ್ತ ಹೋಯಿತು. ಸಂಪತ್ತಿನಿಂದ ಏನೆಲ್ಲ ದೊರೆಯಬಹುದೋ ಅದೆಲ್ಲವನ್ನೂ ಜಾನಕಿಗೆ ಕೊಡ ತೊಡಗಿದರು. ಜಾನಕಿಯು ಉಡುಗೆ ತೊಡುಗೆಯ ಆಡಂ ಬರದಲ್ಲಿ ಆಸಕ್ತಳು. ದಿನಕ್ಕೊಂದು ಸೀರೆ ಬೇಕು. ದಿನ ಕ್ಕೊಂದು ಆಭರಣ ಬೇಕು. ಆದರೆ ಆವಳ ಆಶೆ ಎಂದೂ ನಿಷ್ಫಲವಾಗುತ್ತಿರಲಿಲ್ಲ. ಶ್ರೀನಿವಾಸರಾಯರು "ನಿನಗಲ್ಲ ದ್ದೇನು?" ಎನ್ನುತ್ತಿದ್ದರು. ಅವರಿಬ್ಬರ ತಾರುಣ್ಯದಲ್ಲಿ ಜಾನಕಿಯು ಮೂರು ನಾಲ್ಕು ಬಾರಿ ಅಖಿಲ ಹಿಂದೂಸ್ಥಾ ನದ ಯಾತ್ರೆ ಮಾಡಿದಳು. ಅವಳಿಗೆಂದು ಕೆಲಸವಿದ್ದು ಹೋದುದಲ್ಲ. ಪತಿಯು ತಾನಾಗಿ ಹೋಗಬೇಕೆಂದು ಆಗ್ರ ಮಾಡಿದನು. ಆದರೆ ತನ್ನ ಪತ್ನಿಯನ್ನು ನಮನತೆಯಿಂದ ಬಿಟ್ಟುಹೋಗಲಾರದೆ ಒಯ್ದನು. ಇಂತಹ ಸಂಸಾರಿಕರು ಎಷ್ಟು ಮಂದಿ!

ದೇವರು ದಂಪತಿಗಳ ಅನ್ಯೋನ್ಯಕ್ಕೆ ಮೆಚ್ಚಿ, ಮೊದ ಲಿಗೇ ಗಂಡು ಮಗುವೊಂದನ್ನು ಕರುಣಿಸಿದನು. ಆಗ ಅವರ ಆನಂದಕ್ಕೆ ಪಾರವಿಲ್ಲ. ಆ ಮಗುವನ್ನು ಜಾನಕಿಯು ಚಿನ್ನದ ತಗಡಿನಿಂದಲೇ ಹೊದ್ದಿಸಿದಳೆಂದರೂ ತಪ್ಪಿಲ್ಲ. ಅಂತೆಯೇ ಹತ್ತು ಹದಿನೆರಡು ವರುಷಗಳ ಅವಧಿಯಲ್ಲಿ, ಅವರ ಕುಟುಂಬವು ಒಂದರಿಂದ ಎಂಟಕ್ಕೆ ಹೆಚ್ಚಿತು.

ಮಕ್ಕಳ ವಿದ್ಯೆ, ಮುಂಜಿ, ಮದುವೆ ಶೃಂಗಾರಗಳಿಗೆ ಯಾವ ರೀತಿಯಿಂದಲೂ ಕೊರತೆಯುಂಟಾಗದಂತೆ ಶ್ರೀನಿ ವಾಸರಾಯರು ನಡೆಯಿಸಿದರು. ಜಾನಕಿ ಮನದಲ್ಲಿ ಏನೆ ನುವುದರೊಳಗೇ ಎಣಿಸಿದ್ದು ಮನೆಗೆ ಬಂದು ಬೀಳುವುದು.

ಆದರೆ ಶರೀರಬಲವು ಜಾನಕಿಯನ್ನು ವಂಚಿಸತೊಡ ಗಿತು. ಹತ್ತೆಂಟು ಬಾಣಂತಿತನದಿಂದ ಅವಳೀಗ ಅಶಕ್ತತೆಗೆ ಗುರಿಯಾದಳು. ವಯಸ್ಸು ಬರೇ ನೂವತ್ತೆರಡಾದರೂ ಕೂಡಲು ನೆರೆಯತೊಡಗಿತು. ಮೊದಲಿನ ಉತ್ಸಾಹವು ಇಲ್ಲದಾಯಿತು. ಆಗಾಗ ಅವಳು ಬೇನೆಗೆ ಗುರಿಯಾಗ ತೊಡಗಿದಳು. ವೈದ್ಯರು, ಡಾಕ್ಟರರು ಹಕೀಮರು—ಎಲ್ಲರ ಔಷಧಗಳೂ ದಿನನಿತ್ಯ ನಡೆದುವು. ಅನ್ನಾವಾಸ್ಯೆ ಹುಣ್ಣಿಮೆ ಗೊಮ್ಮೆ ಬೇನೆಯು ಬಿಟ್ಟು ಉಳಿದ ದಿನಗಳಲ್ಲೆಲ್ಲ ಬರತೊಡ ಗಿತು. ಶ್ರೀನಿವಾಸರಾಯರ ಆತುರವು ಬಲವಾಗಿ ಹೆಚ್ಚಿತು.

(೧೬ನೇ ಪುಟಕ್ಕೆ ಮುಂದುವರಿದುದು.)

ನೋಟೀಸು.

ಕುಂದಾಪುರ ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ

ಕ್ರಮ ನಂಬ್ರ 288/1918.

R. E P No 642/1934

1. ಆರ್ಡಾರ ಹಟ್ಟಂಗಡಿ ಲಕ್ಷ್ಮೀ ನಾರಾಯಣ ಕಾಮತ್—ರಾಮಕೃಷ್ಣ ಕಮ್ತಿರ ಮಗ, ಗಂಗೊಳ್ಳಿ ಗ್ರಾಮ–

2. ಎದ್ರಿರು

11. ಮಹಮ್ಮದ ತಾಯರ್—ಹಾಜಿ ಹಸನ್ ರುಕ್ನೋದ್ದೀನ್ ಸ್ಯಾಬರ ಮಗ, ಉತ್ತರಕನ್ನಡ ಜಿಲ್ಲಾ ಬಟ್ಕಳ ಪೇಟಾ ನವ್ಯಾತಕೇರಿಯಲ್ಲಿರುವವ–

24. ಮೊದಿನ್ ಬಿನ್ ಬುಡನ್ ಸ್ಯಾಬ, 18ನೇ ಪ್ರತಿವಾದಿ ಬುಡನವಲ್ಲದ ಅಬ್ಬುಬಕರ ಸ್ಯಾಬನ ಮಗ

25. ಬುಡಂಣ ಬಿನ್ ಹಾಜಿ ಸ್ಯಾಬ, 26. ಬುಡಂಣ ಬಿನ್ ಮೈದಿನ ಸ್ಯಾಬ—18ನೇ ಪ್ರತಿವಾದಿ ಬುಡನವಲ್ಲದ ಅಬ್ಬುಬಕರ ಸ್ಯಾಬನ ಮೊಮ್ಮಕ್ಕಳು

24–25–26ನೇ ಯೆದ್ರಿರು ಹೊನ್ನಾವರ ತಾಲೂಕು ಬೆಳ್ಕೆ ಗ್ರಾಮದಲ್ಲಿಯೂ ಇರುವವರು—

ಅರ್ಜದಾರನು ಈ ಎದ್ರಿರು ಸಗ್ಗೆರರ ಮೇಲೆ ಪಡೆದ ಮೇಲ್ಕಂಡ ಡಿಕ್ರಿಯ ಬಗ್ಗೆ ನಿನ್ನಿದ ಮೇಲ್ಕಂಡ ಅವ್ಲಜ್ಮಾರಿಯು ತಾರೀಕು 1–2–1935ಕ್ಕೆ ತಪ್ಸಿಗೆ ಇಟ್ಟಿದೆ ಆ ಕುರಿತು ಆಕ್ಷೇಪ ಇದ್ದರೆ ಆ ತಾರೀಕಿಗೆ ಮೇಲ್ಕಂಡ ಕೋರ್ಟಿನಲ್ಲಿ ಬೆಳಿಗ್ಗೆ 11 ಗಂಟೆಗೆ ಹಾಜ್ರಾಗಿ ಹೇಳತಕ್ಕದ್ದು ಇಲ್ಲದಿದ್ದರೆ ಸದ್ರಿ ಅವ್ಲಜಾರಿಯಲ್ಲಿ ಏಕಪಕ್ಷವಾಗಿ ತೀರ್ಮಾನಿಸಲಾಗುತ್ತದೆ

K Narayana Shenai, *Pleader*
ಅರ್ಜದಾರನ ಕಡೆ ವಕೀಲ
ನೋಟ್ಕಂ, ಕುಂಬಾಪುರ. ತಾ. 24–1–1935

ಹಿಂದೀಯರಾದ ನಾವು ಹೇಗೆ ಮೋಸಹೊಂದುವೆವು!

ಓದಿರಿ. ದೀನರಾದ ನಮ್ಮ (ಹಿಂದೀಯರ) ಅಜ್ಞಾನವನ್ನು ವಿದೇಶೀ ಕಾರ್ಖಾನೆದಾರರು ಹೇಗೆ ಸದುಪಯೋಗ ಪಡಿಸಿಕೊಳ್ಳುವರೆಂಬುದನ್ನು ತಿಳಿದುಕೊಳ್ಳಲು– ಓದಿರಿ ಇಡನ್ನು!—

ನೆಲಗಡಲೆ ಎಣ್ಣೆಯು ಬಾದಾಮಿ ಎಣ್ಣೆಯಾಗಿದೆಯೆಂದು ಗೊತ್ತೇ?

ನಮ್ಮ ದೇಶದಲ್ಲಿ "ಶುದ್ಧ ಲೂಳಾ ಬಾದಾಮಿ ಎಣ್ಣೆ" ಎಂಬ ಹೆಸರಲ್ಲಿ ಮಾರಾಟಮಾಡಲ್ಪಡುತ್ತಿರುವ ಎಣ್ಣೆಯು ಬಾದಾಮಿ ಎಣ್ಣೆಯಲ್ಲ, ನಮ್ಮ ದೇಶದಿಂದಲೇ ಒಯ್ದು ನೆಲಗಡಲೆಯಿಂದ ತೆಗೆದ ಶುದ್ಧ ನೆಲಗಡಲೆ ಎಣ್ಣೆಯಾಗಿದೆ ("ಇಂಡಿಜೆನಸ್ ಡ್ರಗ್ಸ್ ಒಫ್ ಇಂಡಿಯಾ" ಇದರ ಪುಟ 69ನ್ನು ನೋಡಿ)

ವನಸ್ಪತಿ ತೈಲವಲ್ಲ–ವಿೂನಿನ ತೈಲ! ತಿಳಿಯಿತೇ?

"ಇಂಪೀರಿಯಲ್ ಕೌನ್ಸಿಲ್ ಒಫ್ ಅಗ್ರಿಕಲ್ಚರಲ್ ರಿಸರ್ಚ್" ಇದರ "ಇಂಡಿಯನ್ ಓಯಲ್ ಕ್ರಶ್ಕಿಂಗ್ ಇಂಡಸ್ ಕಮಿಟಿ"ಯ ತೃತೀಯ ಸಭೆಯಲ್ಲಿ, ವ್ಯಕ್ತಿ ವರದೇಶದಿಂದ "Edible Hardened Oil" (ಆಹಾರಕ್ಕುಪಯೋಗಿಸಬಹುದಾದ ತೈಲ) ಎಂಬ ಚೀಟಿನ್ನು ಹಚ್ಚಿಸಿ, ವರದೇಶಗಳಿಂದ ಮತ್ಸ್ಯತೈಲವನ್ನು ಹಿಂದೂದೇಶಕ್ಕೆ ಆಮದು ಮಾಡಿ "ಸಸ್ಯತೈಲ" ವೆಂಬುದಾಗಿ ಮಾರಾಟಮಾಡುತ್ತಿರುವರೆಂದು ಬಯಲಾಯಿತು ಆದರೆ,—

ಸತ್ತ ಹೆಗ್ಗಣಗಳ, ಬೆಕ್ಕುಗಳ, ನಾಯಿಗಳ ಮತ್ತು ದನ ಇತ್ಯಾದಿಗಳ ಕೊಬ್ಬಿನಿಂದಾಗುವ ಸಾಬೂನುಗಳು!–

ಇವುಗಳಿಗೆ ಸರಿಗಟ್ಟುವಂತಹುದು ಮತ್ತಾವುದಿದೆ? ಯುರೋಪಿನಲ್ಲಿ ಮೃಗಗಳ ಕೊಬ್ಬನ್ನೂ ವಿೂನು ಎಣ್ಣೆಯನ್ನೂ ಆಹಾರಕ್ಕಾಗಿ ಉಪಯೋಗಿಸುತ್ತಿರುವಲ್ಲಿ ಸಾಬೂನುತಯಾರಿಯಲ್ಲಿ ಉಪಯೋಗಿಸುವ ಹೆಚ್ಚಿನ ಕೊಬ್ಬುಗಳು ಸತ್ತ ಮೃಗಗಳ ಶರೀರಗಳಿಂದಲೂ, ದಫನಾನೆಗಳಿಂದಲೂ, ರಸ್ತೆಗಳ 'ಕಚರಾ'ದಿಂದಲೂ, ಒಮ್ಮೊಮ್ಮೆ ನರದೇಹಗಳಿಂದಲೂ ದೊರಕಿಸಿಕೊಂದಂಥವುಗಳಾಗಿವೆ (ಸರ್ ಎಸ್ ಎ ಟಾಲ್ಬೊಟರವರ "ಮಿಲ್ಲಿಯನ್ಸ್ ಫ್ರೂಮ್ ವೇಸ್ಟ್" ಎಂಬ ಗ್ರಂಥವನ್ನೋದಿರಿ)

ಗೊಡ್ರೆಜ್ ವನಸ್ಪತಿ ಸುಗಂಧಸಾಬೂನುಗಳ

ವಿಷಯವಾಗಿ, ಅದನ್ನುಪಯೋಗಿಸುವ ಪ್ರಸಿದ್ಧಪುರುಷರೇನು ಹೇಳುವರೋ ಓದಿರಿ —

ಕವೀರವೀಂದ್ರ.—'ಗೊಡ್ರೆಜ್ ಸಾಬೂನುಗಳಿಗಿಂತ ಉತ್ತಮವಾದ ವಿದೇಶೀ ಸಾಬೂನುಗಳನ್ನು ನಾನು ಕಂಡಿಲ್ಲ ಇನ್ನು ಮುಂದೆ ಗೊಡ್ರೆಜ್ ಸಾಬೂನುಗಳನ್ನೆ ಉಪಯೋಗಿಸಲು ನಿರ್ಧರಿಸಿದ್ದೇನೆ"

ಕೆಲ ವರ್ಷಗಳ ಹಿಂದೆ ಡಾ! ಅನ್ನಿಬಿಸೆಂಟರು ತಮ್ಮ "ನ್ಯೂ ಇಂಡಿಯಾ"ದ ಪತ್ರಿಕೆಯಲ್ಲಿ, ಗೊಡ್ರೆಜ್ ಸಾಬೂನುಗಳು ಪ್ರಪಂಚದಲ್ಲಿ ಅತ್ಯುತ್ಕೃಷ್ಟವೆಂದು ಪ್ರಕಟಿಸಿದ್ದರು

ರಾಷ್ಟ್ರೀಯ ಮಹಾಸಭೆಯ ಮಾಜಿ ಅಧ್ಯಕ್ಷರಾದ ಡಾ! ಅನ್ಸಾರಿಯವರು— ಗೊಡ್ರೆಜ್ ಸಾಬೂನುಗಳ ವಿಷಯವಾಗಿ ಹೇಳುವರು — 'ಗೊಡ್ರೆಜ್ ಸಾಬೂನುಗಳ ಉತ್ತಮ ಗುಣಗಳನ್ನು ಗುರುತಿಸಲು ನನಗೆ ಅತ್ಯಾನಂದವಾಗುತ್ತದೆ ನಾನು ಅವುಗಳನ್ನು ಕಳೆದ ಹತ್ತು ವರ್ಷಗಳಿಂದಲೂ ಉಪಯೋಗಿಸುತ್ತಿದ್ದು, ಯುರೋಪಿನ ಯಾವ ಉತ್ತಮ ಸಾಬೂನುಗಳಿಗಿಂತಲೂ ಉತ್ಕೃಷ್ಟವೆಂಬುದನ್ನು ಮನಗಂಡಿದ್ದೇನೆ ಅವುಗಳು ಹಿಂದೂದೇಶದಲ್ಲಿ ಸಿದ್ಧವಾಗುತ್ತಿರುವುದಕ್ಕೂ ಅವುಗಳ ಉತ್ಕೃಷ್ಟತೆಯ ದೆಸೆಯಿಂದಲೂ ಹಿಂದೀಯರೆಲ್ಲ ಅವುಗಳನ್ನೇ ಉಪಯೋಗಿಸಬೇಕೆಂದು ನನ್ನ ಸಲಹೆ.'

ಗೊಡ್ರೆಜ್ ಗಂಧದ ಸಾಬೂನು ಮತ್ತು ಶೇವಿಂಗ್ ಸ್ಟಿಕ್ ಸೋಲ್ ಏಜಂಟರು ಇವುಗಳನ್ನು ಉಪಯೋಗಿಸಿರಿ.

ವಾಡಿಲ ಹಾ, ಪ್ರಿಂಟರ್ ಎಂಡ್ ಕೊ.16)/C, ಬ್ರೋಡ್ವೆ, ಮದರಾಸು

ಹೆಡ್ ಆಫೀಸು: ಬೊಂಬಾಯಿ ಇತರ ಶಾಖೆಗಳು— ಕಲ್ಕತ್ತಾ, ಲಾಹೋರ್ ಮತ್ತು ಕರಾಚಿ

ಟಿ ಸೂ:—ಗೊಡ್ರೆಜ್‌ರವರ ಹೆಸರಲ್ಲಿ ಮಾರಾಟವಾಗುತ್ತಿರುವ ಬಾರ್‌ಸೋಪ್ ಮತ್ತು ಇತರ (ಬಟ್ಟೆಯೊಗೆಯುವ) ಸಾಬೂನುಗಳಲ್ಲಿ ಗೋದ್ರೆಜ ರವರಿಗೆ ಸಂಬಂಧವಿಲ್ಲ

The Canara Public Conveyance Company, Ltd., Mangalore.

WE TAKE UTMOST CARE OF PASSENGERS

Read the following letter –

Modern Hindu Hotel
Calicut, 17—6 1934.

Dear Sir,

We wish to thank you for all that you did for us to make our stay at Mangalore comfortable. It is extremely nice of you to have looked after us as you did

Yours faithfully,

(Sd.) **A. V. Ramaswami.**

The same service is offered to all. We call for reports from passengers, if they have failed to receive similar attention and assure to take prompt action to see that inconvenience is not repeated.

Chikmagalur Public Conveyance Motor Service, Chikmagalur.

ಚಿಕ್ಕಮಗಳೂರು ಪಬ್ಲಿಕ್ ಕನ್ವೆಯನ್ಸ್ ಮೋಟರ್ ಸರ್ವಿಸ್,

ಚಿಕ್ಕಮಗಳೂರು

ಮುಂಬಾಯಿಯಿಂದ – ಮಂಗಳೂರಿಗೆ
ಮಂಗಳೂರಿನಿಂದ ಮುಂಬಾಯಿಗೆ.

ಅಲ್ಲದೆ

ಹುಬ್ಬಳ್ಳಿ, ಧಾರವಾಡ, ಗೋವಾ, ಮುಂಬಾಯಿ ಮತ್ತು ದಕ್ಷಿಣ ಕನ್ನಡ ಜಿಲ್ಲೆಯ ಎಲ್ಲಾ ಭಾಗಗಳಿಗೆ ಪ್ರಯಾಣ ನಡಿಸಲಿಕ್ಕೆ

ಮಂಗಳೂರು – ಕಡೂರು ಹಾದಿಗಿಂತ ಉತ್ತಮ ಬೇರೆ ಹಾದಿಯಿಲ್ಲ!

ಹೊಸ ಬಸ್ಸುಗಳು ಅನುಕೂಲ ಪ್ರಯಾಣ ಸೌಕರ್ಯಗಳು

ಕಡೂರು ಜಿಲ್ಲೆಯೊಳಗಿನ ಎಲ್ಲಾ ಕೌಫಿ ತೋಟಗಳಿಗೆ

ಕೂಲಿಕಾರರನ್ನು ತರಲಿಕ್ಕೂ ಅಲ್ಲಿಂದ ಕೊಂಡುಹೋಗಲಿಕ್ಕೂ ನಾವು ಎಲ್ಲಾ ತರದ ಸಹಾಯವನ್ನೂ ಕೊಡುತ್ತೇವೆ

ಚಿಕ್ಕಮಗಳೂರಿನಿಂದ – ಶಿವಮೊಗ್ಗಕ್ಕೆ, ಬೀರೂರಿಗೆ, ಕಡೂರಿಗೆ-
–ಮೂಡಗೆರೆಗೆ, ಸಕಲೇಶಪುರಕ್ಕೆ.
-ಮಂಗಳೂರಿಗೆ, ಮೂಡಬಿದ್ರೆಗೆ, ಪುತ್ತೂರಿಗೆ, ಮೂಲ್ಕಿಗೆ.
–ಧರ್ಮಸ್ಥಳಕ್ಕೆ, ವೇಣೂರಿಗೆ, ಸುಬ್ರಹ್ಮಣ್ಯಕ್ಕೆ.

ನಿಯಮಿತ ಪ್ರಯಾಣ! ಉತ್ಸಾಹದ ಸೌಕರ್ಯ!

ಬೇಕಾದ ಮಾಹಿತಿಗೆ ನಮ್ಮ ಆಫೀಸಿಗೆ ಬರೆದು ತಿಳಿದುಕೊಳ್ಳಿರಿ.

ವಿವಿಧ ವಿಷಯ.

ಹಿಂದೂದೇಶದ ರಾಜಕೀಯ ಸುಧಾರಣೆ–

ಸರ್. ಟಿ. ಶೆಷಾದ್ರಿಅಯ್ಯರು, ಡ್ಯಾಡಾಭಾರ್ರಿಗೆ ಹಿಂದೂ ದೇಶದ ವಿಷಯವಾಗಿ ಈ ರೀತಿ ಎಳ್ಳಷ್ಟಿಯನ್ನು ಕೊಟ್ಟಿದ್ದಾರೆ. "ನೀವು ಹಿಂದೂಸ್ಥಾನಕ್ಕೆ ಈಗ ಕೊಡುವ ರಾಜಕೀಯ ಸುಧಾರಣೆಗಳು ಅತಿ ಕಡಿಮೆ ತರದವುಗಳು. ಈ ಕಾರಣವಾಗಿ ಇವರಲ್ಲಿ ನಮ್ಮ ಮೇಲಿನ ಅಸಮಾಧಾನವು ಹೆಚ್ಚಾಗುವುದು" ಈ ಸುಜ್ಞಾನಿಯರು ಪ್ರಬಲ-ಹಿಂದೂಸ್ಥಾನ ಸ್ಥಾಪಿತ ಸಮಿತಿಯ ಅಧ್ಯಕ್ಷರಾಗಿ, ಮೊನ್ನೆ ಹಿಂದೂದೇಶದ ರಾಜಕೀಯ ಸುಧಾರಣೆಗಳ ವಿಷಯವಾಗಿ ಒಂದು ಭಾಷಣವಿತ್ತರು. ಹಿಂದೂದೇಶದ ನ್ಯಾಯ ನೈಪಡಿಸಿಕೆಯನ್ನು ಅಲ್ಲಿಯ ಮಂತ್ರಿಮಂಡಲದಲ್ಲಿರುವ ಬೇಕೆಂದು ಇವರ ಮತವಾಗಿರುತ್ತದೆ

ಸರ್ವಥಾ ಬೇಡ!

ಬೆಹರೀನ್ ನ್ಯಾಯ ಸಭೆಯು, ಜ್ಯೂಟ್ ಕಾರ್ಖಾನೆಯಲ್ಲಿ ರಿಪೋರ್ಟು ಪೂರ್ಣ ಬದಲಾಗಬೇಕೆಂದು ಒಂದು ತರಾವನ್ನು ಮಾಡಿತು –

"ನಮ್ಮನ್ನಾಳುವ ನಮ್ಮ ಹಳ್ಳಿ ನವುಗೇನೇ ಇರಬೇಕು ಜ್ಯೂಟ್ ಕಾರ್ಖಾನೆಯಲ್ಲಿ ರಿಪೋರ್ಟಿನ ಪ್ರಕಾರ ನಮಗೆ ಕೆಲವು ಸುಧಾರಣೆಗಳು ಸಿಕ್ಕುವುದೆಂಬ ಭಾವನೆಯಿಂದ ನಮ್ಮನ್ನು ಬೆನ್ನು ತಟ್ಟುವುದು ಬೇಡ" ಎಂದು ಕೊಂಗ್ರೆಸ್ ಮುಖಂಡರಾದ ಬಾಬೂರಾಜೇಂದ್ರ ಪ್ರಸಾದರು ಹೇಳಿದರು.

ಪಾರಿವಾಳವನ್ನು ಕಾಗೆಗಳು–

–ತುಕ್ಕಿ ತುಕ್ಕಿ ಪಸನು ಮಾಡಿ ತಿಂಡಿಬಿಡುವಂತೆ ಹೊಸ ರಾಜ್ಯಾಂಗ ಸುಧಾರಣೆಗಳ ಗತಿಯಾಗಿಬಿಡಬೇಕೆಂದು ತಿಳಿಯಬೇಕಾದರೆ ಹಿಂದೂದೇಶಕ್ಕೆ ಯಾರೂ ಕಾಲಿಡುವುದು ಅಗತ್ಯವಿಲ್ಲ,–ಅವರು ಲಂಡನಿಗೆ ತಿರಿಗಿದರೆ ಅಲ್ಲಿ ತಿಳಿದುಬಂದೀತು ಎಲ್ಲಲ್ಲಾ ಆದರೆ ಪಂಡನೆ ಸೊಸ್ಯಾಟಿ ಒಫ್ ಫ್ರೆಂಡ್ಸ್ ಎಂಬ ಸಂಸ್ಥೆಯಲ್ಲಿ ಲಂಡನಿನ ಅನೇಕ ನ್ಯಾಯಸ್ಥರು ಕೂಡಿಕೊಂಡು ಮಿಸ್ ಮಹರಾಮಸಾನಿ, ದಿನಬಂಧು ಎಂಡ್ರೂಸ್ ಮೊದಲಾದವರು ಆ ಸುಧಾರಣೆಗಳನ್ನು ಖಂಡಿಸಿದರು

ಗಾಂಧಿಜಿಯವರು ಬೇಡವೆಂದರೂ–

–ಲಂಡನಿನ ಇಂಟರ್‌ನೇಶನಲ್ ಬ್ಯೂರ್ ಕಂಟ್ರೋಲ್ ಇನ್ ಫೋರ್ಮೇಶನ್ ಇದರ ಡೈರೆಕ್ಟರರಾದ ಮಿಸೆಸ್ ಏಡಿತ್ ಹೌಮಾರ್ಟನ್ ಎಂಬವರು ಲಂಡನಿನಿಂದ ಹಿಂದೂದೇಶಕ್ಕೆ ಮೊನ್ನೆ ಬಂದು, ಸರಕಾರ ನಿರೀಕ್ಷಿತ ಚಳವಳಿಗೆ ಬೆಂಬಲವಾಗಿ ಕಂಠ ಪ್ರಚಾರಕ್ಕೆ ಪ್ರಾರಂಭಿಸಿರುವರು ಸ್ತ್ರೀಯರ ರಕ್ಷಣೆಯು ಈ ಮಿಶನಂತಕಾಯ ಚಳವಳಿಯಲ್ಲೇ ಆಡಳವಾಗಿದಯಂತೆ

ಮಹಾತ್ಮರು ಖಂಡಿಸಿದರೂ–

ಅಖಿಲ ಭಾರತ ಮಹಿಳಾ ಸಂಸತ್ತಿನಲ್ಲಿ ಸಂತಾನ ನಿರೋಧ ಚಳವಳಿ ಸಮರ್ಥನೆಯು ಠರಾವಾದುದರಿಂದ ಲಂಡನಿನಲ್ಲಿ ಮಹಿಳಾ ಸಂಘಗಳು ಅನಂದಗೊಂಡಿವೆ ಯೆಂದು ಮಿಸೆಸ್ ಹೌಮಾರ್ಟನರವರು ತಿಳಿಸಿರುವರು

ಮಹಾರಾಜರುಗಳ ಔದಾರ್ಯದ—

ಸುದ್ದಿಗಳಲ್ಲಿನಾ ಕಡಮೆಯಿಲ್ಲವೆನ್ನಿ ಬದ್ಯಾನಿನ ಮಹಾರಾಜರು ೧೯೨೭ರ ಒಕ್ಟೋಬರದಲ್ಲಿ ತನ್ನ ಮಗನ ವಿದ್ಯೆಯ ಮೇಲ್ತಿವಾರಿಗಾಗಿ ಲಂಡನಿಗೆ ಹೋಗಿದ್ದು ಅಲ್ಲಿ ತನ್ನ ಕೆಲಸಗಳಿಗಾಗಿ ಕೆಲವು ಆಂಗ್ಲೇಯರನ್ನು ನೇಮಿಸಿ, ಇತ್ತಲಾಗಿ ಅಲ್ಲಿಂದ ಹಿಂದಿರುಗುವ ಸಮಯದಲ್ಲಿ ಆ ಕೆಲಸಗಾರರಿಗೆಲ್ಲ ಧಾರಾಳವಾಗಿ ಬಹುಮಾನಗಳನ್ನಿತ್ತರು ಅದರಿಂದಲೂ ತೃಪ್ತರಾಗಿರದೆ, ತನ್ನ ಇಂಗ್ಲಿಷ್ ಸೇವಕರಿಗೆ ವಾರ್ಷಿಕ ಅನಾಥಭತ್ಯವನ್ನೂ ಕಳುಹಿಸಿಕೊಡುವ ವ್ಯವಸ್ಥೆಮಾಡಿರುವರು "ಮಹಾರಾಜರು ನನ್ನ ಧನಿಯಲ್ಲ–ತಂದೆಯಂತೆ" ಎಂದು ಅವರ ಚೋಪ್ಕಿಯರನ ಹೇಳಿ

ಕ್ರಿಕೆಟ್ ಆಟದಲ್ಲಿ ಗಳಿಸಿದ ಹೆಸರು–

ಕೋಟ್ಯಾನೆಲ್ಲವನಿಗೆ ಪ್ರಯೋಜಕಾರಿಯಾಗಲಿಲ್ಲ

ಇಂಗ್ಲಾಂಡಿನ ವಿ. ಡಬ್ಲ್ಯೂ. ಸ್ಮಿಜ್ ಎಂಬ ಕ್ರಿಕೆಟ್ ಆಟಗಾರನು ಸೋಟೆನಲ್ಲಿ ಸವಾರಿ ಮಾಡುತ್ತಿದ್ದಾಗ ಒಬ್ಬನು ಅದರಿಂದ ದಿವ್ಯ ವೈಕಲಾದನು ಜನ್ಮನ ಮೇಲೆ ತಕ್ಷೀರು ಸ್ಥಾಪಿತವಾಗಿ ೯ ತಿಂಗಳುಗಳ ಕಡಿಣ ಶಿಕ್ಷೆಯು ವಿಧಿಸಲ್ಪಟ್ಟಿತು ಆದರ ಮೇಲೆ ಅವನು ಇನ್ನೂ ೨ ವರ್ಷಗಳ ತನಕ ಸೋಟಾರನ್ನು ಮುಟ್ಟಿ ಬಾರದೆಂಬ ಆಜ್ಞೆಯಾಗಿದೆ

ಪ್ರಚಲಿತ ಸಮಾಚಾರ.

ತಾತಾರವರ ಕಾರ್ಖಾನೆಗಳು

ಹಿಂದೂದೇಶದಲ್ಲಿ ಪ್ರಸಿದ್ಧಪಟ್ಟ ತಾತಾರವರಿಂದ ಸ್ಥಾಪಿತವಾದ ಹಲವು ವ್ಯಾಪಾರ ಸಂಸ್ಥೆಗಳಿವೆ. ಅವುಗಳಲ್ಲಿ ಪ್ರಮುಖವಾಗಿ, ಜಮ್‌ಸೆಟ್‌ಪುರದಲ್ಲಿರುವ ಇವರ ಜಗದ್ವಿಖ್ಯಾತ ಕಬ್ಬಿಣದ ಕಾರ್ಖಾನೆ. ಇದನ್ನು ಜರ್ಮನಿಯ ಕ್ರುಪ್ ಕಾರ್ಖಾನೆಗೆ ಹೋಲಿಸಿ, ಜರ್ಮನಿಯ ಟೈ ಲಿಪರು ಲೇಖನಗಳನ್ನು ಬರೆಯುತ್ತಿದ್ದಾರೆ

ಇದೇನಂತೆ–

ಎಂದು ಕರ್ಪಾಲದಲ್ಲಿ ಇವರು ಹೊಟ್ಟಿಡುತ್ತಿರುವರು. ಸರ್ ಅಬ್ದುಲ್ ಹಮೀದರೆಂಬ ಮುಸ್ಲಿಂ ಮಂತ್ರಿಯವರ ಭಡಿಗೆ ಕರ್ನಲ್ ಫಿಶರ್ ಎಂಬ ಆಂಗ್ಲೇಯರನ್ನು ನೇಮಕಮಾಡಿರುವಾಗಿದೆ ಇವರು ಫೆಬ್ರುವರಿ ತಿಂಗಳಲ್ಲಿ ಅಡಳತವನ್ನು ವಹಿಸಿಕೊಂಡರು ಜನರಿಗೆ ಇಷ್ಟೊಂದು ಅಶ್ಚರ್ಯ ಸಂಗತಿಯಲ್ಲ. ಜನರು ಬಾಯ್ಬಿಡುವುದೆಂದರೆ ಹೂಜ ಟೀಫ್ ಮಿನಿಸ್ಟರರ ಆಸ್ತಿ, ಬದುಕುಭಾಗ್ಯಗಳನ್ನೆಲ್ಲ ಸಂಸ್ಥಾನಕ್ಕೆ ಬಿಟ್ಟು ಕೊಡಬೇಕೆಂದು ಅಪ್ಪಣೆಯಾಗಿದೆ ಕಾರಣವಿಷ್ಟೆ ಮುಸ್ಲಿಮಂತ್ರಿಗಳು ತುಂಬಾ ಸಾಲಮಾಡಿಕೊಂಡು ಆರ್ಥಿಕವಾಗಿ ಸಂಸ್ಥಾನದ ಚರ್ಮಕ್ಕೆ ಬಂಧಿಸಿಕೊಂಡಿರುವರು, ಸಾಲವನ್ನು ರೀತಿಸುವ ವರೆಗೆ ಅವರ ಯಾವ ಆಸ್ತಿಯನ್ನೂ ಅನರಿಗೆ ಕೊಡಲಾಗುವುದಿಲ್ಲ

ಶಸ್ತ್ರಗಳನ್ನು ತ್ಯಜಿಸಿರಿ–

ಎಂಬ ಸುಲಭ ತತ್ವವು ಜಗತ್ಪ್ರಸಿದ್ಧವಾಗಿರುವುದಾದರೂ ಅದನ್ನು ಕೊಂಡಿದ್ದರೂ ಸಿಂಗಾಪುರದಲ್ಲಿ ಸರಕಾರವು ಇನ್ನೊಂದು ದೊಡ್ಡ ಭೂಮಿಯನ್ನು ಪಡೆದುಕೊಂಡು ಆಲ್ಲಿ ಮಿಲಿಟರಿಯನ್ನು ಸ್ಥಾಪಿಸಬೇಕೆಂದು ನಿರ್ಧರಿಸಿದೆ. ಮೌಂಟ್ ಫೇಬರ್‌ನಲ್ಲಿ ಭದ್ರತಾ ಯೋಜನೆಗಳೆಯಾದರೂ ಅಲ್ಲಿ ಇನ್ನೂ ಹೆಚ್ಚು ಮಿರಿಟರಿ ಬೇಕಂತೆ ವೈರಿಗಳ ಭಯ!

ಆಳಿಯನನ್ನು ಹೊರಗಟ್ಟಿದರೂ,

ಅತ್ತೆಯ ಮೇಲಿನ ಕೋಪವು ಶಾಶ್ವತವಾಗಲಿಲ್ಲ. ಸೈನಿನ ಆರಸರಾದ ಅಲ್ಫೋನ್ಸರನ್ನು ಸಿಂಹಾಸನಚ್ಯುತರನ್ನಾಗಿ ಮಾಡಿ, ಜನರು ಹೊರಗಟ್ಟಿದುದು ಆಶ್ಚರ್ಯಕ್ಕೆ ಸೈನಿನಲ್ಲಿದ್ದ ಆವರ ಅತ್ತೆಯ ಸಾವಿರಾರು ಪೌಂಡು ಬೆಲಬಾಳುವ ಚಿನ್ನಾಭರಣಗಳ ಒಂದು ದೊಡ್ಡ ಪೆಟ್ಟಿಗೆಯು ರಜಸ್ವಾಯ ರೀತಿಯಂದ ಕಾಣೆಯಾಗಿದೆ ಯಂತೆ ನೆನಸಾಗಿಯಲ್ಲ,–ನನ್ನ ಪೆಜಮ್ಮತ್ತೆಗಳಾಗಿಯಾದರೂ ಅದನ್ನು ಅವರು ಉಳಸಬಹುದಿತ್ತು" ಎಂದು ಮುದುಕರಿಂ ಕಣಿಕರ ಸರಕಾರವು ತನಿಖೆಯಲ್ಲಿ ಮನಸ್ಸಿಟ್ಟಿಲ್ಲ

ದೊಡ್ಡ ಬೆಂಕಿಯೊಂದು–

ಮಾರ್ಸೈಲ್ಸ್‌ನ ಸಮುದ್ರದಲ್ಲಿ ಸಂತ ಸ್ಟೀಮರಿನಲ್ಲಿ ಎದ್ದು ಆನೇಕ ನಾರಿನ ಬೇಲುಗಳು ಸುಟ್ಟುಕೋಗಿ ಸಾವಿರಾರು ರೂಪಾಯಿಗಳ ನಷ್ಟವು ಸಂಭವಿಸಿದೆ ಬೆಂಕಿಯನ್ನಾರಿಸುವುದಕ್ಕೆ ನಾಲ್ಕು ತಾಸು ತಗಲಿತು

ಪೋಲೀಸರು ಮಹಾ ಸಾಹಸಪಟ್ಟು—

ಅಮೃದಾಬಾದಿನ ಮಿಲ್‌ಮಜೂರ ಸಂಘದ ಮಾಜಿ ಖಜೀರಿಯಲ್ಲಿ ಇತ್ತಿ ನಡೆಸಿ ಕಮಿಷನ್ನ್ ಪಕ್ಷೀಯರ ಕೆಲವು ರಿಕಾರ್ಡುಗಳನ್ನೂ ಕಾಗದಪತ್ರಗಳನ್ನೂ ಕೈವಶ ಪಡಿಸಿಕೊಂಡು ಆ ಕಛೇರಿಯಲ್ಲಿ ವಾಸಿಸುತ್ತಿದ್ದವನೊಬ್ಬನನ್ನು ಬಂಗ್ಯಾಕ್ಕೊಯ್ದುರುವರು

೧೦೦೦೦ ರೂಪಾಯಿಗಳನ್ನು

ತ್ರಾವಣಕೋರ್ ಮಹಾರಾಜರು ಸಾರ್ವಭೌಮರ ಪಟ್ಟಾಭಿಷೇಕೋತ್ಸವದ ಧಂಡಿಗಾಗಿ ಔದಾರ್ಯದಿಂದ ಕೊಟ್ಟಿರುವರೆಂಬ ಸಂತೋಷ ವಾರ್ತೆಯು ಇದೆ ಮಹಾರಾಜರುಗಳ ದಾನಕ್ಕೆ 'ಆರ್ಥಿಕ ಮುಗ್ಗಟ್ಟಿನ ರೋಗವಿಲ್ಲದಿರುವುದು ಯಾರಿಗೆ ಸಂತೋಷವಲ್ಲ?

ಕೈದಿಗಳ ಸಂಖ್ಯೆ ಹೆಚ್ಚಾಗಿರುವುದರಿಂದಾಗಿ

ಬಂಗಾಳ ಸರಕಾರವು ಪ್ರಾಂತಿಕ ಸೆರೆಗಳಿಂದ ಕೆಲವು ಕೈದಿಗಳನ್ನು ಆವರ ಅವಧಿಯಾಗುವ ಮೊದಲೇ ಬಿಡುಗಡೆಮಾಡಲಿರುವೆಯೆಂದೂ, ಇನ್ಸ್‌ಪೆಕ್ಟರ್ ಜನರಲರು ಜೈಲ್ ಸುಧಾರಣೆಯಂಟಿಗೆ ಈ ಬಗ್ಗೆ ಸಲಹೆಗಳನ್ನು ತ್ರಿರುವರೆಂದೂ ತಿಳಿಯಲಾಗಿದೆ.

ಮಲೇರಿಯಾ ಜ್ವರಕ್ಕೆ ಹೊಸ ತರದ ಔಷಧ.

ಇದೊಂದು ನವೀನ ಔಷಧಿಯನ್ನು ಸಿಲೋನಿನಲ್ಲಿ ಕಂಡುಹಿಡಿದಿದ್ದಾರೆ ಇದು ಒಂದು ಕಾಡುಗಿಡವಾಗಿರುತ್ತದೆ ಇದರ ಹೆಸರು ಪಲ್ಲಾಬ್ಬಾಯಾಪಾ' ಇದರ ರಸವನ್ನು ಸೇವಿಸಿದ್ದಲ್ಲಿ ಮಲೇರಿಯಾವು ನಿವಾರಣೆಯಾಗುವುದಲ್ಲದೆ ಇತರ ರೋಗಗಳಂತೆ ಇದು ನಿವಾರಣಾ ನಂತರ ರೋಗಿಗಳನ್ನು ಬಾಧಿಸುವುದಿಲ್ಲ ಇದನ್ನು ಬೇರೆಯಾಗಿ ತಿನ್ನುವುದೇ ಇದರ ಸೇವನಾ ಕ್ರಮ ಸಿಲೋನಿನಲ್ಲಿ ಹಲವರು ಇದನ್ನು ಸೇವಿಸಿ, ಮಲೇರಿಯಾಜ್ವರದಿಂದ ನಿವಾರಣೆ ಹೊಂದಿದ್ದಾರೆ. ವೈದ್ಯರು ಇದು ಒಂದು ದಿವ್ಯ ಔಷಧವೆನ್ನುತ್ತಿದ್ದಾರೆ ಇದನ್ನು ಬೆಳೆಸಲು ಕಾರ್ಯ ಕ್ರಮಗಳು ನಡೆಯುತ್ತಿವೆ. ಇದು ಪೂರ್ಣ ಬೆಳೆಯಲು ಮೂರು ವರ್ಷಗಳ ಸಮಯವು ಬೇಕಾಗುತ್ತದೆ

ಒಂದು ರಹಸ್ಯ ಕೂಸು.

೧೪೫ರೆತ್ತು ಭಾರವಿರುವ ಒಂದು ಗಂಡು ಶಿಶುವು ನೊರ್ವೆಯ ಒಂದು ಹಳ್ಳಿಯಲ್ಲಿ ಜನಿಸಿದೆ ತಾಯಿಯು ಒಬ್ಬ ಶಮ್ಮಾರನ ಹೆಂಡತಿ ಇದು ಅವಳ ಒಂಭತ್ತನೆಯ ಕೂಸು ಇಂಥಾ ಮಕ್ಕಳು ಯಚ್ಚುವುದು ತೀರಾ ವಿರಳ

ಚಲನಚಿತ್ರದ ಒಂದು ವಿಶಿಷ್ಟ ಸುದ್ದಿ

ಶ್ರೀಮತಿ ಸುಂದರಂಬಾಳ್ ಎಂಬವಳು ನಾಟ್ಯರಂಗದಲ್ಲಿ ಹೆಚ್ಚಿನ ಶ್ರೇಯಸ್ಸನ್ನು ಪಡೆದು, ಈಗ ಚಲನ ಚಿತ್ರಕ್ಕೆ ಧುಮುಕಿರುವಳು ಅಲ್ಲಿಯೂ ಆವಳ ಕೀರ್ತಿಯು ಮಹತ್ತಾಗಿದೆ ನಂದನಾರ ಎಂಬ ಹೊಸ ಚಿತ್ರಕಬ್ಬನೆಗೆ ಇವಳಿಗೆ ಒಂದು ಲಕ್ಷ ರೂಪಾಯಿ ಉಂಬಳಿಯನ್ನು ಕೊಡಲಾಗಿದೆ ಇದು ಅಖಿಲ ಹಿಂದೂ ಸ್ಥಾನದಲ್ಲಿನ ಚಲಚಿತ್ರದ ಯಾವತ್ತೂ ನಟರಿಗೆ ಸಿಕ್ಕಿರುವುದಿಲ್ಲ ಪ್ರಖ್ಯಾತಳಾದ ಮಿಸ್ ಸುಲೋಚನಾ ಇವರಿಗೆ ಮಾಸಿಕ ರೂ ೪೦೦೦ ಸಿಕ್ಕುತ್ತದೆ ಮಿಸ್ ಗೋಹರ ರಿಗೆ ರೂ ೩೦೦೦ ಸಿಕ್ಕುತ್ತದೆ

ಆದರೆ ಸುಂದರಂಬಾಳಿಗೆ ಇದು ತಕ್ಕುದಾದ ಕಾಣಿಕೆಯೇ ಸರಿ ವಿಶೇಷವೆಂದರೆ, ತಮಿಳು ನಾಡಿನ ಶ್ರೀಷ್ಠ ನಟಿಯಾಳು ಇವಳ ನಟನೆಯು ಸರ್ವರನ್ನು ಮುಗ್ಧರನ್ನಾಗಿ ಮಾಡುತ್ತದೆ ಇವಳ ಈ ಹೊಸ ಚಿತ್ರವು ಬಹಳ ಖ್ಯಾತಿಹೊಂದುವುದೆಂಬುದರಲ್ಲಿ ನವನೂ ಸಂದೇಹವಿಲ್ಲ

ಜಪಾನಿನ ವ್ಯಾಪಾರ.

ಜಪಳ ವ್ಯಾಪಾರದಲ್ಲಿ ಜಪಾನಿಗೆ ಹೆಚ್ಚಿನ ಪ್ರೋತ್ಸಾಹ ಸಿಕ್ಕಲು ಅಲ್ಲಿ ಹಲವು ನಿರಬೆಗಳು ಸ್ಥಾಪನೆಯಾಗಿ ಸಾಧಾರಣ ವ್ಯಾಪಾರಕ್ಕೆ ಬೇಕಾಪುದಕ್ಕಿಂತ ಹೆಚ್ಚಿಗೆ ಸಾಮಾನುಗಳು ತಯಾರಾಗಿ ಅವುಗಳಿಗೆ ಮಾರ್ಕೆಟ್ ಇಲ್ಲದೆ ದಾಸ್ತಾನು ಬಿದ್ದಿದೆ. ಇವರ ಕಾರಣವಾಗಿ ಇತ್ತೀಚೆಗೆ ರಾಷ್ಟ್ರಗಳು ಜಪಾನು ಇನ್ನು ಸ್ವಲ್ಪ ವಿಶ್ರಾಂತಿಗೊಳ್ಳಬೇಕಾಗುವುದು

ವಿಧವೆಯ ಉರುಳು

ಬಳೆಂಬಯಾದಲ್ಲಿ ತನ್ನ ಹಣವನ್ನು ಕದಿಯಲು ಬಂದವನಿಗೆ ತಕ್ಕ ಪ್ರಾಯಶ್ಚಿತ್ತವಾಗುವ ಉದ್ದೇಶದಿಂದ ಹೊಡೆ ನೋಟುಗಳನ್ನು ಒಂದು ಕೋಣೆಯಲ್ಲಿ ಇರಿಸಿ, ಆ ಕೋಣೆಯನ್ನು ಮುಚ್ಚಿದ ಕೂಡಲೇ ಒಂದು ಬಂದೂಕು ಹಾರಿ ಬಂದ ಕಳ್ಳನನ್ನು ಕೊಲ್ಲುವಂತೆ ಒಂದು ಉರುಳನ್ನು ವಿಧವೆಯೊಬ್ಬಳು ಕಗ್ಗತ್ತಲೆಯಲ್ಲಿ ಅಗಾಧ್ರಾಣದಲ್ಲಿಟ್ಟಿರುವಳು ಹೀಗಿರಲು ಒಂದು ದಿನ ಗುಂಡಿನ ಶಬ್ದವು ಕೇಳಿಸಿತು ಕಳ್ಳನನ್ನು ನೋಡಲು ಹೋದ ವಿಧವೆಯು ತಪ್ಪಿ ೧೩ ವರ್ಷದ ಬಾಲಕನು ಮೃತನಾಗಿರುವುದನ್ನು ಕಂಡಳು

ಮಹಾಪುರುಷರ ಆಗಮನ

೧೯೩೧ರಲ್ಲಿ ಈ ಪ್ರಸಂಡಕ್ಕೆ ಒಬ್ಬ ಮಹಾಪುರುಷನ ಆಗಮನವಾಗುವುದೆಂದು ಎಡ್ವರ್ಡ್ ಲಾಯರ್ ಡೂ ಎಂಬ ಜೋತಿಷರ ಜೋತಿಷ್ಯ ಇವನು ಮಹಾಶಕ್ತಿಯಾಗಿದ್ದು, ಭಾಷಣದಲ್ಲಿ ಸಮ್ಮೋಹನಾಗಿರುವನು ಇವನಿಗೆ ಅಗಾಧ ಬುದ್ಧಿಶಕ್ತಿಯು ಇರುವುದು, ಇವನನ್ನು ನಿರ್ಮಾಲಗೊಳಿಸಲು, ತುಗೆನಿ ಯುದ್ಧಾತುರರು ಶಕ್ತಿ ಪ್ರಯತ್ನಗಳನ್ನು ಮಾಡುವರು ಆದರೆ, ಕೃಷ್ಣನಾ ರಕ್ಷಣೆಗಾಗಿ ಬರುವ ಈ ಮಹಾವ್ಯಕ್ತಿಯು, ಅವುಗಳನ್ನು ಮೂಲೆಗೆ ಒತ್ತಿ ಜಯಶಾಲಿಯಾಗಿ, ಎಲ್ಲರಲ್ಲಿ ಸಂತೋಷ ಮತ್ತು ಸಂತೃಪ್ತಿಯು ತಲೆದೋರುವಂತೆ ಮಾಡುವನು

ತುಂಡು ಸುದ್ದಿ.

ಕೇಂದ್ರ ನ್ಯಾಯವಿಧಾಯಕ ಸಭೆಯ ಮೆಂಬರರಾದ ಸರ್ ಅಬ್ದುಲ್ ಖರ್‌ವಾರ್‌ಯವರು ಮೊನ್ನೆ ತಾ ೧೩ರಲ್ಲಿ ಮೃತರಾದರು. ಇವರು ಕೇಂದ್ರ ನ್ಯಾಯ ವಿಧಾಯಕ ಸಭೆಯ ಪ್ರಮುಖರಾಗಿದ್ದರು. ಮುಸ್ಲಿಮ್ ಚರಿತ್ರೆಗಳನ್ನು ಬರೆದವರು.

ತಿನ್ನವೆಲ್ಲಿ ಜಿಲ್ಲೆಯಲ್ಲಿ ಕ್ಷಾಮವುದಿಂದಾಗಿ, ಹಂಗೆಲವು ನಷ್ಟಗಳು ಒದಗಿರುವುದರಿಂದಾಗಿ, ಅಧಿಕಗಳ ಸಾಲಗಳಿಗೆ ಯಾಗಬೇಕೆಂದು ಕೇಳಿಕೊಳ್ಳಲೂ, ಕ್ಷಾಮವುವು ಜಾಸ್ತಿದ ಜಾಗಗಳಲ್ಲಿ ಸುಸ್ಥವಸ್ಥೆಗಳನ್ನು ಮಾಡುವ ಜಾಗೂ, ಕ್ಷಾಮವು ದಿಂದಾಗಿ ನೆಲತೆರಿಗೆಯು ಮೂರನೇ ಒಂದಂಶದನ್ನು ಕಡಿಮೆಮಾಡಲಿಕ್ಕೆ ಸರಕಾರವನ್ನು ಕೇಳಿಕೊಳ್ಳಲೂ ಪೇಷ್ಕರು ಸಭೆಗೇರಿ ಠರಾವನ್ನು ಮಡಿದರು

ಬೆನಾರಿಸ್ ಹಿಂದೂ ಯೂನಿವರ್ಸಿಟಿಯ ಇಂಜಿನಿಯರಿಂಗ್ ಕೊಲೇಜಿನಲ್ಲಿ ವಿದ್ಯಾರ್ಥಿಸಂಗವನ್ನು ಮಾಡುತ್ತಿರುವ ನಮ್ಮ ಜಿಲ್ಲೆಯವರಾದ ಶ್ರೀ ಜಿ ತ್ರಿವಿಕ್ರಮ ಭಟ್ಟರಿಗೆ ಕೊಯಂಬತ್ತೂರು ಫಿಸಿಕಲ್ ಲ್ಯಾಬ್ ಕೆಲ ಅವರ ದುಂಡ ದೇಹಾಕೃತಿಗಾಗಿ ದೊರೆತಿದೆ

ರಾಜಪೆನ್ಸೂರ್ ಎಂಬಲ್ಲಿ ಒಂದು ಮೋಟರ್ ಅಪಘಡದಲ್ಲಿ ಏಳು ಜನರು ಮೃತರಾದರು

ಬರ್ಮಾ ದೇಶದ ನ್ಯಾಯಸಭಾಧಿಕಾರ ಸಭೆಯಲ್ಲಿ ಭಾರತೀಯ ಮಜೂರರ ನೋಳ್ಕೆಗಾಗಿ, ಒಂದು ಸ್ಥಾವಪ ಬೇಕೆಂದು ರೋಯಲ್ ಕಮಿಶನ್ ಒಫ್ ಲೇಬರ್, ಇವರ ಕೇಳಿಕೆ

ಹಿಂದೂದೇಶದ ೧೫ನೇ ವರ್ಷ ಬೇಂಕಿನ ಪ್ರಥಮ ಮಿನಿಟಿಂಗು ಓಸ್ ಬರ್ನರ ಅಧ್ಯಕ್ಷತೆಯಲ್ಲಿ ಕಲ್ಕತ್ತ ನಗರದಲ್ಲಿ ಜರಿಗಿತು

ಉತ್ತರ ಹಿಂದೂಸ್ಥಾನದಲ್ಲಿ ಭೀಕರ ಚಳಿಯು ಒಂದು ವಾರದ ತನಕ ಜನರಿಗೆ ಹೆಚ್ಚಿನ ಕಷ್ಟವನ್ನು ಕೊಟ್ಟಿತು

ಸರ್ ದೇವದಾಸ್ ಮೂರ್ ಗರ್ಲ್ಸ್ ಹೈಸ್ಕೂಲು ಕೈ ವಶವಾಗುವುದು ಇದರ ವಿಷಯ ಕೆಲವು ರಾಜಕೀಯ ಪ್ರಶ್ನೆಗಳನ್ನು ಅಲೋಚಿಸಲು ಲೀಗ್ ಒಫ್ ನೇಶನ್ಸ್‌ನ ಅಧಿವೇಶನವು ಫೆಬ್ರುವರಿ ೧೫ಕ್ಕೆ ನಡೆಯುವುದು.

ಅಮೇರಿಕಾದಲ್ಲಿ ಕೆಲಸವಿಲ್ಲದವರನ್ನು ಕಾಣಾಡಲು ಇಸ್ಕೂರ್ ಇರುವ ಹಾಗೂ, ಮಜೂರಾಗಾರರಿಗೆ ಮತ್ತು ಇತರ ನೌಕರರಿಗೆ ವೃದ್ಧಾಪ್ಯದಲ್ಲಿ ಪೆನ್ಷನ್ ದೊರೆಯುವ ಹಂತೆಯೂ ಒಂದು ಹೊಸ ರಾಜಕೀಯ ಸುಧಾರಣೆಯು ಮೊನ್ನೆ ಪಾಂಜೂರಾಗಿದೆ

ರಷ್ಯದ ಈಗಿನ ಸರಕಾರದ ಮೇಲೆ ಕ್ರಾಂತಿಯಾಕ್ಕಿದ ಟಸೊವಿಚ್ ಎಂಬವನಿಗೆ ೧೦ ವರ್ಷದ ಸಜೆಯೂ ಕಾಮಾನಿದ ಎಂಬವನಿಗೆ ೫ ವರ್ಷದ ಸಜೆಯೂ ವಿಧಿಸಲ್ಪಟ್ಟಿತು ಇವರು ಕೆಲಸಮಯದ ಹಿಂದೆ ರಷ್ಯದ ಸೋವಿಯಟ್ ಸರಕಾರದ ಸರ್ಮೂರ್‌ಲನಕ್ಕಾಗಿ ಬಚ್ಚಿಂತಿಯೆಬ್ಬಿಸಿದ್ದರು

ಸಾಗರವಳ್ಳಿಯ ಸುಧಾರಣೆಗಾಗಿ ಗೊರಿಕ್ ಪುರ ಜಿಲ್ಲೆಯ ಧಾರಾ ಮತ್ತು ತಿನ್ನ ಎಂಬಲ್ಲಿ ಸಂಘಗಳ ಸ್ಥಾಪನೆಯಾಗಿದೆ

ಹಿಂದೂಸ್ಥಾನದ ರಾಜಕೀಯ ಸುಧಾರಣೆಯು ಮುಸಲಿಯರು ಇದೇ ತಂಗಳ ತಾ ೭ಂಕ್ಕೆ ಹೊರಡುವುದು

ಬುದ್ಧಿ ಕುಶಲತೆಯ ಮೇಲ್ಕೆಯು ಏನೆಮಾದಿಂದ ಕೈಗೂಡುವುದಕ್ಕಾಗಿ ಲಂಡನ್ನಿಲ್ಲಿ ಒಂದು ಏನೆಮಾ ಸಂಘವನ್ನು ಸ್ಥಾಪಿಸಿವ್ವಾರೆ

ಜೀವಿತ ಮಗುವೊಂದು ತೊಡೆಯ ಮೇಲೆ ಇದ್ದ ಒಬ್ಬಳು ಸ್ತ್ರೀಯ ಶವವು ಉತ್ತರ ಐರ್ಲೆಂಡಿನ ಒಂದು ರಸ್ತೆಯಲ್ಲಿ ಕಾಣಲು ಸಿಕ್ಕಿದೆ ಇದರ ಕಾರಣ ಅಲ್ಲಿಯ ಮೊನ್ನೆಯ ಚಳಿ

ಬೆರೆಲ್ಲಿ ಎಂಬಲ್ಲಿ ಹರಿಜನರು ಸಭೆಸೇರಿ ಇನ್ನು ಮುಂದಕ್ಕೆ ಸತ್ತ ಮೃಗಗಳನ್ನು ಸಿಗಿಯುವ ಆವರ ಕೆಲಸವನ್ನು ಮಾಡಬಾರದಾಗಿ ಠರಾವು ಮಾಡಿದರು

ನವುಗಾಗಿ ದುಡಿದು ದೇಶಸೇವೆ ಮಾಡಿದ ಸರ್ ಹೋರ್ಸ್ ಕುಸ್ಟರರು (ನಮ್ಮ ಮಾಜಿ ವೈಸ್ರಾಯ್ಸ್ ನೆಂಬರರು) ಲಂಡನಿನಲ್ಲಿ ನೆಸ್ಟ್ ಮಿಸ್ಟರ್ ಬೇಂಕಿನ ಡೈರೆಕ್ಟರರಾಗಿ ನೇಮಕ ಹೊ

ನಾಯಕ್ ಬ್ರದರ್ಸರ

ಶ್ರೀಮದ್ಭುವನೇಂದ್ರ ಮಹೌಷಧಾಲಯ, ಕಟಪಾಡಿ, ದ.ಕ.

ಪಾರಂಪರ್ಯದ ಅನುಭವಸಿದ್ಧೌಷಧಗಳು ಸ್ವರ್ಣ, ರಜತ ಪದಕಗಳನ್ನು ಪಡೆದ ದಿವ್ಯೌಷಧಗಳು!

ಮೃಧ್ವಿಕಾಸವ – (ನಿತ್ರಾಣಕ್ಕೆ ಅತ್ಯಂತ ಗುಣಕಾರಿ)
ಮಹಾಮದನ ಕಾಮೇಶ್ವರೀ ಲೇಹ್ಯ – (ನಪುಂಸಕತ್ವ, ಧಾತುಕ್ಷೀಣತೆಗೆ ಅತ್ಯುತ್ತಮ)
ಹಿಮಸಾಗರ ತೈಲ್ಯ – (ಸಿದ್ರಾನಾಶಕ್ಕೆ ಅತೀ ಉಪಯುಕ್ತ)
ಮಹಾಮಾಷ ತೈಲ್ಯ – (ಪಕ್ಷವಾತಕ್ಕೆ ಅತ್ಯಂತ ಗುಣಕಾರಿ)
ಗರ್ಭಪಾಲ – (ಗರ್ಭಶೂಲ, ಗರ್ಭಸ್ರಾವಗಳಿಗೆ ದಿವ್ಯೌಷಧ)
ಗುಡ ಪಿಪ್ಪಲಿ – (ಲೀವರ್ ರೋಗಕ್ಕೆ ಅತ್ಯುತ್ತಮ)

ಇವುಗಳಲ್ಲದೆ ಶಾಸ್ತ್ರೀಯ ರೀತ್ಯಾ ತಯಾರಿಸಿದ ಅರಿಷ್ಟಗಳು, ಆಸವಗಳು, ಲೇಹ್ಯಗಳು, ಭಸ್ಮಗಳು, ತೈಲ್ಯಗಳು ಇತ್ಯಾದಿ ಯಾವಾಗಲೂ ಸಾಂಗವಾಗಿ ಸಿದ್ಧವಿರುತ್ತವೆ. ಹೆಚ್ಚಿನ ಮಾಹಿತಿಗೂ ಕೆಟಲಾಗಿಗೂ ಈ ಕೆಳಗಿನ ವಿಳಾಸಕ್ಕೆ ಬರೆದುಕೊಳ್ಳಬಹುದು.

ನಾಯಕ್ ಬ್ರದರ್ಸರ ಶ್ರೀಮದ್ಭುವನೇಂದ್ರ ಮಹೌಷಧಾಲಯ, ಕಟಪಾಡಿ, ದ. ಕನ್ನಡ.



Distributors for South Kanara:—
Raghavendra Ranga Pai, Car Street, Mangalore.

ಇಂದೇ ಆರಂಭಿಸಿರಿ!
ಸುನ್ನಸಿದ್ಧ ಆತಂಕನಿಗ್ರಹ ಮಾತ್ರೆ
ಗಳನ್ನು ಉಪಯೋಗಿಸಲಿಕ್ಕೆ.
ಜೀವನದ ಜಯಶೀಲತೆಯ ಬಗೆಯನ್ನೇನಿರಿ. ಲೋಕ
ದಲ್ಲಿ ಸಾವಿರಾರು ಜನರು ಅದನ್ನು ಪ್ರತಿದಿನವೂ
ಉಪಯೋಗಿಸುತ್ತಿದ್ದಾರೆ.
ನರ ಮತ್ತು ಶಾರೀರಿಕ ದೌರ್ಬಲ್ಯಕ್ಕೆ
ಭದ್ರತೆಯು.
ಆರೋಗ್ಯಕ್ಕೆ ಕವಚವು
32 ಮಾತ್ರೆಗಳ ಬಿಸ್ಸಿಂದಕ್ಕೆ ರೂ. 1
ಹೆಚ್ಚಿನ ವಿವರಕ್ಕೆ, ಧರ್ಮಾರ್ಥ ಹಾಗೂ ಟಿಪ್ಪಣಿಯು
ಜಾಕಲು ವಿನಂತಿ ಕಳುಹಿಸಲ್ಪಡುವ ವಿಳಾಸ
ಕಾಮಶಾಸ್ತ್ರವನ್ನೋದಿರಿ.
Agents:—Shah Company, MANGALORE.
„ Pearl & Sons, MANGALORE.
Atank Nigrah Pharmacy
Chickpet, Bangalore.
ಆತಂಕನಿಗ್ರಹ ಫಾರ್ಮಸಿ,
ಚಿಕ್ಕಪೇಟೆ, ಬೆಂಗಳೂರು

ಎಲ್ಲಾ ಚಂದಾದಾರರು ತಮ್ಮ ಪತ್ರವ್ಯವ
ಹಾರದೊಂದಿಗೆ ಆವರವರ ಚಂದಾ
ನಂಬರುಗಳನ್ನು ಛಿಗತ್ಯವಾಗಿ
ಸಮೂದಿಸತಕ್ಕದ್ದು. ಸಂ. ಸ್ವ.

1906 ರಲ್ಲಿ

ಅಲ್ಪಾವಸ್ಥೆಯಲ್ಲಿ ಹುಟ್ಟಿ ಶೈಶವವನ್ನು ಮಂಗಳೂರಿನಲ್ಲಿಯೇ ಕಳೆದು, ಕೌಮಾರ್ಯದಲ್ಲಿ ದಕ್ಷಿಣ ಕನ್ನಡ ಜಿಲ್ಲೆಯ ಎಲ್ಲಾ ತಾಲೂಕುಗಳಲ್ಲಿಯೂ, ಯೌವನದ ಆದಿಯಲ್ಲಿಯೇ ಮುಂಬಾಯಿ, ಕೊಚ್ಚಿ, ತಿರುವಾಂಕೂರು, ಮೈಸೂರು ಸಂಸ್ಥಾನಗಳಲ್ಲಿಯೂ ಪಸರಿಸಿ, ವಿಖ್ಯಾತಿ ಪಡೆದು, ಇನ್ನೂ ಅಭಿವೃದ್ಧಿ ಪಟ್ಟು ದೇಶಸೇವೆಯನ್ನು ಮಾಡಲಿಚ್ಛಿಸುವ ಮದ್ರಾಸ್ ಸಂಸ್ಥಾನದ ದೇಶಿಯ ಜಾಯಿಂಟ್ ಸ್ಟಾಕ್ ಬ್ಯಾಂಕುಗಳಲ್ಲಿ ಎರಡನೇ ಸ್ಥಾನವನ್ನು ಹೊಂದಿರುವ

ಕೆನರಾ ಬ್ಯಾಂಕ್ ಲಿಮಿಟೆಡ್

ತೆತ್ತ ಮೂಲಧನಃ ರೂ. 330,900. ಫ್ಲೇಮುನಿಧಿಗಳು: ರೂ. 444,647. ಠೇವಣಾತಿಗಳು: ರೂ. 57,67,040.
ಆಫೀಸುಗಳು:—ಮಂಗಳೂರು, ಮುಂಬಾಯಿ, ಅಲಪ್ಪೆ, ಕೊಚ್ಚಿ, ಎರ್ನಾಕುಳಂ, ಕಲ್ಲಿಕೋಟೆ, ಬೆಂಗಳೂರು, ಚಿಕ್ಕಮಗಳೂರು, ಪುತ್ತೂರು, ಕಾಸರಗೋಡು, ಕಾರ್ಕಳ, ಉಡುಪಿ, ಕುಂದಾಪುರ, ಗಂಗೊಳ್ಳಿ ಮತ್ತು ಬಂಟವಾಳ.
ಎಲಾ ತರದ ಬ್ಯಾಂಕಿಂಗ್ ವಹಿವಾಟುಗಳು ನಡಿಸಲ್ಪಡುತ್ತವೆ.
Canara Bank Ltd.

BUY ADVERTISED GOODS

(ಬೆಳೆ ಮುಂದಿನ ಸಂಚಿಕೆಯಲ್ಲಿ)

ಒಂದು ದಿನ ಕರೀರವು ತೀರ ಕಠಿನತರದ ವಾತದ ರೂಪವನ್ನು ತಾಳಿತು. ಆಗಾಗ ಕೆಲವು ಬಾರಿ ಶರೀರದ ಕೆಲವೊಂದು ಭಾಗವು ತೀರ ಚೈತನ್ಯಹೀನವಾಗಿ ಕಾಣಿಸತೊಡಗಿತು. ತನ್ನ ನಾಡು ಇದೇ ತೆರನಾದರೆ ಬಾಳ್ಳೆಯು ಕಷ್ಟವೆಂಬ ಚಿಂತೆಯು ಜಾನಕಿಗೆ ಉಂಟಾಯಿತು. ಒಂದು ದಿನ ಶ್ರೀನಿವಾಸರಾಯರು ಚಿಕಿತ್ಸೆಗೆ ಬಂದ ಡಾಕ್ಟರರೊಬ್ಬರೊಡನೆ "ಏನು ಸ್ವಾಮಿ, ಇದಕ್ಕೆ ಔಷಧವಿಲ್ಲವೆನ್ನುತ್ತೀರಾ?" ಎಂದರು. ಬಳೆಯಲ್ಲಿ ಹಾಸಿಗೆ ಹಿಡಿದ ಜಾನಕಿ ತನ್ನ ಮೈತ್ಯುಪತ್ರೆವನ್ನು ನಿರೀಕ್ಷಿಸುವಂತೆ ಆತುರಳಾಗಿ ಕೇಳುತ್ತಿದ್ದಳು. ವೈದ್ಯರೆಂದರು "ರಾಯರೇ ಬೇರೆ ಕಠಿಣದ್ದೆಂಬುದು ನಿಜ. ಇದು ಹಲವು ಪಾಣಂತಿತನದಿಂದ ಬಂದುದು. ಗುಣವಾಧರೂ ಮೆಲ್ಲಗೆ ಗುಣವಾದೀತು. ಆದರೆ, ಅವರು ಇನ್ನು ಪಾಣಂತಿಯರಾಗದಂತೆ ಎಚ್ಚರವಿದ್ದರೆ, ಮುಂದೆ ಬೇರೆಯವರ ಸಹಾಯವಿಲ್ಲದೆ ಅವರು ಚಲಿಸಿ ನಡೆಯುವಂತಾಗಬಹುದು-ಆ ಎಚ್ಚರವು ತಪ್ಪಿದ ದಿನವೇ ಬೇನೆಯು ಕಠಿನ ಸ್ವರೂಪಕ್ಕೆ ತಿರುಗಿ ಜೀವನಕ್ಕೆ ಥಕ್ಕೆ ಬೇಗ ಬರಲೂ ಬಹುದು"ಎಂದರು. ಜಾನಕಿಗೆ ಹೇಗಾದರೂ ಮಾಡಿ ತನ್ನ ಬಾಳ್ಳೆಯನ್ನು ರಕ್ಷಿಸಿಕೊಳ್ಳಬೇಕೆಂದು ಮನವಾಗಿ ವೈದ್ಯರು ಹೇಳಿದ ಪಥ್ಯ ಔಷಧ ಉಪಚಾರಗಳನ್ನು ಶ್ರದ್ಧೆಯಿಂದ ನಿರ್ವಹಿಸತೊಡಗಿದಳು. ಪಾಪ! ಅವಳಿಗೆ ತನ್ನ ಅಲ್ಪ ವಯಸ್ಸಿನಲ್ಲಿ ಅಷ್ಟೊಂದು ಎಳೆಗೂಸುಗಳನ್ನು ಅಗಲಿ ಇಹಲೀಲೆಯನ್ನು ಮುಗಿಸಲು ಎಳ್ಳಷ್ಟು ಮನವಿರಲಿಲ್ಲ.

ಅವಳ ಹಟಸಾಧನೆಯಿಂದಲೋ, ದೇವರ ಅನುಗ್ರಹದಿಂದಲೋ ಏನೋ ಜಾನಕಿ ದೇವಿಗೆ ಆರೋಗ್ಯವಾಗುತ್ತ ಬಂದಿತು. ಒಂದೆರಡು ತಿಂಗಳಲ್ಲಿ ಅವಳಿಗೆ ತಾನಾಗಿ ಎದ್ದು ತಿರುಗುವ ಶಕ್ತಿಯು ಬಂದಿತು. ಶ್ರೀನಿವಾಸರಾಯರಿಗೆ ಕಳೆದು ಹೋದ ಸ್ವರ್ಗವು ತಿರುಗಿ ದೊರಕಿದಂತಾಯಿತು.

ಆದರೆ ಸುಖಕ್ಕಿಂತ ದುಃಖವೇ ಸಂಸಾರದಲ್ಲಿ ದೊಡ್ಡದೆಂದು ಕಾಣುವುದು. ಬರೇ ಹದಿನೈದು ದಿನಗಳ ತನಕ ಜಾನಕಿ ದೇವಿಯು ಎದ್ದು ತಿರುಗಾಡಿದ್ದಳಷ್ಟೆ-ತಿರುಗಿ ಹಾಸಿಗೆ ಹಿಡಿದಳು. ಈ ಭಾರಿ ವಾತವು ಬಲವಾಯಿತು. ಜತೆಯಲ್ಲಿ ಜ್ವರವು ಬರತೊಡಗಿತು. ದಂಪತಿಗಳು ತಮ್ಮ ಮಾತನ್ನು ನಿರಾಕರಿಸಿದರೆಂದು ವೈದ್ಯರು ತಿರುಗಿ ಅವರ ಮನೆಗೆ ಬರವುದನ್ನೇ ನಿಲ್ಲಿಸಿದರು. ಜಾನಕಿಯ ದುಃಖ ಮಿತಿ ಮೀರಿತು. ಒಂದು ದಿನ ಶ್ರೀನಿವಾಸರಾಯರು ಕಾರ್ಯಾಂತರದಿಂದ ಮಂಗಳೂರಿಗೆ ಹೋದಾಗ ಅವರನ್ನು ಕರೆಯಿಸಿ "ನಾನೇನು ಮಾಡುವುದು, ನನ್ನ ತಪ್ಪಿಲ್ಲ. ಒಂದು ಬಾರಿ ಉಳಿಸಿರಿ. ನಿಮ್ಮ ಮಾತನ್ನು ಕಾಯಬೇಕೆಂದು ಅವರ ಕಾಲನ್ನು ಹಿಡಿದು ಬೇಡುತ್ತೇನೆ" ಎಂದಳು. ಜಾನಕಿಯ ಕಣ್ಣೀರು ಕಂಡು ಅವರು ತಿರುಗಿ ಚಿಕಿತ್ಸೆಗೆ ತೊಡಗಿದರು. ಒಂದು ವಾರದಲ್ಲಿ ಬೇನೆ ಇಳಿಮೊಗವಾಯಿತು. ಒಂದು ದಿನ ತಿರುಗಿ ಅದು ಬಲವಾಯಿತು. ಅದರ ಕಾರಣವನ್ನು ಊಹಿಸಿದ ವೈದ್ಯರು ತಿರುಗಿ ಆ ಮನೆಯಲ್ಲಿ ಕಾಲಿಡಲಿಲ್ಲ. ಜಾನಕಿಗೆ ಹಾಸಿಗೆಯಲ್ಲಿ ಉರುಳುತ್ತ ಅಳುವುದೇ ಕೆಲಸವಾಯಿತು, ಅಂದಿನಿಂದ ಅವಳ ಸಂಸಾರದ ಕಲ್ಪನೆಯೇ ಬದಲಾಯಿತು. ಪತಿಯು ಒಳಗೆ ಬಂದರೆ ಮಾತನಾಡುವುದನ್ನು ಸಹ ನಿಲ್ಲಿಸಿಬಿಟ್ಟಳು. ಇದರಿಂದ ಅವರಲ್ಲಿ ಸ್ವಲ್ಪ ಮನಕ್ಲೇಶವಾಯಿತೋ ಏನೋ ತಿಳಿಯದು. ಅಂತು ಶ್ರೀನಿವಾಸರಾಯರಿಗೂ ಜಾನಕಿಯ ಮೇಲಿನ ಪ್ರೇಮವು ತಣಿಯುತ್ತ ಬಂದಿರಬೇಕು. ಅವರೂ ಜಾನಕಿಯ ಚಿಕಿತ್ಸೆಯಲ್ಲಿ ಅನಾಸಕ್ತಿ ತೋರತೊಡಗಿದರು. ಜಾನಕಿಗೆ ಇನ್ನು ಚಿಕಿತ್ಸೆಯು ಅವಶ್ಯವಿಲ್ಲೆಂದು ತಿಳಿದಿತ್ತು. ಅವಳೇಗ ದಿನವನ್ನು ಎಣಿಕೆ ಹಾಕತೊಡಗಿದಳು.

ಒಂದು ದಿನ ಅದು ಬಂದಿತು. ಜಾನಕಿಯು ತನ್ನ ಕಿರಿಮಗಳೊಡನೆ "ಮಗೂ, ಅಪ್ಪ ನನ್ನು ನಾನು ಕರೆಯುವೆನೆನ್ನು" ಎಂದು ಹೇಳಿ ಕಳುಹಿಸಿದಳು. ಮಗುವು ಹೋಗಿ ಬಂದ ಒಂದು ತಾಸಿನ ತನಕ ಅವರು ಬಂದರು. ಆಗ ಜಾನಕಿಯು ಮಗ್ಗುಲಲ್ಲಿ ಯಾರೂ ಇದ್ದಿರಲಿಲ್ಲ. ಅವರು ಬಂದು ನಿಂತರು. ಜಾನಕಿಯು ಮಂಚದ ಮೇಲೆ ಕುಳಿತುಕೊಳ್ಳಲು ಸಂಜ್ಞೆ ಮಾಡಿದಳು. ಅವರು ಉದಾಸೀನವೃತ್ತಿಯಿಂದ ಕುಳಿತುಕೊಂಡರು. ಜಾನಕಿ ಮೆಲ್ಲನೆ ನೂತಾಭರಣಳೆಲ್ಲಿಸಿದಳು. ಅವಳ ಕಣ್ಣಿಂದ ಬಳಬಳನೆ ನೀರು ಸುರಿಯತೊಡಗಿತು. ಅದನ್ನು ತಡೆದು "ನನ್ನ ಕೊನೆಯ ಮಾತನ್ನು ಕೇಳುತ್ತೀರಾ?" ಎಂದಳು. ರಾಯರು ಉದಾಸೀನವೃತ್ತಿಯಿಂದ. "ಏನು"-ಎಂದರು. "ನೀವು ಇನ್ನೊಂದು ಲಗ್ನದ ವಿಚಾರ ಮಾಡುತ್ತಿರುವಿರೆಂದು ಕೇಳಿದೆ! ನನ್ನ ಶಾಪವಿದೆ! ಅದು ಕೂಡದೇ ಕೂಡದು. ನನ್ನನ್ನು ಕೊಂದಂತೆ ಅವಳನ್ನೂ ಕೊಲ್ಲುವಿರಾ?" ಎಂದು ಹೇಳಿದಳು. ಈ ಮಾತನ್ನು ಆಡುವ ಗಳಿಗೆಯಲ್ಲಿ ಅವರ ಹಿರೀ ಮಗನು ಹಾಸುಗೆಯ ಬಳಿ ನಿಂತಿದ್ದನು. ತಾಯಿಗೆ ಬುದ್ಧಿಭ್ರಂಶವಾಗಿದೆಯೆಂದು ಅವನು ತಿಳಿದನು. ಇತ್ತ ರಾಯರ ಕೈಗಳು ಜಾನಕಿಯ ಕರಗಳಲ್ಲಿದ್ದುವು. ಅವರು ಬಲವಂತದಿಂದ ಅದನ್ನು ಸೆಳೆದುಕೊಂಡರು. ಕೈಸಿಡತಕ್ಕೆ ಸರಿಯಾಗಿ ಜಾನಕಿಯು ಕೆಮ್ಮಿದಳು, ಅದೇ ಕೊನೆಯ ಕೆಮ್ಮಾಯಿತು. ಶ್ರೀನಿವಾಸರಾಯರು ಪತ್ನಿಯ ಮೇಲಿನ ಪ್ರೇಮದಿಂದ ತಿರುಗಿ ಮದುವೆ ಆಗುವುದಿಲ್ಲವೆಂದು ನುಡಿದಂತಿ!

ಪೆಟ್ಟಿಗೆ ಕೆಮರಾ

ಎಲ್ಲಕ್ಕಿಂತಲೂ ಮಿಗಿಲಾದ ಹೊಸ ಸಾಮಾನು. ಪ್ರಾರಂಭಾವಸ್ಥೆಯಲ್ಲಿ ಫೋಟೊಗ್ರಾಫಿ ಕಲಿಯುವವರಿಗಾಗಿ ಒಂದು ಡಜನು ಪ್ರಿಂಟಿಂಗ್ ಕಾಗದ, 4 ಫ್ಲಶ್ ಎಕ್ಸ್‌ಪೋಜರ್ಸ್, ಕನ್ನಡಿ ಮತ್ತು ಇದರ ಸಾಮಾನುಗಳೊಡನೆ. ಕ್ರಯ ರೂ. 2—12—0. ಉತ್ತನು ತರಗತಿದ್ದಕ್ಕೆ ರೂ. 3-12-0.

ಟಿ. ಖರ್ಚು ಬೇರೆ. ಬೇಡವಾದರೆ ಹಣ ಹಿಂದೆ

ಭಾರತ ಯೂನಿಯನ್ ಟ್ರೇಡಿಂಗ್ ಕಂಪೆನಿ
ಟಿ. ಪೆ. 2894 (See I N.) Calcutta.

ಸಂತತಿ ಪ್ರತಿಬಂಧಕ

ಸರಕಾರದಿಂದ ರಿಜಿಸ್ಟರಾಗಿದೆ. ಆಗ್ನವಾದುದು; ಅಪಾಯರಹಿತ ಮಕ್ಕಳನ್ನು ಪಡೆಯುವುದಕ್ಕೆ. ಡಾ। ಆರ್. ಸೇನ್ ಗುಪ್ತ ಎಂ. ಡಿ (ಅಮೆರಿಕಾ) ಪ್ರಿನ್ಸಿಪಾಲ್, ಜೋಡ್ಪ್. ಮೆಡಿಕಲ್ ಕೊಲೆಜ್ ಇಫ್, ಹೋಮಿಯೋ ಪೆತಿಕ ವರದು. 18 ತಿಂಗಳ ನುದ್ದ. ಒಂದು ಬಾಟ್ಲಿಗೆ Rs. 1/- ಮಾತ್ರ.

ಬಿ. ಕೆ. ಪಾಲ್, ಏಜಂಟರು.
ಫ್ರೆಂಡ್ಸ್ ಹೊಮಿಯೊ ಹೋಮ್.
65/1 ಮಾಣಿಕ್ ಟಲ್ಲ ಸ್ಟ್ರೀಟ್, ಕಲ್ಕತ್ತ.

ನೋಟೀಸು.

ಕಾಸರಗೋಡು ಡಿಸ್ಟ್ರಿಕ್ಟ್ ಮುನ್ಸೀಫ್ ಕೋರ್ಟಿನಲ್ಲಿ.

R. I. A. No. 97/35.
O. S. No. 100/34.

ಮೃತಪಟ್ಟ ಸರಾಫ ಮಂಜುನಾಥ ಕಮ್ತಿರಿಗೆ ಬರತಕ್ಕ ಸಾಲಗಳ ಬಾಬಿನಲ್ಲಿ.

ಕೆ. ನರಸಿಂಹ ಕಮ್ತಿ ಸರಾಫ ಮಂಜುನಾಥ ಕಮ್ತಿರ ಮಗ, ಕಾಸರಗೋಡು ಕಸಬೆಯಲ್ಲಿರುವವ-ಅರ್ಜದಾರ.

ಮೇಲ್ಕಾಣಿಸಿದ O. P. ನಂಬ್ರ 100/34ನೇ ಅರ್ಜಿಯ ಹುಕುಂ ಪ್ರಕಾರ ತನಗೆ ಕೊಡೋ ನಾದ ಸರ್ಟಿಫಿಕೇಟಿನಲ್ಲಿ ಮೃತನ ಬಾಬ್ತು ಬೇರೆ ಎರಡು ಸಾಲಗಳು ಬರಲಿಕ್ಕೆ ಇರುವವುಗಳನ್ನು ಸಹಾ ಕೂಡಿಸಿ ಸದ್ರಿ ಸರ್ಟಿಫಿಕೇಟಿನ್ನು ಎಕ್ಸ್‌ಟೆಂಡ್ ಮಾಡಬೇಕೆಂತ ಸದ್ರಿ ಅರ್ಜಿದಾರನು ದಾಕಲುಮಾಡಿದ ಮೇಲ್ಕಾಣಿಸಿದ R. I. A. No. 97/35ನೇ ಅರ್ಜಿಯು ತಾ. 15-2-'35ಕ್ಕೆ ತನ್ನಿಗೆ ಇಟ್ಟಿರುವುದರಿಂದ ಈ ಕುರಿತು ಆಕ್ಷೇಪವುಳ್ಳವರು ತಮ್ಮ ಆಕ್ಷೇಪಗಳನ್ನು ಸದ್ರಿ ತಾರೀಕಿನಲ್ಲು ಕೋರ್ಟಿನಲ್ಲಿ ದಾಖಲು ಮಾಡತಕ್ಕದೆಂತಲೂ ತಪ್ಪಿದರೆ ಅರ್ಜದಾರನು ಆಪೇಕ್ಷಿಸಿದಂತೆ ಸದ್ರಿ ಸರ್ಟಿಫಿಕೇಟು ಎಕ್ಸ್‌ಟೆಂಡ್ ಮಾಡಲಾದೀತೆಂತ ಸಹಾ ಈ ಮೂಲಕ ಎಲ್ಲಾ ಜನರಿಗೆ ತಿಳಿಸೋಣಾಗುವುದೆ.

Kasaragod 28-1-'35. } P. Ananda Rao, *Vakil for Petitioner.*

ದಕ್ಷಿಣಾಫ್ರಿಕದಲ್ಲಿ ಇಂಡಿಯಾ ಸರಕಾರದ ಏಜಂಟರಾಗಿದ್ದು, ಹಿಂದೀಯರ ಉದ್ಧಾರಕ್ಕಾಗಿ ಅಪಶ್ರಾಂತರಾಗಿ ದುಡಿದು, ನಿವೃತ್ತರಾಗಿ ಅಲ್ಲಿಂದ ಭಾರತಕ್ಕೆ ಹಿಂದಿರುಗಿದ ಕುನ್ವಾರ್ ಸರ್ ಮಹಾರಾಜ ಸಿಂಘರು.

ನೋಟೀಸು.

ಕಾರ್ಕಳ ಡಿಸ್ಟ್ರಿಕ್ಟ್ ಮುನ್ಸೀಫ್ ಕೋರ್ಟಿನಲ್ಲಿ.

R. E. P. 1277/'34. O. S. 24/'30.
R. I. A. 548/1932.

ಈರಮ್ಮ ಹೆಂಗ್ಸು-ಅರ್ಜದಾರಳು.
ಮತ್ತು ಬೊಗ್ಗ ಪೂಜಾರಿ ಸಹ-ಪ್ರತಿವಾದಿರು-ಎದ್ರರು.

ಇವರೊಳಗೆ—

ಈ ಮೂಲಕ ತಿಳಿಯಪಡಿಸುವುದೇನೆಂದರೆ:-

ಸದ್ರಿ ಅಮಲ್ದಾರಿಯ ಅರ್ಜಿದಾರಳು ಈರಮ್ಮ ಹೆಂಗ್ಸು ಮೃತಪಟ್ಟ ಡೀಕಯ್ಯ ಪೂಜಾರಿಯ ವಾರಿಸುದಾರಳಾಗಿ ಸದ್ರಿ ಅಮಲ್ ಜ್ಯಾರಿಗೆ ಕಾರಣವಾದ್ಕೆಮ ನಂಬ್ರ 24/'30ನೇ ದಿಕ್ರಿ ಏವೇಜು ವಸೂಲು ಬಗ್ಗೆ ಈ ಕೋರ್ಟಿನಲ್ಲಿ ಅಮಲ್ ಜ್ಯಾರಿ ದಾಕ್ಲುಮಾಡಿರುತ್ತಾಳೆ. ಆ ಕುರಿತು ಸದ್ರಿ ದಿಕ್ರಿ ಅಮಲ್ ಜ್ಯಾರಿಯ 4ನೇ ಪ್ರತಿವಾದಿಳು ಮಂಗಳೂರು ತಾಲೂಕು ಕಣಿಯೂರು ಗ್ರಾಮದಲ್ಲಿರುವ ನಲ್ಲಿ ಹೆಂಗ್ಸಿನ ಮಗಳು ಸದ್ರಿಯವಳ ಮ್ಯೂನರ ಮಕ್ಕಳು, 11ನೇ ಪ್ರತಿವಾದಿ ಹೊನ್ನಯ, 12ನೇ ಪ್ರತಿವಾದಿ ರುಕ್ಕಯ್ಯ, 13ನೇ ಪ್ರತಿವಾದಿ ಚೆನ್ನು, 14ನೇ ಪ್ರತಿವಾದಿ ಲಿಂಗಪ್ಪೆ, 15ನೇ ಪ್ರತಿವಾದಿ ಮೊಬ್ಬು, 16ನೇ ಪ್ರತಿವಾದಿ ಕುಸುಮತಿ ಇವರ ಗಾರ್ಡಿಯನಳಾಗಿ ಸದ್ರಿ 4ನೇ ಪ್ರತಿವಾದಿಳು ಚೆನ್ನಪ್ಪೆ ಹೆಂಗ್ಸು ನೇಮಿಸಲ್ಪಟ್ಟಿರುತ್ತಾಳೆ. ಸದ್ರಿ ಅಮಲ್ದಾರಿಯ ಕುರಿತು ಯಾವದೊಂದೂ ಆಕ್ಷೇಪಗಳಿದ್ದರೆ ಹೇಳಿಕೊಳ್ಳುವರೆ ಅಮಲ್ದಾರಿ ತಸ್ಮೆ ಬಗ್ಗೆ ತಾ. 8-2-'35ಕ್ಕೆ ಇಟ್ಟಿಯದೆ. ಈ ಕುರಿತು ಆಕ್ಷೇಪವಿದ್ದಲ್ಲಿ ಸದ್ರಿ ಪ್ರತಿವಾದಿರು ತಸ್ಮೆ ತಾ 8-2-'35ಕ್ಕೆ ಪೂರ್ವಾಹ್ನ ಗಂಟೆ 10ಕ್ಕೆ ಈ ಕೋರ್ಟಿನ ಮುಂದೆ ಹಾಜರಾಗಿ ಆಕ್ಷೇಪಗಳನ್ನು ಉದಹರಿಸಿಕೊಳ್ಳಬಹುದು. ಇಲ್ಲದಿದ್ದಲ್ಲಿ ಸದ್ರಿ ನೋಟೀಸಿಕಾಣಿಸಿದ ಪ್ರತಿವಾದಿರ ಖುಜೂರು ಶಿವ್ವಾ ಏಕಸಕ್ಕೆವಾಗಿ ತೀರ್ಮಾನಿಸಿ ಅಮಲ್ದಾರಿ ಮುಂಡಿಸೋಣಾಗುವುದು.

ಕಾರ್ಕಳ, ತಾ. 29-1-'35. } K. Sadashiva Bhat, *Counsel for Petitioner.*

Wanted.

Wanted a male or female teacher, who can teach English, Kanarese & Music at home. Free boarding & lodging will be provided for.

Apply stating the minimum pay required with copies of testimonials.

Kanjarpane Gopalkrishnaya,
Sulia Post, S. K.

ಈ ದಿನ ಅತ್ಯುತ್ತಮವಾದ ದಂತ ಮಂಜನವೊಂದನ್ನು ಯತ್ನಿಸಿರಿ!

ಬಾಬೂಲಿನ ಸತ್ವ ವನ್ನೊಳಗೊಂಡಿದೆ.

ಮನೆಗೆ ಕೆರಳುವಾಗ ಬಾಯಿಯಲ್ಲಿ ನೊದಲಾಗಿ ಕಾಣುವ ಯಾವ ಕೆಮಿಸ್ಟ್ ಶಾಪಿಗಾದರೂ ಕೆರಳಿ, "ಕೊಪ್ರನ್" ದಂತ ಮಂಜನ (ಟೂತ್ ಪೇಸ್ಟ್)ವನ್ನು ಕೇಳಿರಿ. ಅಂದೇ ಸಾಯಂಕಾಲ ಅದನ್ನುಪಯೋಗಿಸಲುರಂಭಿಸಿರಿ, ಅಂದರೆ ನೀವು ದಂತ ಆರೋಗ್ಯಭಾಧ್ಯ ಪಥದಲ್ಲಿ ಪದಾರ್ಪಣ ಮಾಡಿದಂತೆ!

"ಕೊಪ್ರನ್" ದಂತಮಂಜನವು, ಶ್ರಮಿಜಾತಕರವಾದ, ಕೊಡಪಡಿಸುವ, ನರಗಳನ್ನು ಬಲಪಡಿಸುವ, ವಸಡುಗಳನ್ನು ದೃಢಗೊಳಿಸುವ ಮತ್ತು ಹಲ್ಲುಗಳನ್ನು ಬೆಣ್ಣಾಗಿ ತಕ್ಕೆ ತೊಳೆದು ಹೊಳೆಯಿಸುವ ಔಷಧ ಜೀವಸುಗಳನ್ನೊಳಗೊಂಡಿದೆ. ಆದರಿಂದ ನಿಮ್ಮ ಹಲ್ಲುಗಳನ್ನು ತೊಳೆದಾದನಂತರ ಉಂಟಾವ ಶಾಂತಿಯ ಉಲ್ಲಾಸದ ಅನುಭವದಿಂದ ನೀವು ಅದನ್ನು ಮನಗಾಣುವಿರಿ.

ಅಮೇರಿಕ ಮತ್ತು ಇತರ ವಿದೇಶ ಪ್ರಾಂತ್ಯಗಳಲ್ಲಿ ವಿಕ್ರಯವಾಗುತ್ತಿರುವ ಏಂಬೀ ದಂತಮಂಜನವೆಂದರೆ "ಕೊಪ್ರನ್" ಒಂದೇ. ಡಾ। ಕೊಕ್ಟೂರ್, ಎಮ್. ಎಸ್. ಸಿ, ಪಿ. ಎಚ್. ಡಿ. ಮತ್ತು ಡಾ। ದೇಸಾಯಿ, ಡಿ. ಡಿ. ಎಸ್. ಇವರು ಆ ಪರಿಣಾಮಕಾರಿಯೂಪ ದಂತಮಂಜನವೊಂದನ್ನು ತಯಾರಿಸುವಲ್ಲಿ ಯಶಸ್ವಿಯಾಗಿರುವರೆಂಬುದಕ್ಕೆ ದೇಶ-ವಿದೇಶಗಳಲ್ಲಿನ ಈ ದಂತಮಂಜನದ ಯಶಸ್ಸೇ ಧಾರಾಳವಾದ ಶಾಶ್ವತವಾದ ರುಜುವಾತು.

ಹಲ್ಲುಗಳನ್ನು ಶುಚಿಪಡಿಸುವ ಆನಂದವನ್ನು ಇದನ್ನುಪಯೋಗಿಸಿಯೇ ಅನುಭವಿಸಿರಿ.

ಕೊಪ್ರನ್ ದಂತ ಮಂಜನ (ಪೇಸ್ಟ್)

ದೊಡ್ಡ ಮತ್ತು ಸಾಮಾನ್ಯ (ಲಾರ್ಜ್-ಮಿಡಿಯಮ್) ಈ ಎರಡು ಸೈಜುಗಳಲ್ಲಿ ಎಲ್ಲೆಲ್ಲಿಯೂ ಮಾರಲ್ಪಡುತ್ತಿದೆ.

ನಾಗರಿಕ ಶಿಕ್ಷಣ–'ಹಿಟ್ಲರ್ ಯುವಕರು'

ನಾಜಿ ಚಳವಳವು ಅವಿಶ್ರಾಂತವಾಗಿ ಅನಾಯಾಸವಾಗಿ ಮುನ್ನಡೆಯಬೇಕೆಂಬ ಬಗ್ಗೆ ನಾಜಿ ಧುರೀಣರು ಬಹು ಸಾಹಸಪಡುತ್ತಿರುವರು ಇದಕ್ಕಾಗಿ ಅವರು ಒಂದು ಸಂಘವನ್ನೇರ್ಪಡಿಸಿ, ದೇಶದ ಎಲ್ಲಾ ಹುಡುಗ ಹುಡುಗಿಯರನ್ನು ಅದಕ್ಕೆ ಸೇರಿಸಿಕೊಂಡಿರುವರು ಈ ಸಂಘದಲ್ಲಿ ಮೆಂಬರಶಿಪ್ಪಿಗೆ ಸರಿ, ಈ ಯುವಕರು ಅಲ್ಲಿಯ 'ನೇಶನಲ್ ಸೋಶಿಯಲಿಸ್ಟ್ ಪಾರ್ಟಿ'ಯಲ್ಲಿ ಸದಸ್ಯರಾಗಿರುವುದೂ ಸರಿ, ಅದರ ಕೆಲಸವೇ ಇದರ ಕೆಲಸ ಇಷ್ಟು ಜಾಕ್ರತ್ತಿನಿಂದ ಅವರು ಕೆಲಸ ಮಾಡುತ್ತ ಬರುತ್ತಿರುವರು 'ಹಿಟ್ಲರ ಯುತ್' ಸಂಘವೆಂದರೆ ಜರ್ಮನಿಯಲ್ಲಿ ಪ್ರಬಲ ಸಂಸ್ಥೆ ರಾಷ್ಟ್ರವಿದೀ ಹರಡಿರುವ ಚಳವಳವನ್ನೇ ಇದು ಹೂಡಿದೆ ಇದರ ಕೇಂದ್ರ ಖಚೇರಿಯು ಬರ್ಲಿನ್‌ನಲ್ಲಿದೆ ಪ್ರತಿಯೊಬ್ಬ ಮುಂದಾಳು ಅಥವಾ ಸದಸ್ಯನ ಕೂಲಂಕಷ ಪರಿಚಯವುಳ್ಳ ದಾಖಲೆಗಳು ಈ ಖಚೇರಿಯಲ್ಲಿವೆ ಹುಡುಗರು ತಮ್ಮ ಎಂಟನೇ ವರ್ಷ ಪ್ರಾಯವು ದಾಟುತ್ತಲೇ, ಪೋಂಚ ಹಣವನ್ನು ಕೊಟ್ಟು ಈ ಸಂಘದ ಸದಸ್ಯರಾಗುತ್ತಾರೆ ಈ ಚಳವಳವು ಖಾಸಗಿಯಾಗಿಯೇ ನಡೆಸಲ್ಪಡುತ್ತದೆ ಇದರ ಆರ್ಥಿಕ ಚಲಾವಣೆಯು ವಿಚಾರವೂ ಖಾಸಗಿಯಾಗಿಯೇ ಇದೆ ಆದರೆ ಇದಕ್ಕೆ ಸಂಸ್ಥಾನಾಧಿಪರ ಬೆಂಬಲವೂ ಪೋಷಣೆಯೂ ಮತ್ತು ಸಲಹೆಗಳೂ ದೊರೆಯುತ್ತವೆ ಈ 'ಹಿಟ್ಲರ್ ಯುವಕ' ಸಂಘವು ಪರಿಪೂರ್ಣವಾಗಿ ನೇಶನಲ್ ಸೋಶಿಯಲಿಸ್ಟ್ ಚಳವಳಿಗಾರರ ಹಸ್ತಗತವಾಗಿದೆ ಅದರ ಆದರ್ಶಗಳಿಗನುಸಾರವಾದ ಕಲಸಗಳನ್ನು ನಡವೇರಿಸುತ್ತಿದೆ

ಪ್ರಕೃತ ಸ್ಥಿತಿಯಲ್ಲಿ ಜರ್ಮನಿಯ ಪ್ರತಿಯೊಬ್ಬ ಬಾಲಕನೂ ಸ್ತ್ರೀಯೊಬ್ಬಳ ಬಾಲಕಿಯೂ ಜರ್ಮನಿ ದೇಶದ ಇಂದಿನ ವಿಚಾರವು ಮಕ್ಕಳ ಚಿತ್ತಕ್ಕೆ ಹತ್ತುವಂತೆ ಚಳವಳಿಸುತ್ತಿದ್ದಾರೆ ವಿದ್ಯಾರ್ಥಿ ಜೀವನದಲೂ ಕೂಡಾ ಈ ಮಕ್ಕಳು ವರಿಗಳ ತಮ್ಮ ದೇಶಸೇವಾ ಕಾರ್ಯದಲ್ಲಿ ಭಾಗವಹಿಸುವಂತಾಗಬೇಕೆಂದು ನಿರ್ಣಯವಾಗಿದೆ ಜರ್ಮನ್ ದೇಶದ ಇಷ್ಟ ಅನಿಷ್ಟವೂ ಪ್ರತಿಯೊಬ್ಬ ವ್ಯಕ್ತಿಯ ಅದೃಷ್ಟವೂ ನಿಕಟ ಸಂಬಂಧವನ್ನಿಟ್ಟುಕೊಂಡು ನಡೆಯುತ್ತಿದೆಯಾದುದರಿಂದ, ಜರ್ಮನಿಯ ಯಾವನೂ ಸರಿಯೇ, ಜನಾಂಗದ ಅಂಗವಾಗಿರುವನೆಂಬುದನ್ನು ಜನರಿಗೆ ಮಂದಟ್ಟು ಮಾಡುತ್ತಿದ್ದಾರೆ ಹೀಗಾಗಿ, ಯುವಕ ಯುವತಿಯರು, ಹುಡುಗ ಹುಡುಗಿಯರು, ಸ್ತ್ರೀಪುರುಷರು, ಮುದುಕ ಮುದುಕಿಯರು—ಇವರೆಲ್ಲ ಜರ್ಮನ್ ದೇಶದ ಪ್ರಗತಿಗಾಗಿ ಕಟಿಬದ್ಧರಾಗಿ ಸಂತ ವ್ಯಾಗತಿಸಂಗಿಯಿತ್ತಾರೆ

'ಹಿಟ್ಲರ್ ಯುವಕ' ಸಂಸ್ಥೆಯು ಆಟಕೂಟಗಳನ್ನೂ ವಿನೋದ ವಿಹಾರ ಸಂಭ್ರಮಗಳನ್ನೂ ಜರಗಿಸುವುದು ಮಾತ್ರವಲ್ಲ, ಇದರ ಸದಸ್ಯರು ಸಾಮಾಜಿಕ ಮತ್ತು ರಾಜಕೀಯ ಕೆಲಸಗಳಿಗೆ ಲಕ್ಷ್ಯ ಹರಿಸುವರು ಈ ಸದಸ್ಯರು ತಮ್ಮ ನೆರೆಹೊರೆಯಲ್ಲಿರುವ ಬಡ ಮಕ್ಕಳಿಗೆ ಕೂಡಿದಷ್ಟು ಸಹಾಯವೀಯುವರು ರಾಜಕೀಯ ಮೆರವಣಿಗೆ ಸಭೆಗಳಲ್ಲಿ ಇವರು ಸ್ವಯಂಸೇವಕರಾಗಿ ದುಡಿಯುವರು ಪ್ರದರ್ಶನಗಳು ಜರಗುವ ವೇಳೆ ಅವುಗಳಲ್ಲಿ ಭಾಗವಹಿಸುವರು, ಪ್ರಯಾಣ ಗ್ರಾನು ಸಂಚಾರಗಳನ್ನೂ ಮಾಡಿ ಅವರು ತಮ್ಮ ದೇಶಸ್ಥರ ಪೂರ್ಣ ಅನುಭವಾರ್ಜನೆ ಮಾಡುತ್ತಿರುವರು

ಈ ಸಂಘದ ಮುಂದಾಳುಗಳನ್ನಾಗಿ ಯುವಕವರ್ಗದವರಿಂದಲೇ ಆರಿಸುತ್ತಾರೆ ಎಲ್ಲಾ ಅಧಿಕಾರಗಳು ಯೌವನಸ್ಥರು, ಹೀಗಿದ್ದರೂ ಅವರು ಎಲ್ಲಾ ಬಗೆಯ ಜವಾಬ್ದಾರಿಕೆಗಳನ್ನು ಹೊತ್ತು ಸಾಗುತ್ತಿರುವರು. ಒಬ್ಬನಲ್ಲಿ ಧುರೀಣತೆಗಾಗಿ ಪ್ರೇಮವಿದ್ದರೆ, ತಾನು ಮುಂದಾಳಾಗಬೇಕೆಂದು ಅವನು ತನ್ನ ಕಾರ್ಯ

ರಾಷ್ಟ್ರೀಯ ಸಮತಾವಾದ
ಇದರಲ್ಲಿನ ಜರ್ಮನ್ ಶಿಕ್ಷಣ.

ಶಿಕ್ಷಣ ವಿಷಯಕವಾದ ಚಳವಳವು ಪ್ರಪಂಚದಲ್ಲೆಲ್ಲ ತಲೆದೋರಿ ಮುಂದಿನ ಜನಾಂಗದ ಇಂದಿನ ಮಕ್ಕಳ ಮೊನಸಿಕ, ದೈಹಿಕ, ನೈತಿಕ ಪ್ರಗತಿಯಾಗಬೇಕೆಂದು ಜನತೆಯು ಕಾತರಿಸುತ್ತಿದೆ ಹಿಂದೂಕೋಡದಲ್ಲಿ ಬಳಕೆಯಲ್ಲಿರುವ ಶಿಕ್ಷಣ ಕ್ರಮದಲ್ಲಂತೂ ಜನತೆಯು ವಿಶ್ವಾಸವು ಕಡಮೆಯಾಗಿ ಮಕ್ಕಳ ಶಿಕ್ಷಣದ ಬಗ್ಗೆ ನೂತನ ಕಲ್ಪನೆಗಳಾಗುತ್ತವೆ ಈ ಪರಿಸ್ಥಿತಿಯಲ್ಲಿ ವಿದೇಶಗಳಲ್ಲಿ ಪ್ರಚಾರದಲ್ಲಿರುವ ಶಿಕ್ಷಣ ಕ್ರಮಗಳ ತಿಳಿವು ನಮ್ಮವರಿಗಾಗಲೆಂದು ಮೊದಲ್ಗ ಬಿಡುಗಡೆ ಮಾಡಿಕೆಯಲ್ಲಿ ಶ್ರೀ ಜಿ ಎಸ್ ಹೈರ್ ಎಂ ಎ, ಬಿ ಎಚ್ ಡಿ ಇವರು ಬರೆದಿರುವ ಲೇಖನ ವನ್ನಿಲ್ಲಿ ಅನುವಾದಿಸಿ ಕೊಡಲಾಗಿದೆ ಸಂ ಸ್ವ

ಕಲಾವಗಳಲ್ಲಿ ತೋರಿಸಿಕೊಟ್ಟರೆ, ಅಂತಹವನನ್ನು ಎಚ್ಚೆರದಿಂದ ನೋಡುತ್ತಿರುವರು ಸಮಯಾನುಸಾರ ಅಂತಹವನು ಯೋಗ್ಯ ಸ್ಥಾನ ಸ್ಥಾನವನ್ನು ಹೊಂದುವಂತೆ ವರ್ಪಾಡು ಮಾಡುತ್ತಿರುವರು, ಹೀಗೆ ಮಾಡಿ ಹಿಟ್ಲರ್ ಯ ನಕರು ಅಪ್ರಾಯಸ್ಥರಿಗೂ ಪ್ರಾಯಸ್ಥರಿಗೂ, ಮೇಲು ದ್ಯೋಗಸ್ಥರಿಗೂ ಕೀಳು ಉದ್ಯೋಗಸ್ಥರಿಗೂ ಇರುವ ತಾರತಮ್ಯವನ್ನು ಕೂಡಿದಷ್ಟು ಹೋಗ ಲಾಡಿಸಲು ಸಾಧನೆಗೈಯ್ತಿರುವರು ರಾಷ್ಟ್ರೀಯ ಸಮತಾವಾದ ಸಂಗಡಗಾರರು ಈ 'ಹಿಟ್ಲರ್ ಯುತ್' ಸಂಸ್ಥೆಯವರನ್ನು ನಡೆಸುತ್ತಾ ತನ್ನ ಸೃಷ್ಟಿಕ್ಕೆ ಬೀಕಾಗಿ ಸಮುಪ ಡರನ್ನು ಈ ಸಂಘದಿಂದ ಸ್ವೀಕರಿಸಿ ವರು ಈ ಸಂಘಗಳ ಕೆಲಸಗಳು ಜನರಲ್ಲಿ ರಾಜಕೀಯ ಭಾವನೆಯನ್ನೂ ಆಶಯವನ್ನೂ ಪ್ರಚೋದಿಸಲು ಕಾರಣವಾಗುತ್ತಿರುವುವು

ರವಿವಾರ ಪ್ರಾತಃಕಾಲ ಬರ್ಲಿನ್ ನಗರದ ಮೂಲೆಮೂಲೆಗಳಲ್ಲಿ ಸಂಚಾರ ಮಾಡಿರಿ ಖಾಕಿ ಉಡುಗೆ ತೊಡಿಗೆಯನ್ನು ಧರಿಸಿಕೊಂಡು ಕೈಯಲ್ಲಿ ಸುದ್ದಿಳ ವಾದ್ಯಗಳನ್ನು ಹಿಡಿದು ಕೊಂಡು ರಾಷ್ಟ್ರೀಯ ಧ್ವಜಗಳನ್ನು ಹಾರಿಸುತ್ತಾ ಗೀತೆಗಳನ್ನು ಹಾಡುತ್ತಾ ಸಾಲು ಸಾಲಾಗಿ ಹೋಗುವ ನೂರಾರು ಹುಡುಗರನ್ನು ಕಾಣಬಹುದು ಮುಂದಿನ ಜರ್ಮನ್ ರಾಷ್ಟ್ರದ ಬೆನ್ನೆಲುಬು ಇವರು ದೇಶದ ಮಕ್ಕಳಿಗೆ ಸಮಾಜನಾದ ರಾಜಕೀಯವಾದಗಳ ತಿಳಿವುಂಟಾಗಬೇಕೆಂಬ ಗುಹದೋದ್ದೇಶವೇ ಈ 'ಹಿಟ್ಲರ್ ಯುವಕ' ಸಂಘದವರಿದ್ದಾಗಿರುತ್ತದೆ ಇದಕ್ಕೆ ಜೆತ್ತವರ ಮತ್ತು ಉತ್ತಾಧ್ಯಾಯರ ಬೆಂಬಲವಿದೆ

ಗ್ರಾಮ ಮತ್ತು ಪಟ್ಟಣಗಳೊಳಗಿನ ಸಾಮಿಪ್ಯ.

ಜರ್ಮನ್ ಜನಾಂಗಿಕರೆಲ್ಲ ಒಂದಾಗಿ, ಕಲೆತು, ಬೆರೆತುಕೊಂಡಿರಬೇಕೆಂದು ಜರ್ಮನ್ ವಿದ್ಯಾಧಿಕಾರಿಗಳು ಶ್ರಮಿಸುತ್ತಿರುವರು ದೇಶದೊಳಗಣ ವಿವಿಧ ಸಮಾಜಗಳನ್ನು ಒಟ್ಟುಗೂಡಿಸಲು ಸಂಸ್ಥಾನದ ಸಕಲರೂ ಏಕಮತೀಯರಾಗಿ ಬೇಕು ಎಂದು ಅದರ ಹಂಬಲವಿರುತ್ತದೆ ಈ ಉದ್ದೇಶಗಳು ಈಡೇರಿ ಬರಬೇಕೆಂಬ ಸಾಧನೆಯಲ್ಲಿ ಅವರು ಹಲವು ಬಗೆಯ ಉಪಾಯಗಳನ್ನು ಹೂಡುತ್ತಿರುವರು

ಆಧುನಿಕ ಕಾಲದಲ್ಲಿ ಮಹಾ ಸಮಸ್ಯೆಯಾಗಿ ನಿಂತಿರುವ ಒಂದು ವಿಷಯ—ಪಟ್ಟಣ ಮತ್ತ ಹಳ್ಳಿಗಳಿಗಿರುವ ಸಂಬಂಧ ಈ ವಿಚಾರದ ಸರಿಸ್ಥಾರ ಸಾಧನೆಯ. ಈಗಿನ ಸನಾಜದಲಿ ಎಲ್ಲೆಲ್ಲೂ ಕಲೆದೋರಿರುವುದು. ಕ ದುಬರುತ್ತಿದೆ ಜಗತ್ತಿನಲ್ಲಿ ಪ್ರತಿಯೊಬ್ಬನಿಗೂ ಸಷ್ಟಣವಾಸವೇ ಹಿತಕಾರಿ, ಅವಕ್ಕಷ್ಟೇಯವಾಗಿ ಕಂಡುಬಂದಿದೆ ಸರ ದ್ಯೋಗಿಳಾಗಿರುವವರಲ್ಲಿ ಕೆಲವರು ಮಾತ್ರ ಗ್ರಾನುಗಳಿಗೆ ಹೋಗುತ್ತಾರೆ ಪಟ್ಟಣವಾಸದಲ್ಲಿ ಜನರಿಗೆ ಪ್ರಿಯತಯು ತಲೆದೋರಿ ಅಂತಹ ಪ್ರೇನುವು ಗ್ರಾನುಗಳನ್ನೂ ಪಟ್ಟಣಗಳನ್ನೂ ಪ್ರತ್ಯೇಕಿಸುವ ಅಪ್ರಿಯತೆಯಲ್ಲಿ ಕೊನೆಗಂಡಿದೆ ಇದರಿಂದಾಗಿಯೇ ಜರ್ಮನರ ತಮ್ಮ ಪಟ್ಟಣ ಮತ್ತ ಗ್ರಾನುಗಳ ಸಂಸರ್ಪಟಿಸಿಗಾಗಿ ಅಹರ್ನಿಶಿ ಸಾಧಿಸುತ್ತಿರುವರು ತಮ್ಮ ಸಾಧಿನ ಶಕ್ತಿಯು ಉಳಿಯಬೇಕಾದರೆ ತಮ್ಮ ನಾಡು ಸ್ವಸ್ಥವಾಗಿರಬೇಕ ಎ ದ ಅನಿಸಿ ಸಂಚಿಸುತ್ತಿರುವರು ವ್ಯತಿಫಲವಾಗಿ, ಜರ್ಮನಿಯ ಶಿಕ್ಷಣ ವಿಷಯದಲ್ಲಿ ಗ್ರಾನುಸಂಘಟನಾ ಕೆಲಸಗಳಿಗೂ ಪಟ್ಟಣಗಳಿಗೂ ಸಮೂಪಬಂಧವನ್ನುಂಟುಮಾಡಲು ಸಾಧಕವಾದ ಏರ್ಪಾಡುಗಳು ಅಲ್ಲಿ ನಡೆಯುತ್ತವೆ ಹಳ್ಳಿಯೂ ನೀಟಿಯೂ ದೇಶದ ರಕ್ಷಣಾಕವಚಗಳಾಗಬೇಕೆಂಬ ಉದ್ದೇಶವಿದೆ

ಅಧ್ಯಾಪಕರ ಶಾಲೆಗಳನ್ನು ಈಗೀಗ ಪಟ್ಟಣಗಳಿಂದ ಹಳ್ಳಿಗಳಿಗೆ ಕೊಂಡೊಯ್ಯುತ್ತಿರುವರು ಅಲ್ಲಿ ಉಪಾಧ್ಯಾಯಿನಿಯರ್ಲ್ಲಿ ಹಳ್ಳಿಗರೊಡನೆ ಸಮ್ಮಿಳಿತರಾಗುತ್ತಾರೆ ಹಳ್ಳಿಗರ ಜನಪದ ಸಾಹಿತ್ಯ ನರ್ತನೆ ಕ್ರಮ ಮತ್ತು ಆರ್ಥಿಕ ಸ್ಥಿತಿ ವಿಚಾರಗಳನ್ನು ತಿಳಿಯುತ್ತಾರೆ ಅವರಿಗೆ ಹೀಗೆ ಸಿಕ್ಕಿದ ಅನುಭವದ ಮೇರೆಗೆ ದೇಶಾಡಳಿತದ ಕಾರ್ಯಕ್ರಮಗಳು ರೂಪಿಸಲ್ಪಡುತ್ತವೆ. ನಗರ ಭಾಂತ್ರರು ರಚಿಸಿರುವ ಕ್ರಮನಿಯಮಗಳು ಈಗ ಹಳ್ಳಿಗರ ಪ್ರಯೋಗದಿಂದ ಹೊರಗಾಗುತ್ತಿವೆ ಉಪಾಧ್ಯಾಯರ ತರಬೇತಿಯ ಈ ಹಳ್ಳಿಗಳ ಕೇಂದ್ರಗಳು ಜನಾಂಗದ ಪರಿಚಾರಕರ ಕೆಲಸನಾಡುತ್ತವೆ ಇವುಗಳು ಮಕ್ಕಳ ಮತ್ತು ಪ್ರಾಯಸ್ಥರ ಜ್ಞಾನಜರ್ಜನೆಯನ್ನು ದೃಷ್ಟಿ ಪಥದಲ್ಲಿಟ್ಟುಕೊಂಡಿರುವೆ ಒಂದೊಂದು ಹಳ್ಳಿಯ ಜನ ಮತ್ತು ವರಿಸ್ಥಿತಿಗನುಸಾರವಾಗಿ ಶಾಲೆಗಳಲ್ಲಿ ವರ್ಷವುಸ್ತಕಗಳಿವೆ ಅವುಗಳಲ್ಲಿ ಆ ಹಳ್ಳಿಗರಿಗೆ ಸ್ರಿಯವಾಗಿರುವ ವಿಷಯಗಳ ಪ್ರತಿಪಾದನೆಗಳಿರುತ್ತವೆ ಅಂತಹ ಪಠ್ಯಪುಸ್ತಕಗಳನ್ನು ಹೊರಗಿನವರು ಬರೆಯುವುದಿಲ್ಲ. ಆಯಾಯ ಗ್ರಾನದ ಅಧ್ಯಾಪಕರೇ ಬರೆಯುತ್ತಾರೆ

ರೈತರು, ಕೂಲಿಗಾರರು, ಪಟ್ಟಣದಲ್ಲಿನ ಶಿಕ್ಷಿತ ವರ್ಗದವರು ಈ ನೂರು ವರ್ಗದವರನ್ನು ಒಂದೂಗೂಡಿಸಿ ಅವರಿಗೆ ಸಮಾಜ ಸಮತಾವಾದವನ್ನು ತಿಳಿಸುವ ಪ್ರಯತ್ನವೇ ಶಿಕ್ಷಣದ ನೂತನ ಸೂರ್ಗ ಏಕೀಕರಣ ದಂತಹ ಗಹನ ವಿಷಯವು ಸುಲಭದಲ್ಲಿ ಕೈಗೂಡಿ ಬರಲಾರದು ಎಂದು ಅಲ್ಲಿಯವರು ನನವರಿತಿರುವರು ಆದುದರಿಂದಾಗಿಯೇ ಅವರು ಅದಕ್ಕೆ ಅಧಿವತಿಗಳ ಪೂರ್ಣ ಒಂಬಲವನ್ನು ಪಡೆದುಕೊಂಡಿರುವರು ಏಕೀಕರಣ ವಾಗಬೇಕಾದರೆ ಒಬ್ಬನು ಇನ್ನೊಬ್ಬನನ್ನು ಪೂರ್ಣ ತಿಳಿದುಕೂಂಡ. ಪರಿಚಯವಾಗ ಬೇಕು ಎಂಬುದು ವಿದ್ಯಾಧಿಕಾರಿಗಳ ಸಲಹೆ ಇದಕ್ಕಾಗಿ ಜರ್ಮನ್ ವಿದ್ಯಾರ್ಥಿಗಳು ಗ್ರಾಮಗಳಿಗೆ ಸಂಚರಿಸಿ ತಮ್ಮ ದೇಶಿಗರನ್ನು ತಿಳಿಯಬೇಕೆಂಬ ಅಭ್ಯಾಸವಾಗುತ್ತಲಿದೆ

ಜರ್ಮನ್ ವಿದ್ಯಾರ್ಥಿಗಳನ್ನು ಅನಂ ವಿದ್ಯಾರ್ಥಿದಶೆಯಲ್ಲಿ ಒಮ್ಮೆಯಾದರೂ ಬರ್ಲಿಗೆ ಕಳುಹಿಸಬೇಕೆಂದೂ ಹೈಸ್ಕೂಲ್ ವಿದ್ಯಾರ್ಥಿಗಳು ತಮ್ಮ ಸುಧ್ಯಮಿಕ ಶಿಕ್ಷಣಾರ್ಥ ಹಳ್ಳಿಗಳ ಶಾಲೆಗಳಿಗೆ ಕಳುಹಿಸಲ್ಪಡಬೇಕೆಂದೂ ಸೂಚನೆಯಾಗಿದೆ

ಸಂಪೂರ್ಣ.

ಮಾಸ್ಟರ್ ಮತ್ತು.
ಇವನು ಕನ್ನಡ ದೂತಾಭಿನವ "ಧ್ರುವ ಕುಮಾರ್" ಎಂಬ ಚಲಚ್ಚಿತ್ರದಲ್ಲಿ ಧ್ರುವನ ಪಾತ್ರವಹಿಸಿ ಜನರ ಮೆಚ್ಚುಗೆಗೆ ಪಾತ್ರನಾಗಿರುವನು.

"ಧ್ರುವಕುಮಾರ್" ಚಲಚ್ಚಿತ್ರದ ಇನ್ನೊಂದು ದೃಶ್ಯ.
ಇದು ಇದೇ ಫೆಬ್ರವರಿ ೧೩ ಬುಧವಾರ ಸಂಜೆ ೬ ಗಂಟೆಗೆ ಶ್ರೀ ಕೃಷ್ಣ ಟಿಕೀಸು ಮಂದಿರದಲ್ಲಿ ಪ್ರದರ್ಶಿಸಲ್ಪಡುವುದು.

The Canara Banking Corporation Udipi, Ltd.

Head office:—UDIPI, S. K. (Incorporated in British India) **ESTD. 1906.**

Branches:—1 Udipi, 2 Coondapoor, 3 Car Street, Mangalore, 4. Shimoga, 5 Madras, 6 Bunder Mangalore, 7 Mercara.

Authorised & Issued Capital Rs. 3,50,000/— Subscribed & Paid up Rs. 2,25,000 Reserve & other Funds—2,60,953—7—0

SHARES.

The 2,500 shares of the face value of 50 each, issued for subscription at a premium of Rs. 40 each have been oversubscribed.

Office of the Corporation, Udipi, Dated, 12-1-1935.

M. Shrinivasa Prabhu,
Ag. Manager.

(Regd)

ಅಮೃತಾಂಜನ.

ಇದು ಕೆಟ್ಟ ಶಿರೋವೇದನೆ, ಕಫ ಕೊಡುವ ವಾತ, ಭಾರಿ ನೋವು, ವಿಶೇಷ ಉಳುಕು, ಅಸಹನೀಯ ಹಲ್ಲುನೋವು, ವಿಪರೀತ ಘಾಯ, ಬಹು ಶೀತ, ಸಹಿಸಲಸದಳವಾದ ಚಳಿ, ಕೈಕಾಲು ಮರಗಟ್ಟುವುದು, ಲುಂಬಾಗೊ ಮೊದಲಾದ ಎಲ್ಲಾ ತರದ ಬೇನೆಗಳನ್ನೂ ಅತೀ ಬೇಗನೇ ಗುಣಪಡಿಸುತ್ತದೆ. ಎಲ್ಲೆಲ್ಲಿಯೂ ಮಾರಲ್ಪಡುತ್ತಿದೆ.

ರಿಂಗ್‌ವರ್ಮ್ ಮುಲಾಮು:—ಇದು ರಿಂಗ್‌ವರ್ಮನ್ನೂ ಕಜ್ಜಿಯನ್ನೂ ಇನ್ನಿತರ ಚರ್ಮರೋಗಗಳನ್ನೂ ಮೂರು ಸಲ ಮುಟ್ಟಿಸುವುದರೊಳಗೆ ಗುಣಪಡಿಸುತ್ತದೆ.

ಡಬ್ಬಿ 1ಕ್ಕೆ 6 ಆಣೆ. ಡಜನಿಗೆ ರೂ. 3—8—0. ಅಂಚೆವೆಚ್ಚ ಪ್ರತ್ಯೇಕ.

ಅಮೃತಾಂಜನ ಡಿಪೋ, ಮದರಾಸು ಮತ್ತು ಬೊಂಬಾಯಿ.

THE BOMBAY LIFE ASSURANCE CO., LTD.

Established 1908.

EXCELLENT BONUSES.
1933 Valuation Results.

	WHOLE LIFE	ENDOWMENT	
1925-'30	20	15	Per thousand
1931-'33	23	18	per year.

Every "With Profit" Policy is entitled to "PERMANENT DISABILITY BENEFITS."—No extra premium PAYS DOUBLE THE ASSURED SUM IN THE EVENT OF DEATH BY ACCIDENT ON PAYMENT OF MINIMUM EXTRA PREMIUM OF RS. 1-8-0 PER RS. 1000 POLICY PER YEAR.

Existing Policy-holders may avail of this benefit. For particulars apply to:—

KOCHIKAR BROTHERS,
Madras Branch Secretaries.

Offices at:—
Udipi, Mangalore, Bangalore, Calicut, Madras and Bombay.

Karnataka Chemical and Pharmaceutical Works, Ltd., Udipi (South India)

ಕರ್ಣಾಟಕ ಕೆಮಿಕಲ್ ಎಂಡ್ ಫಾರ್ಮಸ್ಯೂಟಿಕಲ್ ವರ್ಕ್ಸ್, ಲಿಮಿಟೆಡ್, ಉಡುಪಿ. (ದಕ್ಷಿಣ ಹಿಂದೂಸ್ಥಾನ).

ಸ್ವದೇಶೀ ಉದ್ಯಮವನ್ನು ಪ್ರೋತ್ಸಾಹಿಸಿರಿ! ಕರ್ಣಾಟಕದ ಈ ಸಂಸ್ಥೆಗೆ ಉತ್ತೇಜನ ಕೊಡಿರಿ!!

ಉತ್ತಮ ತರಗತಿಯ ಸಾಬೂನುಗಳಲ್ಲಿರತಕ್ಕ ಎಲ್ಲಾ ಗುಣಗಳಿರುವ

ಕರ್ಣಾಟಕ ಹೌಸ್‌ಹೋಲ್ಡ ಸಾಬೂನನ್ನೇ

ಉಪಯೋಗಿಸುವುದರಿಂದ ನಿಮ್ಮ ಬಟ್ಟೆಗಳು ನಿರ್ಮಲವಾಗುವುವು, ಬಟ್ಟೆಗಳು ಹೆಚ್ಚುಕಾಲ ಬಾಳುವುವು, ಖರ್ಚೂ ಕಡಿಮೆಯಾಗುವುದು ಅಮೂಲ್ಯ ಸಮಯವೂ ವ್ಯರ್ಥವಾಗದು.

ಆದುದರಿಂದ ಈ ಸಾಬೂನುನನ್ನೇ ಉಪಯೋಗಿಸಿರಿ. ಸಿಲಿಕೇಟ ಬೆರಕೆಯಿರುವ ಸಾಬೂನಿಗೆ ಮರುಳಾಗಬೇಡಿರಿ.

ನಮ್ಮಲ್ಲಿ ತಯಾರಾಗುವ ಅಲಂಕಾರ ಸಾಮಾಗ್ರಿಗಳು (Toilets)

ಕರ್ಣಾಟಕ ಸ್ನೋ, ಕರ್ಣಾಟಕ ಬ್ರಿಲ್ಲೆಂಟೈನ್, ಆರೋರಾ ಕ್ರೀಮ್, ಕ್ರಿಮೊರ್ ಲಿಮೊನಿಸ್, ಕರ್ಣಾಟಕ ರೋಸ ಪೌಡರ್. ಇದಲ್ಲದೆ ನಮ್ಮಲ್ಲಿ ಎಲ್ಲಾ ಆಯುರ್ವೇದ ಮತ್ತು ಎಲ್ಲೊಪೆತಿಕ್ ಔಷಧಗಳೂ, ಫೌಂಟನ್ ಪೇನ್ನು ಶಾಯಿಗಳೂ ಸಿದ್ಧವಾಗುವುವು.

ಮೆನೆಜಿಂಗ್ ಡೈರೆಕ್ಟರ್—ವೆಂಕಟ್ರಾಯ ಅಣ್ಣಪ್ಪ ಬಾಳಿಗ.

ಹೆಡ್ ಆಫೀಸು ಮತ್ತು ಕಾರಖಾನೆ:—ಉಡುಪಿ, ದಕ್ಷಿಣ ಹಿಂದೂಸ್ಥಾನ.

ವ್ಯಾಪಾರದ ಡಿಪೊ:-(1) ದೇವಕರಣ ಮೆನ್ಷನ್ಸ್, 45 ಪ್ರಿನ್ಸೆಸ್ ಸ್ಟ್ರೀಟ್, ಬೊಂಬಾಯಿ ನಂ. 2

ಏಜಂಟ್ಸ್— (2) 1/70 ನ್ಯಾಸಪ್ಪ ಸ್ಟ್ರಾಕನ ಬೀದಿ, ಪಾರ್ಕ್ ಟೌನ್ ಮದರಾಸು.

ಕರ್ಣಾಟಕ ಪ್ರೊಡಕ್ಟ್ಸ್ ಡಿಸ್ಟ್ರಿಬ್ಯೂಟಿಂಗ್ ಕೋ, ಮಂಗಳೂರು.

dited, Printed & Published By A. S. Kamath at the Sharada Press, Car Street, Mangalore.

P
for Quality Snuff
H. Rama Rao and Sons.
High Class Snuff Manufacturers
Mangalore, S. I.
ASK FOR
RAMA SNUFF
The charm of Snuff Users!

"LIFE ASSURANCE IS NO EXPENSE BUT AN INVESTMENT"
Safeguard yourself & your family TODAY
Buy a policy in
THE BOMBAY LIFE
Managers for Bombay Presidency
Kochikar Brothers,
Udipi Mangalore Bangalore Madras, Bombay and Calicut

ESTABLISHED 1906

(ಕೀರ್ತಿಶೇಷ ವಿ. ಶ್ರೀನಿವಾಸ ಕಾಮತರಿಂದ ೧೯೦೬ರಲ್ಲಿ ಸ್ಥಾಪಿತವಾದುದು.)

ಪ್ರತಿ ಶುಕ್ರವಾರವೂ ಮಂಗಳೂರಿನ ಶಾರದಾ ಛಾಪಖಾನೆಯಲ್ಲಿ ಪ್ರಕಟವಾಗುವ ವಾರಪತ್ರಿಕೆ

ಪುಸ್ತಕ ೨೯ ಮಂಗಳೂರು ಕಾ. ಆನೇ ಶುಕ್ರವಾರ ಫೆಬ್ರವರಿ ೧೯೩೫ (8-2-'35) ಸಂಚಿಕೆ ೬

ಶಾಂತಿರಕ್ಷಣೆಗಾಗಿ ಇಂಗ್ಲಾಂಡು-ಫ್ರಾನ್ಸುಗಳೊಳಗೆ ಮಹಾ ಒಪ್ಪಂದ!!!

ಬ್ರಿಟನು, ಫ್ರಾನ್ಸ್, ಜರ್ಮನಿ, ಬೆಲ್ಜಿಯಂ ಮತ್ತು ಇಟೆಲಿಗಳೊಳಗೆ ಐಕ್ಯಸಾಧನೆ!

ದಿಲ್ಲಿಯಲ್ಲಿ ನವಸುಧಾರಣೆಗಳ ಸಾರ್ವತ್ರಿಕ ಖಂಡನೆ!

೧೯೦೪ರ ಫೋರ್ ಯುದ್ಧವು ಕೊನೆಗೊಂಡ ಮೇಲೆ, ಸಂರಾಜತವಾದ ಜರ್ಮನಿಯು ತನ್ನ ದೇಶದಲ್ಲಿ ಸೈನಾಂಕ ಬಲವನ್ನಿಟ್ಟುಕೊಳ್ಳ ಬಾರದೆಂದು ವರ್ಸಲಿಯಲ್ಲಾದ ಸಂಧಿಯಿಂದಾಗಿ ನಿರ್ಣಯವಾಗಿದ್ದಿತು. ಅಂದಿನಿಂದ ಮೊದಲುಗೊಂಡು ಜರ್ಮನಿಯು ಯುರೋಪಿನ ರಾಷ್ಟ್ರಗಳನ್ನು ದ್ವೇಷಾಸೂಯೆಗಳಿಂದಲೇ ಕಾಣುತ್ತಿತ್ತು. ಎಷ್ಟಾನಬಲ ವಿಲ್ಲದಿದ್ದರೂ ಸೈನ್ಯಬಲವನ್ನು ಹೆಚ್ಚಿಸಿಕೊಳ್ಳ



ಯುರೋಪು ಖಂಡದ ಶಾಂತಿರಕ್ಷಕರು. ಈಗ ಹರ್ ಹಿಟ್ಲರರು ಆಂಗ್ಲೊ ಫ್ರೆಂಚ್ ಒಪ್ಪಂದಕ್ಕೆ ಸಹಿಮಾಡ್ಕು ದರಲ್ಲಿ ಹೊಂದಿಕೊಂಡಿದೆ

ಬೇಕೆಂದು ಅದು ನಿರ್ಧರಿಸಿ ಆ ಸಂಬಂಧವಾಗಿ ಅವಿಶ್ರಾಂತವಾಗಿ ದುಡಿದು ಬೇಕಾಬೇಕಾದ ಶಸ್ತ್ರಧಳಗಳನ್ನು ಸಿದ್ಧವಡಿಸಿಕೊಂಡಿತು. ಫ್ರಾನ್ಸ್ ಮತ್ತು ಜರ್ಮನಿಗಳೊಳಗೆ ದ್ವೇಷವು ಇತ್ತೇ ಇತ್ತು. ಮೊನ್ನಿನ ಸಾರ್ ಪ್ರಶ್ನೆಯ ದೆಸೆಯಿಂದಾಗಿ ಜರ್ಮನಿಯು ಇನ್ನೊಂದು ಯುದ್ಧದ ಜನನಕ್ಕೆ ಕಾರಣವಾಗುವುದೋ ಎಂಬ ಭಯವೂ ಇತ್ತು. ಆದರೂ ಲೀಗ್ ಆಫ್ ನೇಶನ್ಸ್ ಆ ವ್ಯಸ್ಥೆಯಲ್ಲಿ ಕೈಯುಕ್ಕಿ, ಅದನ್ನು ಸಮರ್ಪಕವಾಗಿ ತೀರ್ಮಾನಿಸಿದುದರ ಫಲವಾಗಿ ಯಾವ ಅನಪೇಕ್ಷಿತ ಘಟನೆಗಳೂ ಸಂಭವಿಸಲಿಲ.

ಇನ್ನೊಂದು ಯುದ್ಧದ ಭೀತಿಯು ಯೂರೋಪ ಖಂಡವನ್ನೆಲ್ಲಾ ಆವರಿಸಿಬಿಟ್ಟಿದೆ. ಒಂದು ರಾಷ್ಟ್ರವು ಕಣ್ಣಿಗೆ ತೋಚಿದ್ದೆಲ್ಲಾ ಶಸ್ತ್ರಗಳನ್ನು ತಯಾರಿಸಿಟ್ಟಿದೆಯೆಂದು ತಿಳಿದು ಇನ್ನೊಂದು ರಾಷ್ಟ್ರವು ಒಡನೆ ತಾನೂ ಶಸ್ತ್ರಗಳನ್ನು ಹೆಚ್ಚಿಸಿಕೊಂಡು ಪರಸ್ಪರ ಸ್ಪರ್ಧೆಯೇ ತಲೆದೋರಿದೆ. ಎಷ್ಟಗಾಳಿಗಳನ್ನುಪಯೋಗಿಸಿಯೇ ಈ ಸಲದ ಯುದ್ಧವು ನಡೆಯುವುದೆಂಬ ಭಯವು ಎಲ್ಲಾ ರಾಷ್ಟ್ರಗಳಿಗೂ ಇತ್ತು. ವಿಮಾನ ಮುಂತಾದ ವಿಷಗಾಳಿಯನ್ನು ತಂದು ದೇಶದಲ್ಲಿ ಹರಡಿ ಬಿಟ್ಟಾರೋ ಎಂಬ ಭಯವು ಪ್ರತಿಯೊಂದು ರಾಷ್ಟ್ರಕ್ಕಿತ್ತು. ಈ ಭಯದಿಂದ ಲಂಡನ್ ನಗರ

ಯುರೋಪಿನ ಶಾಂತಿರಕ್ಷಣೆಗೆ ಕಾರಣ ಕರ್ತೃಗಳಾಗಲಿರುವ

ಸರ್ ಜಾನ್ ಸೈಮನ್ ಮತ್ತು ಅಂತೋನಿ ಏಡನ್ ರವರು

ವೆಲ್ಲ ಅನುದಿನವೂ ಪರಿಕಲಿಸುತ್ತಿತ್ತು. ಈ ಹೆದರಿಕೆಯನ್ನು ಹೋಗಲಾಡಿಸುವುದಕ್ಕಾಗಿ ಬ್ರಿಟಿಷ ಫ್ರೈಮಿನ್ ಸೆಕ್ರೆಟರಿಯರಾದ ಸರ್ ಜೋನ್ ಸೈಮನ್‌ರು ಫ್ರಾನ್ಸಿನ ಫ್ರೈಮಿನ್ ಮಿನಿಸ್ಟರರೊಡನೆ ಮಾತುಕತೆ ನಡೆಸಿ, ಯುರೋಪು ಖಂಡದ ಎಲ್ಲಾ ರಾಷ್ಟ್ರಗಳೂ ಒಂದಾಗಿ ಮುಂದಕ್ಕೆ ಒಬ್ಬರ ಮೇಲೆ ಇನ್ನೊಬ್ಬರು ವಿಮಾನ ಮೂಲಕ ಬೇಳದಂತೆ ರಕ್ಷಣಾ ಕವಚಗಳನ್ನು ನಿರ್ಮಿಸುವುದಕ್ಕಾಗಿ "Joint Aerial Convention (ಜತೆ ಸೈನಾಂಕ ಒಪ್ಪಂದ) ವನ್ನು ಮಾಡಿಕೊಳ್ಳಬೇಕಾಗಿ ಮಾತುಕತೆ ನಡೆಸಿದರು. ಇದಕ್ಕಾಗಿ ಸ್ವಾಸ್ಥಿನ ವಿದೇಶ ಸಚಿವರಾದ ಲಾವಲ್ ಲಂಡನ್ನಿಗೆ ಬಂದಿದ್ದರು. ಇಟೆಲಿಯ ಎಬಿಸಡರರಾದ ಸೀಸರ್ ಗ್ರೇಂಡಿಯವರೂ ಬಂದಿದ್ದರು. ಕೆಲವೆ ದಿನಗಳಲ್ಲಿಯಾಯಿಕು ಬ್ರಿಟನ ಫ್ರಾನ್ಸ್, ಜರ್ಮನಿ ಬೆಲ್ಜಿಯಂ ಮತ್ತು ಇಟೆಲಿಗಳ್ಳು ಈ ಒಪ್ಪಂದಕ್ಕೆ ಸೇರಿ ಐ ಒಂದಕ್ಕೆ ಈ ರಾಷ್ಟ್ರಗಳು ಒದರ ಬೇಲೊಂದು ಬೀಳಲು ವರ್ತನ ಬಲಗಳನ್ನು ವಿಭೋಗಿಸಿ ಬಾರದೆಂದ ತೀರಾವಾಯಿತ

ಈ ಒಪ್ಪಂದದ ವಾರ್ತೆಯನ್ನು ಎಲ್ಲಾ ರಾಷ್ಟ್ರಗಳಿಗೂ ತಿಳುಹಿಸಿ ಅಭಿಪ್ರಾಯವನ್ನು ಕೇಳಲಾಯಿತು. ಎಲ್ಲಾ ರಾಷ್ಟ್ರಗಳೂ ಇದಕ್ಕೆ ಒಪ್ಪುವೆ ಆದರೆ ಜರ್ಮನಿಯು ಮಾತ್ರ ಇಪ್ಪರ ವರೆಗೆ ಉತ್ತರವನ್ನು ಕಳಿಸಿರುವುದಿಲ್ಲ. ಲಂಡನ್ನಿನಲ್ಲಿ ಈ ಒಪ್ಪಂದ ವಿಷಯಕವಾದ ಕಾರ್ಯಕಲಾಪಗಳು ನಡೆಯುತ್ತಿದ್ದಂತೆ ಅವುಗಳ ವಿವರವನ್ನು ಜರ್ಮನಿಗೆ ತಿಳುಹಿಸಲಾಯಿತು. ಬರ್ಲಿನ್ ನಗರದಲ್ಲೆಲ್ಲಾ ಈ ವಾರ್ತೆಯ ಹರಡಿತು. ಜರ್ಮನಿಯನ್ನು ಈ ಒಪ್ಪಂದಕ್ಕೆ ಕರೆದು ವರ್ಸಲೆ ಸಂಧಿಯಲ್ಲಿ ಅದು ವಿಮಾನಬಲವನ್ನುಪಯೋಗಿಸುವ

ಮಿಸ್. ಸೋಫಿಯಾ ಸೋಮ್ಸ್.

ಈಗ ಜಾನ್ ಸಾಕೇಬರ ಪುತ್ರನನ್ನು ವಿವಾಹವಾಗಿ ರುವರು.

ಹಕ್ಕನ್ನು ಕಳೆದುಕೊಂಡಿದ್ದರೂ,— ಮುಂದಕ್ಕೆ ಅದಕ್ಕೆ ಈ ಅಧಿಕಾರವನ್ನು ಕೊಡಬೇಕೆಂದು ನಿರ್ಣಯಿಸಲಾಗಿದೆ ಹರ್ ಹಿಟ್ಲರರು ಈ ಒಪ್ಪ ದಕ್ಕೆ ಸಿದ್ಧರಾಗಿಯೇ ಇರುವರು ಆದರೆ

ಕೊಂಗೆಸ್ ಪಾರ್ಟಿಯ ಪ್ರಮುಖ ಕಾರ್ಯಕರ್ತೆಯು ಅಧ್ಯಕ್ಷಸ್ಥಾನಕ್ಕೆ ನಿಂತು ಕಲ್ಕತ್ತೆಂದ ಪೋಟುಗಳನ್ನು ಕಡಮೆ ಪಡೆದು ಆಪಜಯ ಗಳಿದರು.

ಶ್ರೀ ಕೆರ್ವಾನಿಯವರು.

ಆವರು-'ಜರ್ಮನಿಯನ್ನು ಧನಿಕರಾಷ್ಟದೃಷ್ಟಿಯಿಂದ ಇತರ ರಾಷ್ಟ್ರಗಳು ಕಾಣಬೇಕು ಅದರ ಪ್ರತಿಪೈಗೆ ಭಂಗತರುವ ಯಾವ ಒಪ್ಪಂದಕ್ಕೂ ಆದು ಸಿದ್ಧವಿಲ್ಲ' ಎನ್ನುತ್ತಿರುವರು. ಹರ್ ಹಿಟ್ಲರರು ಬೆರನ್‌ವೂನ್ ನೂರಾತ ರೊಡನೆ ಆಲೋಚಿಸಿಕೊಳ್ಳುತ್ತಿರುವರು. ಸಮಾನಸ್ಯೆಯೆಲ್ಲವೆ ವಿನಹ ತಾನು ಶಸ್ತ್ರತ್ಯಾಗದ ಒಪ್ಪಂದಕ್ಕಾಗಲೀ ವಿಮಾನಬಲದ ಒಪ್ಪಂದ ಕ್ಕಾಗಲೀ ಸಿದ್ಧವಿಲ್ಲವೆಂದೇ ಜರ್ಮನಿಯ ಪ್ರತಿವಾದನೆ. ತಾನು ಲೀಗ್ ಆಫ್ ನೇಶನ್ಸ್‌ಗೆ ಪುನಃ ಸೇರಬೇಕೆಂದಾದರೆ ವರ್ಸಲೆ ಸಂಧಿಯು ವಿಧಿಸಿರುವ ಕೆಲವು ಆಜ್ಞೆಗಳನ್ನು ತನ್ನ ತಲೆಯ ಮೇಲಿಂದ ತೆಗೆಯಬೇಕೆಂದು ಜರ್ಮನಿಯು ಹೇಳಿಕೆಯಿದೆ.

ಚಿತ್ರ

(All Rights Reserved)

ಬಟ್ಟೆರಯ್ಯ ಪಟ್ಟು !
ಕಟ್ಟಿ ಸಿಂಹ ಪಟ್ಟು !
ನಿಳ್ ಜೋಟ್ ಮಾರ್
ಅದರ ತೋಡ ಬಾರ್ !
ಒಟ್ಟಿ ಅಟ್ಟಿ ಕೊಟ್ಟರು !
ಬಿದ್ದ ಮೇಲೆ ದಿಟ್ಟರು !
ಪಟ್ಟಿಕಲು ಗರ್ಜ !
ಜೋಲ್ಲಂತರ ಸರ್ಜ !

ಕಳೆದ ವಾರ ಸಂಭ್ರಮ ಹೇಳಿದ ಸಿಂಹದ ವಿಚಾರ; ಮೊನ್ನೆ ಹೊಂದಕ್ಕೆ ಬಿದ್ದ ಸಿಂಹವನ್ನು ಎನೆಂಲ್ಲಿ ಕಾಡಿನ ಕೊಂಡದಿಂದ ಜೀವಾವರೂ ಮೇಲ್ಕೆಗೆದರಯ್ಯಾ !!! ಏನು ಆರ್ಭಟ! ಏನು ಗೌಜಿ! ಏನು ಸಿಟ್ಟು! ಸಿಂಹವೆನದು ?

ಮೊಲೆ ತಂದು ಇಂಡೋ—ಬ್ರಿಟಿಷ್ ವ್ಯಾಪಾರ ಸಂಬಂಧದ ದೊಡ್ಡ ಕಲ್ಪಣದ ಕಂಬಕ್ಕೆ ಅವನ್ನು ಕಟ್ಟಿ ದರು! ಗುರುಂ! ಗುರುಂ! ಎನ್ನುತ್ತಿದ್ದರು. ಅದರ ಕಂಠೀರವಕ್ಕೆ ಹೆದರದ ಶೂರ ಭುಲಾಭಾಯಿ ದೇಸಾರನು, ಬಂಗಿ ಜೆನ್ನಾ ನೊಡಲಾದ ಬೇಟೆಗಾರರು ಅದರ ಬಾಲ ವನ್ನು ಅದರ ಹೊಟ್ಟೆಯಡಿಯಿಂದ ಹಿಡಿದೆಳೆದು ಕಟ್ಟಿ ಹಾಕಿದರು!

ನಿನ್ನ ಭುಜಬಲಯಯ್ಯಾ ಕೇಸರಿರಾಯರಭಾ! ನನ್ನನ್ನು ಈ ಕಂಭದ ಸೆರೆಯಿಂದ ಒಮ್ಮೆ ಬಿಡಿಸಿದೆಯಾದರೆ ಹೊರೆ ಯುಟ್ಟೆನು. ಸಮಸ್ಥಾನಕ್ಕೆ ಬಂದಿತು! ಕಲಾಂ ಹಾಕಿತು! ಅದರೂ ಕೊಂಗ್ರೆಸ್ ಪಾರ್ಟಿಯವರಾಗಲೀ, ಸ್ವತಂತ್ರ ಪಕ್ಷದವರಾಗಲೀ ಕನಕರದೋರಲಿಲ್ಲ.

ಕಡಾಸ್ಟ್ ಜಹಾಂಗೀರ್ ಎಂಬ ಸಪುಣ ಬೇಟೆಗಾರ ಧೊಬ್ಬರು ಬಂದರು! ಬಂದು, "ಅಯ್ಯಾ ಪಿಕ್ಕರೇ, ಈ ಸಿಂಹವನ್ನು ಸದ್ಯಕ್ಕೆ ಬಿಟ್ಟುಬಿಡೋಣ! ಇದರಿಂದ ನನಗೆ ಯಾವ ಹಾನಿಯೂ ಇಲ್ಲವೆಂದು ಅಶ್ವಾಸನೆ ಯಿತ್ತರು. ಅಲ್ಲದೆ, 'Please dont knock down your head against a stonewall' (ಕಲ್ಲಿನ ಗೋಡೆಗೆ ತಲೆ ಬಡಿದುಕೊಳ್ಳಬೇಡಿ) ಎಂದು ಬುದ್ಧಿವಾದ ಹೇಳಿದರು.

ಇದನ್ನು ಕೇಳಿ ರೇಗಿತಯ್ಯಾ ಜಿನ್ನಾ ಸಾಹೇಬರಿಗೆ! ಕಿಡಿ ಕಿಡಿಯಾಗಿ ಎದ್ದು, ಪಿಚಿಪಿಚಿಯಾಗಿ ಸುಡಿಯ ಲಾರಂಭಿಸಿದರು. ಹೇಳಿದರು – "ಸ್ನೇಯರೇ, ನಿನ್ನ ಮೊಷ್ಟ ದೂರಿನಿಡಿಯಂದ ಹೊರಡುವ ಬುದ್ಧಿವಾತು ಗಳನ್ನೆಲ್ಲ ಅಲ್ಲಿ ಕಟ್ಟಿದಿ, ತಿಳಿಯುತೆ? ಈ ಸಿಂಹವು ಸಾಧಾರಣ ಪ್ರಾಣಿಯೆಂದು ತಿಳಿಯಬೇಡಿ! ಇದನ್ನು ಪುನಃ ಬಿಟ್ಟುಬಿಟ್ಟರೆ ಇಲ್ಲದ ಹಾವಳಿಯಾದೀತು! ನಿನ್ಮಂಥವರೆಲ್ಲ ಈ ಹಾವಳಿಯನ್ನು ಕಂಡು ನಗ ಬಹುದು! ಬಂದಹಾಗೆ ಹಿಂದೆಹೋಗಿ ನೋಡೋಣ!!

ಅಷ್ಟರಲ್ಲಿ ಗಲಾಟೆಯಾಯಿತು. ಜಹಾಂಗೀರ್ ಪಕ್ಷದ ಜೊಸಫ್ ಫೋರ್, ಸ್ಮಿಗ್ ಎಂಬವರೂ ಅಲ್ಲಿಗೆ ಬಂದರು! ಬಬಾರಿಸಿದರು; 'ಬಿಡಬೇಕು' 'ಬಿಡಕೂಡದು' ಎಂಬ ಎರಡು ಪಕ್ಷಗಳಾದುವು.

ಅಷ್ಟರಲ್ಲಿ ಒಬ್ಬರು "ವೋಟು ಎತ್ತುವ" ಎಂದರು. "ಸೈ" ಎಂದರು ಎಲ್ಲರು! ವೋಟು ಎತ್ತಲಾಯಿತು! ನೋಡುವುದೇನು? ೫೮ ಜನರು ಅದನ್ನು ಬಿಡಬೇ ಕೆಂದರು. ೫೩ ಜನರು ಬಿಡಕೂಡದೆಂದರು.

ಜಹಾಂಗೀರ್ ಪಾರ್ಟಿಯ ೫೮ ಜನರು ಬಿಡಬೇ ಕೆಂದವರು. ಕೊಂಗ್ರೆಸ್ ಪಾರ್ಟಿಯ ೫೩ ಜನರು ಬಿಡಬಾರದೆಂದವರು. ತಮ್ಮ ಜಯವನ್ನು ನೋಡಿ ಕೊಂಗ್ರೆಸ್ ಪಾರ್ಟಿಯವರು ಕೈಚಪ್ಪಾಳೆ ಹಾಕಿದ ರಯ್ಯ! ಜೈ ಜೈ! ಮ. ಗಾ—ಕೀ ಜೈ ಎಂದರು.

ಜಹಾಂಗೀರರ ಮುಖವು ಒಡನೆ ಕಪ್ಪಟ್ಟಿತು ಹುಳಿ ಯಂತೆ ಬಣ್ಣಗೆಟ್ಟಿತು! ಬಲ್ಲಾಣದ ಇಳಿದುಹೋದಂತು! ಕಣ್ಣು ಪಿಳಿಪಿಳಿಯಾಯಿತು! ಧೋರರ ಮನಸ್ಸು ಧಿಲ್ಲಿಯ ನಿರನೆಯ ಇಂಜಿನ್‌ನಂತೆ ಗಿರ್ರು ಎಂದಿತು! ನಿಗ್ಗರ-ಉದರರಾಜ್ಯವೆಲ್ಲಾ ಮಾಡಾಕ್ಕೋಣಭಿ!

ಇಂಡೋ—ಬ್ರಿಟಿಷ್ ವ್ಯಾಪಾರದ ಕಂಬವೊಂದರ ಬಿರುಕಿಯಿಂದ ಹೊರಬಾರದಷ್ಟು ಭಾರದ ವಸ್ತುವಾಂತೆ. ಆ ಕಂಭಕ್ಕೆ ಅಂತಹ ಸಿಂಹವನ್ನೇ ಕಟ್ಟಿಹಾಕಬೇಕಲ್ಲದೆ ಸಾಧಾರಣ ಪ್ರಾಣಿಗಳನ್ನು ಕಟ್ಟಿಹಾಕಿದರೆ ಅವು ಆ ಬಿರುಗಳನ್ನೇ ನುಗ್ಗುವುದಂತೆ.

ಅಯ್ಯಾ ಬೇಟೆಗಾರರೇ, ನಾಯ್ಸನ ಬಂದು ನೂಚನೆ ಯಿದೆ. ಕೇಳಿ ಆ ಸಿಂಹಕ್ಕೆ ಹುಚ್ಚೆನಿಗೊಮ್ಮೆ ಅವಸ ಪಾನ್ಸಗೊಮ್ಮೆ ಬಂದೊಂದು ಅಟ್ಟು ಹಾಕಿ. ಇದರ ಹೆಳೆಯುದ್ದ ಒಟ್ಟು ಶಬ್ದಗಳು ಬರದನ್ನೂ ಕಳಿಸಿ ಕೊಡಬೇಡಿ!

ರಾತ್ರಿ ಮಲಗಲು ಹೋಗುವ ಮೊದಲು ಒಂದು ಕಪ್ 'ಓವಲ್ಟಿನ್' ಸೇವಿಸಿದಿರೆಂದರೆ, ನಿಮಗೆ ಸುಖವಾದ—ಸ್ವಸ್ಥವಾದ ನಿದ್ರೆಯು ಲಭಿಸುವುದು. ಈ ನಿದ್ರೆಯು ನಿಮ್ಮ ಸ್ನಾಯುಗಳನ್ನು ಶಾಂತಗೊಳಿಸಿ, ಅದಕ್ಕೆ ಹೊಸ ಚೇತನದ ಬಲವನ್ನೀಯುವುದು. 'ಓವಲ್ಟಿನ್' ಬಳಲಿದ ದೇಹವನ್ನೂ ಮನಸ್ಸನ್ನೂ ಪುನರ್ರಚಿಸುತ್ತದೆ. ಬೆಳಿಗ್ಗೆ ಏಳುವಾಗ ನೀವು ನೂತನ ಚೇತನವುಳ್ಳವರಾಗುವಿರಿ.

ಓವಲ್ಟಿನ್ ಪೂರ್ಣವಾಗಿ ಶುದ್ಧವಾದ ಪೋಷಕೆಯ ವಸ್ತು; ಪ್ರಕೃತಿಸಿದ್ಧವಾದ ಬೆಳೆದ ಬಾರ್ಲಿ, ದನದ ಕೆನೆಹಾಲು, ವಿಶಿಷ್ಟವಾದ ಕೊಕ್ಕೊಗಳಿಂದ ತಯಾರಾಗಿದೆ. ಟೋನಿಕ್ ಆಹಾರವೂ, ಪಾನಕವೂ ಆದ ಇದನ್ನು ಬಿಡದೆ ಸೇವಿಸುತ್ತಾ ಬಂದಲ್ಲಿ ದೇಹಕ್ಕೆ ಶಕ್ತಿ ಬಲಗಳನ್ನು ಕೊಡುತ್ತದೆ.

ಓವಲ್ಟಿನ್

ಟೋನಿಕ್ ಆಹಾರ ಪಾನಕ—ಶಾಂತಮಯ ಸುಖನಿದ್ರೆಯನ್ನುಂಟುಮಾಡುತ್ತದೆ.

OVALTINE

ತಯಾರಿಯಲ್ಲಿ ಹಸ್ತಸ್ಪರ್ಶವಾಗಿಲ್ಲ.

ಎಲ್ಲಾ ಕೆಮಿಸ್ಟರಲ್ಲಿಯೂ, ಸ್ಟೋರುಗಳಲ್ಲಿಯೂ, ಬಜಾರುಗಳಲ್ಲಿಯೂ ದೊರೆಯುತ್ತದೆ.

ವಿಜಂಟ್:—ಜೇನ್ಸ್‌ರೈಟ್, 85 ಎ ಡಿವನ್‌ಷೈರ್ ಸ್ಟ್ರೀಟ್ ಕಲ್ಕತ್ತಾ. ಮತ್ತು ಮುಂಬಾಯಿ, ಮತ್ತು ಮದ್ರಾಸು.

OV/333

ಅಸ್ತಮ ಮತ್ತು ಪ್ರಸ್ರವಣ

ನಮಗಿದು ತೊಂದರೆ ಕೊಡುತ್ತದೋ! ಹಾಗಾದರೆ ನಮ್ಮ ಪ್ರಪಂಚ ವಿಖ್ಯಾತವಾದ ಮದ್ದನ್ನುಪಯೋಗಿಸಿ ಪೂರ್ಣ ಗುಣಲಾಭ. ಇಲ್ಲದಿದ್ದರೆ ಹಣ ವಾಪಾಸು. ಕ್ರಯ ರೂ. 2

ಕಮ್ಲಾ ವರ್ಕ್ಸ್, ಪಂಚಪೋಟಿ, ಬಂಗಾಳ.

ಚಾತುರ್ಕುಟ್ಟಿ ವೈದ್ಯರ

ವಿ. ಶೂಚಿಕಾ ಸಂಹಾರಿ
Vishuchika Samhari
(PILCO)

ಕೊಲೆರಕ್ಕೆ ದಿವ್ಯೌಷಧ! ಉಪಯೋಗಿಸಿದರೆ ಗುಣ ಖಾತ್ರಿ! ಕ್ರಯ ಡಬ್ಬಿ 1ಕ್ಕೆ ರೂ. 1–0–0.

ಗುಹ್ಯರೋಗ ನಿವಾರಿಣೀ ತೈಲ
Anti-Venereal Oil
(A.-V. Oil)

ಗುಹ್ಯರೋಗ ನಿವಾರಣೆಗೆ ಆಮೋಘ ದಿವ್ಯ ಔಷಧಿ. ಕುಟುಂಬ ಪಾರಂಪರ್ಯದ ಪ ತಲೆಯಿಂದ ಕೋಗುವ ಗುಣ ವಾಗುವುದು. ನರೋಗಿಗಳಾ ಹೊಟ್ಟೆಯ ಕುಡ್ಡಿಗಾಗಿ ಜುಲಾಪನ ಮುದ್ದಿಸಂತೆ ತೆಗೆದುಕೊಳ್ಳಬಹುದು.

8 ಡಿಸ್ಟ್ರಾಗಳ ಬಾಟ್ಲಿ 1ಕ್ಕೆ ರೂ. 2—8—0.

ಕೆ. ವಿ. ಕೃಷ್ಣನ್,
ಕಲ್ಲಾಯ್ಕು ಮಲಬಾರ್,
ಅಳವಾ

ಬಾಲ್ ಸಿ. ಮತ್ತು ಕಂಜೆನ್ಸ್‌ಕ್ಕೆ ಔಷಧಿ

ಈಗಲೇ ತಯಾರಾಗಿದೆ! ಬೇಗನೆ ಕೊಂಡುಕೊಳ್ಳಿರಿ!! ತ್ವರೆ ಪಡಿರಿ!!

ಎಮ್. ಗಣಪತಿರಾವ್ ಏಗಳ್, ಇವರಿಂದ ರಚಿತವಾದ

ಸೋಸಿಯೋಲೊಜಿ
ಅಥವಾ
ಸಮಾಜಶಾಸ್ತ್ರ.

ಹಾಯರ್ ಎಲಿಮೆಂಟರಿಗ್ರೇಡಿನ ವಿದ್ಯಾರ್ಥಿಗಳಾದ ಉಪಾಧ್ಯಾಯರಿಗೂ ಉಪಾಧ್ಯಾಯಿನಿಯರಿಗೂ ಅತ್ಯುಪಯುಕ್ತವಾದ ಪುಸ್ತಕ.

ಟ್ರೈನಿಂಗ್ ಶಾಲೆಗಳ ಸಿಲೆಬಸ್ ಪ್ರಕಾರ ಬರೆಯಲ್ಪಟ್ಟಿದ್ದು.

ಪಾಸಗಿಯಾಗಿ ಹಾಯರ್ ಎಲಿಮೆಂಟರಿ ಗ್ರೇಡ್ ಪರೀಕ್ಷೆಗೆ ಹೋಗುವ ಲೋವರ್ ಎಲಿಮೆಂಟರಿ ಗ್ರೇಡಿನ ಉಪಾಧ್ಯಾಯರಿಗೆ,—ಯಾರ ಸಹಾಯವೂ ಇಲ್ಲದೆ ಕಲಿಯಲು ಅತ್ಯುಪಯೋಗಕರವಾದ ಪುಸ್ತಕ. ಶಾಲಾ ಮತ್ತು ಸರಕಾರೀ ಪರೀಕ್ಷೆಯ ಪ್ರಶ್ನೆಗಳನ್ನು ಒಳಗೊಂಡಿದೆ.

284 ಪುಟಗಳುಳ್ಳದ್ದು, ಸುಂದರವಾದ ಬೈಂಡು, ಮುದ್ದಾದ ಮುದ್ರಣ.

ಕ್ರಯ ಒಂದು ರೂಪಾಯಿ ಮಾತ್ರ.

ಪುಸ್ತಕ ದೊರೆಯುವ ವಿಳಾಸ:—

ಶಾರದಾ ಭೂಷಣಾಸ್ಥಿ, ರಥಬೀದಿ ಮಂಗಳೂರು

ಪತ್ರಿಕಾ ಪ್ರಪಂಚ.

ಹುಟ್ಟುವಾಗಲೇ ಸಶ್ರದ್ಧ ಶಿಶುವನ್ನು– ಬಡವರಿಗಾಗಿ ಬಡವನೊಬ್ಬನ ದಾನ. ಸಾಸಿವೆಯ ಗುಣಗಳು. ಅಮೇರಿಕಾ ಸ್ತ್ರೀಯೊಬ್ಬಳ ಜ್ಯೋತಿಷ್ಯ! ಧ್ರುವತಾರೆಯಾರು. ಸಯಾಮಿನ ಮಹತ್ವ. ಗೀತೆಯೂ ಸ್ವರಾಜ್ಯವೂ.

ಅಮೇರಿಕಾ ಸ್ತ್ರೀಯೊಬ್ಬಳ ಜೋತಿಷ್ಯ!

"ಈ ಕೆಳಗಿನ ಘಟನೆಗಳು ಮುಂದಕ್ಕೆ ಸಂಭವಿಸುವುದೆಂದು ಅಮೇರಿಕಾದ ಪ್ರಖ್ಯಾತ ಜ್ಯೋತಿಷ್ಯೆಯೊಬ್ಬಳು ಹೇಳುತ್ತಿರುವಳು. ಇವಳ ನೋದರಿನ ಭವಿಷ್ಯನ್ನುದಿಗಳು ಸತ್ಯವಾಗಿ ಪರಿಣಮಿಸಿವೆ.

೧. ಭಂಗಾದ ಬದಲಾಗಿ, ಅದಕ್ಕಿಂತ ಹೆಚ್ಚಿನ ಬೆಲೆ ಬಾಳುವ ಮತ್ತು ಅದಕ್ಕಿಂತ ಹೆಚ್ಚಿನ ಗುಣವುಳ್ಳ ಒಂದು ಲೋಹವು ಈ ಸೃಷ್ಟಿಯಲ್ಲಿ ನಿರ್ಮಾಣ ಹೊಂದುವುದು.

೨. ಬ್ರಿಟನಿನ ಯುವರಾಜನಿಗೆ ವಿವಾಹವಾಗುವುದು.

೩. ಕಿಂಡ್‌ಬರ್ಗ್ ಮಗುವನ್ನು ಕೊಲೆಗೈದ ಹೌಪ್ಟನ್ ಎಂಬವನಿಗೆ ಮರಣಶಿಕ್ಷೆಯಾಗುವುದು.

೪. ಇಂಗ್ಲಾಂಡಿನಲ್ಲಿ ಸರ್ವತೋಮುಖವಾದ ಜನಾವಳಿಯು (Genral Election) ನಡೆಯುವುದು.

೫ ಮನುಷ್ಯನ ಆಯುಸ್ಸಿನ ಅವಧಿಯು ೧೦೦ರಿಂದ ೧೫೦ರ ವರೆಗೆ ಹೆಚ್ಚುವುದು.

'Sunday Times'

ಧ್ರುವತಾರೆಯಾರು.

"ಅಯಮಾಣೀ ಟಾಕೀಸ್" ಕಂಪೆನಿಯವರು (ಪಾದರಸ) "ಧ್ರುವ ಕುಮಾರ್" ಎಂಬ ಚಲಚಿತ್ರವನ್ನು ರಚಿಸಿರುವರು. ಪರಮ ಭಾಗವತನಾದ ಧ್ರುವನು ಏದಾರು ವರ್ಷದವನಿರುವಾಗಲೇ ಬಿಳ್ಕಯ್ನಾದ ಸಿರಿಬಿಯ ತಿರಸ್ಕಾರವನ್ನು ಸಹಿಸಲಾರದೆ, ಅಡವಿಗೆ 'ಹೋಗಿ ನಾರಾಯಣನನ್ನು ಕುರಿತು ತಪಸ್ಸುಮಾಡಿ, ಅತನ ಅನುಗ್ರಹದಿಂದ ಧ್ರುವಪದವಿಯನ್ನು ಪಡೆದನೆಂಬುದು ಈ ಚಿತ್ರದ ವಸ್ತು. ಹಿಂದೆ ನಾಟಕಶಿರೋಮಣಿಗಳು ಅಡಚಿತ್ತಿದ್ದ ಕಾಲದಲ್ಲಿ ಈ ನಾಟಕವನ್ನು ನೋಡಿ ಸಂತೋಷಪಟ್ಟವರು ಲಕ್ಷೋಪಲಕ್ಷ ಮಂದಿ ಇರುವರೆಂದೊಡನೆ ಈ ಕತೆಯು ಎಷ್ಟು ಚಿನ್ನಾದ ಚಿತ್ರವಾಗಿ ಪುನೆಂಬುದನ್ನು ಪ್ರತ್ಯೇಕಿಸಬೇಕಾಗಿಲ್ಲ. ಶ್ರೀಯುತ ದೇವಧರ ಅವರು ಈ ಕತೆಯನ್ನು ಮೂಲಕ್ಕೆ ವಿಶೇಧವಿಲ್ಲದಂತೆ ಆಗಾಗ ಕಾಲಕ್ಕೆ ಸವರ್ಪಕವಾಗಿದ್ದಾರೆಯೆ, ಪಾತ್ರಗಳ ಪ್ರಭಾವವು ಪರಿಣಾಮಕಾರಿಯಾಗುವಂತೆ ಚಿತ್ರರೂಪಕ್ಕಾಗಿ ಬರೆದಿದ್ದಾರೆ. ಶ್ರೀಯುತ ಅಭಿನಯ ವಿಶಾರದ ಬಿ. ನಾಗೇಶರಾಯರು, ಸುರಿರಾಯರು, ದ್ವಾರಕಾನಾಥ B. Sc., ಇವರುಗಳು ಉತ್ತಾನುಪಾದ, ಕಪಿಂಜಲ, ನಾರದ ಮೊತ್ತಾದ ಗಳನ್ನೂ, ಶ್ರೀಮತಿ ಕನಕಲಕ್ಷ್ಮಿ, ದೇವಿ M. A., ಶ್ರೀದೇವಿಯವರು, ಸುನೀಪಾದೇವಿಯವರು, ಬಿ. ಪದ್ಮಾ ಇವರುಗಳು ಸುನೀತಿ, ಸುರುಚಿ, ಕುಮುದಿನಿ, ನೇತ್ರವತಿಯವರ ಪಾತ್ರಗಳನ್ನೂ, ದಿ. ಶ್ರೀ ವರದಾಚಾರ್ಯರ ವರ ಮೊಮ್ಮಗನಾದ ಚಿ. ಮುತ್ತುವು ಧ್ರುವ, ಶ್ರೀಯುತ ಎಚ್. ಕೆ. ಶೇಷಗಿರಿರಾಯರು ಗೀತಾಚಾರ್ಯನ ಭಾರವನ್ನು ವಹಿಸಿರುವರು. ಮೇಲಿನ ಹೆಸರುಗಳೆಲ್ಲ ಕರ್ನಾಟಕದಲ್ಲಿ ಚೆನ್ನಾಗಿ ಪರಿಚಯಗಳಾಗಿರುವುದರಿಂದ ಅವರವರು ವಹಿಸಿರುವ ಭಾರವನ್ನು ಅವರವರು ಸರ್ವತೋಮುಖವಾಗಿ ನಿರ್ವಹಿಸಬಲ್ಲರು ಎಂಬ ನಂಬಿಕೆಯು ಎಲ್ಲರಿಗೂ ಇರುವುದರಿಂದ ಚಿತ್ರವು ಎಷ್ಟು ಶ್ಲಾಘ್ಯವಾಗಿರುವುದು ಎಂಬುದನ್ನು ಹೇಳಬೇಕಾಗಿಲ್ಲ. ಈ ಚಿತ್ರಕ್ಕೆ ಸಂಬಂಧಿಸಿರುವವರೆಲ್ಲರೂ ದಿವಂಗತ ಆಚಾರ್ಯರವರ ಸಂಬಂಧವನ್ನು ಒಂದಲ್ಲ ಒಂದು ರೀತಿಯಾಗಿ ಪಡೆದಿದ್ದು ಅವರಲ್ಲಿ ಭಕ್ತಿಯನ್ನಿಟ್ಟುಕೊಂಡಿರುವವರು ಮತ್ತು ವರದಾಚಾರ್ಯರ ಸ್ಮಾರಕ ನಿಧಿಗೆ ಈ ಚಿತ್ರ ನಿರ್ಮಾಪಕರು ಮಾಡುವ ಮುಕ್ತಹಸ್ತ ಸಹಾಯದ ಪ್ರಲೋಭನದಿಂದ ಈ ಚಿತ್ರದಲ್ಲಿ ಭಾಗವಹಿಸುವುದಕ್ಕೆ ಒಪ್ಪಿರುವರು ಎಂಬ ವಿಶೇಷಾಂಶವನ್ನು ಮಾತ್ರ ಸೂಚಿಸಿ ಈ ಚಿತ್ರವು ವಿಶ್ವತೋಮುಖವಾಗಿ ಯಶಸ್ವಿಯಾಗಲಿ ಎಂದು ಕೋರುವೆವು.

'ರಂಗಭೂಮಿ'

ಸಯಾಮಿನ ಮಹತ್ವ.

ಸಯಾಂ ದೇಶವು ವಿಸ್ತಾರವಾಗಿರುವ ಆಸಿಯಾ ಖಂಡದ ಒಂದು ಅಮೂಲ್ಯ ರತ್ನವಾಗಿದೆ. ಅದರ ಜನ ಸಂಖ್ಯೆಯು ೧೫ ಕೋಟಿಯಂತಿಗಿ ಎಂದರೆ ಹೈದರಾಬಾದ (ನಿಜಾಂ) ರಾಜ್ಯದಷ್ಟಿರುವುದು. ಅಲ್ಲಿ ನೂರಕ್ಕೆ ೧೪ ಜನರು ಬೌದ್ಧಧರ್ಮಾವಲಂಬಿಗಳಾಗಿರುವರು. ೩ ಲಕ್ಷ ಮುಸಲ್ಮಾನರೂ, ೫೦ ಸಾವಿರ ಕ್ರೈಸ್ತಧರ್ಮಾವಲಂಬಿಗಳೂ ಇರುವರು. ಪ್ರಾಚೀನ ಕಾಲದಲ್ಲಿ ಹಿಂದೂಸ್ಥಾನಕ್ಕೂ ಈ ದೇಶಕ್ಕೂ ವಿಶೇಷ ಸಂಬಂಧವಿದ್ದುದರಿಂದ ಈಗಲೂ ಈ ದೇಶದ ವಿಚಾರದಲ್ಲಿ ಹಿಂದೂಸ್ಥಾನಕ್ಕೆ ಆದರವಿರುವುದು. ಸಯಾಮಿನ ಹಳೆಯ ಪ್ರಸಿದ್ಧಗಳೆಲ್ಲ ಲಾಪುರಿ, ಪ್ರಾಚೀನಪುರಿ, ಅರಣ್ಯಪ್ರದೇಶ ಎಂಬುದಾಗಿ ಸಂಸ್ಕೃತ ಮಯವಾಗಿರುವುದು. ಧಾನುವ ಕಾಲದಲ್ಲಿ ಅಶ್ವಮೇಧ ಯಾಗವಾದಾಗ ಅಶ್ವಮಧದ ಕುದುರೆಯು ಈ ದೇಶದಿಂದ ಬಂದಿತ್ತೆಂದು ಹೇಳುವರು. ಭಾರತೀಯ ಶಸ್ತ್ರ ಮತ್ತು ಕಲೆಗಳು ಈ ಕಾಲದಲ್ಲಿ ಸಯಾಮಿನಲ್ಲಿ ವಿಶೇಷ ಪ್ರಚಾರದಲ್ಲಿದ್ದುವು. ಮುಂದೆ ಹಿಂದೂದೇಶದಲ್ಲಿ ಬೌದ್ಧ ಮತವು ಉದಯಿಸಿದಾಗ ಅದರ ಪ್ರಚಾರವೂ ಸಯಾಮಿನಲ್ಲಿ ವಿಶೇಷವಾಗಿ ಜರುಗಿತು. ಸಯಾಮಿನ ಅಂತಃಪಲಜ ಮತ್ತು ಆಸ್ಥಾತೋಷಗಳು ಶಮನವಾಗಲು ಬೌದ್ಧಧರ್ಮದಿಂದ ವಿಶೇಷ ಸಹಾಯವಾಯಿತು. ಸಯಾಮಿನ ಪ್ರಾಚೀನ ದೇವಾಲಯಗಳನ್ನು ನೋಡಿದರೆ ಶಿಲ್ಪದಲ್ಲಿ ಹಿಂದೂ ಮತ್ತು ಬೌದ್ಧ ಸಂಸ್ಕೃತಿಗಳ ಸುಂದರವಾದ ಸಮಿಲನವು ಕಂಡುಬರುವುದು. ಶಲಾಕೋಲ್ಕಗಳ ವಿಚಾರದಲ್ಲಿ ಸಯಾಮಿನ ಕೀರ್ತಿಯು ವಿಶೇಷವಾಗಿ ಹಬ್ಬಿರುವುದು. ಸಯಾಮಿನಲ್ಲಿ ಕೇವಲ ಹಳ್ಳಿಬ್ಬಗಳಿಗೆ ಹೋಗಿ ನೋಡಿದರೂ ಅಲ್ಲಿ ದೇವಾಲಯ, ಪಾಠಶಾಲೆ, ಸಮಾಜ ಮಂದಿರ ಇವೇ ಮೊದಲಾದ ದೊಡ್ಡ ನಕಾಶೆ ಕೆಲಸದ ಪ್ರೌಢವಾದ ಕಟ್ಟಡಗಳು ಕಂಡುಬರುವುವು. ಅಲ್ಲಿ ಒರಟಾಗಿ, ಅಳತೆ ಏನಾ ಕಟ್ಟಿದ ಕಟ್ಟಡಗಳೇ ಕಾಣುವುದಿಲ್ಲ. ಸಯಾಮಿನ ರಾಜಧಾನಿಯಾದ ಬ್ಯಾಂಕಾಕ್ ನಗರದಲ್ಲಿ ಕಂಡುಬರುವ ಶಿಲ್ಪಕಲೆಯ ಪಾದರಿಯ ಎದುರಿಗೆ ಜಗತ್ತಿನ ಯಾವ ಶಿಲ್ಪವೂ ನಿಲ್ಲಲಾರದು. ಮುಖ್ಯವಾದ ಅರಮನೆಯಲ್ಲಿ ಅತ್ಯಂತ ಅಮೂಲ್ಯವಾದ ಶಿಲೆಯು ಬುದ್ಧ ಮಾರ್ತಿಯು ಇರುವುದು. ಅದರ ದರ್ಶನಕ್ಕೆ ಹೊಗುವಾಗ ಒಳಗಿನ ಪರಿಗೆ ಪಾದರಕ್ಷೆ ಗಳನ್ನು ಹಾತಿಕೊಂಡೇ ಹೋಗಬಹುದು. ಅರಮನೆಯಲ್ಲಿ ರಾಮಾಯಣ ಪುರಾಣಾಭಾರತಗಳ ಕಥಾಪ್ರಸಂಗಗಳನ್ನೊಳಗೊಂಬಿಡಿ ಅನೇಕ ಚಿತ್ರಗಳನ್ನು ಬರೆದಿರುವರು. ಅಲ್ಲಿ ದೇವಾಲಯಗಳು ಹಿಂದೂಸ್ಥಾನದ ನೆನಪ್ಪನ್ನು ತರುವಾಗಿವೆ. ಸಯಾಮಿನ ಜೆಂಗಸರು ಕೂದಲನ್ನು ಕೇವಲ ಸಣೀನ ಯುರೋಪಿಯನ್ ಪದ್ಧತಿಗನುಸಾರ ನಾಗಿ ಕತ್ತರಿಸಿರುವರು. ಆದರಿಂದ ಇಂಗ್ಲೆಂಡಿನವರ ಸ್ವಾತಿಶೆಯು ಈ ದೇಶದ ಮೇಲೆ ವಿಶೇಷವಾಗಿ ಮುದ್ರಿತ ವಾಗಿದೆಯೆಂದು ಯಾರಾದರೂ ಹೇಳಬಹುದು. ಆದರೆ ವಸ್ತುಸ್ಥಿತಿಯು ಹಾಗಿಲ್ಲ. ಬಹುಕಾಲಕ್ಕೆ ಹಿಂದೆ ಬ್ರಹ್ಮ (ಬರ್ಮಾ) ದೇಶಕ್ಕೂ ಸಯಾಮಿಗೂ ಯುದ್ಧವಾದಾಗ ಸ್ತ್ರೀಯರನ್ನು ಯುದ್ಧದಲ್ಲಿ ಶತ್ರುಗಳಿಂದ ರಕ್ಷಿಸಿಕೊಳ್ಳುವುದೇ ಸಯಾಮಿನವರು ಸಶ್ರದ್ಧಾಮಿದಲ್ಲಿ ಅಲ್ಲಿ ಸ್ತ್ರೀಪುರುಷರ ಉಡುಪು ಗಳಲ್ಲಿ ವಿಶೇಷ ಭೇದವಿಲ್ಲದುದರಿಂದ ಕೇವಲ ಕೂದಲನ್ನು ಕತ್ತರಿಸುವುದರಿಂದ ಸ್ತ್ರೀಯರು ಪುರುಷರಂತೆ ಕಾಣುವರೆಂದು ಅವರಿಗೆ ತೋರಿತು. ಆಗ ಸ್ತ್ರೀಯರು ಕೂದಲನ್ನು ಕತ್ತರಿಸಬೇಕೆಂದು ನಿರ್ಣಯಿಸಿದರು. ಈ ಪದ್ಧತಿಯೂ ಈಗಲೂ ಅಲ್ಲಿ ಆದರಣೆಯಲ್ಲಿರುವುದು. ಈಗ ಯೂರೋಪಿಯನ್ ಸಂಸ್ಕೃತಿಯ ಪರಿಣಾಮವು ಸಯಾಮಿನ ಜನರ ಮೇಲೆ ಉಂಟಾಗಲಾರಂಭವಾಗಿದೆ. ಹಿಂದಿನ ಸಂಸ್ಕೃತಿಯು ಬೆಲುಬಿದಿದಲೂ, ಪ್ರಕೃತಿಪ್ರಭುತ್ವದ ಪ್ರಬಲತ್ವದಿಂದಲೂ ಸಯಾಂ ದೇಶವು ಜಪಾನಿನಂತೆ ಮುಂದೆ ನುಗ್ಗಿ ತನ್ನ ವರ್ಚಸ್ಸನ್ನು ತೋರಲು ಆತುರ ಗೊಂಡಿದೆ.

'Modern Review'

ಗೀತೆಯೂ ಸ್ವರಾಜ್ಯವೂ.

ಶ್ರೀ ಆಲೂರು ವೆಂಟರಾಯರು ಬರೆದ ಲೇಖನದ ಉತ್ತರಾರ್ಧ: ಕೌರವರು ಶಸ್ತ್ರಾಸ್ತ್ರಗಳಿಂದ ಸಜ್ಜಾರವದರು, ಅಧಿಕಾರದಲ್ಲಿ ಆರೂಢರಾದವರು, ಪ್ರಚಂಡ ಶಕ್ತಿಯುಳ್ಳವರು. ಇಂಥವರ ಸಂಗಡ ಸಂಧಾನದ ಮಾತುಗಳನ್ನಾಡುವಾಗ ಬಲ ಎಷ್ಟರವರಿಂದ ಮಾತ ನಾಡಬೇಕು. ಎಂಥ ಆಪದ್ಧಾಪದ ಪ್ರಸಂಗಕ್ಕೆ ಒಡಗಿದರೂ ಅವರನ್ನು ಎಂದೆಂದಿಗೂ ಸಿಟ್ಟಗೆದ್ದಿಸುವ ಪ್ರಸಂಗವನ್ನು ಕರಬಾರದು ಎಂದೇ ಮುಂತಾದ ವಾಕ್ಯಗಳನ್ನು ನಾವು ಅಕ್ಷರಶಃ ಬಲರಾಮನ ಭಾಷಣದಲ್ಲಿ ಕಾಣಬಹುದು.

ಉದ್ಯೋಗಪರ್ವದ ಪ್ರಾರಂಭಕ್ಕೆ ವರ್ಚಸಿದ ಈ ವಿರಾಟಸಭೆಯೆಂದರೆ ವಿರಾಟನಾದ ನನ್ನು ರಾಷ್ಟ್ರೀಯ ಸಭೆಯೆ. ಅದೇ ಮೇರೆಗೆ ಬಲರಾಮನ ಭಾಷಣವು ಮುಗಿಯುವುದರೊಳಗೆ ಸರ್ವನೆ ಎನ್ನು ಹಾಸ್ಯಭರಿತ ಭಾಷಣವನ್ನು ಮಾಡಿದ ಸಾತ್ಯಕಿಯು ಭಾಷಣವೆಂದರೆ ಕಾಂಗ್ರೆಸಿನ ಜಾತ್ಯತ್ಯ ತುಚುಕೊಟ್ಟನು ಮಾಡಿದ ಅತ್ಯಂತ ಸ್ಫೂರ್ತಿದಾಯಕ ಭಾಷಣವೇ ಎಂದು ನಿಸಂದೇಹವಾಗಿ ಹೇಳಬಹುದು. ಇತ್ತೀಚೆಗೆ ನಾತ್ಮ ಕಿಯ ಭಾಷಣವನ್ನು ಅನೇಕಯಿಸಿದ್ದಾದ ಮುದಿಯಾಂತ ಸುಖ ಭಾಷಣವು ಯಾವ ತೆಗಿನ ತರುಣನ ಬಾಯಿ ದಿಂದಲೂ ಬಂದಿಲ್ಲವೆಂಬುದು ಅದನ್ನೋದಿದರೆ ಗೊತ್ತಾಗುವುದು. ಅದರ ವಿಸ್ತಾರವನ್ನು ಈ ಚಿಕ್ಕ ಲೇಖನದಲ್ಲಿ ಕೊಡುವುದು ಶಕ್ಯವಲ್ಲ. ಅಲ್ಲದೆ ಅದರ ರೆಚಿಯು ಹೊಡುಹೋಗುತ್ತದೆ ಅದಕಾರಣ ವಾಚಕರು ಅದನ್ನು ಮೂಲದಲ್ಲಿಯೇ ಓದಬೇಕು.

ಅದರ ತಾತ್ಪರ್ಯವು ಇಷ್ಟೇ. ಬಲರಾಮನು ಶುದ್ಧ ಹೇಡಿಯು. ಅದಕಾರಣವೇ ಅವನ ಬಾಯಿಯಿಂದ ಅಂಥ ಹೇಡಿತನದ ಮಾತುಗಳು ಬರುತ್ತವೆ. ಬಲರಾಮನೂ ಕೃಷ್ಣನೂ ಒಂದೇ ಕುಲದಲ್ಲಿ ಹುಟ್ಟಿದ ಅಣ್ಣ ತಮ್ಮಂದಿರೇನೋ ಸರಿ. ಆದರೆ ಒಂದೇ ಗಿಡದಲ್ಲಿ ಹುಟ್ಟಿದ ಒಂದು ಟೊಂಗೆಯಲ್ಲಿ ರಸವಿಹೀನವಾದ ಹಣ್ಣು ಗಳು ಜೊಪದುವಂತೆ ಕೃಷ್ಣನ ಬಾಯಿಯಿಂದ ಮುಕ್ತಿ ಸಂಧ ಮಾತುಗಳು ಉದುರುತ್ತವೆ. ಬಲರಾಮನ ಬಾಯಿಯಿಂದ ಕೊಳಕುಮಾತುಗಳು ಕೊಂಡುತ್ತವೆ. ಆ ಹೇಡಿಯ ಹಾಗೆ ಮಾತಾಡುವುದೇನೂ ಆಶ್ಚರ್ಯವಲ್ಲ. ಆದರೆ ಈ ಸಧೆಯಲ್ಲಿ ಅಂಥ ಮಾತುಗಳನ್ನಾಡಿ ಗೊಟ್ಟದ್ದು ಮಾತ್ರ ಬಹಳ ಆಶ್ಚರ್ಯ. ಪಾಂಡವರ ಸಿಂದೆಯನ್ನು ಕವಿಯಾಂದಾದರೂ ಹೇಗೆ ಕೇಳುತ್ತೀರಿ ಪಾಂಡವರೇನೋ ತಮ್ಮ ಹೇಡಿತನದಿಂದ ರಾಜ್ಯವನ್ನು ಕಳೆದುಕೊಂಡರಂತೆ. ಪಾಂಡವರು ಒಳ್ಳೆಯವರು, ಸರಳ ಸ್ವಭಾವದವರು. ಅವರು ತಮ್ಮ ಮನೆಯಲ್ಲಿ ತಾವು ಸ್ವತ್ಯವಾಗಿ ಒಬ್ಬರೆ ಗೋಜಿಗೆ ಹೋಗದೆ ತಮ್ಮ ಸ್ವತ್ಯ ತಾವು ಕುತಿದ್ದರು. ಅಂಥವರನ್ನು ನೋಜಕ್ಕೆ ಕರೆದು ದ್ಯೂತಕ್ಕೆ ಕರೆದೊಯ್ದದ್ದು ಸರಳತನದಿಂದಲ್ಲ, ಕುಯುಕ್ತಿಗಳಿಂದ. ಸೋಲಿಸಿದ್ದು ಕಪಟತನದಲ್ಲವೇ? ಅಂದಬಳಿಕ ಪಾಂಡವರದೇನು ಅನ್ಯಾಯ? ಅವರು ಸರಳರಿದ್ದದ್ದೇ ತಪ್ಪೇ?

ಒಂದುವೇಳೆ ಕೌರವರು ಸರಿಯಾದ ಮಾರ್ಗದಿಂದಲೇ ರಾಜ್ಯವನ್ನು ನೆದ್ದರೆಂದು ತಿಳಿದರು. ಆದರೆ ಹನ್ನೆರಡು ವರ್ಷ ವನವಾಸ; ಒಂದು ವರ್ಷ ಅಜ್ಞಾತವಾಸವನ್ನು ಅನುಭವಿಸಿ ಕಣವನ್ನು ಪೂರ್ಣಮಾಡಿದ ಬಳಿಕ ನಮಗೆ ಸ್ವರಾಜ್ಯಕ್ಕೆ ಹಕ್ಕೇ ಇರುವುದಲ್ಲವೆ? ಅಂಗಲಾಚಿ ಬೇಡುವುದೇಕೆ? ಇನ್ನು ಪಾಂಡವರು ನಿಜಸ್ವರೂಪಿ ಬಡಿಸ ವರ್ಷಗಳಾಗಿ ಹೋಗಿದ್ದರಿಂದ ಅವರು ಅಂಗಲಾಚಿ ಬೇಡಿದೆ ಗತ್ಯಂತರವಿಲ್ಲವೆಂದು ಅನ್ನಬೇಕು. ಆದರೆ ಲ್ಲಿಯವಿ ಹುರುಳಿಲ್ಲ. ಏಕೆಂದರೆ, ಸ್ವತ್ಯ ಶಕ್ತಗಳು ಕೈಬಿಟ್ಟುಹೋದಬೇಕಾದರೆಯೆ? ಸ್ವಾಧಿಮಾನವು ಮಾತ್ರ ಕೈಬಿಟ್ಟುಹೋಗಿರುವುದಿಲ್ಲ. ಅತ್ಯಾಧಿಮಾನದ ಬಲ ದಿಂದ ಕೌರವನ್ನು ಬಗ್ಗುಬಡಿಯುವುದು ಸಾಧ್ಯವಿದೆ ಇದೇ ಮುಂತಾದ ಕೂರತನದ ವಿಚಾರಗಳನ್ನು ಸಾತ್ಯಕಿಯು ಅಡಿದ್ದನ್ನು ನೋಡಿದರೆ, ಶ್ರೀ ವೇದವ್ಯಾಸರ ವಿಶಾಲವಾದ ಬುದ್ಧಿವ್ಯಾಪಕತ್ವದ ವಿಚಾರ. ಅಗಾಧವಾದ ಅವರ ಮನುಷ್ಯಸ್ವಭಾವದ ಸೂಕ್ಷ್ಮ ನಿರೀಕ್ಷಣ ಇವೇ ಮುಂತಾದುವುಗಳ ಬಗ್ಗೆ ನಮಗೆ ಅವರಲ್ಲಿ ಅತ್ಯಂತ ಪೂಜ್ಯಭಾವವು ಉಂಟಾಗದೆ ಇರದು. ಅವರು ತ್ರಿಕಾಲದರ್ಶಿಗಳೆಂಬುದಕ್ಕೆ ಇದೊಂದೇ ಮಹಾಭಾರತದ ಅಧ್ಯಾಯವು ಸಾಕಾಗಿದೆ. ಇರಲಿ. ಮುಂದೆ ದ್ರುಪದಾದಿ ಹಿರಿಯರು ಸಾತ್ಯಕಿಯನ್ನು ಶಾಂತಗೊಳಿಸಿ ಅತನ ಸ್ಫೂರ್ತಿಯನ್ನು ಯೋಗ್ಯ ಮಾರ್ಗಕ್ಕೆ ಹಚ್ಚಿರುವರು.

ಈ ಮಹಾ ಭಾರತದ ಹಿಂದಿನ ಕಥೆಯನ್ನು ಓದಿದ ಬಳಿಕವೇ ಗೀತೆಯನ್ನು ಅಭ್ಯಾಸಮಾಡಬೇಕು. ಆಂದರೆ ಮಾತ್ರವೇ ಗೀತೆಯು ಉಪದೇಶದ ಮರ್ಮವು ತಿಳಿಯು ವುದು. ಒಂಸೆಯು ಹೆಚ್ಚಿನದ್ದೋ ಅಹಿಂಸೆಯು ಹೆಚ್ಚಿನದ್ದೋ ಎಂಬ ಪ್ರಶ್ನೆಯನ್ನು ಕೆಲವರು ಎತ್ತುತ್ತಾರೆ. ಅದರ ಇದರಲ್ಲಿ ಹೆಚ್ಚಿನದು ಕಡಿಮೆಯುದು ಎಂಬ ಪ್ರಶ್ನೆ ಇಲ್ಲ. ಆಯಾ ಕಾಲಕ್ಕೆ ಆಯಾ ಪರಿಸ್ಥಿತಿಗೆ ತಕ್ಕದ್ದು ಯಾವುದೆಂಬುದನ್ನು ಆಯಾ ಕಾಲದ ಮುಖಂಡರು ನಿಶ್ಚಯಿಸತಕ್ಕದ್ದು. ಗೀತೆಯ ಉಪದೇಶದ ಮುಂಚೆ ಅಹಿಂಸೆಯ ಪ್ರಯೋಗವು ಪೂರ್ಣವಾಗಿ ಮಾಡಲ್ಪಟ್ಟತೆಂಬುದನ್ನು ಅನೇಕರು ಮರೆಯುತ್ತಾರೆ. ದ್ರೌಪದಿ ವಸ್ತ್ರಾಪಹರಣ ಕಾಲದಲ್ಲಿ ಹೆಂಡತಿಯ ಸೀರೆ ಗಳನ್ನು ಸೆಳೆಯುವಾಗ ಭೀಮಸೇನಾದಿಗಳು ಕೂಡಾ ತಾಳ್ಮೆ ಯನ್ನು ತಾಳ್ದು, ಅಹಿಂಸೆಯ ಪರಮಾವಧಿಯಲ್ಲಿದ್ದ ರಲ್ಲೇ? ಸಾರಂ, ಗೀತೆಯ ಉಪದೇಶಗಳ ಮರ್ಮವು ಅಲ್ಲಿಂದಲ್ಲಿ ಬರೆಯಿಸಿದರೆ ಹಿಂದಿನ ಯಾವತ್ತು ಕಥೆಯ ಮರ್ಮವನ್ನೂ ಅರಿತಿರಬೇಕಾಗುತ್ತದೆಯೆಂಬುದನ್ನು ಸೂಚಿಸು ವುದು ಈ ಲೇಖನದ ಉದ್ದೇಶ.

'Udaya.'

ಹುಟ್ಟುವಾಗಲೇ ಸಶ್ರದ್ಧ ಶಿಶುವನ್ನು–

ಅದು ಹುಟ್ಟಿದ ಒಂದು ಗಂಟೆಯ ನಂತರ, ಅದಕ್ಕೆ ಪ್ರಾಣವಿಸ್ಸಿಕ್ಕೆ ಒಂದು ವಿಚಿತ್ರ ವಾರ್ತೆಯು 'ಮಿಂಚಿಸ್ಟರ್ ಗಾರ್ಡಿಯನ್' ಎಂಬ ಪತ್ರಿಕೆಯಲ್ಲಿದೆ. ಅದು ಹೀಗಿದೆ: "ಒಂದು ಕಲ್ಲಿದ್ದಲಿನ ಗಣಿಯಲ್ಲಿ ಕೆಲಸಮಾಡುವ ಮಹಾರನೊಬ್ಬನ ಮನೆಯಲ್ಲಿ ನಡೆದ ಘಟನೆಯಿದು. ಯಾವುದೋ ಒಂದು ವ್ಯಾಧಿಯು ಇದ್ದಿದ್ದರಿಂದ ಅವಳ ಹೆರಿಗೆಯ ಸಮಯದಲ್ಲಿ ಒಬ್ಬ ಡಾಕ್ಟರನ್ನು ಬಳಿಯಲ್ಲಿ ಇರಿಸಿದ್ದರು. ದುರ್ದೈವವಶಾತ್, ಮಗುವು ನಿರ್ಜೀವ ಸ್ಥಿತಿಯಲ್ಲೇ ಜನನಕ್ಕೆ ಬಂದಿತು. ಇದನ್ನು ಕಂಡ ಸೂಲ ಗಿತ್ತಿಯು, ಮಗುವು ಉಸಿರಾಡುವಂತೆ ಒಂದು ಗಂಟೆಯ ತನಕ ಮಾಡಿದ ಪ್ರಯತ್ನವು ವ್ಯರ್ಥವಾಯಿತು. ಆವಳು ಗಾಬರಿಯಾಗಿ, ಡಾಕ್ಟರರಿಗೆ ಕಳಿಸಲು, ತಾಯಿಯ ಮೇಲೆ ಪ್ರಸ್ತಕ್ರಿಯೆಯಲ್ಲಿ ಮಗ್ನರಾಗಿದ್ದ ಅವರು, ವೇಗದಿಂದ ಚಲಿಸುತ್ತಿದ್ದ ಮಗುವಿನ ಹೃದಯಕವಾಟಕ್ಕೆ (Adrenaline) ಎಪ್ರಿನಾಲಿನ್ ಎಂಬ ದ್ರವಪದಾರ್ಥವೊಂದನ್ನು ಇಂಜಕ್ಷನ್ ಮೂಲಕ ಸೇರಿಸಿದರು. ಮಗುವು ಉಸಿರಾ ಡಲು ಪ್ರಾರಂಭಿಸಿತು. ಈ ವಿಚಿತ್ರ ಸಂಗತಿಯು ಸಂಭವಿಸಿ, ಈಗ ೧೫ ದಿವಸಗಳಾದುವು. ಮಗುವೂ ತಾಯಿಯೂ ಆರೋಗ್ಯವಂತರಾಗಿದ್ದಾರೆ. ವೈದ್ಯಾನಿಕ ಯುಗದಲ್ಲಿ ಇದೊಂದು ವೈಚಿತ್ರ್ಯವೆಂದು ಜ್ಞಾನಿಗಳ ಅಂಬೋಣ.

'The Hindu'

ಬಡವರಿಗಾಗಿ ಬಡವನೊಬ್ಬನ ದಾನ.

ಡಿಲ್ಲಿಯಲ್ಲಿ, ಬಡ ಉಪಾಧ್ಯಾಯರೊಬ್ಬರು (ಹತ್ತು ವರ್ಷ ಕೆಲಸ ಮಾಡಿ ಈಗ ವಿಶ್ರಾಂತಿಪಡೆಯುತ್ತಿರುವರು) ತಾವು ಆತೀ ಕಷ್ಟದಿಂದ ಗಳಿಸಿದ ರೂ. ೨೫೦೦ರಲ್ಲಿ ರೂ. ೧ ಸಾವಿರವನ್ನು ಬಡವರ ಕಷ್ಟನಿವಾರಣೆಗಾಗಿ ಗಾಂಧಿ ಯವರಿಗೊಪ್ಪಿಸಿರುವರು. ಇವರು ಬಡ ಉಪಾಧ್ಯಾಯ ರಾಗಿದ್ದು, ಬಹಳ ವರ್ಷಗಳ ತನಕ ಬಳಲಿ, ಬವಣಿಸಿ ಈ ದೃಢತ್ವವನ್ನು ಪರೋಪಕಾರಕ್ಕಾಗಿಯೇ ಏಗದಿಸಿದ್ದಾರೆ ಈಗ ಇವರು ಒಂದು ಸಂಸ್ಕೃತಶಾಲೆಯನ್ನು ಪಡೆಸುತ್ತಿದ್ದಾರೆ. ಇವರು, ಬಡವರ ಮೇಲ್ಗೈಗಾಗಿರುವ ಹಲವು ಕಾರ್ಯಗಳಲ್ಲಿ ಭಾಗಿಗಳಾಗಿದ್ದಾರೆ. ಬಡವರಾಗಿದು ಬಡವರ ಉದ್ಧಾರಕ್ಕಾಗಿ ಇವರು ಪಡುವ ಸಾಹಸವನ್ನು ನೋಡಿ, ಮಹಾತ್ಮಾ ಗಾಂಧಿಜಿಯವರು ತುಂಬಾ ಸಂತೋಷಗೊಂಡಿರುವರು. ಇವರು ತನ್ನ ಉದ್ಯೋಗಕ್ಕೆ ಬೇಕಾದ ಖುರಿಯನ್ನು ತನ್ನ ಕೈಯಿಂದಲೇ ನೇಯುತ್ತಿರುವರು. ಇದು ಬಡವರಿಗೂಂದು ಪಾಠವಾಗಿರಬೇಕೆಂದು ಮಹಾತ್ಮಾಜಿಯವರು ತನ್ನ 'ಹರಿಜನ' ಪತ್ರಿಕೆಯಲ್ಲಿ ತಿಳಿಸಿರುವರು. "ಬಡವರ ಭಾಗ್ಯವೇ

ಲೋದ್ರ

ಸುಪ್ರಸವಕ್ಕಾಗಿ ದಿವ್ಯ ಔಷಧ

ಸ್ತ್ರೀಯರಿಗೊಂದು ಮಹಾ ವರ.

ಯಾವ ತರದ ಅಥವಾ ಎಲ್ಲಾ ತರದ ಮುಟ್ಟು ದೋಷ, ಮುಟ್ಟಾಗುವುದರಲ್ಲಿ ನೋವು, ಅಕ್ರಮ ತರದ ಮತ್ತು ಮುಟ್ಟಾಗದಿರುವಿಕೆ, ಬಿಳಿ ಸೆರಗು, ಭಗ್ನ ಕೋಶದ ದೋಷ ಅಶುದ್ಧ ಮುಟ್ಟು, ಬಂಜೆತನ, ಸೂತಿಕಾವಾಯು, ಅಶುದ್ಧರಕ್ತ, ಮೇರೆ ದಾಟಿ ಅಥವಾ ಬೇಕಾದಷ್ಟು ಮುಟ್ಟಾಗದಿರುವುದು, ಸ್ತ್ರೀಯರ ಅಂಗಾಂಗಗಳ ಇನ್ನಿತರ ಅನೇಕಾನೇಕ ರೋಗಗಳುಳ್ಳ ಸ್ತ್ರೀಯರನ್ನು ಈ ಔಷಧಿಯು ಸಂಪೂರ್ಣ ಗುಣಗೊಳಿಸಿರುತ್ತದೆ.

ಲೋದ್ರ

ಎರಡು ಸೈಜಿನಲ್ಲಿ ದೊರೆಯುತ್ತದೆ. ರೂ. ೫ ಮತ್ತು 1—10—0

ಕೇಸರಿ ಕುಟೀರಂ

ಇಂಡಿಯನ್ ಕೆಮಿಸ್ಟ್ಸ್ ಮತ್ತು ಡ್ರುಗಿಸ್ಟ್ಸ್, ಎಗ್ಮೋರ್ ಮದರಾಸು,

ದಕ್ಷಿಣ ಕನ್ನಡ ಮತ್ತು ಕೊಡಗು ದೇಶದ ಏಜಂಟರು,

ಪೊಪ್ಯುಲರ್ ಸ್ಟೋರ್ಸ್, ಮಂಗಳೂರು.

ಕೆಲ್ವೋಸ್ಕರ ಕೆಫಾಯತ್ ಯಂತ್ರ



ವನ್ನು ಉಪಯೋಗಿಸಿ, ನಿಮ್ಮ ಭೂಮಿಯನ್ನು ಕ್ರಮಪ್ರಕಾರ ಉಳಿರಿ.

ಬಾಳಿಕೆ ಬರುವುದು;

ಹೆಚ್ಚು ಕೆಲಸ ಮಾಡುವುದು;

ನಾಜೂಕಾದ ಕೆಲಸ.

ಕೆಟಲಾಗಿಗೆ ಬರೆಯಿರಿ.

ಕೆಲ್ವೋಸ್ಕರ ಬ್ರದರ್ಸ್ ಲಿಮಿಟೆಡ್, ಕೆಲ್ವೋಸ್ಕರವಾಡಿ, (ಸತಾರಾ.)

ಡಿಸ್ಟ್ರಿಬ್ಯೂಟರರು:—ಪೆರ್ರಿ ಮತ್ತು ಕಂಪನಿ ಲಿಮಿಟೆಡ್, ಮದರಾಸು.

ಪಂಡಿತ ಡಿ. ಗೋವಾಲಾಚಾರ್ಯರವರ

ಜೀವಾಮೃತವು

ಆಧುನಿಕ ಕಾಲದ ಒತ್ತಾಟವು ನಿಮ್ಮ ಅಮೂಲ್ಯ ಆರೋಗ್ಯವನ್ನು ನಿಧಾನವಾಗಿ ಹೀರಿ ಮುರಿಸುತ್ತಿದೆ. ಅದರ ಫಲವೇ—ಆಯಾಸ ನರಗಳ ದುರ್ಬಲತೆ, ಶಿರೋವೇದನೆ, ಕರ್ಕಶಸ್ವಭಾವ ಇವೇ ಮೊದಲಾದುವು. ಅವುಗಳು ನಿಮ್ಮನ್ನು ಪೂರ್ಣವಾಗಿ ತಮ್ಮ ಹಿಡಿತದಲ್ಲಿರಿಸಿಬಿಡದಂತೆ ನೀವೀಗಲೇ ಕಡಿಹಾಕಬೇಕು; ಉತ್ಕೃಷ್ಟೋಪಾಯವೇ ಜೀವಾಮೃತಸೇವನೆ—ಈ ಪರಿಣಾಮಕಾರೀ ನಾಷ್ಟಿವರ್ಧಕ ಔಷಧವು ನಿಮ್ಮಲ್ಲಿ ರಕ್ತವರ್ಧನೆಯನ್ನುಂಟುಮಾಡುವುದು. ನೀವು ಕಳಕೊಂಡ ಚೇತನವನ್ನೆಲ್ಲ ಮರಳಿ ಕೊಟ್ಟು, ನಿಮ್ಮನ್ನು ಪೂರ್ವದಂತೇ ಪೂರ್ಣ ಕ್ರಿಯಾಶೀಲ ಪುರುಷರನ್ನಾಗಿ ಮಾಡುವುದು. ಎಲ್ಲೆಲ್ಲಿಯೂ ದೊರೆಯುವುದು:—ದೊಡ್ಡದು ರೂ. 3—4—0. ಸಣ್ಣದು ರೂ. 1—12—0

ತಯಾರಿಸುವವರು:—ಆಯುರ್ವೇದಾಶ್ರಮ, ಪೋಸ್ಟು ಬೋಕ್ಸ್ 287, ಮದರಾಸು.

ಮೈಸೂರು ಸ್ಟ್ರಾಂಕ್ಡೆದ ಡಿಸ್ಟ್ರಿಬ್ಯೂಟರರು:—ಸಿಟಿ ಮೆಡಿಕಲ್ ಎಂಡ್ ಜನರಲ್ ಏಜನ್ಸಿ,

92, ಚಿಕ್ಕಪೇಟೆ, ಬೆಂಗಳೂರು ಸಿಟಿ.

ಸುದರ್ಶನ ಗ್ರಂಥಮಾಲಗಳು.

ಗ್ರಾಮೋಫೋನ್ ಸಂಗೀತಂ—ಶ್ರೀಮತಿ ತ್ರಿಪುರಾಂಬ, ಲಲಿತಾಂಬ, ಆಲ್ಬರ್ಟಮ್ಮ, ಜುರ್ಜಬಾಯಿ ಬೋಟ್ಕ, ಹೀರಾಬಾಯಿ, ಕಾಂತಾಮಣಿ, ರಾಜರತ್ನಂ, ಇವರ ಕೋಕಿಲ ಸ್ವರದ ಹಾಡುಗಳು ಮತ್ತು ಶ್ರೀಯುತ ರಾಜಯ್ಯಂಗಾರು, ಬೆಂಬಿ ವೈದ್ಯನಾಥಂ, ಸುಬ್ಬರಾಯ ಭಾಗವತರು, ಸುಬ್ರಮಣ್ಯಂ, ಪಟ್ಟವರ್ಧನ್, ಜೋಶಿ, ಮುಂತಾದವರ ರಸಭರಿತ ಕೃತಿ, ಕೀರ್ತನೆಗಳು ತ್ರಿಪುರಾಂಬ ಕಾಂತಾಮಣಿಯರ ಫೋಟೋದೊಂದಿಗೆ ಇರುವುದು. ಇವರ ಬೆಲೆ ಆಣೆ ೧.

ಭಕ್ತಾನಂದ ಭಜನೆ—ತ್ಯಾಗರಾಜರ ತೆಲುಗು ಕೃತಿಗಳು, ತುಳಾರಾಮ, ಕೇತವದಾಸರ ಮರಾಠಿ ಪದಗಳು, ಪುರಂದರದಾಸ್, ಕನಕದಾಸರ ಕನ್ನಡ ಕೀರ್ತನೆಗಳು ಮತ್ತು ವೇದಾಂತ ತತ್ವವಿಚಾರದ ಪದಗಳು ಸಹಸುಲಭಕ್ಕೆಲಯಲ್ಲಿ ಬರೆಯಲ್ಪಟ್ಟಿವೆ. ಇವರ ಬೆಲೆ ಆಣೆ ೧.

ಶ್ರೀ ಪಾಂಡುರಂಗ ವಿಲಾಸ ಬುಕ್ ಡಿಪೋ, ಬೆಂಗಳೂರು ಸಿಟಿ.

ಪೈಕಿಗಳು ಸಿಕ್ಕುವ ವಿಳಾಸಗಳು:—ಮೆಸರ್ಸ್ ತಿಮ್ಮಪ್ಪ ಬ್ರದರ್ಸ್, ರಥಬೀದಿ ಮಂಗಳೂರು. ದಿ. ಲಲಿತಕಲಾ ಸ್ಟೋರ್ಸ್ ಮೈಸೂರು. ಆರ್. ವಿಟ್ಟಪ್ಪ ಶೆಟ್ಟಿ ಕಾರ್ಕಳ, ಮೆಸರ್ಸ್ ಶಾಮರಾವ್ ಗುಂಡಾಚಾರಿಯರು, ಉಡುಪಿ. ದಿ ಸಚ್ಚಿದಾನಂದ ಸ್ಟೋರ್ಸ್, ಕುಂದಾಪುರ. ದಿ ಸಚ್ಚಿನಾರಾಯಣ ಸ್ಟೋರ್ಸ್, ಪುತ್ತೂರು.

An Advertisement In

'Swadeshabhimani'

Means a sure fortune to you

Ask for Contract Rates.

The Swadeshabhimani office,

Car Street, Mangalore.

ಶ್ವಾಸಕ್ಲೇಶಾದಿಗಳಿಗೆ

ಚ್ಯವನಪ್ರಾಶಾವ ಲೇಹ.

ಪ್ರಸೂತಿ ರೋಗಾದಿಗಳಿಗೆ

ದಶಮೂಲಾರಿಷ್ಟ.

(ಕಸ್ತೂರಿ ಮಿಶ್ರಣ.)

ಸಮಸ್ತ ವಾತರೋಗಗಳಿಗೆ

ಮಹಾ ನಾರಾಯಣ ತೈಲ.

ಶ್ರೀ ರಾಮಕೃಷ್ಣ ಧರ್ಮಾಶ್ರಮ

ಸರಳ; ಡೊಂಗರಕೇರಿ ರಸ್ತೆ; ಮಂಗಳೂರು.

ಚಿಕಿತ್ಸಾಯುಕ್ತ ಸಮೇತ

ಋಗ್ವೇದೀ ಸಂಧ್ಯಾವಂದನೆ.

(ಸೃಷ್ಟಿಸಂಗೆ—ಊರ್ಧ್ವಪುಂಡ್ರ—ಮುದ್ರಾಧಾರಣ ಸಹಿತ)

ಸ್ಮಾರ್ತರಿಗೆ—ಭಸ್ಮಧಾರಣ ವಿಧಿ ಕೂಡಿ)

ಎಂ. ನರಸಿಂಗರಾವ್, ಬಿ. ಎ., ಎಂ. ಎಲ್.

ಇವರಿಂದ ರಚಿತವಾದ

ಪ್ರತಿಪದಾರ್ಥಟೀಕಾ ವಿಧಿಸಹಿತ.

ಬೆಲೆ ಆಣೆ 8.

30, 60, 100 ಪ್ರತಿಗಳನ್ನು ಒಮ್ಮೆಲೆ ಪಡಕೊಳ್ಳುವವರಿಗೆ ಒಳ್ಳೆಯ ಡಿಸ್ಕೌಂಟು.)

ವಿಳಾಸ— ಶಾರದಾ ಛಾಪಖಾನೆ,

ರಥಬೀದಿ, ಮಂಗಳೂರು.

ಸೈಂಟಿಫಿಕ್

ಸ್ವರ್ಣಾಭರಣಗಳು

(ನಿಜವಾದ ಬಂಗಾರಕ್ಕೆ ಪಿದಲಾ: ಇವು ತಯಾರಿಸಲ್ಪಟ್ಟವು.)

ಹೈಕೋರ್ಟ್ ಜಡ್ಜರುಗಳಿಂದಲೂ, ಸರಕಾರದ ಮಂತ್ರಿಗಳಿಂದಲೂ, ಇತರ ಪ್ರಮುಖರಿಂದಲೂ ಕೊಂಡಾಡಲ್ಪಟ್ಟಿವೆ.

ಪತ್ರವ್ಯವಹಾರವನ್ನು ಇಂಗ್ಲಿಷಿನಲ್ಲೇ ಮಾಡಬೇಕು.

S.G.B.

ಹೊಸ ಕೆಟಲಾಗು ಧರ್ಮಾರ್ಥ.

ವಿಳಾಸ:—

TheScientificGold Bangles Co., Ltd.,
Head Office:-48, Byragimatam Street,
Post Box No. 208, Madras.

77 Years!

Two generations of approved service enables us to pick and choose what is cheap, lasting & good to suit the pockets & the tastes of our longstanding wide circle of

CUSTOMERS

who know our

Premier House for Swadeshi.

Mill Yarns—Handloom Cloths, Dhoties—Saries—Cintzes etc.

Shrinivas Ranga Pai

Sawkar Mahal,

Car Street, MANGALORE.

ಜಂಜಿಬಾರ್ ಮತ್ತು ಪೂರ್ವ ಆಫ್ರಿಕ.

ಜಂಜಿಬಾರ್ ಮತ್ತು ಆಫ್ರಿಕಗಳಲ್ಲಿರುವ ಹಿಂದೀಯರು ಅಲ್ಲಿಯ ಯುರೋಪಿಯನ್ ಸರಕಾರಗಳ ಉದಟಿಳಿಕೆಂದ ಸಂಕಷ್ಟಕ್ಕೀಡಾಗುವರೆ ಪರಿಣಾಮವಾಗಿ ಭಾರತೀಯರು ಚಳವಳಿಸಿದರು. ಇದರಿಂದಾಗಿ ೧೯೬೪ರ ಆಗೋಸ್ಟು ೪ರಲ್ಲಿ ಶ್ರೀ ಕೆ. ಪಿ. ಎಸ್. ಮೆನನ್ ಐ. ಸಿ. ಎಸ್. ಇವರನ್ನು ಇಂದಿಯಾ ಸರಕಾರವು ವಿಚಾರಣೆಗಾಗಿ ಜಂಜಿಬಾರಿಗೆ ಕಳುಹಿಸಿತು. ಶ್ರೀಯುತರು ಅಲ್ಲಿಗೆ ತೆರಳಿ, ಅಲ್ಲಿಯ ಹಿಂದೀಯರು ಅಲ್ಲಿಯ ಸರಕಾರಗಳಿಂದ ಬಾಧಿಸಲ್ಪಡುತ್ತಿದ್ದುದನ್ನು ಕಂಡು ವರದಿಯನ್ನು ಬರೆದುಕೊಂಡು ಬಂದರು. –ಇದೇ ತಾ ೨೮-೧-೬೫ರಲ್ಲಿ ಪ್ರಕಟವಾದ ಅವರ ವರದಿಯಲ್ಲಿ ಅವರು 'I feel constrained to remark that the cumulative effect of the recent Zanzibar legislation is the squeezing out of the native of India from regions in which he has established himself under every security of public health' ಎಂದುವಾಸ್ತವ ಸ್ಥಿತಿಯನ್ನು ಸಿದ್ಧಾಂತ ರೂಪದಲ್ಲಿ ಬರೆದಿರುವರು. ಜಂಜಿಬಾರ್ ಮತ್ತು ಪೂರ್ವ ಆಫ್ರಿಕಗಳಲ್ಲಿರುವ ಹಿಂದೀಯರ ಸಕಲ ಸುಖದುಃಖಗಳನ್ನೂ ಕಂಡಿರುವ ದೀನಬಂಧು ಸಿ. ಎಫ್. ಎಂಡ್ರೂಸರು 'ಹಿಂದೆರ್ನ್' ರಿವ್ಯೂನಲ್ಲಿ ಹೀಗೆ ಬರೆದಿರುವರು. ಸಂ. ಸ್ವ.

ಜಂಜಿಬಾರ್—ಪರಿಚಯ.

ಜಂಜಿಬಾರ್ ಬ್ರಿಟಿಷ್ ರಕ್ಷಣೆಗೆ ಒಳಪಟ್ಟ ದ್ವೀಪ. ಸಮುದಾಯ ಜಂಜಿಬಾರ್ ಎಂಬ ದೊಂದು ದೊಡ್ಡ ದ್ವೀಪ. ಪೆಂಬ ಎಂಬುದು ಮತ್ತೊಂದು ದ್ವೀಪ. ಜಂಜಿಬಾರ್ ದ್ವೀಪವು ೬೪೦ ಚದರ ಮೈಲುಗಳ ವಿಸ್ತೀರ್ಣವುಳ್ಳದ್ದಾಗಿದೆ. ಪೆಂಬ ದ್ವೀಪವು ೩೭೦ ಚದರ ಮೈಲುಗಳ ವಿಸ್ತಾರವುಳ್ಳದು. ೧೯೬೧ನೆಯ ಜನಗಣತಿಯಂತೆ ಅಲ್ಲಿ ಒಟ್ಟು ೩೫೫೪೮೨ ಪ್ರಜೆಗಳಿದ್ದಾರೆ. ಅವರಲ್ಲಿ ೧೩೬೪೭೧ ಮಂದಿ ಆಫ್ರಿಕನರು. ೩೩೫೯೬ ನುಂದಿ ಅರಬೀಯರು. ೧೪೨೪೨ ಮಂದಿ ಭಾರತೀಯರು. ಈ ಹಿಂದೀಯರಲ್ಲಿ ಬಹುಮಂದಿ ಅಲ್ಲೇ ವಾಸಿಸುತ್ತಿರುವರು. ಜಂಜಿಬಾರ್‌ನಲ್ಲಿ ಒಬ್ಬ ಸುಲ್ತಾನರಿದ್ದಾರೆ. ಬ್ರಿಟಿಷ್ ರೆಸಿಡೆಂಟರೊಬ್ಬರಿದ್ದಾರೆ, ಸುಲ್ತಾನರ ಸಹಾಯಕ್ಕಾಗಿ ಮಂತ್ರಿಮಂಡಲವೊಂದಿದೆ. ೬ ಮಂದಿ ಇತರ ಅಧಿಕಾರಿಗಳಿದ್ದಾರೆ. ಶಾಸನಸಭೆಯೂ ಉಂಟು. ೧೫ ಮಂದಿ ಸದಸ್ಯರಲ್ಲಿ ಇಬ್ಬರು ಭಾರತೀಯರು. ತಾ. ೧೬-೬-೪೫ನೆಯ ದಿನ ಅಲ್ಲಿನ ಸರಕಾರವು ಜಂಜಿಬಾರಿನ ಹಿಂದೀಯರ ಪತನಕ್ಕೋ ಎಂಬಂತೆ ೬ ಶಾಸನಗಳನ್ನು ಹೊಡಿಕು. ಇವುಗಳಿಂದಾಗಿ ಅಲ್ಲಿಯ ಭಾರತೀಯರು ಮಹಾ ಕಷ್ಟಕ್ಕೊಳಗಾದರು.

ಜಂಜಿಬಾರ್ ಮತ್ತು ಆಫ್ರಿಕಗಳಲ್ಲಿನ ಭಾರತೀಯರ ಸುಖಕ್ಕಾಗಿ ಸಾಹಸಪಡುತ್ತಿರುವ –
ದೀನಬಂಧು ಸಿ. ಎಫ್. ಎಂಡ್ರೂಸರವರು.

ಹತ್ತು ವರ್ಷಗಳ ಹಿಂದೆ ಕೆನ್ಯದ ಪ್ರತಿ ಯೊಬ್ಬ ಯುರೋಪಿಯನನ ದೃಢತೆಯು, ಶಾಸನಬದ್ಧವಾಗಿಯಾದರೂ ಹಿಂದೀಯರನ್ನು ಆಫ್ರಿಕಕ್ಕೆ ಬರಬಿಡಬಾರದೆಂಬುದರ ಮೇಲೆ ಮೂರ್ತಿಮತ್ತಾಗಿದ್ದಿತು.

ದಕ್ಷಿಣಾಫ್ರಿಕವು ತನ್ನ 'ಹಿಂಬಾಗಲನ್ನು ಮುಚ್ಚಿ ಬಿಟ್ಟಂತೆ' (ಗಾದೆಯು ಹಾಗೆ ಸಾಗಿದೆ) ಪೂರ್ವಾಫ್ರಿಕವೂ ತನ್ನ ಹಿಂದಿನ ಬಾಗಿಲನ್ನು ಮುಚ್ಚಿಬಿಡಬೇಕೆಂಬ ಬಯಕೆ. ಯಾವ ಶರ್ತದ ಮೇಲೂ ಹಿಂದೀಯನು ಪುನಃ ಕೆನ್ಯಾದೇಶಕ್ಕೆ ಬಾರದಂತಾಗಬೇಕು ಎಂಬ ಹಟವಿತ್ತು. 'ಹಿಂದೀಯರ ದೇಶಾಂತರವಾಸ'ದ ಕುರಿತು ಬಗೆಬಗೆದು ಉತ್ಪ್ರೇಕ್ಷೆಕರ ಭಾಷಣಗಳು ಆರುಂಡಿದುವು. ಇದೇ ಆಫ್ರಿಕದಿಂದ ಹಿಂದೀಯರನ್ನು ಹೊರ ಗಟ್ಟಬೇಕೆಂಬ ಸುಪಾ ಮಂತ್ರವನ್ನು ಪ್ರಚುರ ಗೊಳಿಸಿದವರು ಲೋರ್ಡ್ ಡೆಲಮಿರ್ ಮತ್ತು ಮೇಜರ್ ಗ್ರೋಗನ್ ಎಂಬವರು. ಮೇಜರ್ ಗ್ರೋಗನರು ಹೇಳಿದ್ದೇನೆಂದರೆ– "ಆಫ್ರಿಕದ ಹೆಬ್ಬಾಗಿಲು ಮೊಂಬಾಸ. ಈ ಬಾಗಿಲನ್ನು ನಾವು ಮುಚ್ಚಬೇಕಾಗಿದೆ! ಹಿಂದೀಯರಿಗಾಗಿ ಡರ್ಬನಿನ ಬಾಗಿಲು ನಾವು ಚೆಲ್ಲಪ್ಪಿಟ್ಟಿದೆ. ಮೊಂಬಾಸದ ಬಾಗಿಲನ್ನು ಮುಚ್ಚಬೇಕು."

ಹಿಂದೀಯ ಮಹಾ ಸಾಗರದಲ್ಲಿ ಹಿಂದೀಯರು ಮುಂಸಾಗುತ್ತಿದ್ದುದೇ ಬಿತ್ತನ್ನು ಕಲ್ಪಿಸಿ ಜನರಿಗೆ ಭೀತಿಮಯ ಚಿತ್ರಗಳನ್ನು ಅವರು ಉಪದೇಶಿಸುತ್ತಿದ್ದರು. ಭಾರತೀಯರೆಲ್ಲ ಪೂರ್ವಾಫ್ರಿಕವನ್ನು ಮುತ್ತಿ ಬಿಡುವರೆಂಬ ಭಯೋತ್ಪಾದಿತ ವಿಷಯಗಳನ್ನು ಹೇಳುತ್ತಿದ್ದರು. ಅದುದರಿಂದ, ದಕ್ಷಿಣಾಫ್ರಿಕವು ಹಿಂದೀಯರನ್ನು ಹೊರಗೆ ಪತಾಕಿಡಿಸಿ ಕೆನ್ಯಾ ದೇಶಸ್ಥರೂ ಅವರನ್ನು ಹೊರಗಟ್ಟಬೇಕು ಎಂದು ಬೋಧ ವರವಾಗಿ ಸೂಚಿಸುತ್ತಿದ್ದರು. ಬಹು ಕರುಣ ಹೃದಯರಾಗಿ–"ತಕ್ಷಣವೇ ಈ ಕೆಲಸವನ್ನು ನನ್ನವರು ಮಾಡಬೇಕು. ಇಲ್ಲದಿದ್ದರೆ ನಾವು ಮುಳುಗುವೆವು– ಸರ್ವನಾಶವಾಗುವುದು" ಎಂದು ಮೇಜರ್ ಗ್ರೋಗನ್ ದೊರೆಯವರು ಹೇಳಿದರು. ಲೋರ್ಡ್ ಡೆಲಮಿರರೂ ಅವರ ವಾಣಿಯಲ್ಲೇ ಪ್ರತಿಧ್ವನಿಗೈದ್ದರು.

ನಾನು ೧೯೫೩ರಲ್ಲಿ 'ಕೆನ್ಯಾ ಇಂಡಿಯನ್ ಡೆಪ್ಯುಟೇಶನ್'ಗೆ ಉಪದೇಶಕನಾಗಿ ಲಂಡನಿಗೆ ಹೋಗಿದ್ದಾಗ ಲೋರ್ಡ್ ಡಿಲೆಮಿಯರರ ಆಶ ಯವು ವೇಲಿನಂತೆಯೇ ಇತ್ತು. 'ಕೆನ್ಯಾ ಮಾಉ ಮಾಉ ಕತೆ'ಯಲ್ಲಿ ಅವರು ತನ್ನ ಮನದ ಬಯಕೆ ಯನ್ನು ನೆರವೇರಿಸಿಕೊಳ್ಳಲು ಸಾಧಿಸಿದರು. ಆದರೆ ಅವರ ಇಂಗಿತಗಳಿಗನುಕೂಲವಾಗಿದ್ದ ಎರಡು ವಿಷಯಗಳಲ್ಲಿ ಮಾತ್ರ ಅವರು ಗೆದ್ದರು. ಜಾತೀಯ ವೋಟಿನ ವಿಚಾರದಲ್ಲೂ ಅವರಿಗೆ ಜಯವಾಯಿತು, ಅಲ್ಲದೆ ಕೆನ್ಯಾದ ಮೇಲು–ಸೀಮೆಗಳಿಗೆ ಅನ್ಯ ಮತಸ್ಥರು ಬರಬಾರದೆಂಬು ದರಲ್ಲೂ ಅವರು ಗೆದ್ದರು.

ಆಗಿನ ಕೂಟೊನಿಯಲ್ ಅಧಿಕಾರ ಶಾಹಿಯು ಈ ವೋಟಿನ ವಿಚಾರವನ್ನು ಅಷ್ಟು ಸುಲಭವಾಗಿ ಬಿಟ್ಟುಕೊಟ್ಟು ದೇಶಾಂತರ ವಾಸದ ಸ್ಥಿತಿಯಲ್ಲಿ ಮಾತ್ರ ಏಕ ದೃಢತೆಯನ್ನು ಪ್ರದರ್ಶಿಸಿತೆಂದು ನನಗೇನೆ ಸಂದೇಹವುಂಟಾ ಯಿತು. ಆದರೂ ಸಕ್ಕವ ಬೇರೆಯೇ ಇತ್ತು. ಹಿಂದೀಯರ ದೇಶಾಂತರವಾಸವು ರದ್ದುಗೊಳಿಸಲ್ಪಟ್ಟಿದ್ದಿಲ್ಲ ಮತ್ತು ಅನ್ಯಮತಸ್ಥರ ಮೇಲಿನ ನಿರ್ಬಂಧವು ಹಿಂದೀಯರ ಮೇಲೆ ಮಾತ್ರ ಇರಲಿಲ್ಲವಂತೆ.

ಅಶಾತುರರಾದ ಅಂದಿನ ಯುರೋಪಿಯನರನ್ನು ವಾತಾವರಣ ನಿರ್ಜಿನ ಮಹತ್ತಿಕೆಯು ಮಾತ್ರ ತಾತ್ಕಾಲಿಕ ಶಾಂತಿ ಹೊಂದಲು ಪ್ರೇರೇಪಿಸಿತು. ತಮ್ಮ ಕಾರ್ಯಸಾಧನೆಯಾಗ ಬೇಕೆಂದಿದ್ದರೆ ಎಂತಹದನ್ನೂ ಮಾಡಲು ಅವರು ಸಿದ್ಧರಾಗಿದ್ದರು. ಕೃಪೇಣ, ಸ್ಥಿತಿ ಬದಲಾಯಿತು; ಕಥೆಯೇ ಬೇರಾಯಿತು.

ಕೃಪೇಣ, "ಮುತ್ತಿಗೆ"ಗಾಗಿ ಪ್ರತಿ ಯೊಂದು ಹಡಗದಲ್ಲೂ ಕೆನ್ಯಕ್ಕೆ ಹಿಂದೀಯರು ಬರುತ್ತಿರುವರೆಂಬ ಮೇಜರ್ ಗ್ರೋಗನರ ಬೆದ ರಿಕೆಯು ಟೊಳ್ಳಾಗುದೆಂದು ತಿಳಿದು ಬಂತು. ಹಿಂದೀಯರ ಪಡೆಗಳು ಅಲ್ಲಿಗೆ ಬಂಧುದೇ ಇಲ್ಲ; ಬರಲಿಕ್ಕೂ ಇಲ್ಲವೆಂಬುದು ವಿದಿತವಾ ಯಿತು. ಮೇಜರ್ ಗ್ರೋಗನರೂ ಲೋರ್ಡ್ ಡೆಲಮಿರರೂ ಹಿಂದೀಯರನ್ನು 'ತೋಳಗಳು' ಎಂದು ಸಂಬೋಧಿಸಿದ್ದರು. ಆದರೆ ಅವರ ಉಪದೇಶವು ಮೂಲೆಗುಂಪೆಯಾಯಿತು.

೧೯೫೩ರಲ್ಲಿ ಲಂಡನಿನಲ್ಲಿ ನಡೆದ ಮಾತು ಕತೆಯ ಪರಿಣಾಮವಾಗಿ ಕೆನ್ಯದ ಸಮಸ್ಯೆಯು ಕಕ್ಕಾಬಿಕ್ಕಿಗೆ ತೀರ್ಮಾನ ಹೊಂದಿದಂತೆ ಕಂಡು ಬಂತು. ಯುರೋಪಿಯನರು ಮಾತ್ರ ತಾವು ಕಮ್ಮ ಮೂರು ಶರ್ತಗಳಲ್ಲಿ ಎರಡರ ಮೆಟ್ಟಿಗೆ ಗೆದ್ದೆವೆಂದೂಹಿಸಿದರು. (೧) ಜಾತೀಯತೆಯ ಮೇಲೆ ವೋಟು ಕೊಡಬೇಕೆಂಬ ವಿಷಯದಲ್ಲಿ ಅವರಿಗೆ ಜಯವಾಯಿತು. (೨) ಕೆನ್ಯದ ಮೇಲು–ಸೀಮೆಗಳಲ್ಲಿನ ಕೃಷಿ ಪ್ರದೇಶಗಳನ್ನು ತಾವೇ ಇಟ್ಟುಕೊಳ್ಳುವ ಅಧಿಕಾರವೂ ಅವರಿಗೆ ದೊರೆಯಿತು.

ಈ ರೀತಿಯಿಂದ ಅವರು ಪೂರ್ವಾಫ್ರಿಕದಲ್ಲಿ ವರ್ಣಭೇದವನ್ನು ಸಂಸ್ಥಾಪಿಸಿಕೊಂಡರು. ದಕ್ಷಿಣಾಫ್ರಿಕದವರಂತೆಯೇ ಇವರೂ ಈ ಭೇದ ಬುದ್ಧಿಯನ್ನು ಕಲಿತುಕೊಂಡರು.

ಆದರೆ "ನಿರ್ಬಂಧಸಹಿತವಾದ ದೇಶಾಂತರವಾಸ"ದ ವಿಷಯದಲ್ಲಿ ಈ ಯುರೋಪಿಯನರು ಸೋತುಹೋದರು. ಕೇವಲಾತಿಯನ್ನಿಟ್ಟರೆ—ಆಫ್ರಿಕನರಿಗೆ ಹಾನಿಕರವಿಲ್ಲವೆಂದಾದರೆ—ವರೆದು ವಂಶಸ್ಥರೂ ಅಲ್ಲಿಗೆ ಬರಬಹುದೆಂದು ನಿರ್ಣಯವಾಯಿತು. ಹಿಂದೀಯರು ಕೆನ್ಯಕ್ಕೆ ಬರಬಹುದೆಂಬ ಹಿಂದಿನ ವಿಷಯವು ಹಿಂದೀಯರ ಅನುಕೂಲತೆಗಾಯಿತು. ಯುದ್ಧವು ಕೊನೆಗೊಂಡನಂತರ ಕೆನ್ಯದ ನಿರೀಕ್ಷರಿಯಲ್ಲಿರುವ ಟಿಂಗನಿಯಾಕವನ್ನು ಲೀಗ್ ಆಫ್ ನೇಶನ್ಸ್‌ನ ಅಧೀನದಲ್ಲಿಡಲಾಯಿತು. ಕೆಲವು ಶರ್ತಗಳ ಮೇಲೆ ಇದನ್ನು ಗ್ರೇಟ್ ಬ್ರಿಟನು ಲೀಗ್ ಆಫ್ ನೇಶನ್ಸ್‌ನ ಕೈಯಿಂದ ಪಡೆಯಿತು. ಈ ಒಪ್ಪಂದಕ್ಕೆ ದುಂಬಾಲಾಗಿ ಸಹಿಹಾಕಿದ ಯಾವ ವಂಶೀಯರ ಮೇಲೂ ಭೇದಭಾವವನ್ನಿಡಬಾರದೆಂಬುದು ಶರ್ತಗಳೆಲ್ಲೊಂದು. ಭಾರತವು ಈ ಸಹಿ ಹಾಕಿದ್ದುದರಿಂದ ಅದಕ್ಕೆ ಈ ಸ್ಥಾನವು ಸಿಕ್ಕಿತು. ಹೀಗಾಗಿ, ಟಿಂಗನಿಯಾಕದಲ್ಲಿ ಭಾರತೀಯರ ಉಚ್ಚಾಟನಮಾಡಲು ಸಾಧ್ಯವಾಗಿಲ್ಲ. ಅಲ್ಲದೆ ಟಿಂಗನಿಯಾಕವು 'ಜನಾಂಗಸಭೆಯ' ಕೈಯಲ್ಲಿಯೂ ಇದ್ದುದರಿಂದ ಮತ್ತಷ್ಟು ಕಷ್ಟವಾಯಿತು. ಕೆನ್ಯಾದಿಂದ ಭಾರತೀಯರನ್ನು ದೂರೀಕರಿಸುವ ಸಾಧನೆಯು ಈ ರೀತಿಯಿಂದ ಕೆಸ್ಸಿನಲ್ಲಿ ಧ್ವನಿಯಾಯಿತು. ಕಾರಣ, ಟಿಂಗನಿಯಾಕಕ್ಕೆ ಭಾರತೀಯರನ್ನು ಬರಲು ಬಿಟ್ಟು ಕೆನ್ಯಕ್ಕೆ ಬರಲೀಸದಿದ್ದರೆ ಅದು ಅಸೂಯಾಪರ ವರ್ತನೆಯೂಗುವುದೆಂದು ತಿಳಿಯಲಾಗಿತ್ತು.

ಕೆನ್ಯದಲ್ಲಿ ಭಾರತೀಯರ ಸಂಖ್ಯೆ ವಿಪರೀತವಾಗಿ ಹೆಚ್ಚುತ್ತಿಲ್ಲ, (೧) ಟಿಂಗನಿಯಾಕ ದಿಂದ ಭಾರತೀಯರನ್ನು ಪ್ರತ್ಯೇಕಿಸಲು ಸಾಧ್ಯ ವಿಲ್ಲ (೨) ಎಂಬೀ ಎರಡು ವಿಷಯಗಳು ಮೇಲುಸೀಮೆಯಲ್ಲಿ ವಾಸಿಸುತ್ತಿದ್ದ—ರಾಜ ಕೀಯ ಧುರೀಣರೆದ—ಯುರೋಪಿಯಾನರಿಗೆ ಸರಿಬೀಳಲಿಲ್ಲ.

ಆ ಸಂತರದ ಕೆಲವು ಸಂಘಟನೆಗಳು ಈ ಯುರೋಪಿಯನ್ ನಿವಾಸಿಕರ ಪರಿಸ್ಥಿತಿಯನ್ನು ಪೂರ್ಣ ಪರಿವರ್ತಿಸಿತು.

ಕೊನೆಗೆ, ಮೇಜರ್ ಗ್ರೋಗನರಾಗಲೀ, ಲೋರ್ಡ್ ಡೆಲಮಿರರಾಗಲೀ ಧುರೀಣತೆ ಯನ್ನು ಸಹಿಸಲಿಲ್ಲ. ಮೇಜರ್ ಗ್ರೋಗನರು ಹೇರಳ ಸಂಪತ್ತನ್ನು ಸಂಡಪಿಸಿ ಆದ ಮೇಲೆ ರಾಜಕೀಯರಂಗದಿಂದ ಹೊರಗಾದರು. ಲೋರ್ಡ್ ಡೆಲಮಿರರು ಕಾಲಾಧೀನರಾದರು. ಕೆನ್ಯದಲ್ಲಿ ಈ ಚಳವಳಿವು ನಡೆಯುತ್ತಿದ್ದಾಗಲೇ ಇವರು ಮರಣ ಹೊಂದಿದರು.

ಯುರೋಪಿಯನ್ ನಿವಾಸಿಕರ ಈಗಿನ ಮುಖಂಡರಾದ ಸರ್ ಪ್ರೆಸ್ಟಸ್ ಸ್ಕೋಟ್ ರವರು ಪ್ರಥಮದ ಈ ಇಬ್ಬರು ಮುಖಂಡ ರಂತೆ ಸಂಕುಚಿತಬುದ್ಧಿಯವರಲ್ಲ. ಅವರ ಹೃದಯವು ವಿಕ್ರಸಿತವಾದುದೆನ್ನಬಹುದು.

ಹೀಗಾಗಿ, ೧೯೫೩ರಲ್ಲಿ ಲಂಡನಿನಲ್ಲಿ ಜರಗಿದ ಕೆನ್ಯಾ ಮಾತುಕತೆಯ ನೇಳೆಯಲ್ಲಿ ಭೂಗಿ ಭೂಗಿಲೆಂದುರಿಯುತ್ತಿದ್ದ ಈ ಸಮಸ್ಯೆಯು ಕಳೆದ ಐದು ವರ್ಷಗಳಿಂದ ಶಾಂತವಾಗುತ್ತಾ ಇದ್ದು ವರದಿಯ ಹಿಂದಾಗುತ್ತಿದೆ. ಹೀಗೆಂದೊಡನೆ ಅಲ್ಲಿಯ ಭಾರತೀಯನು ಯುರೋಪಿಯಾನನಿಗಿಂತ ಕಡಮೆ ಅವಯಶಸ್ಸನ್ನು ಹೊಂದಿರುವನೆಂದು ತಿಳಿಯತಕ್ಕದಲ್ಲ. ಭಾರತೀಯರ ಸಂಖ್ಯೆಯು ಹೆಚ್ಚಿ ಅವರು ನೀಲ್ಲೆಯುಳ್ಳನರಾಗುತ್ತಿರೆಂಬ ಭಾವನೆಯು ಕುಗ್ಗುತ್ತಾ ಬಂದಿದೆ. ಸರಕಾರದ ವಾರ್ಷಿಕ ವರದಿಯಿಂದ ಈ ಕಥೆಯು ತಿಳಿದುಬರುತ್ತದೆ: ಯುರೋಪಿಯಾನರ ಸಂಖ್ಯೆಯು ಅಲ್ಲಿ ಹೆಚ್ಚುತ್ತಾ ಇದೆ. ಹಿಂದೀಯರ ಸಂಖ್ಯೆಯು ಕುಂದುತ್ತಾ ಬಂದಿದೆ.

ಅನಿರೀಕ್ಷಿತವಾಗಿ, ಸ್ವಯಂಚಿತ ಆರ್ಥಿಕ ದುಃಸ್ಥಿತಿವಿಚಾರವೊಂದು ಈ ಯುರೋಪಿಯಾನ ನಿವಾಸಿಕರ ಶತ್ರುವಾಗಿ ಹೋಗಿ ಅವನ್ನು ಭಾರತೀಯರ ಮೇಲೆ ಪ್ರಯೋಗಿಸಲಾರಂಭವಾಗಿದೆ. ಈಗ ಭಾರತೀಯನನ್ನು ಪೂರ್ವಾಫ್ರಿಕದಿಂದ –ರಾಜಕೀಯ ತಂತ್ರಗಳ ಪ್ರಯೋಗದಿಂದಲ್ಲ ವಾದರೂ,ಅರ್ಥವಿಷಯಕವಾದ ಕೊಸರುತಂತ್ರದ ಪ್ರಯೋಗದಿಂದ ಪುನಃ ಉದ್ಭವಿಸುವ ಚಳ ವಳವನ್ನು ಕಾಣುವಂತಾಗಿದೆ.

ಆಫ್ರಿಕದಲ್ಲಿ ಮಾತ್ರ ಸಿದ್ಧವಾದ ವಸ್ತು ಗಳ ಗುತ್ತಿಗೆಯನ್ನು ಸ್ಥಾಪಿಸಿ, ಮಾರ್ಕೆಟಿಗೆ ಹಾಕಿ, ಆರ್ಥಿಕ ಸ್ಥಿತಿಯನ್ನು ಸುಧಾರಿಸಬೇಕು ಎಂಬುದೇ ಈ ಸೂತ್ರದ ಶತ್ರು. ಈ ರೀತಿಯ ಗುತ್ತಿಗೆಗಳಲ್ಲಿ ಹೆಚ್ಚಾಗಿ ಯುರೋಪಿಯನ್ನರ ಅಧಿಕಾರದಲ್ಲಿರುವಂತಹುಗಳು, ಅಧವಾ ಸಂಸ್ಥಾನದವೀನದಲ್ಲಿರುವುವುಗಳು.

(ಉಳಿದ ಸಂಚಿಕೆಯಲ್ಲಿ ಮುಂದುವರಿಯುವುದು)

LOOK SHARP! — LOOK AHEAD!

Murdeshwar's Banking Institute.

Pioneer Institute on the West Coast

Opens out Careers for Business men, Graduates, Under-graduates, and S. S L. C's and also for those who have not passed any University examination.

Coaches students for the Specialised Banking Courses (C. A. I. B. & C. A. I. I. B.) and also for Accountancy; Secretarial, and Insurance Courses (L A. A., A C R A, F C. R. A., F I S. A, A C I I, etc)

Classes for the Cambridge School Certificate (Senior Cambridge) Examination for 1935 and for the Bombay Advocates Examination are also held

Ladies are also admitted.

Enrol yourself NOW Classes are in full swing Expert tuition (Oral or Postal) by well qualified and experienced Lecturers

FEES VERY MODERATE

For further particulars apply to —

D R Murdeshwar,
Dip. Econ, F R Econ, S (Lond)
Principal
Ganapathy High School Street,
Mangalore.

ಕಣ್ಣಿನ ಹರೆ

"ಪ—ಸರ್" ಎಂಬ ನೇತ್ರಭಾಸ್ಕರ—ಈ ವಿಷಪತ್ತೆ ಕಣ್ಣುಪರೆ, ದೃಷ್ಟಿಮಂದ್ಯ ಇತ್ಯಾದಿಯನ್ನು ಶೀಘ್ರವಾಗಿಯೂ ಶಾಶ್ವತವಾಗಿಯೂ ಗುಣಪಡಿಸುತ್ತದೆ ಶಸ್ತ್ರಕ್ರಿಯೆಯಂ ಅವಶ್ಯವಿಲ್ಲ ಬಾಕಿ ಗುಣಲಾಭ ಗುಣವಾಗದಿದ್ದರೆ ಹಣ ಕೆರತ್ ಶ್ರಯ ರೂ 2

ಪಶ್ಚಸ್ಯನದಾರ ಇಂಗ್ಲೀಷಿನಲ್ಲಿ —

Hary yasaram Panchpota Bengal

ಶಿವರಾಮ ಕಾರಂತ ವಿರಚಿತ

ಗ್ಯಾನ—

ಜ್ಞಾನದ ಮೇಲೆ ವ್ಯಂಗ ಟೀಕೆ

ಈಗ ಗ್ರಂಥರೂಪದಲ್ಲಿ ಸಿದ್ಧವಾಗಿದೆ

ದಪ್ಪಗಿನ ಆಂಟಿಕ್ ಕಾಗದದಲ್ಲಿ ಸುಂದರ ಕ್ರೌನ್ ೪ ಆಕಾರದ 188 ಪುಟಗಳು

ಉತ್ತಮ ತರಗತಿಯ ಹಾಸ್ಯ

ಬೆಲೆ ರೂ. 1—4—0.

ಶಾರದಾ ಭಾಷಾಮಾನ,
ರಥಬೀದಿ ಮಂಗಳೂರು

ಇಲ್ಲಿಂದ ಪಡೆಕೊಳ್ಳಬಹುದು

"ಸರಸ್ವತಿ"

೧೯೩೫ನೇಯ ವರ್ಷಾಂಕ.

ಶ್ರೀಮತಿ—ಜಯಲಕ್ಷ್ಮೀದೇವಿ ಬಳ್ಳಾರಿ—ಶ್ರೀಮತಿ ಸರಸ್ವತಮ್ಮ—ನೆಲ್ಲೂರು—ಶ್ರೀಮತಿ—ಇಂದಿರಾಬಾಯಿ—ನೆಲ್ಲೂರು—ಶ್ರೀಮತಿ—ಜಯಲಕ್ಷ್ಮಮ್ಮ—ಬೆಂಗಳೂರು—ಶ್ರೀಮತಿ—ಜಯಮ್ಮ—ಬೆಂಗಳೂರು—ಶ್ರೀಮತಿ—ಸುಮತೀ ಬಾಯಿ—ತುಂಗಭದ್ರ—ಮೊದಲಾದ ಸುಪ್ರಸಿದ್ಧ ಮಹಿಳೆಯರ ಶ್ರೀ ಎಸ್. ಐ ಕರೂರು—ಧರ್ಮಾವರಂ—ಶ್ರೀ ಆ. ನ. ಕೃಷ್ಣರಾಯರು—ಶ್ರೀ ದೇವುಡು ನರಸಿಂಹಶಾಸ್ತ್ರಿಗಳು ಬೆಂಗಳೂರು—ಶ್ರೀ ಕಡೂರು ಶ್ರೀನಿವಾಸ ರಾಯರು—ಶ್ರೀ ಮಾಸ್ತಿ ರಾಯಚೂರು—ಶ್ರೀ ಸ್ವಾಮಿ ಶ್ರದ್ಧಾನಂದ ಶ್ರೀ ಕಳಲಾಮನೂರ ತುಂಗ ಧಮ್ಮ—ಪಂಡಿತ ತಾರಾನಾಥರು - ಮೊದಲಾದ ಮಹಾನುಭವರ ಲೇಖನ—ಕತೆ—ಕವಿತೆಗಳಿಂದಲೂ ಸುಪ್ರಸಿದ್ಧ ಮಹಿಳಾ ಮಹನೀಯರ ಭಾವಚಿತ್ರಗಳಿಂದಲೂ ಕೂಡಿ ಪ್ರಕಟವಾಗಿರುವುದು ೧೯೩೫ನೆಯ ವರ್ಷದ ಚಂದಾದಾರರಿಗೆ ಉಚಿತ ಬೆಲೆ ೦—೩—೦

ವಿಳಾಸ - ಸರಸ್ವತೀ ಕಾರ್ಯಾಲಯ,
ಚಾಮರಾಜಪೇಟೆ—ಬೆಂಗಳೂರು ಸಿಟಿ

ಮಂಗಳೂರಿನ ಪೇಟೆಧಾರಣೆ

ಸಾಮಗ್ರಿಗಳು	ಇಂದ	ವರೆಗೆ
	ರೂ. ಆ	ರೂ. ಆ
ಹೊಸ ರಾಶಿ ಅಕ್ಕಿ	3— 2	3— 4
ಹಳ್ಳು ಮುಸ್ಸಂತಿ	4— 0	4—10
ಹಳ್ಳು ಗುಮ್ಮೆ	3— 8	3—12
ಹಳ್ಳ ಜಾಗ್ರಿ	3— 5	3— 8
ಉಪ್ಪರ ಅವ್ವಲ್ ಬೆಲ್ಲಿಗೆ	4— 0	5— 5
ರಂಗೂನು ಬಿ. ಗೋ ಅಕ್ಕಿ	5— 0	5— 4
ಎಲ್ಲಾರುಬೆ ಮು ಅಕ್ಕಿ	4— 2	4— 4
ಗೋದಿ ಗೋಡೆ ಅಕ್ಕಿ	10— 0	12— 8
ತೊಗರಿ ಗೋಡೆ ಅಕ್ಕಿ	9— 6	10— 0
ಹುರುಳಿ ಗೋಡೆ ಅಕ್ಕಿ	6 — 0	7 — 0
ಕಡಲೆ ಗೋಡೆ ಅಕ್ಕಿ	7 — 0	10— 8
ತೊಗರಬೇಳೆ ಗೋಡೆ ಅಕ್ಕಿ	10— 0	17— 0
ಉದ್ದು ಗೋಡೆ ಅಕ್ಕಿ	8— 0	8— 2
ಹೆಸರು ಗೋಡೆ ಅಕ್ಕಿ	6—10	7— 6
ಊರುಬೆಲ್ಲ ಖಂಡಿ ಅಕ್ಕಿ	32— 8	35— 0
ಉಪ್ಪು ಗೋಡೆ ಅಕ್ಕಿ	4— 8	5— 0
ಪೊಪ್ಪಿ ಖಂಡಿ ಅಕ್ಕಿ	41— 0	43— 0
ಪೊಪ್ಪಿ ಹಂಡಿ ಖಂಡಿ ಅಕ್ಕಿ	31— 0	32— 0
ಎಳ್ಳಿಂಡಿ ಖಂಡಿ ಅಕ್ಕಿ	30— 0	35— 12
ಪೊಪ್ಪಿ ಎಕ್ಕೆ ಮಣ ಅಕ್ಕಿ	8— 0	4— 0
ಎಳ್ಳಿಕ್ಕೆ ಮಣ ಅಕ್ಕಿ	5— 2	5—10
ಚಿಮಿನೆಎಕ್ಕೆ ಪೆಟ್ಟಿಗೆ ಅಕ್ಕಿ	5— 7	5—7
ಮೋರಸ ಸಕ್ಕರೆ ಮ ಅಕ್ಕಿ	3— 6	3— 8
ಮೆಣಸು	5— 4	6— 4
ಸಾಸಿವೆ ಮುಡಿ ಅಕ್ಕಿ	4—12	5— 4
ಕಾಳುಮೆಣಸು ಪು ಅಕ್ಕಿ	155— 0	160— 0
ಯೇಲಕ್ಕಿ ಮಣ ಅಕ್ಕಿ	24— 0	29— 0
ಗೇರುಬೀಜ ಮು ಅಕ್ಕಿ	3— 8	3—12
ಕಬ್ಬಿಣ ಖಂಡಿ ಅಕ್ಕಿ	42— 0	44— 0
ತಾಂಬ್ರುತಗಡು ಮು ಅಕ್ಕಿ	9 — 8	10— 0
ತಾಂಬ್ರುಪಾತ್ರೆಗಳು ಮ ಅಕ್ಕಿ	12— 8	14— 0
ಚೀಪಬೆಳ್ಳ ಸೇರು ಅಕ್ಕಿ	14—12	15— 0
ಹುತ್ತಾಳೆ ತಗಡು ಮ ಅಕ್ಕಿ	9— 2	9—10
ಪವನು ಅಕ್ಕಿ	21— 8	21— 8
ಹುಣಸೆ ಹುಳಿ ಖಂಡಿ ಅಕ್ಕಿ	30— 0	40— 0
ನೇಟಿವ್ ಕಾಫಿ ಖಂಡಿ ಅಕ್ಕಿ	185— 0	190— 0
ಪೂಬೇರ ಕಾಫಿ ಖಂಡಿ ಅಕ್ಕಿ	275— 0	285— 0
ಪಕೆ ಅಡಿಕೆ	80 — 0	115— 0
ಹೊಸ ಅಡಿಕೆ	60— 0	80 — 0

ಶಾಲಿವಾಹನ ಬಾ ಶಕ ೧೮೫೬ನೆಯ ಭಾವ ಸಂವತ್ಸರದ ಮಾಘ ಶು. ೬ ಶನಿವಾರದಿಂದ ಮಾಘ ಶು೧೨ ಶುಕ್ರವಾರದ ವರೆಗಿನ ಪಂಚಾಂಗ (೧೯೩೫ನೇಯಸಂಹಸೋಣ)

ತಾರೀಖು	ವಾರ	ತಿಥಿ	ನಕ್ಷತ್ರ	ಯೋಗ	ಕರಣ	ಸೂರ್ಯೋದಯ	ವಿಶೇಷ
9	ಶನಿ	೬	೧೦	ಒಬ್ಬನೇ	೪೦	೭೬	
*	ರವಿ	೭	೪	ಧೃವಯೇ	೪೦	೭೪	
11	ಸೋಮ	೮	೬	ಕೃತ್ತಿಕಾ	೪೦	೭೯	
12	ಕುಜ	೯	೭	ರೋಹಿಣೀ	೪೩	೪೦	
13	ಬುಧ	೧೦	೭	ಮೃಗತಿರಾ	೪೫	೧	
14	ಗುರು	೧೧	೯	ಆರ್ದ್ರಾ	೪೯	೨	
15	ಶುಕ್ರ	೧೨	೧೨	ಪುನರ್ವಸೂ	೫೪	೩	

Standard Furniture Co. Ltd

KALLAI, MALABAR

The BEST HOUSE for FURNITURE.

BRANCHES:—

Madras — 34—35, General Patters Road, Mount Road

Trichinopoly —11, Promenade Road, Cantt

NEW ARRIVALS.

Medicines.

Dr Schuessler s Twelve Tissue Remedies 5 gr bot As 4/-
Homoeopathy Medicines 5 gr bot As 5/—
Sugar of Milk Dr Schwabe's original bot 1lb Rs 2/-
Haarlem Oil-a world renowned remedy As 8/ per phial
Dr Haeles New Curative Earth—Radium Cure Rs 4/-per lb
Dr Schwabes other special remedies are always in stock
Please send in your postal needs
Kanarese Book a Family Guide to Biochemistry Re 1/-
" Domestic Homoeopathy Re 1-4/-

If you own these two Books you will be able to pick up treatment and administer Tissue & Homeopathy Medicines successfully without consulting others

German Toilet Soaps, Shaving sticks and Washing and Bleaching powders.

Toilet soaps to suit all tastes and prices from As 2/6
Delightful in aroma, charming in appearance. Please try

Kirloskar Pumps.

We are the Representatives for Kirloskar Brothers for their reliable Shallow well and Deep well Lamps, Spring Cots, Spring Couches etc, and steel —

Pipes and pipe fittings at cheap prices Coir Mats and Mattings

Steadler Pencils and Stationeries

We are the recognised agents for STADLERS all stationeries and shall be glad to serve you

Olympia Typwriter.

An up to date Machine in Standard and portable sizes

For further particulars please write to —

Basel Mission Book & Tract Depository,
Mangalore S K or Hubli, S M

ರೇಷ್ಮೆಯಂತೆ, ನುಣುಪಾದ ಮತ್ತು ಹೊಳಪಾದ ಕೇಶಧಾಮ

ದಿನಸಿಕ್ಕಿದ ಸ್ನಾನಕ್ಕೆ ಮುಂಚಿತವಾಗಿ ಸಿಮ್ಮು ಕೂದಲು ಗಳನ್ನು ಒಣಾಗಿ ಬಾಚಿ, ಬ್ರಶ್ಶಿನಿಂದ ಸವರಿ, ಆ ನಂತರ

"ಕುಂತಳ ಕೌಮುದಿ"

ಎಂಬ ಹಿಂದೂಸ್ಥಾನದ ಪ್ರಸಿದ್ಧ ಕೇಶ ತೈಲ್ಯದಿಂದ ಕೂದಲುಗಳ ಬುಡವನ್ನು ಜಾಗರೂಕತೆಯಿಂದ ತಿಕ್ಕಿರಿ

(ಮನಸ್ಸಿಗೆ ಸ್ವಚ್ಛರವಾದ ಸುಗಂಧವನ್ನುಳ್ಳದು)

ಹಿಂದೂಸ್ಥಾನದಲ್ಲೆಲ್ಲ ಸರ್ವತ್ರ ಉಪಯೋಗಿಸಲ್ಪಡುತ್ತಿದೆ

ಕಛೇರಿಯ ಬೆಲೆ ಸೀಸೆ ಒಂದಕ್ಕೆ ರೂ.0—12—0

ಆರ್ ಸಿ ಸೇನ್ ಎಂಡ್ ಕೋ.,
ಲಿಮಿಟೆಡ್, ಕಲ್ಕತ್ತ

ವಿಜಯಂತರು —

ಕುಂತಳ ಕೌಮುದಿ ತೈಲ,
ನೆಲ್ಲೂರ ಅಸ್ಪತ್ರೆ ಎದುರು, ಮಂಗಳೂರು

ಮೆನೇಜರರ ನೋಟೀಸು.

ಸ್ವದೇಶಾಭಿಮಾನಿಯ ಚಂದಾ ಅವಧಿ ಮುಗಿಯುತ್ತಿದೆಂದು ನೋಟೀಸು ಕೊಟ್ಟಿದ್ದನೆ ಅಂತಹ ಚಂದಾದಾರರು ಮುಂದಿನ ವರ್ಷದ ಬಗ್ಗೆ ಚಂದಾ ಮೊಬಲಗನ್ನು ಕೂಡಲೇ ರವಾನಿಸಬೇಕು ಪತ್ರಿಕೆಯು ಮುಂದಕ್ಕೆ ಬೇಕೋ ಬೇಡವೋ ಎಂಬ ಬಗ್ಗೆ ನೋಟೀಸು ತಲಪಿದೊಡನೆ— ಅಗತ್ಯವಾಗಿ ತಿಳಿಸಬೇಕು

ತೆರೆಯ ಮರೆಯಲ್ಲಿ

ಅಥವಾ

ಅಂತರಂಗ.

ಲೇಖಕರು:—ಶ್ರೀ ವಿವಿಧಾನು ಕಾರಂತರು.

೫. "ಕೊಟ್ಟ ಹೆಣ್ಣು ಕುಲದ ಹೊರಗೆ"

ಮರುದಿನ ಬೆಳಿಗ್ಗೆ ಎಂದಿನಂತೆ ಎದ್ದು ಕೆಲಸಗಳಲ್ಲಿ ತೊಡಗಿದ್ದ ಕನಕಲತೆಯ ಮನಸ್ಸಿನಲ್ಲಿ ಇತ್ತ ಮುಗ್ಧಾಯ ವೆಂಕಟರಮಣಗೆ ಹುಡುಗಿಯ ರೂಪಲಾವಣ್ಯವನ್ನು ಕಂಡು ಸಂತೋಷವಾಯಿತು. ಅತ್ತ ಯಿದ್ದಿಲ್ಲವಾದರೂ, ಮಾವನ ತಂಗಿಯು ಮಾಡುವ ಉಪಚಾರಗಳಿಂದ ಮನಸ್ಸು ತೃಪ್ತಿಯಾಯಿತು. ಚತುರ್ಥಿ ದಿನ ಹುಡುಗಿಯನ್ನು ಕರೆದುಕೊಂಡು ಬಂದನು. ಗೃಹ ಪ್ರವೇಶ ವಾಯಿತು. ಜೋಯಿಸರನ್ನುತ್ತಾರೆ—ಗೃಹಪ್ರವೇಶದ ಮುಹೂರ್ತವು ಚೆನ್ನಾಗಿದ್ದಿಲ್ಲವೆಂದು. ಆದರೆ ಮರುದಿನವೇ ಮಂಜುನಾಥಯ್ಯನಿಗೆ ಕೋರ್ಟು ಕೆಲಸವಿದ್ದುದರಿಂದ ಅದೇ ಮಹೂರ್ತದಲ್ಲಿಯೇ ಮಾಡಿದರು. ಅವರು ಪುರೋಹಿತರ ಸಾಲ್ಕು ವರ್ಷಗಳ ಬಳಿಕ "ನಾನು ಅಂದೇ ಅಂದಿದ್ದೆ. ಗೃಹ ಪ್ರವೇಶದ ಮುಹೂರ್ತ ಚೆನ್ನಾಗಿದ್ದಿಲ್ಲವೆಂದು. ಆಗಾಲೇ ಗ್ರಹಚಾರ ಪ್ರವೇಶವಾಗಿರ ಬೇಕು" ಎನ್ನುತ್ತಿದ್ದರು. ನಿಜ ವಿರಲು ಬಹುದು. ಅಂತು ಸಂಗತಿ ಸ್ವಾರಸ್ಯಗಳನ್ನು ನೋಡು ವಾಗ ಹಾಗೆಯೇ ಎಂದು ಕಾಣುತ್ತದೆ. ಸರಿ, ವಿವಾಹ ಉಭಯ ಕುಶಲೋಪರಿಗಳಾದ ಬಳಿಕ ವೆಂಕಟರಮಣನು ತಿರುಗಿ ಶಾಲೆಯನ್ನು ಸೇರಿದನು. ಈ ವರುಷ ಅವನು ಬಿ. ಎ. ಪರೀಕ್ಷೆ.

ಪರೀಕ್ಷೆಯಾಗುವ ಸಮಯದಲ್ಲಿ ಕನಕಲತೆ ತವರು ಮನೆಯಲ್ಲಿದ್ದಳು. ರಜಾರಂಭಕ್ಕೆ ಸರಿಯಾಗಿ ಅವಳು ಋತುಮತಿಯಾದಳು. ಸೋಮಪ್ಪಯ್ಯನವರು ಶುಭ ಸಮಾಚಾರವನ್ನು ಸಂಬಂಧಿಗೆ ತಿಳಿಸಿದರು. ಆ ಸಮಯಕ್ಕೆ ಸರಿಯಾಗಿ ಮನೆಗೆ ವೆಂಕಟರಮಣನ ಆಗಮನವೂ ಆಯಿತ್ತು. ಅವರ ಅಪೇಕ್ಷೆ ಇನೇ ಧನಕ್ಕೆ ಋತು ಶಾಂತಿಯನ್ನು ಮಾಡಿ ಸುನ ಎಂದಿತ್ತು. ಆದರೆ ರಾಮರು ಅಷ್ಟು ಅವಸರವಿಲ್ಲ ವೆಂದು ಹೇಳಿ ಕಳುಹಿಸಿದರು. ಹತ್ತು ದಿನ ಕಳೆದ ಬಳಿಕ ಸೋಮಣ್ಣಯ್ಯನು ಅವರ ಮನೆಗೆ ಬಂದು ವೆಂಕಟರಮಣ ನೊಡನೆಯೇ ಸ್ವಸ್ತಾಪವನ್ನೆತ್ತಿದರು. ಸಿರಿ ಕೊಡಿಯಲ್ಲಿರುವ ಮಂಜುನಾಥಯ್ಯನವರಿಗೆ ಅದು ಕೇಳಿಸಿತು. ಅವರು ಸಿಟ್ಟಾಗಿ ಹೊರ ಬಂದರು. "ಏನು, ಮನೆಯಲ್ಲಿ ಯಜ ಮಾನನಾದ ನಾನು ಸತ್ತಿರುವೆನೆಂದು ತಿಳಿದಿದಾ." ಎಂದರು. ಸೋಮಣ್ಣಯ್ಯನ ಮುಖ ಸಪ್ಪಗಾಯಿತು. "ಕ್ಷಮಿಸಿ, ನಾನು ಹೀಗೆಯೇ ಒಂದು ಮಾತು ಕೇಳಿದೆ. ನಿಮ್ಮೊಡನೆ ದಿನ ನಿರ್ಣಯಿಸುವುದಕ್ಕೆಂದೇ ನಾನು ಬಂದನಲ್ಲ" ಎಂದು ಸಮಾಧಾನ ಹೇಳಿದರು. "ದಿನವೇ? ಆಗುವುದಿಲ್ಲ ಬಿಡಿರಿ. ಆಸೂರು ರೂಪಾಯಿ ಪೂರ್ಣತಂದು ಕೊಟ್ಟ ದಿನಹ ಪ್ರಸ್ತಾಪ ನನ್ನು ಎತ್ತಬೇಡಿರಿ"—ಎಂದರು. ಸೋಮಣ್ಣಯ್ಯನು ಅದಕ್ಕೆ ಒಡಂಬಡಲಿಲ್ಲ. "ನೀವು ಅಷ್ಟು ಹಟಮಾಡಿದರೆ ೧೦೦ ಕೊಡು ತ್ತೇನೆ. ಆದರೆ ಆ ಶರ್ಯತ್ತಿನ ಮೇಲೆ ಶಾಂತಿಯಾಗ ಬಾರದು" ಎಂದರು. ಅದೇ ಶರ್ಯತ್ತಿನ ಮೇಲೆ ಆಗ ತಿಳ್ಳಿದೆಯೆಂದು ಮಂಜುನಾಥಯ್ಯನು ಹಟ ಹಿಡಿದರು. ಸರಿ ಯಾಯಿತು. ಅವನಿಷ್ಟದಲ್ಲಿ ಹಟ ಅವಕಾಶವು ಹಿಂದಿರು ದಿನ ನಿಶ್ಚಯವಾಗುವಂತಿಲ್ಲ. ಸೋಮಣ್ಣಯ್ಯ ನಂಟರ ಮನೆಗೆ ಬಂದವರು ನೀರು ಸಹ ಮುಟ್ಟದೆ ಹಲಿ ಹರಿ ಎಂದು ಮನೆ ಹಾದಿ ಹಿಡಿದರು.

ಎರಡು ವರುಷಗಳು ಸಂದುವು. ಇಕ್ಕಡೆಯವರೂ ಮಾತನಾಡಿಸಲಿಲ್ಲ. ಹುಡುಗನಿಗೆ ಬಿ. ಎ. ಯೂ ಆಯಿತು. ಸೋಮಣ್ಣಯ್ಯನಿಗೆ ತುಂಬಾ ಕಷ್ಟವೆನಿಸಿತು. ಊರ ಮುಂದೆ ಅಪಮಾನವನ್ನು ಕೇಳುವುದು ಕಷ್ಟವಾಯಿತು. "ಏನೋ ಇರಲೀಕು" ಎಂದು ಜನರು ಅಡಿಕೊಳ್ಳುತ್ತಿದ್ದರು. ಏನೋ ಇತ್ಕೆಂಬುದು ನಿಜ. ಆದರೆ ಜನರು ತಿಳಿದ ಏನೋ ಇದ್ದಿರ ಲಿಲ್ಲ. ಇತ್ತ ತಾಯಿಯಿಲ್ಲದ ಹುಡುಗಿ ಕನಕಲತೆ. ಅವಳ ಅಜ್ಜಗೆ—ತಂದೆಯ ತಾಯಿಗೆ, ಮಗಳ ವಿಷಯವಾಗಿ ದುಃಖ ಬಲವಾಯಿತು. ಸೋಮಣ್ಣನನ್ನು ಕರೆದು "ಮಗೂ ಳಲ ಮಾಡಬೇಡ, ಒಬ್ಬಾರೆ ನುಗುವಿನ ಸುಖ ಹಾಳು ಮಾಡ ಬಾರದೆಂ"ದರು. ಆಷ್ಟರಲ್ಲಿಯೇ ಮಂಜುನಾಥಯ್ಯನವರು ಹುಡುಗನಿಗೆ ಎರೆದನೇ ಲಗ್ನ ಮಾಡಿಸುತ್ತೇನೆ" ಎಂದು ಸುದ್ದಿ ಹುಟ್ಟಿಸಿದರು. ಸೋಮಣ್ಣಯ್ಯನಿಗೆ ಗಾಬರಿಯಾಯಿತು. "ಹಣ ಕೊಡುತ್ತೇನೆ ಅಂತೂ ರಾಜಿಯಾಗಲಿ" ಎಂದರು. ಅವರು ಬಾಗಿದ್ದು ನೋಡಿ ಮಂಜುನಾಥಯ್ಯನವರು—"ಹಾಗಿ ಬರಲಿ, ಈಗ ನೂರು ಕೊಟ್ಟರೆ ಸಾಲದು. ಸಂಪಾಸಿರ ಲಂಂನ್ನು ಇರಿಸಿದರೆ ಮಾತ್ರ ಋತು ಶಾಂತಿ ಇಲ್ಲವಾದರೆ ನಮ್ಮ ಹುಡುಗನಿಗೆ ಕಳ್ಳನು ಹೆಣ್ಣು ಕೊಟ್ಟಾನು"—ಎಂದರು. ಆದರೆ ಅಷ್ಟು ವಿಸರಿಕೆಳ್ಳ ಹೋಗಲು ಅವರ ಸ್ನೇಹಿತರು ಬಿಡಲಿಲ್ಲ. ವೆಂಕಟರಮಣನೂ ತನ್ನಂದಾದ ಪ್ರಯತ್ನವನ್ನು ಅಂತರಂಗದಲ್ಲಿ ಮಾಡುತ್ತಿದ್ದನು. ಅಂತೂ ನೂರು ರೂಪಾಯಿಯು ಬಂದಿತು. ಕನಕಲತೆಯು ವೆಂಕಟರ ಮಣನ ಸಂಸಾರದಲ್ಲಿ ರಾಣಿಯಾಗಲು ಬಂದಳು. ಇದು ಏಕಾದಶಿಯ ದಿನವಿರಬೇಕು. ಆದರ ಮೇಲೆ ಬಂದುದು ಅನುವಾನಕ್ಕೆ. ಹುಡುಗಿ ಮನೆಗೆ ಬಂದು ಎರಡು ವರುಷ ವಾಯಿತು. ಸೋಮಪ್ಪಯ್ಯನು ಅಳಿಯನನ್ನು ಮಗಳನ್ನು ಕರೆಯಲು ಹತ್ತು ಬಾರಿ ಬಂದರು. ಆದರೆ ರೂ ೫೦೦ ಕೊಟ್ಟರೆ ಮಗಳನ್ನು ಮನೆಗೆ ಒಯ್ಯಬಹುದು" ಎಂದರು. ಹೆಚ್ಚೇನು—ಕನಕಲತೆಯ ಮೊದಲಿನ ಬಾಣಂತನವು ಪತಿ ನಿಲಯದಲ್ಲೇ ಕಳೆಯಿತು. ಸೋಮಣ್ಣಯ್ಯನು "ಇನ್ನೇನು? ಕೊಟ್ಟ ಹೆಣ್ಣು ಕುಲದ ಹೊರಗೆ. ಎಷ್ಟು ಯೋಚಿಸಿದರೆ ಏನು ಫಲ? ಎಂದರು. ಆದರೆ ಅವರಿಗೂ ಯೋಚಿಸುವ ಗಳಿಗೆ ಬಂದಿತು. ಒಂದು ದಿನ ಅವರ ತಾಯಿಯು ತಮ್ಮ ಮುಪ್ಪಿನಲ್ಲಿ ಹಾಸುಗೆ ಹಿಡಿದರು. ಅವರು ಬದುಕುವುದು ಕಠಿಣವೆಂದು ಎಲ್ಲರಿಗೂ ತೋರಿತು. ಮಗ ನನ್ನು ಕರೆದು "ಮಗೂ ಏನಾದರೂ ಮಾಡಿ ಕನಕುವನ್ನು ಕರೆಯಿಸಲಾರೆಯಾ. ನೊಮ್ಮಗಳ ಮಗುವನ್ನು ಕಂಡು ಸಾಯುತ್ತೇನೆ" ಅಂದಳು. ತಾನಾಗಿ ಹೇಳಿ ಕಳುಹಿಸಿದರೆ ನ್ಯರ್ಥವೆಂದು ಅವರಿಗೆ ತಿಳಿದಿತ್ತು. ಇತ್ತ ಆಸೆ ಪೂರೈಸಲು ೫೦೦ ರೂಪಾಯಿಗಳನ್ನು ಕೊಡಲು ಸಾಧ್ಯವಿರಲಿಲ್ಲ. ಒಮ್ಮೆ ಆಸ್ತಿ ಮನೆ ಮಾರಿ ಕೊಟ್ಟರೂ, ತಿರುತಿರುಗಿ ಅದೇ ಹೇಳಿದರೆ ಅವನಿಂದ ಪೂರೈಸಲು ಸಾಧ್ಯವುಂಟೇ? ಸಾಲದುದಕ್ಕೆ ಮದುವೆಯಾಗಲಿರುವ ಹೆಣ್ಣು ಕೂಸುಗಳು ಇನ್ನೆರಡಿವೆ. ಆದರೆ ತಾಯಿಯ ಮಾತನ್ನು ನಿರಾಕರಿಸಲಾರದೆ ಉಪಾಯಾಂತರದಿಂದ ಬೀಗರ ಮನೆಗೆ ಜನ ಕಳುಹಿಸಿ ಮಗಳ ಕವಿಗೆ ಸುದ್ದಿ ಮುಟ್ಟಿಸಿದನು. ಆಗ ವೆಂಕಟರ ಮಣನು ಚಾಕರಿ ಹುಡುಕುವುದಕ್ಕೆಂದು ಮಂಗಳೂರಿಗೆ ಹೋಗಿದ್ದನು. ಇತ್ತ ಕನಕಲತೆಯು ತವರು ಮನೆಯನ್ನು ಕಾಣದೆ ಎರಡು ವರುಷವಾಯಿತು. ಅಜ್ಜಿಯನ್ನು ಕಾಣುವ ಆಸೆ ಅಷ್ಟಿಷ್ಟಿರಲಿಲ್ಲ. ಅದರಲ್ಲೂ ಅವಳು ಸಾಯುವ ಗಳಿಗೆಯಲ್ಲಿ ತಾನಿರಬೇಕೆಂದು ಅವಳು ಆಸೆ ಮಾಡುವುದ ರಲ್ಲಿ ಆಶ್ಚರ್ಯವೇನು?—ಎಂದಳು.

ನಾವಂದಿರ ಮುಂದೆ-ಹೋಗಿ ನಿಂತಳು. ಸುದ್ದಿಯನ್ನು ಕಣ್ಣೀರು ಕರೆದು ಹೇಳಿದಳು. ಅವರಿಗೆ ತನಗೆ ಸುದ್ದಿ ಬಾರದೆ ಇವಳ ಕವಿಗೆ ಮುಟ್ಟಿಸಿದ್ದಾಗಿ ಬಂದ ಕೋಪ ಅಷ್ಟಿಷ್ಟಲ್ಲ. ಅಲ್ಲದೆ ಸೊಸೆಯ ಆಗ್ರಹ ಬೇರೆ. ವ್ಯಾಸ ಹೋದರೂ ನೀನು ಹೋಗಬಾರದು ಎಂದರು. ಕನಕಲತೆಗೆ ದುಃಖ ತಡೆಯಲಿಕ್ಕಾಗಲಿಲ್ಲ. ಅಡುಗೆ ಮನೆಗೆ ಬಂದು ಹಣೆ ಹಣೆ ಬಡಿದುಕೊಂಡಳು. ದುರ್ದೈವಕ್ಕೆ ಗಂಡನು ಆ ದಿನವೇ ಮನೆಗೆ ಬಂದನು. "ಕಲಸವಾಯಿತು ಮಂಗಳೂರಲ್ಲಿ ಇನ್ನು ಬಿಚಾರ ಮಾಡುವಾ" ಎಂದು ಹೇಳಿದನು. ಪ್ರತಿಯಾಗಿ ಇವಳು ತಪ್ಪ ಗೋಳನ್ನು ಅವನ ಮುಂದಿರಿಸಿದಳು. ಅವನಿಗೆ ಏನೆನ್ನುವುದಕ್ಕೂ ಧೈರ್ಯ ಬರಲಿಲ್ಲ.... "ಅಪ್ಪನೇನೆಂದನು" ಎಂದು ಕೇಳಿದನು. ಕನಕಲತೆಯು ಹೇಳಿದಳು. "ಹಾಗಾದರೆ ಹೇಗೆ ಹೋಗುವುದಕ್ಕಾದೀತು?" ಎಂದನು. ಕನಲತೆಯು ಕಾಲನ್ನು ಹಿಡಿದು ಬೇಡಿಕೊಂಡಳು. ಅಡಿಕ್ಕೆ ಪತಿರಾಯರು "ನನ್ನೊಡನೆ ಕೇಳ ಬೇಡ" ಎಂದನು. ಕನಲತೆಯು ಮೌನ ನಾದಳು. ಆ ರಾತ್ರೆ ಸುದು ಮುಂಜಾನೆಯಾಗುವಾಗ ಕನಕಮ್ಮನು ತಾನೊಬ್ಬಳೇ ತವರು ಮನೆಯ ಬಾಗಿಲಿನಲ್ಲಿ ದ್ದಳು. ಆತುರದಿಂದ ಹೋಗಿ ಅಜ್ಜಿಯನ್ನು ಕಂಡಳು. ಒಂದೆರಡು ದಿನಗಳಲ್ಲಿ ಆ ಮುದುಕಿ ಸುಖ ವ್ಯಯಾಣವನ್ನು ಬೆಳಿಸಿದಳು. ಆಳೆಯು ಇನ್ನಿರಬಾರದೆಂದು ತಿರುಗಿ ಗಂಡನ ಮನೆಗೆ ಬಂದಂತೆಯೇ ಒಬ್ಬಂಟಿಗಳಾಗಿ ನಡೆದಳು.

ಅವಳು ಮನೆಯ ಮುಂದಿನ ಅಂಗಣಕ್ಕೆ ಬಂದಾಗ ಮಾವಂದಿರು ನಿಂತಿದ್ದರು. ಪ್ರಳಯಕಾಲದ ಭದ್ರನು ನಿಂತಂತೆ! "ಎಲ್ಲಿಗೆ ಹೋಗಿದ್ದೀ" ಎಂದು ಕೇಳಿದರು. ಕನಕಲತೆ ನಡುಗುತ್ತ ಹೇಳಿದಳು. "ನನ್ನ ಮನೆಗೆ ಬರ ಕೂಡದು. ಇಂದು ಹೀಗೆ ಮಾಡಿದೆ. ನಾಳೆ ಕಂತರ ಒಟ್ಟಿಗೆ ಒದಿ ಹೋಗಿ ಬೇಸರವಾಗಲು ನಮ್ಮ ಮನೆಗೆ ಬಂದರೆ ನಿನ್ನನ್ನು ಸ್ವೀರಿಸಿಕೊಳುತ್ತೇವೆಂದು ತಿಳಿದೆಯಾ?" ಎಂದು ಗದರಿಸಿದರು. ಕನಕಮ್ಮನು ಅತ್ತು ಕ್ಷಮೆ ಬೇಡಿದಳು ಗದ್ಗಲ ಕೇಳಿ ವೆಂಕಟರಮಣನು ಅಳುವ ನುಗುವನ್ನು ಹಿಡಿದು ಕೊಂಡು ಅಲ್ಲಿಗೆ ಬಂದನು. "ಮಗಃ ನೋಡಿಕೋ ಅವಳನ್ನು ನಮನೆಯೊಳಕ್ಕೆ ಹೊಗ್ಗಿಸಿಕೊಂಡರೆ ನೀನು ನನ್ನ ಮಗನೇ ಅಲ್ಲ" ಎಂದು ಅವರ ಕೆಲಸಕ್ಕೆ ಅವರು ಹೋದರು. ಕನಕಲತೆಗೆ ದುಃಖವು ಉಕ್ಕಿ ಬಂದಿತು. ಫನಳನ್ನು ಕಂಡು ಮಗುವು ಮತ್ತಷ್ಟು ಅತ್ತಿತು. ಅವಳು ತನ್ನ ಪಾಪರಾಧ ಗಳಿನ್ನು ಮೆನ್ನಿಸಬೇಕೆಂದು ಕಾಲ ಮೇಲೆ ಬಿದ್ದಳು. ಇನ್ನು ನುಂದೆ ಹಾಗೆ ಮಾಡುವುದಿಲ್ಲೆಂದು ಆಣೆ ಪಾಡಿಕೊಂಡಳು. ಆದರೆ ಗಂಡನ ಕಲ್ಲೆದೆ ಕರಗಲಿಲ್ಲ. ಕರಗಿದರೆ ಅಪನು ತಂದೆಯ ಮಗನಾಗುವುದು ಹೇಗೆ?

ಕನಕಮ್ಮನು ಅಲ್ಲೇ ಅಂಗಣದಲ್ಲಿ ಉರುಳಾಡುತ್ತ ಬಿದ್ದಳು. ಊಟವಿಲ್ಲ, ಆನ್ನವಿಲ್ಲ, ನೀರಿಲ್ಲ.... ಎರಡು ದಿನಗಳೇ ನಂದುವು. ಅವಳಿಗ ದಣಿದು ದಣಿದು ಕಾಸಿಗೆ ನಾಲ್ಕಾಣೆತ್ತಿ ನೊರ್ಧ ಹೋಗುತ್ತಿರುವಳು. ಆಕ್ಕಳವಾಗಿ ಎರಡನೆಯ ದಿನ ಊರಿನ ವ್ಯಕ್ತಿಲರು ಬಂದು ಈ ಅವನ್ಯೆಯನ್ನು ಕಂಡರು. ಅವರು ಕನಿಕರಗೊಂದರು. ಆದರೆ ತಮ್ಮ ಸವಿ ನ್ಯಧಿಗಳು ಮಂಜುನಾಥಯ್ಯನವರಿಗೆ ತಾಟವೆಂದು ತಿಳಿದು. ಆದುದರಿಂದ ಬೇರೆ ಉಪಾಯ ಕಂದರು.—"ಸ್ವಾಮಿ, ಎಂದು

(ಉಸೀ ಮುಂದಿನ ಸಂಚಿಕೆಯಲ್ಲಿ ಮುಂದುವರಿಯುವುದು.)

—ನಡೆ—

ನೋಡಲು ಕಣ್ಣು, ಮಾಡಲು ಕೈ, ಯೋಚನೆಗೆ ತಲೆ, ಮಾತಿಗೆ ಬಾಯಿ, ಹಾಗೆಯೇ ನಡೆಗೆ ಕಾಲುಗಳು. ಬೈನ ಬಾಯನ್ನಾದರೂ ಕಟ್ಟಬಹುದು, ತಿರುಗುವ ಕಾಲನ್ನು ಕಟ್ಟಲಾರೆವು. ಹೆಂಗಸರ ಬಾಯನ್ನು ಕಟ್ಟುವುದೂ ಕಷ್ಟವೆಂದು ಲೋಕದೇ ಸಾರುತ್ತಿದೆ. ಕಾಲಿದ್ದವರ ಗತಿ ಹೀಗಾದರೆ, ಇನ್ನು ಕಾಲಿಲ್ಲದ ಹಳವನನವ ನನ್ನಲ್ಲಿ ಅವಲಕ್ಷಣವು. ಹೆಳವನ ಪಾಡು ಪಾಡಲ್ಲ. ಮೆಟ್ಟಿಲೇರಲಾರ. ಮಂಚವಿಳಿಯಲಾರ. ಹೆಣ್ಣಾದವಳು ಮದುವೆಯಾಗಲು ಮಾತು ಕೇಳಳು. ಅವಳ ಕಣ್ಣು ಬಣ್ಣವೇರುವುದು. ಹೆಳವನ ಅಥವಾ ಒಂಟಿಗಾಲಿನ ಕುಂಟಿನ ಕೈಯಲ್ಲಿ ಕೋಲಿದ್ದರೇನು? ಕಾಲಿಲ್ಲದ ಕೊರತೆಯು ಕೊರತೆಯೇ! ಕೀರ್ತಿವಂತನೇ ಇರಲಿ, ಹಣವಂತನೇ ಇರಲಿ, ಬುದ್ಧಿವಂತನೇ ಇರಲಿ, 'ಒಂದು ಕಾಲೂ ಕಾಲೇ ಅಲ್ಲ' ಎಂಬ ಗಾದೆಯು ಸುಳ್ಳಲ್ಲ. ಅಡಿಯನ್ನೆತ್ತಿ ಮುಂದಕ್ಕೆ ಅಡಿಯಿಟ್ಟಾಗಲೇ ಅದು ನಡೆಯೆಂದೆನಿಸುತ್ತಿದೆ. ನಡೆಯಲಾರದಂತಾಗುವುದು ಅನಾರೋಗ್ಯದ ಲಕ್ಷಣವು.

ಹುಟ್ಟಿದಾಗಲೇ ಮಾನವನು ನಡೆಯಲಾರ. ಅಡಿಯಿಡಲು ಮಾನವನು ಪಡಬಾರದ ಕಷ್ಟಪಡುವನು. ಬಿದ್ದುರುವನು. ಬೋರಲು ಬಿದ್ದು ಹೊಟ್ಟೆಯ ಮೇಲೆ ಸರಿದಿರುವನು. ಅಂಬಿಗಾಲಿಕ್ಕಿ ದಬ್ಬಡಿಯಿಟ್ಟಿರುವನು. ಕಳಿತು ಕುಂಡಿಗ್ಗಳಿಂದ ಸರಿದಿರುವನು. ನಿಂತು ತಪ್ಪು ಹೆಜ್ಜೆಗಳಿಟ್ಟಿರುವನು. ಆಸರೆ ಹಿಡಿದು ನಡೆದಿರುವನು. ಆ ಮೇಲೆ ಆಸರೆಯಿಲ್ಲದೆ ನಡೆಯಲಾದನು. ಅಡಿಗಳಿರುವುದರಲ್ಲಿ ಆರಿತೇರಿದವನಾದ ಮೇಲೆ ನಡೆಯು ಅಭ್ಯಾಸವಾಗಿ ಬಂದಿತು. ಅವಲೀಲೆಯಾಗಿ ನಡೆವನು. ನಡೆಯು ಸಾಗುತ್ತಿದೆ. ಕಾಲುಗಳಲ್ಲಾಡುವುದರಿಂದಲೇ ಅಡಿಗಳು ಭೂಮಿಯ ಮೇಲೆ- ಬೀಳುತ್ತಿವೆ. ಹೆಜ್ಜೆಯೇ ಅಡಿಯ ಗುರುತು. ಹೆಜ್ಜೆಯ ಗುರುತು ಅನೇಕ ವೇಳೆ ಕಣ್ಣಿಗೆ ಕಾಣಿಸದು. ನೀರು, ಬೆಂಕಿ, ಗಾಳಿ, ಆಕಾಶಗಳಲ್ಲಿ ಹುಡುಕಿದರೂ ತೋರಬಾರದು. ನೆಲಕ್ಕೂ ಇದಕ್ಕೂ ಮಾತ್ರ ಗಂಟು!

ನಡೆಯಬೇಕೆಂದು ಮನಸ್ಸಿನಲ್ಲಿ ಸಂಕಲ್ಪವುಂಟಾದಾಗಲೇ ಮನಸ್ಸು ಕಾಲುಗಳ ಮೇಲೆ ಅಧಿಕಾರವನ್ನು ತೋರಿದಲ್ಲಿ ನಡೆಯು ಮೊದಲಿಡುವುದು. ಒಂದು ಕಾಲನ್ನು ನೆಲದ ಮೇಲಿಟ್ಟೊಡನೆಯೇ ಮತ್ತೊಂದು ಕಾಲು ಮನುಷ್ಯನು ಬಿದ್ದುಬಿಡದಂತೆ ತಾನಾಗಿಯೇ ಸರಿ ಹೊಂದಿಕೊಳ್ಳುವುದು. ಭೂಮಿಯನ್ನು ಆಧಾರವಾಗಿಟ್ಟುಕೊಂಡು ಒಂದಡಿಯೆತ್ತಿ ಮತ್ತೊಂದನ್ನು ಮುಂದಿಡುವೆವು. ಎರಡೂ ಅಡಿಗಳನ್ನು ಏಕ್ಕೆಗೇ ಎತ್ತಿಟ್ಟಲ್ಲಿ ಅದು ಹಾರಿಕೆಯಾಗುವುದು. ಅಡಿಗಳಿಗೆ ಎಡಬಲವೆಂಬ ನಿಷ್ಕರ್ಷೆಯಿದೆ. ಚಿಕ್ಕ ದೊಡ್ಡ ಎಂಬ ಭೇದವು ನಿಸ್ಸಂದೇಹವಾಗಿಯೂ ಇದೆ. ಗಿಡ್ಡ ಉದ್ದವೆಂಬ ಭೇದವೂ ಪೂರ್ಣವಾಗಿಯೇ ಇದೆ. ಹಿಂದು, ಮುಂದು, ಮೇಲು, ಕೀಳು, ಇವೆಲ್ಲವೂ ಇದೆ. ದಿಕ್ಕೆಲ್ಲವೆನ್ನಬಹುದು ಕೆಲವರು. ಅದೂ ಇದೆ. ನಡೆದ ಮಾರ್ಗವನ್ನು ಅಡಿಗಳು ತೋರುವುವು. ನಾವು ನಿಂತರೆ ಅವೂ ನಿಲ್ಲುವುವು. ಮುಂದೆ ಸಾಗಿದರೆ ಅವೂ ಸಾಗುವುವು. ತಡವರಿಸಿದರೆ ಅವೂ ತಡವರಿಸುವುವು.

ಮಾನವನ ಉದ್ದೇಶ, ಮಾಡುವ ಕೆಲಸ, ಕೆಲಸಗಳ ಅವಸರ, ಅವಸರದಲ್ಲಿ ಚುರುಕತನ, ನಡೆವ ಪ್ರದೇಶ, ಸುತ್ತುಮುತ್ತಲಿನ ಆವರಣ, ಸ್ವಲಾಭ, ಆಶಿಸುವ ವಸ್ತು, ಇವುಗಳನ್ನು ಹೊಂದಿಯೇ ನಡೆಗಳು ಹಲವು ಹದಿನಾಲ್ಕಾಗಿರುವುವು. (ನಡೆಯೊಡನೆಯೇ ಬದಲಾಗುತ್ತಿರುವುವು ಅಡಿಗಳು. ದೀರ್ಘಾಲೋಚನೆಯಲ್ಲಿದ್ದರೆ, ದೊಡ್ಡಸ್ಥಿತಿಯು ಗಾಳಿ ಬೀಸಿದ್ದರೆ, ನಿಬ್ಬೆಯಲ್ಲಿದ್ದರೆ, ಮೈಮರೆತಿದ್ದರೆ, ಅಮಲುವದಾರ್ಥಗಳನ್ನು ಕಿಂಡಿದ್ದರೆ, ನಡೆವಾಗ ಗುರುತಿಸಲಾಗದ ದುಸ್ಥಿತಿಯು ಮಾನವನಲ್ಲಿ ಉಂಟಾಗಬಹುದು. ಹೆಂಡ ಕುಡಿದು ಅನುಲೇರಿದವರನ್ನು ನಡೆಸುವ ಕೆಲಸವು ಸುಧಾಕಾರನಿರೋಧಿಸಂಘಗಳಿಗಿರಲಿ. ನಾವು ನಿಜವಾಗಿ ಒಂದೇ ಒಂದು ಅಡಿಯಿಡದಿದ್ದರೂ, ಕನಸಿನಲ್ಲಿ ನೆಮ್ಮಲುಗಟ್ಟಲೆಯಾಗಿ ನಡೆದೇ ಬಿಡುವೆವು. ನಿದ್ದೆಯಲ್ಲಿದ್ದು ನಿರ್ಭಯವಾಗಿ ತಿರುಗುವ ದೊಂದು ರೋಗವು. ಎಚ್ಚರವಾಗಿ, ನಮ್ಮ ಮನಸ್ಸು ನಮ್ಮ ಕಾಲುಗಳ ಮೇಲೆ ಅಧಿಕಾರ ನೂಡುವುದರಿಂದಲೇ ನಾವು ಹೆಜ್ಜೆಯೆತ್ತಿ ಹೆಜ್ಜೆ ಯಿಡುವೆವು.

ನಡೆಗಳಲ್ಲಿ, ಒಲವು, ಠೀವಿ, ತಿರಗತಿ, ಒಯ್ಯಾರ ಮೊದಲಾದುವೆವೆ. ಹೆಡಿಗೆ ಅಡಿಗಳು ಹಿಂದಹಿಂದಕ್ಕೆ ಸರಿವುವು. ಮುಂದೆ ಸಾಗೆಂದರೂ ಸಾಗವು. ಕೋವದಲ್ಲಿ ಕಾಲುಗಳು ನೆಟ್ಟಗಾಗುವುವು. ಅಂದೋಳನದಲ್ಲಿ ಕಡವರಿಸುವುವು. ಹಾಸ್ಯದಲ್ಲಿ ಅಡಿಗಳು ವಿಚಿತ್ರ ಗತಿಯನ್ನು ಹೊಂದುವುವು. ಸ್ನೇಮದಲ್ಲಿ ನಡೆಯು ಇತರರ ಮೇಲೆ ಆಧಾರಗೊಂಡಿದೆ. ವೇಗದಲ್ಲಿ ಅಡಿಗಳ ಚುರುಕುತನವೂ, ಶಾಂತದಲ್ಲಿ ನಿಧಾನವೂ ತೋರಿಬರುವುದು. ನಡೆಯಲೇ ಭೇಕಂಬ ನಿರ್ಬಂಧವಿರುವಾಗ ಅವರ ನಡೆಯು ಅವರವರದೇ!

ಸಾಧಾರಣವಾಗಿ ನಡೆವ ಪ್ರತಿಯೊಬ್ಬನಿಗೂ ತಮ್ಮ ಗಮ್ಯಸ್ಥಾನವು ತಲೆಯಲ್ಲಿರುವುದೇ ಎಂದು ಯೋಚಿಸಿದಲ್ಲಿ, ಅಂತಹ ಯೋಚನೆಯಿಲ್ಲದೆ ತಿರುಗುವವರೇ ನೂರಕ್ಕೆ ಕೊಂಭತ್ತು ಮಂದಿ. ಇದು ಹೇಗಿದ್ದರೂ, ನಮ್ಮಲ್ಲಿ ಕೆಲವರು, ನಡೆವಾಗ, ಸಮ್ಮತಿಯನ್ನು ಎಲ್ಲಿಡೆಗೂ ಸಾರುತ್ತಹೋಗುವಂತೆ ತಲೆದೂಗುವರು. ಲೋಕದಲ್ಲಿ ನಾವು ಹೊರೆಯ ಕೂಲಿಗೆ ಆಸೆಗೊಳ್ಳದೆ ಹೊರೆಹೊರಲೇಬೇಕೆಂಬಂತೆ ತಲೆ ಬಗ್ಗಿಸಿ ನಡೆವರು. ತಲೆಬಗ್ಗಿಸಿರಲೇತಕ್ಕೆ? ತಲೆಯೆತ್ತಿಕೊಂಡಿರಲೇನು ನಾಚಿಕೆ? ಎಂಬಂತೆ ತಲೆಯೆತ್ತಿಕೊಂಡು ನಡೆಯದೆ ಕಾಲುಗಳಲ್ಲಾಡುವುವು ಕೆಲವರಿಗೆ. ಕೆಲವರಿಗೆ ನಡೆಯೆಂದರೆ ಬ್ರಹ್ಮಾನಂದವು. ಭುಜಗಳನ್ನು ಹಾರಿಸಿ ಹಾರಿಸಿ ನಡೆವರು. ನಡೆವುದೆಂದರೆ ಹೆದರುವವರೂ ಇರುವರು. ಇವರು ಬಗ್ಗಿ ನಡೆವರು. ಕೆಲವರು ತಗ್ಗಿ ನಡೆವರು. ಕೆಲವರು ಅಡಿಗಡಿಗೂ ಬೆಚ್ಚಿ ಬೀಳುವರು. ಆಯುಸ್ಸು ಕಡಿಮೆ, ಮಾಡತಕ್ಕುದು ಬಹಳ, ತಿಂದು ತಿರುಗುವ ಎರಡು ಗಳಿಗೆಯಾದರೂ ಕಾಲು ಸೋಲುವಂತೆ ಬೇಗಬೇಗನೆ ನಡೆವರು ಕೆಲವರು. ಎಲ್ಲವೂ ದೇವರಿಚ್ಛೆಯಂತೆ ಇದೆ. ಅಡಿಗಡಿಗೂ ಅವನಿಚ್ಛೆಯೇ ಎಂದು ನಡೆಯು ವಿಧಿಯ ಆಧೀನನೆಂಬಂತೆ ತಿಳಿವರು ಕೆಲವರು. ಹಕ್ಕಿಗಳು ರೆಕ್ಕೆಗಳನ್ನು ಬಡಿದುಕೊಳ್ಳುತ್ತ ಹಾರುವಂತೆ ಕೈಬೀಸಿ ನಡೆವರು, ಧಿಂಡಿಮ್ಮೆಂದು ನೆಲವದುರುವಂತೆ ನಡೆವರು ಕೆಲವರು. ಎತ್ತೆತ್ತಿ ಹೆಜ್ಜೆಯಿಕ್ಕುವವರು ಕೆಲವರು. ಹಿಮ್ಮಡಿ ಮಾತ್ರ ಊರಿ ನಡೆವರು ಕೆಲವರು.

ನಡೆಯೆಂದರೆ ಬೊಜ್ಜುಗರಿಗಾಗದೇ ಆಗದು. ವ್ಯಾಯಾಮ ಸಂಪಾಧಿಮಾನಿಯು ಡೊಂಬರಗನೆಯಂತೆ ನೆಟ್ಟಗೆ ನಡೆಯಬೇಕನ್ನುವನು. ಅಟ್ಟಿಕಾಲುಗಳ ನಡೆ ಕೆಲವರಿಗಿದೆ. ಸಲ್ಲಕ್ಕಿ ಬೋಯಿಗಳ ಕೂಗು ನಡೆಯಿದೆ. ಕ್ರಮಶಿಕ್ಷಣವನ್ನು ಹೊಂದಿದ ಪೋಲೀಸರ ರೈಟುಲೆಫ್ಟ್ ನಡೆಯಿದೆ. ಹೀಗೆ ನಡೆಗಳು ಹಲವಾಗಿವೆ. ಕಟ್ಟಿಗೆಯಂತೆ ನೆಟ್ಟಗಿನ ನಡೆ, ಗರ್ವದಿಂದ ಕಣ್ಣುನೆತ್ತಿಗೆ ಬಂದ ನಡೆ, ಕಾಲು ಸೋಲುವ ನಡೆ, ತಂತಮ್ಮೊಳಗೇ ಮಾತನಾಡಿಕೊಳ್ಳುವ ನಡೆ, ಕೀರುರಾಗದ ನಡೆ, ತಾಳ ಮೆಟ್ಟುವ ನಡೆ, ವಿಂಚುಬಳ್ಳಿಯಂತೆ ಎಡಬಲ ಸುಳಿವ ನಡೆ, ಫಿರ್ಕಿಗಳನ್ನು ತಿರುಗಿಸಿ ತಿರುಗಿಸಿ, ಬಾತುಕೋಳಿಗಳಂತೆ ನಡೆವ ನಡೆ, ಜಡೆಗಳಲ್ಲಾಡುವ ನಡೆ, ಸೆರಗು ಜಾರುವ ನಡೆ, ಜುಟ್ಟು ಬಿರಿಯ ಬೀಳುವ ನಡೆ, ಕಾಲಗೆಜ್ಜೆಗಳೂ ಕೈಬಳೆಗಳೂ ಘಲ್ಲಲ್ಲೆಂಬ ನಡೆ, ಬಗಸಿನಿಂತೆ ತಲೆಬಗ್ಗಿಸುವ ನಡೆ, ಇಂತಹವುಗಳು ಇವೆ. ಇನ್ನು, ತಿಮಿಂಗಿಲಗಳಂತೆ ಈಜುವವರೂ, ಗುಬ್ಬಿಗಳಂತೆ ಹಾರುವವರೂ, ಹಂದಿಗಳಂತೆ ಒಡಾಡುವವರೂ, ಹಾವುಗಳಂತೆ ಸರಸರನೆ ಸರಿವವರೂ, ಉರುಳಿಸಿದ ಕುಂಬಳಕಾಯಂತೆ ಉರುಳುತ್ತ ಹೋಗುವವರೂ ಅನೇಕರಿರುವರು. ನಡೆಯು ಮಾನವನ ಒಬ್ಬನ ಮಾತ್ರದ ಸೊತ್ತಲ್ಲ. ಹಾಳು ದೇವರು, ಕುದುರೆಯು ನಡೆಯೆಂದೂ, ಬೆಕ್ಕಿನ ನಡೆಯೆಂದೂ, ಅಮೆಯ ನಡೆಯೆಂದೂ ಉಂಟುಮಾಡಿರುವನೆಂದು ಕೆಲವರಿಗೆ ಕೋಪ. ಮದುವೆಗಳೊಡನೆ ಆರಂಭವಾಗಿದೆ ಮೆರವಣಿಗೆಯ ನಡೆ. ನಡೆಯಲ್ಲಿ ವಿಕೃತಿ ವೈಚಿತ್ರ್ಯಗಳಿರುವೆವೆಂದೇ ನಮ್ಮ ಹಿಂದಿನವರು ಸರಿವುದು, ಹಾರುವುದು, ಓಡುವುದು, ಜಾರುವುದು, ಉರುಳುವುದು ಎಂಬ ಪದಗಳನ್ನು ಕಲ್ಪಿಸಿರುವರು. ಇವೆಲ್ಲವೂ ನಡೆಯ ರೂಪಭೇದಗಳು. ಇಷ್ಟಾಗಿ, ನಡೆಯನ್ನು ಮುಖ್ಯವಾಗಿ ದೇವರು ಏತಕ್ಕೆ ನಮಗಿತ್ತಿರುವನೆಂದರೆ—ವಾಹನಯೋಗವು ಜಾತಕ ಫಲದಲ್ಲಿಲ್ಲದಲ್ಲಿ, ಅಂತಹ ಜಾತಕದವರನ್ನು ಕಾಪಾಡುವುದಕ್ಕಾಗಿಯೇ! ಎಂತಹ ಯೋಗಗಳಿದ್ದರೂ, ನಡೆಯದೆ ಯಾವುದೂ ಸಾಗದು ಈ ಮಾಯಾಪ್ರಪಂಚದಲ್ಲಿ.

ನಮ್ಮನಾಗರಿಕತೆಯೊಡನೆ ನಡೆಯು ಈಗ ನೂಲೆಯ ಪಾಲಾಗಿದೆ. ಹಿಂದಣವರು ಕಾಲು ನಡೆಯಿಂದಲೇ ಕಾಶಿ ರಾಮೇಶ್ವರ ಯಾತ್ರೆ ಮಾಡುತ್ತಿದ್ದರು. ಅನೇಕರು ಅವರಲ್ಲಿ ಕವ್ವಡೆ ಕೈಲಾಸವಾಸಿಗಳಾಗುತ್ತಿದ್ದರು. ಈಗ ಅಡಿಗಡಿಗೂ ಕಾರೇ ಕೈಲಾಸ. ಆದರೆ ಹರದಾರಿ ದೂರ ಸಾಗಿ ಹೋಗುವುದೂ ಕಷ್ಟ. ಏನಾನ ವಿದ್ದರೂ ಆಲ್ಲಿಗೆ ಕಲವುವುದು ಅನುಮಾನ. ಅಂದಿಗೂ ಇಂದಿಗೂ ಇರುವ ಅಂತರವೇನೆಂದರೆ ನೆಲದ ಮೇಲೆ ಒಂದಡಿಯಡಚಬೇಕಾದರೆ, ಆಕೆ ಭಾಷೆಗಳಟ್ಟುಕೊಂಡಂತೆ ಇದದರುವುದೇ! ಕಾಲುಗಳನ್ನಲ್ಲಾಡಿಸದಲ್ಲದ ಉದ್ದೇಶಿಸಿದ ಸ್ಥಳವನ್ನು ಸೇರದಿರುವುದು ಮೊದಲಿನ ಸ್ಥಿತಿಯು. ಕಾಲು ಕದಲದೆ ಊರಿಲ್ಲ, ತಿರುಗುವುದು ಈಗಿನವರ ಆಕ್ಷಯವು. ಇದಕ್ಕೆ ಬೇಕಾದ ಯಂತ್ರ ಸಹಾಯವನ್ನು ವಿಜ್ಞಾನವು ಕೊಟ್ಟಿದೆ. ಮನುಷ್ಯ ಬುದ್ಧಿಬಲಗಳೂ ಸಹಾಯಕವಾಗಿವೆ. ನಡೆವು ದೆಂದರೆ ಬೇಡವಾಗಿದೆ ಈಗಿನವರಿಗೆ. ಹಿಂದಣವರು ಕಾಲ್ಬಿಡಿಯಿಂದಲೇ ದೇಶದೇಶಗಳಲ್ಲಿ ಸಂಚರಿಸುತ್ತಿದ್ದರು. ಯಾತ್ರೆಯಾಗಗಳಿಗಾಗಿ ತೆರಳುತ್ತಿದ್ದರು. ನಾವು ಮಾತ್ರ ಈಗ ಉದಾಸೀನರಾಗಿರುವೆವು.

ಅಡಿಗಳ ನುಡಿಮೆ ಬಲು ದೊಡ್ಡದು. ದೇವಲೋಕದ ಕದಿಗೆ ನೋಡಿದಲ್ಲಿ ಮೊದಲು ವಿಷ್ಣುಪಾದಗಳು ಗೋಚರವಾಗದಿರಲಾರವು. ಶ್ರೀರಾಮನು 'ಪದ್ಮರೇಖೆಗಳುಳ್ಳ ಪದಯುಗಳ ಧವನು'. ಅವು ಸೇವಾರ್ಹವಾದುವು. ಪಾದ ಪ್ರಣಾಮವೇ ನಮ್ಮಲ್ಲಿ ಮನ್ನಣೆಯು. ಇನ್ನು ರಾಮಾಯಣದಲ್ಲಿ ಪಾದುಕಾಪಟ್ಟಾಭಿಷೇಕ ವಿದ್ದೇ. ಇದೆ. ದೈನಿಕ ವಿಚಾರದಲ್ಲಿ, ಪಾದ ಸೇವೆಯೇ ಅವಾರಭಕ್ತಿ ಸೂಚಕವು. ಇಹ ದಲ್ಲಿ ಅದೇ ದಾಸ್ಯವೆಂದೆನಿಸುವುದು. 'ಹರಿ ಪಾದರಜವು ಶಿಲೆಯಸ್ಪೀ ಅಬಲೆಯನ್ನಾಗಿ ಮಾಡಲಿಲ್ಲವೇ' ಇಂತಹ ಮಹಿಮೆಯುಳ್ಳ ಶ್ರೀಹರಿಯು ಮಾತ್ರ ಅತಿದಾನಿಯಾದ ಬಲಿಯ ಮುಂದೆ, ವಿಜ್ಞಾನಪೂರ್ವಕವಾಗಿ ಎರಡೂ ಕೈಗಳನ್ನು ಜೋಡಿಸಿ,

"ಜೀಯ ನಿಮ್ಮಡಿಗಳಿಗೆ ತಾನ । ನ್ಯಾಯಪರನೆನಿಸಿ
ಹನೆ ತಪ್ಪೇ ।
ನೀಯೆನೇ ನಾನಿತ್ತೆನೆನಗುಳ್ಳಿನು ಮೀದಿನಿಯ ॥
ನೋಯಲಾಗದು ಪುಡಿಗೆ ಸತ್ಯೀ । ವಾಯುವನು
ತಾನರಿಯೆ ನಿಡುಛದ ।
ರೀಯ ಚರಣವನೆನ್ನ ಶಿರದಲಿಯಂತರಪೀನೆಂದೆ"

ಎಂದು ಪ್ರಾರ್ಥಿಸಬೇಕಾದ ನುಟ್ಟಿಗೆ ಬಂದಿಕು. ದೇವರಂತಹವನು ಮೂರಡಿ ನೆಲ ಕ್ಕಾಗಿ ಬೇಡಿದುದು ಸೋಜಿಗವೆ. ಈ ಹರಿಯೇ

(೧೩ನೇ ಪುಟಕ್ಕೆ ಮುಂದುವರಿದಿದೆ)

ಶ್ರೀ ಕೃಷ್ಣ ಸಿನೆಮ ಮುಂದಿರದಲ್ಲಿ ಪ್ರದರ್ಶಿಸಲ್ಪಡುತ್ತಿರುವ "ಧ್ರುವಳುಮಾರ" ಕನ್ನಡ ಮಾತಾಡುವ ಜಲಚಿತ್ರದಿಂದೆರಡು ದೃಶ್ಯಗಳು.

ಯಾವ ಕೆಲಸ ಮಾಡು
ವಾಗಲೂ ಚಿತ್ತವಿಟ್ಟು
ಮಾಡಿದರೆ ಮಾತ್ರ ಅದು ಒಳ್ಳೆಯ
ದಾಗುವುದು. ತಾನು ಮಾಡಬೇ
ಕೆಂಬ ದೃಢತೆಯಿಲ್ಲದೆ ಚಿತ್ತವು
ಕ್ರಿಯಾಸಕ್ತವಾಗದು.
ಜೋನ್ ರಸ್ಕಿನ್

ಸ್ಫುಟವಿಚಾರಗಳು

ಕರ್ನಾಟಕ ಏಕೀಕರಣ

ನಮಗೆ ಈ ಕೆಳಗಿನ ಕಂತಿಯು ಬಾಗಲಕೋಟೆಯ ಕರ್ನಾಟಕ ಚೇಂಬರಿಂದ ತಾ. ೩೧-೧-೩೫ ಹಲವಿರು ತ್ತದೆ:—

Q RG JENGIN MURIJAYA
CARNATAK CHAMBER BAGAL-
KOT 6.
SWADESHABHIMANI,

—HOSMANI WIRES KARNATAKA CHAMBER MOVING UNIFICATION RESOLUTION ASSEMBLY 14TH KARNATAK EXPECTS PROMINENT PERSONS MUNICIPALITIES LOCAL BOARDS PUBLIC INSTITUTIONS WIRING SUPPORT HOSMANI SENDING COPIES TO VICEROY ASSEMBLY PRESIDENT EUROPEAN PARTY BHUALABHAI JINHA SHAUKATALI ANY ANANTHSAYANAM ARANHA ALL PLACES TO HOLD MEETINGS FORWARD RESOLUTION ABOVE ADDRESSES JOURNALISTS PERSISTENT AGITATION SOLICITED.

ಶ್ರೀಯುತ ಹೊಸಮನಿ ಸಿದ್ಧಪ್ಪನವರು ಶಾಸನ ಸಭೆಯಲ್ಲಿ ಕರ್ನಾಟಕ ಏಕೀಕರಣ ಠರಾವನ್ನು ಕರುವರೆಂದೂ ಅವರ ಠರಾವನ್ನು ಸಮರ್ಥಿಸಿ ಅವಿಭಕ್ತ ಕರ್ನಾಟಕದ ಪ್ರಮುಖರೂ ಮುನಿಸಿಪಾಲಿಟಿಗಳೂ, ಲೋಕಲ್ ಬೋರ್ಡು ಗಳೂ, ಸಾರ್ವಜನಿಕ ಸಂಸ್ಥೆಗಳೂ ಠರಾವು ಮಾಡಿಕೊಂಡು ಅವುಗಳ ಪ್ರತಿ ನಕಲುಗಳನ್ನು ವೈಸರಾಯರು, ಎಸೆಂಬ್ಲಿ ಅಧ್ಯಕ್ಷರು, ಯುರೋ ಪಿಯನರ ಪಕ್ಷ, ಶ್ರೀ ಭುಲಾಭಾಯಿ ದೇಸಾಯಿ, ಮಿ। ಜಿನ್ನಾ, ಮಿ। ಶೌಕತಾಲಿ, ಶ್ರೀ ಆಣೆ, ಶ್ರೀ ಅನಂತಶಯನಂ, ಮಿ। ಅರಾನ್ಹಾರವರಿಗೆ ಕಳು ಹಿಸಬೇಕೆಂದೂ, ಅಲ್ಲದೆ ಈ ಬಗ್ಗೆ ಎಲ್ಲಾ ಕಡೆ ಗಳಲ್ಲಿಯೂ ಸಾರ್ವಜನಿಕ ಸಭೆಗಳನ್ನು ಜರಗಿಸಿ ಅವುಗಳಲ್ಲಾದ ಠರಾವುಗಳನ್ನು ಮೇಲಿನ ವಿಳಾಸಕ್ಕೆ ಕಳುಹಿಸಬೇಕೆಂದೂ, ಪತ್ರಿಕಾ ಕರ್ತೆರು ಅವಿಶ್ರಾಂತವಾಗಿ ಚಳವಳಿಸಬೇಕಾ ಗೆಂದೂ ವಿನಂತಿಲಾಗಿದೆ. ಈ ಬಗ್ಗೆ ನಾವು ಹೆಚ್ಚಿಗೆ ಬರೆಯಬೇಕಾದುದಿಲ್ಲ. ಕರ್ನಾಟಕ ಏಕೀಕರಣವೆಂದರೆ ಕರ್ನಾಟಕದ ಜೀವ ಜೀವಾಳ. ಕನ್ನಡವು ಬಾಳಬೇಕಾದರೆ, ಕನ್ನಡ ಭಾಷೆಯ ಉತ್ಕರ್ಷೆಯಾಗಬೇಕಾದರೆ,—ಅಂತೂ ಕನ್ನಡಿಗರ ಉದ್ಧಾರವಾಗಬೇಕಾದರೆ, ಕರ್ನಾ ಟಕವು ಒಂದಾಗಬೇಕು. ಅದು ಒಂದಾಗ ಬೇಕಾದರೆ ಶಾಸನ ಸಭೆಯಲ್ಲಿ ಕರ್ನಾಟಕದ ವರವಾಗಿ ಯೋಗ್ಯ ಪ್ರತಿನಿಧಿಗಳು ಚಳವಳಿಸ ಬೇಕು. ಅಂತಹ ಅರ್ಹತೆಯುಳ್ಳ ಪ್ರತಿ ನಿಧಿಗಳು ಈಗ ಶಾಸನಸಭೆಯಲ್ಲಿದ್ದಾರೆ. ಅವರೀಗ ಈ ಬಗ್ಗೆ ಪ್ರಚಂಡವಾಗಿ ಚಳವಳಿಸ ಬೇಕೆಂದಿರುವರು. ಅವರ ಈ ಆಶಯವು,—ಅದು ಬರೆಯಲ್ಪಟ್ಟ ಆಶಾತೀರತೆಗಳಿಂದ—ಕನ್ನಡಿ ಗರಿಂದ ಸ್ವೀಕೃತವಾಗಿ, ಎಲ್ಲರೂ ಶೀಘ್ರವಾಗಿ ಸಭೆಗಳನ್ನು ಜರಗಿಸಿ, ಠರಾವುಗಳನ್ನು ಮಂಜೂರು ಮಾಡಿಕೊಂಡು, ಅವುಗಳ ನಕಲು ಗಳನ್ನು ಶ್ರೀ। ಸಿದ್ಧಪ್ಪನವರು ಕೇಳಿಕೊಂಡಂತೆ—ಮೇಲಿನ ವಿಳಾಸದಾರರಿಗೆ ಕಳುಹಿಸಲಾಗ ಲೆಂದು ಕೋರುವೆವು.

ಇಂಡೊ-ಬ್ರಿಟಿಷ್ ಟ್ರೇಡ್ ಪೇಕ್ಟ್:

ಎಂಬ ವಾಣಿಜ್ಯ ಕರಾರನ್ನು ಬ್ರಿಟನ್ನಿನ ಕಡೆಯಿಂದ ಫಿ। ರಸ್ಸಿಮೆನ್ ಮತ್ತು ಭಾರತದ ಕಡೆಯಿಂದ ಶ್ರೀ। ಮಿತ್ತರನವರು ಕಳೆದ ಜನ ವರಿ ತಾ. ೯ರಲ್ಲಿ ಮಾಡಿಕೊಂಡರು. ಈ ಒಪ್ಪಂದವು ಶಾಸನಸಭೆಯವರ ವಿಮರ್ತೆಗಾಗಿ ಇಡಲ್ಪಟ್ಟಿತು. ರಾಷ್ಟ್ರೀಯವಾದಿಗಳು ಇಂದಿ ಪೆಂಡೆಂಟರು, ವಿಳೆ, ಅಧಿಕಾರ ಶಾಹಿಗಳಲ್ಲಾ ಕೆಲವರು ಇದನ್ನು ಟೀಕಿಸಿದರು. ಒಪ್ಪಂದದ ಸಾರಾಂಶವಿಷ್ಟೆ: ಯುನ್ಯಾಟೆಡ್ ಕಿಂಗ್‌ಡಂನಿಂದ ಆಮದಾಗಿ ಭಾರತಕ್ಕೆ ಬರುವ ಸರಕುಗಳ ಮೇಲೆ ಭಾರತವು ತನ್ನಿಚ್ಛೆಯಿಂದ ಸುಂಕ ಹೊರಿಸಬಾರದು. ಲಂಕೆಶಯರಿನ ಸ್ಪರ್ಧೆಯಿಂದ ಜ್ಯಾಚು ಯರ್ಕೆ ಭಾರತದಲ್ಲಿ ಸುಂಕದ ಸೌಕರ್ಯವಿರಬೇಕು. ಈ ಒಪ್ಪಂದದಿಂದಾಗಿ ಭಾರತದ ವಾಣಿಜ್ಯ ಸಂಸ್ಥೆಗಳ ಅನುಮತಿಯನ್ನು ಪಡೆಯಲಾಗಲಿಲ್ಲ ವೇಕೆ? ದಶಂಬರ ತಾ. ೧೫ರಲ್ಲಿ ಇಂಡಿಯನ್ ಫೆಡರೇಶನ್ ಒಫ್ ಚೇಂಬರ್ಸ್ ಇದರ ಅಧ್ಯಕ್ಷರು ಸರಕಾರದ ಭೇಟಿಯನ್ನು ಕೇಳಿದಾಗ ತಿರಸ್ಕರಿಸಿದುದೇಕೆ? ಇಂಗ್ಲಾಂಡಿನಲ್ಲಿ ಸರ್ ವಾಲ್ಟರ್ ರಂಸ್ಸಿಮೆನರು ಲಂಕೆಶಯರ್ ವರ್ತ ಕರ ಅಭಿಪ್ರಾಯವನ್ನೂ ಅನುಮತಿಯನ್ನೂ ಪಡೆದಂತೆ ಭಾರತದ ವರ್ತಕರ ಅನುಮತಿ ಯನ್ನೇಕೆ ಪಡೆಯಲಾಗಲಿಲ್ಲ? ಹೀಗೆ ಮಾಡಿದ ಸರಕಾರವು ಸಂಶಯಕ್ಕೆಡೆಕೊಟ್ಟಿತು: ಪ್ರತಿಫಲವು ಪ್ರತ್ಯಕ್ಷವಾಗಿ ದೊರೆಯಿತು. ೬೬ ಮಂದಿ ಈ ಒಪ್ಪಂದವನ್ನು ತಿರಸ್ಕರಿಸಿ ಸಲ ಮಂದಿ ಸ್ವೀಕರಿಸಿ ಈ ಹಾನಾನಿಯು ಶಾಸನಸಭೆಯಲ್ಲಿ ಮುಗ್ಗ ರಿಸಿದ್ದಿತು. ಇಂಡಿಯಾ ಸರಕಾರವು ಇದ ರಿಂದ ಏನನ್ನು ತಿಳಿಯುವಂತಾಗುವುದೆಂದು ಬೇರೆ ಹೇಳಲಾರೆವು.

ಜಂಜಿಬಾರಿನ ಹಿಂದೀಯರ

ಪುರಸಭೆಯೇನೆಂದು ಶ್ರೀ। ಕೆ. ಸ್ವಾಮಿನಾಥನ್ ಎಸ್. ಮೆನನ್ ಬಿ. ಎಸ್. ಇವರು ಜಂಜಿ ಬಾರಿಂದ ಮರಳಿ ಬಂದು ಇದೇ ಜನವರಿ ತಾ.೨೬ರಲ್ಲಿ ನೈರೋಬಿಯಲ್ಲಿ ಸೇರಿದ್ದ ಸಭೆಯಿಂದ ಸಮರ್ಥಿಸಿ ಮಾತನಾಡಿದರು. ಅಲ್ಲಿರುವ ೧೪೫೩೬ ಮಂದಿ ಭಾರತೀಯರು ೧೫೬೨೬ ಮಂದಿ ಯು.ರೋಪಿಯನರ ನ್ಯಾಯಕರ್ತೃಕ್ಕೊಳಗಾಗಿ ಅಲ್ಪ ಸಂಖ್ಯಾಕರಾದ ೩೫೦೦ ಮಂದಿ ಅರಬ್ಬಿಗಳಿಗಿಂತಲೂ ದೀನಾ ವಸ್ಥೆಗಿಳಿದಿರುವೆರು. ಅವರಿಗೆ ವ್ಯಾಪಾರ ವೆಂದರೆ ಅಲ್ಲಿಯ ಭಾರತೀಯರ ಮುಖ್ಯ ಜೀವ ನೋಪಾಯ. ಈ ವ್ಯಾಪಾರವನ್ನೂ ಅವರು ಸ್ವಕಂಕ್ರರಾಗಿ ಮಾಡಲಸಾಕೂಲವಿಲ್ಲ. ತಾವು ಬೆಳೆಯಿಸಿದ ಲವಂಗವನ್ನು ಲವಂಗ ಕೃಷಿ ಬೆಳೆ ಗಾರರ ಸಂಘಕ್ಕೆ (ಇದು ಪ್ರಾಮುಖ್ಯವಾಗಿ ಯೂರೋಪಿಯನರದು) ಸೂರಾಬೇಕು. ಲವಂಗ ವ್ಯಾಪಾರದ ಎಲ್ಲಾ ಗುತ್ತಿಗೆಗಳು ಯೂರೋಪಿ ಯನರಿಗೆ. ಲೇಂಡ್ ಎಲಿಯನೇಶನ್ ಡಿಕ್ರಿ ಎಂಬುದನ್ನು ಬತ್ತಳಿಕೆಯಿಂದ ಹೊರಗೆ ತೆಗೆದು ಭಾರತೀಯನು ಲವಂಗನನ್ನು ಬೆಳೆಯಿಸುವು ದಕ್ಕಾಗಿ ಭೂಮಿಯನ್ನು ಪಡೆಯಬಾರದೆಂದು ಆಜ್ಞಾಪಿಸಿರುವರು. ಮಿನಿಲೆಂಡರ್ಸ್ ಡಿಕ್ರಿ ಎಂಬ ಶಾಸನವನ್ನು ಹೂಡಿ ಹಿಂದೀಯರಿಗೆ ಅವರ ವ್ಯಾಪಾರಕ್ಕಾಗಿ ಎಲ್ಲಿಯೂ ದ್ರವ್ಯವು ದೊರೆಯದಂತೆ ವಿಫ್ಲವಿಟ್ಟಿರುವರು. ಲವಂಗ ಕೃಷಿವಲರ ಸಂಘದಲ್ಲಿ ಭಾರತೀಯ ಪ್ರತಿನಿ ಧಿಗಳಿಗೆ ಎಡೆಯಿಲ್ಲ. ಲೈಸನ್ಸ್ ಪಡೆದವರೇ ಪ್ರತಿನಿಧಿಗಳಾಗಬೇಕು. ಭಾರತೀಯನಿಗೆ ಲೈಸನ್ಸ್ ಸಿಗುವುದೇ ಇಲ್ಲ—ಕಾರಣ ಎಲ್ಲಾ ಅಧಿಕಾರಿಗಳು ಯುರೋಪಿಯನರು! ಲವಂಗ ವ್ಯಾಪಾರಕ್ಕೆ ಸಂಬಂಧವಿಲ್ಲ ಕೃಷಿ, ದುಡಿಮೆ ಚಲಾವಣೆ, ವ್ಯಾಪಾರ-ಯಾವುದರಲ್ಲಾ ಹಿಂದೀ ಯರಿಗೆ ಸ್ಥಾನವೇ ಇಲ್ಲ. "ಈ ಶಾಸನಗಳು ಸಮಸ್ತ ಜನರಿಗಾಗಿ ಇದೆ. ಅವರ ಸುಖದೊಡನೆ ಹಿಂದೀಯರ ಸುಖವಿದೆ" ಎಂದು ಜಂಜಿಬಾರ್ ಸರಕಾರದ ಹೇಳಿಕೆ. ಇಂಡಿಯನ್ ಸ್ಟೆಟಲ್ ಆಫೀಸರ್ ರಿಪೋರ್ಟ್ ಏನನ್ನೂ ಹೇಳಿಲ್ಲ:—ಆದರೆ ದಂಜಿಬಾರಿನಲ್ಲಿ ಪೂರ್ವ ಆಫ್ರಿಕದಲ್ಲಿರುವಂತೆ ವರ್ಣಭೇದವು ಧೀಕರವಾಗಿ ಪರಿಣಿಸಿದೆ. ಎಲ್ಲಾ ಸಂಕಷ್ಟಗಳಿಗೂ ಇದೇ ಮೂಲ; ಭಾರತ ಸರ ಕಾರವು ಜಂಜಿಬಾರಿನ ಹಿಂದೀಯರನ್ನು ರಕ್ಷಿಸು ವುದು ರಾಜಧರ್ಮವಾಗಿದೆ.

ಜಿಲ್ಲಾ ಹರಿಜನ ಸೇವಾಸಂಘ, ಮಂಗಳೂರು.

ಜಿಲ್ಲಾ ಸಂಘದ ಸಭೆಯು ತಾ. ೩೦-೧-೩೫ನೇ ಸಾಯಂಕಾಲ ಗಂಟೆ ೫½ಕ್ಕೆ ಡಿ. ಸಿ. ಮಿಶನ್ ಹೋಟಲ್ಲಿ ಶ್ರೀ। ಯುತ. ಆರ್. ಪೂಂಜರ ಅಧ್ಯಕ್ಷತೆಯಲ್ಲಿ ನೆರೆದಿತ್ತು. ಆಗತ್ಯವುಳ್ಳ ಅನೇಕ ವಿಷಯಗಳು ಸಭೆಯ ಮುಂದೆ ಚರ್ಚೆಗೆ ಬಂದಿದ್ದು (i) ಉಜಿರೆಯಲ್ಲಿ ತೆರೆ ಯ ಬೇಕೆಂದಿದ್ದ ಹರಿಜನ ವಿದ್ಯಾರ್ಥಿ ಭವನಕ್ಕೆ ಬೇಕಾದ ಕಟ್ಟಡವು ಸಿಕ್ಕದೆ ಆ ಕೆಲಸವು ಈ ವರೆಗೆ ಜಾರಿ ಬಿದ್ದಿ ರುವುದರಿಂದ ಪ್ರತ್ಯಕ್ಷ ಜನವರಿ ತಾ. ೧೮ ಲಾಗ್ಗಾಯಿತು ತರೆ ೧೮ ರೂ. ೨ ರಂತೆ ರೂಪಾ ವಿಚಿಕ್ಕೆ ಮಿಕ್ಕದಷ್ಟು ದ್ರವ್ಯವನ್ನು ಉಜಿರೆ ಪುತ್ತೂರುಗಳಲ್ಲಿರುವ ಡಿ.ಸಿ.ಮಿಶನ್ ಭವನಕ್ಕೆ ಕೊಡುವುದಾಗಿಯೂ (ii) ಕಳ್ಳಿಗೆಯಲ್ಲಿರುವ ಹರಿಜನ ಶಾಲಾ ಮಕ್ಕಳಿಗೆ ಪುಸ್ತಕ ಮತ್ತು ವಸ್ತ್ರಗಳನ್ನು ಕೊಡುವ ಬಗ್ಗೆ ತಮ್ಮಲ್ಲಿರುವ ದ್ರವ್ಯನಿಧಿಯಿಂದ ಈ ವರೆಗೆ ಬಂದಿರುವ ಅರ್ಜಿಗಳ ಮೇಲೆ ತರೆ ೧೫ ರೂ. ೧ ರಂತೆ ಪುಸ್ತಕಕ್ಕೂ, ಅಜೆ ೮ ರಂತೆ ಪುಸ್ತಕ ಮೊದಲಾದುವುಗಳಿಗೂ (ಲೆಕ್ಕದು ಶಾಲಾ ಮಕ್ಕಳಿಗೆ ಪುಸ್ತಕಗಳಿಗೆ ಆಗತ್ಯವಲ್ಲ) ಕೊಡಬೇಕಾಗಿಯೂ (iii) ಕಾರ್ಯದರ್ಶಿಯವರು ಬರೆದುಕೊಂಡಿದ್ದ ಕಾಗದದ ಮೇರೆಗೆ ಅವರು ನಡೆಸ ಬೇಕೆಂದಿರುವ "ವಾಚನ" ರೂಪದ ಕೆಲಸವು ಕಮಿಟಿಯು ಆತ್ಮಾನಂದದಿಂದ ಸ್ವೀಕರಿಸುವುದಾಗಿಯೂ ಅದಕ್ಕೆ ಬೇಕಾದ ಟಿಕೇಟು ಮುದ್ರಿಸ ಬಹುದಾಗಿಯೂ ನಿರ್ಣಯವಾಯಿತು.

ತಾರೀಕು ೧೨-೩-೩೫ನೇ ರಾತ್ರಿ ಉರ್ವ ರಾತ್ರಿ ಶಾಲೆಯನ್ನು ಕೊಡಿಯಾಲ್ ಬೈಲಿನಲ್ಲಿ ತೆರೆದಿರತಕ್ಕದ್ದೆಂದೂ, ಕಲಿಯುವವರ ಸಂಖ್ಯೆಯು ಹೆಚ್ಚಾಗುವಂತೆ ಕಂಡು ಬರುತ್ತದೆ. ಡಿ. ಸಿ. ಮಿಶನ್ ಹೋಟಲಿನಲ್ಲಿ ಅಲಿಸುತ್ತಿರುವ ಹೊಲಿಗೆ ಕೆಲಸವು ಚೆನ್ನಾಗಿ ನಡೆಯುತ್ತಿದೆ. ಪ್ರತ್ಯಕ್ಷ ರ ಹುದುಗರು ೫ ಹುದುಗಿಯರು ಕಲಿಯುತ್ತಿದ್ದಾರೆ.

ನಮ್ಮ ಜಿಲ್ಲಾ ಹರಿಜನ ಸೇವಾ ಸಂಘದ ಕಾರ್ಯದರ್ಶಿ ಗಳಾದ ಶ್ರೀ। ನಾರಾಯಣ ಚಾಕೆಲ್ಲಾಯರು ತಾ. ೧೪-೧-೩೫ನೇ ರಾತ್ರಿ ಉಪ್ಪಿನಂಗಡಿಯಲ್ಲಿ ಒಂದು ವಾಚನ ನಡೆಸಿದ್ದರು. ಸ್ಪರ್ಧೆಕ್ಕೆ ಆಣೆ ೪, ೩, ೩ ರಂತೆ ಟೀಕೇಟುಗಳ ಕ್ರಮ ವಿತ್ತು. ಹೆಚ್ಚಿನ ಪ್ರಯತ್ನವೇನೂ ನಡೆಯದಿದ್ದರೂ ರೂಪ್ಯಾ ೧೦-೬-೦ ವಸೂಲಾಗಿತ್ತು. ಆ ಹಣದಲ್ಲಿ ಅದೇ ಊರಿನ ಶಾಲೆಗೆ ಬರುವ ಮಕ್ಕಳ ಬರಲಿರುವ ಹರಿ ಜನ ಮಕ್ಕಳಿಗೆ ಮಧ್ಯಾಹ್ನದ ಊಟ ಕೊಡುವ ಬಗ್ಗೆ ಉಪಯೋಗಿಸ ಬೇಕಾಗಿ ಕಲ್ಲಿಯವರ ಅಭಿಪ್ರಾಯವು ಬರುತ್ತದೆ.

ಮಂಗಳೂರು ತಾಲೂಕಿನ ಏಡ್ತೂರಿ ಶಾಲೆಯಲ್ಲಿ ೧೦ ಹರಿಜನ ಮಕ್ಕಳಿರುವರು. 'ಅಲ್ಲಿಯವರು ಇದೇ ಕ್ರಮ ವಲ್ಲಿ ಧನ ಸಂಗ್ರಹ ಮಾಡಿ ಹರಿಜನ ಮಕ್ಕಳಿಗೆ ಊಟ ಕೊಡಬೇಕೆಂದಿರುವರು. ಪ ಜಾ ದಿ ಶ್ರೀ ಮತ್ತು ವರ್ಮಾಧಿಕಾರಿಯವರೂ ಇದೇ ರೀತಿ ಹೇಳಿಕೆಗಳು ಬಂದಿರುತ್ತವೆ. ಈ ರೀತಿಯಿಂದ ಹರಿಜನ ಮಕ್ಕಳಿಗೆ ಊಟ ಕೊಡುವುದಕ್ಕೂ ಆ ಸೂಲಕ ಶಾಲೆಗೆ ಬರುವ ಆದರ ಸಂಖ್ಯೆಯನ್ನು ಹೆಚ್ಚಿಸುವುದಕ್ಕೂ ಅನುಕೂಲವಾಗ ಬಹುದಾದರೆ ಬೇರೆ ಕಡೆಗಳಲ್ಲಿಯೂ ಇದೇ ಕ್ರಮದಲ್ಲಿ ಕೆಲಸಮಾಡಲು ಕಾರ್ಯದರ್ಶಿಯವರು ಪೂರ್ಣ ಉತ್ಸಾಹಿಗಳಾಗಿದ್ದಾರೆ. ಈ ರೂಪದಲ್ಲಿ ಸಮಾಜ ಸೇವೆಯನ್ನು ಮಾಡಬೇಕೆಂದಿರುವವರು ವಕ್ಷುಗೆ ಬರೆದುಕೊಂಡಲ್ಲಿ ಅದಕ್ಕೆ ಬೇಕಾದ ಎಲ್ಲಾ ವ್ಯವಸ್ಥೆ ಗಳನ್ನು ಮಾಡಬಹುದು. ಆಗತ್ಯವುಳ್ಳ ಟಿಕೇಟುಗಳನ್ನು ಛಾಪಿಸಿ ಮುಂದಾಗಿಯೆ ಕಳುಹಿಸಿ ಕೊಡ ಬಹುದಾಗಿದೆ.

ಎಮ್. ಆರ್. ಪೂಂಜ,
ಅಧ್ಯಕ್ಷ, ಜಿಲ್ಲಾ ಹರಿಜನ ಸೇವಾ ಸಂಘ, ದ. ಕ.

ನಿರುದ್ಯೋಗಿಗಳಿಗೆ ಸಹಾಯ.

ಈಗಿನ ಕಾಲದಲ್ಲಿ ಕೆಲಸವಿಲ್ಲದೆ ಎಷ್ಟೋ ಮಂದಿ ಯುವಕರು ಅಲ್ಲಲ್ಲಿ ಅಡ್ಡಾಡುತ್ತ ಬಡಕ ಕಷ್ಟವನ್ನು ಅನುಭವಿಸುತ್ತಾರೆ. ಇಂಥವರ ಬಗ್ಗೆ ಒಬ್ಬ ಉದಾರ ಶೀಲ ಮಹನೀಯರು ಅದರ್ಶಪ್ರಾಯವಾದ ಒಂದು ಯೋಜನೆಯನ್ನು ತಯಾರಿಸಿದರು. ಅದರಂತೆ ಪ್ರತ್ಯೇಕ ೧೫ ಮಂದಿಗೆ ತಿಂಗಳೊಂದರ ರೂ. ೭-೮-೦ರಂತೆ ೪ ವರ್ಷಗಳ ವರೆಗೆ ವಿದ್ಯಾರ್ಥಿವೇತನ ಕೊಡಲಾಗುವುದು. ವಾಸಸ್ಥಾನಕ್ಕೆ ತಕ್ಕ ವ್ಯವಸ್ಥೆಗಳನ್ನು ಮಾಡಿ ಕೊಡಲಾ ಗುವುದು. ಇವರಿಗೆ ಕೃಷಿ ಕೈಗಾರಿಕೆಗೆ ಸಂಬಂಧಪಟ್ಟ ಎಲ್ಲಾ ಶಿಕ್ಷಣಗಳನ್ನು ಕೊಡಲಾಗುವುದು. ನಾಲ್ಕು ವರ್ಷಗಳ ಶಿಕ್ಷಣವು ಪೂರೈಸಿದ ಕೂಡಲೇ ಅವರವರು ಆಶ್ಯಸಿಸಿದ ಕೆಲಸದಲ್ಲಿಯೇ ನೇಮಿಸಲಾಗುವುದು. ತಿಂಗಳ ವೇತನ ರೂ. ೧೫ರಿಂದ ಪ್ರಾರಂಭಿಸಿ ೪ರ ವರೆಗೆ ಕೊಡಲಾಗುವುದು. ವೈದ್ಯಹಾರತಾಕ್ಷಲತೆ, ಪಂಕ್ತಿಮ, ಓದುಬರಹದಲ್ಲಿ ತಕ್ಕ ಪಾಪುಣತೆ, ವಿಷಯಗಳಾಗಿರುವ ೧೫ ಮಂದಿಯನ್ನು ಪ್ರತ್ಯಕ್ಷ ನೇಮಿಸಿಕೊಳ್ಳಲಾಗುವುದು. ಸೇರಲಿಚ್ಛಿಸುವವರು ಕೈದೆನವಾದ ಯೋಗ್ಯ ಪ್ರಯೋಜನ ವನ್ನು ಸಡಕೊಳ್ಳಬಹುದು. ಅರ್ಜಿಗಳನ್ನು (ಯೋಗ್ಯತಾ ಪತ್ರಗಳಿದ್ದರೆ ಅದರೊಂದಿಗೆ) ಇದೇ ಬರುವ ಮಾರ್ಚ್ ತಾ. ೩೧ರೊಳಗೆ ಕಾರ್ಯದರ್ಶಿ ಮಂಗಳೂರು ಸಿಟಿ ಆರ್ಯ ಸಮಾಜ ಬಡವರ ಬಂಧು ಆಫೀಸು ಮಂಗಳೂರು ಇವರಿಗೆ ಕಳುಹಿಸಬಹುದು.

ಕುದ್ಧೀ ಸಮಾಚಾರ.

ಇದೇ ತಾ. ೩೧ ಆದಿತ್ಯವಾರ ಸಾಯಂಕಾಲ ೫½ ಗಂಟೆ ೪-೫ಕ್ಕೆ ಮಂಗಳೂರು ಸಿಟಿ ಆರ್ಯ ಸಮಾಜ ಮಂದಿರ ದಲ್ಲಿ ಪ್ರೊಬೆಷನರ್ ಮತ್ತು ಸೇರಿಕ ಶ್ರೀಯುತ ನಾಮು ವೇಲ್ ಸಿ, ಅವರ ಧರ್ಮಪತ್ನಿ ಮತ್ತು ೪ ಮಕ್ಕಳನ್ನು ಶ್ರೀ। ಲಕ್ಷ್ಮಣದೇವ ವಿದ್ಯಾರ್ಥಿ, ಶ್ರೀ ಬಾಲಕೃಷ್ಣಸಾಯ್ಕರ ಪೌರೋಹಿತ್ಯದಲ್ಲಿ ಶುದ್ಧಿಗೊಳಿಸಲಾಯಿತು. ಇವರು ಈ ಮೊದಲು ಬಂಟ್ವಳ ಸಮಾಜದವರಾಗಿದ್ದು ಸುಮಾರು ೧೪ ವರ್ಷಗಳ ಮೊದಲು ಪ್ರೊಟೆಸ್ಟೆಂಟ್ ಮತಕ್ಕೆ ಸ್ವೀಕರಿಸಿದ್ದರು. ಶುದ್ಧಿಗೊಳಿ ಇವರಿಗೆ ಇವರ ಮೊದ ಲಿನ "ಗುರುವ ಸೆಟ್ಟಿ" ಎಂಬ ಹೆಸರನ್ನೇ ಇಡಲಾಯಿತು. ಇವರ ಪತ್ನಿಗೆ "ಸಂಜೀವಿ ಬ್ಯಾಯಿಂದೂ, ಪಾಸಿ, ಮಿತ್ರ, ಸಂಜೀವ, ಮತ್ತು ಮೇಸಿನ ಎಂಬ ನಾಲ್ಕು ಮಂದಿ ಮಕ್ಕಳಿಗೆ ಕ್ರಮವಾಗಿ ಸುವಾಸಿನಿ, ಸುಮಿತ್ರೆ, ಸಂಜೀವ ಮತ್ತು ಮನೋರಮ ಎಂಬ ಹೆಸರುಗಳಿಟ್ಟಿಡಲಾಯಿತು.

ಈ ಸಂದರ್ಭದಲ್ಲಿ ಶ್ರೀಯುತರುಗಳಾದ ಬಸ್ತಿ ದಾಸಪ್ಪ ಶೆಟ್ಟಿಯವ, ಕೋಟಿ ಶಂಕರನಾರಾಯಣ ಕಾರಂತರವ, ಹಿಂದೂ ಸಮಾಜ ಸಂಘಟನೆಯ ಆದರಣೀಯ ಧರ್ಮಾಭಿಮಾನಿಗಳ ಶ್ರದ್ಧೆಯ ಅಮೃತಹಸ್ತದ ಕುರಿತೂ ಸವಿಸ್ತಾರವಾಗಿ ತಿಳಿಸಿ, ಧರ್ಮಕ್ಕಾಗಿ ಕಲಿಬೆತ್ತಿರುವ ಈ ಶುದ್ಧೀಕಾರ್ಯವು ಸಮಾಜಕ್ಕೆ ಮಾತ್ರವಲ್ಲದೆ ಇಡೀ ಮಾನವಕೋಟಿಗೆಸೇ ಶ್ರೇಯಸ್ಕರವೆಂಬುದಾಗಿ ಹೇಳಿದರು. ಶುದ್ಧಿಗೊಂಡವರು ಕಿಂಚಿತ್ ಫಲಾಹಾರಗಳನ್ನು ಹಂಚಲಾಗಿ, ದೆರೆದಿದ್ದ ಸಭಿಕರಿಗೆಸ ಮಾಜಿ ಕಾರ್ಯದರ್ಶಿ ಯವರು ಧನ್ಯವಾದಗಳನ್ನರ್ಪಿಸಲು, ಶಾಂತಿಮಂತ್ರದಿಂದ ಸಭೆಯು ಅಂತ್ಯವಾಯಿತು.

ನೀರಿನ ಗುಣ

ಇಕ್ಕಟಿಂಗೆ ಇಸಬಿಯಲ್ಲಿ ಜರ್ಮನಿಯಲ್ಲಿ ಟೈಫಾಯ್ಡ್ ಜ್ವರಕ್ಕೆ ತಗ್ಗಿನಲ್ಲಿ ಸ್ನಾನದ ಚಿಕಿತ್ಸೆಯು ಆರಂಭಿಸಲ್ಪ ಟ್ಟಿತು. ಅಲ್ಲಿಂದೀಚೆಗೆ ಆ ವ್ಯಾಧಿಯಿಂದಾಗುವ ಮರಣ ಸಂಖ್ಯೆಯು ಅಲ್ಲಿಂದರಷ್ಟುಕಡಮೆಯಾಯಿತು. ಕೈಸೋ ನಿಯಾ ಜ್ವರಕ್ಕೆ ಹೊರ್ಡಕ್ಕೂ ಒಳಕ್ಕೂ ಮಾಡುವ ಚಿಕಿತ್ಸೆ ಯಿಂದಲೇ ಮರಣ ಸಂಖ್ಯೆಯು ತಗ್ಗಿದುವಾಗಿ ತಿಳಿದು ಬಂದಿದೆ. ಇನ್‌ಫ್ಲೂಯೆಂಜಾ ಜ್ವರಕ್ಕೂ ಇದೇ ತರದ ಥಾಕ್ಸ್‌ಬೈಂಗರ ಜಲ ಚಿಕಿತ್ಸೆಯಿಂದ ಆ ವಾಧಿ ಜನ್ಯ ವಾದ ಸೊಡಕುಗಳೆಲ್ಲ ತಗ್ಗಿ ಮರಣ ಸಂಖ್ಯೆಯೂ ತಗ್ಗಿದೆ. ಇವಾಸೆಗೆ ಜಿಟ್ಟೆಳಲ್ಲದೆ ಮಲಗಿರುವ ರೋಗಿಗೆ ಕುದಿಯುವುದಕ್ಕೆ ಸಮೃದ್ಧವಾಗಿ ನೀರನ್ನು ಕೊಟ್ಟು ಹೊರಕ್ಕೂ ಒಳಕ್ಕೂ ಜಲ ಚಿಕಿತ್ಸೆಯನ್ನು ಕೊಡಬಹುದು. ಆದರೆ, ಅಯಾ ದೇಶ ಪ್ರಕೃತಿಯನ್ವಯವಾಗಿ ಇದನ್ನು ನಡೆಸಬೇಕು. ಆಗ ಅದರ ಗುಣವು ಬಹಳ ತ್ವರ್ಕರ ವಾಗಿ ಕಂಡು ಬರುವುದು. ಹುಚ್ಚಾನಸ್ಪತ್ರೆಗಳಲ್ಲಿ ಇತ್ತೀ ಚೆಗೆ ಜಲ ಚಿಕಿತ್ಸೆಯೋಕ್ತ ಫಲಕಾರಿಯಾಗಿ ಕಂಡು ಬಂದಿದೆ. ಅನೇಕ ತರದ ವಿಕೃತ ಕಾಲದ ವ್ಯಾಧಿಗಳಿಗೂ ಜಲ ಚಿಕಿತ್ಸೆಯು ಗುಣಕಾರಿಯಾಗಿದೆ. ರಕ್ತ, ಮೂತ್ರ, ಎಲುಬು, ಕೀಲು, ನರ, ಮಾಂಸಖಂಡಗಳಿಗೆ ಸಂಬಂಧ ಪಟ್ಟ ವ್ಯಾಧಿಗಳಿಗೆಲ್ಲ ಇದು ಒಳ್ಳೆಯದು.

ವಿಷಯಸೂಚಿ.

ಮುಂದಿನ ಭಾಗಕ್ಕೆ ಇಂಗ್ಲಾಂಡು–ಸ್ಕಾಟ್ಲಂಡಿಗೆ ಮಹಾ ಒಪ್ಪಂದ. ೧
ಪತ್ರ ೩
ಅನ್ಯಾಯ ಕೃತಜ್ಞತೆ. ೪
ಮೈಸೂರಿನ ಮಂತ್ರಿ ಮಾರ್ಗ ಅಭಿಪ್ರಾಯ. ೫
ಸ್ವದೇಶಾಭಿಮಾನಿಗಳು ೯
"ಕೆಟ್ಟು ಹೋಗು ಕುಲಪ ಹೊರಗೆ" ೬
—ನೀತಿ— ೬
ಗ್ರಹಣ ೬
ನಿರುದ್ಯೋಗಿಗಳ ಮುಂದೆ. ೧೦
ವರ್ತಮಾನ ಸಂಗ್ರಹ –
ಮುಂದಕ್ಕೆ ಕಾಲೂರುಗಳಿಂದ ೧೩
ವಿವಿಧ ಸಮಾಚಾರಗಳು. ೧೬
ದಿಲ್ಲಿಯ ಶಾಸನ ಸಭೆಯಲ್ಲಿ ಕೊಂಗ್ರೆಸ್ಸಿನ ಪ್ರಥಮದ ವಿಜಯ ೧೪
ಕನ್ನಡ ಹಿಂದೀ ಕಲಹ. ೧೯

ಸ್ವದೇಶಾಭಿಮಾನಿ.

ಶಾ. ಆನೇ ತುಳ್ಯವಾರ ಫೆಬ್ರವರಿ '೩೫

ನಿರುದ್ಯೋಗಿಗಳ ಮುಂದೆ

ಇಷ್ಟು ದಿನ ಶಿಕ್ಷಣವಿಲ್ಲವೆಂದು ನಾವು ಕೊರಗುತ್ತಿದ್ದೆವು. ಇನ್ನಾದರೂ ಓದುಬರಹ ಬಲ್ಲವರ ಸಂಖ್ಯೆಯು ನಮ್ಮಲ್ಲಿ ಹೆಚ್ಚಾಗಿಲ್ಲ ಅದಕ್ಕೂ ಮೊದಲೇ ಓದಿಯೂ "ಮುಂದೇನು ಗತಿ?"—ಎಂದು ವಿಚಾರ ಮಾಡುವವರ ಸಂಖ್ಯೆಯು ಬೆಳೆಯತೊಡಗಿದೆ. ಕೇವಲ ೧೫–೨೦ ರೂಪಾಯಿಗಳ ನೌಕರಿಗೆ ಬರುವ ಬಿ. ಎ. ಕಲಿತವರ ಸಂಖ್ಯೆಯು ಅಪಾರವಾಗಿದೆ ಹೀಗಿರಲು–ಅದಕ್ಕಿಂತ ಕಡಿಮೆ ಶಿಕ್ಷಣ ಹೊಂದಿದವರ ಸಂಖ್ಯೆಗೆ ಮಿತಿಯೇ ಇಲ್ಲ (ಇದರಿಂದ ಓದು ಕಲಿತು ಮಾಡುವುದೇನು?—ಎಂಬ ವಿಚಾರವು ನಮ್ಮ ಮುಂದೆ ಬಹಳವಾಗಿ ಬರುತ್ತಿದೆ. ನಿಶ್ಚಯವಾಗಿಯೂ ಈಗಿನ ವಿಶ್ವವಿದ್ಯಾಲಯದ ಶಿಕ್ಷಣವು ಕೇವಲ ನೇಕಡ ೧೧ರಷ್ಟು ಜನರಿಗೂ ಸಹ ಉದ್ಯೋಗವನ್ನು ದೊರಕಿಸಿ ಕೊಡಲಾರದು ಉಳಿದವರು ನಿರುದ್ಯೋಗಿಗಳಾಗಿ ತಿರುಗಾಡಲೇ ಬೇಕಾಗುವುದು ಉದ್ಯೋಗದಭ್ರಮೆ ಹಿಡಿದು ಆ ರೀತಿ ಶಿಕ್ಷಣವನ್ನು ಮುಂದರಿಸುವುದು ತಪ್ಪೆಂದು ತಿಳಿಯುವುದು ಅವಶ್ಯ ನಿರುದ್ಯೋಗವು ಕಣ್ಮುಂದೆ ಭೀತಾಳವಾಗಿ ನಿಂತಿದ್ದರೂ ಕಾಲೇಜುಗಳಲ್ಲಿ ಕಲಿಯುವವರ ಸಂಖ್ಯೆಯು ಬೆಳೆಯುತ್ತಲೇ ಇದೆ ಇದು ಮುಂದಿನ ಗುರಿಯರಿತು ಕಲಿಯುವವರಲ್ಲಿ–ಬದಲು ಆದಷ್ಟು ದಿನ ಹೋಗಲಿ–ಎಂದು ಶಾಲೆಗೆ ಹೋಗುವವರು.ಓದುಬರಹ ಎಲ್ಲರೂ ಮುಗಿದ ಬಳಿಕ—ಇನ್ನೇನು ದಾರಿಯೆಂದು ಇವರು ಕಂಗಾಲಾಗುತ್ತಿದ್ದಾರೆ ಇಂಥವರ ಸಲುವಾಗಿ ಸರಕಾರವು ಹಾದಿ ಹಾಕಿಕೊಡುತ್ತಲೂ ಇಲ್ಲ–ಇತ್ತ ಇನ್ನು ಮುಂದೆಯಾದರೂ ಒಳ್ಳೆತಾಗಲಿ–ಎಂದು, ಹೆಚ್ಚಿನ ಜನರಿಗೆ ಔದ್ಯೋಗಿಕ ಶಿಕ್ಷಣವನ್ನು ಕೊಡಿಸುವ ವ್ಯವಸ್ಥೆಯಾಗಲಿ ಇನ್ನೂ ನಡೆದಿಲ್ಲ ವಿಶ್ವವಿದ್ಯಾನಿಲಯಗಳು ಈ ವಿಷಯಗಳಲ್ಲಿ ಇನ್ನೂ ತಟಸ್ಥವಾಗಿರುವು ದನ್ನು ಕಂಡರೆ ಆಶ್ಚರ್ಯವಾಗುವುದು

ಸಾಮಾನ್ಯ ಎಂಟನೇ ತರಗತಿ (III Form)ಯ ತನಕ ಓದು ನಿತ್ಯ ಜೀವನಕ್ಕೆ ಅತಿ ಅವಶ್ಯವೇ ಸರಿ. ಆ ನಂತರ ತರುಣರು ಜೀವನದ ಹಾದಿಯನ್ನು ಕಾಣಬೇಕಾಗುವುದು. ಈಗಾಗಲೇ ಬೆಳೆದುಬಂದಿರುವ ನಿರುದ್ಯೋಗಿಗಳ ಪಡೆಯ ಮುಂದೆ ಒಂದು ಹಾದಿಯನ್ನು ಸೂಚಿಸ ಬಹುದು. ನಶ್ಚಿಣದ ಜೀವನದ ಬೆಡಗನ್ನೆ ಅವರು ಮರೆತು, ತಮ್ಮ ತರೀಕೆ ಶ್ರಮದ ಮೇಲೆ ಜೀವಿಸತೊಡಗಬೇಕು.

ನಮ್ಮ ದೇಶವು ಉದ್ಯೋಗದಿಂದ ನಿರುದ್ಯೋಗ ನಿವಾರಣೆ ಮಾಡುವ ದಿನಗಳು ಸಮೀಪವಾಗಿಲ್ಲ. ಅಷ್ಟು ಭಂಡವಾಳ ನಮ್ಮಲ್ಲಿಲ್ಲ. ಸಾಹಸಿಗಳು ಇಲ್ಲ. ಇದರಿಂದಾಗಿ ಹೆಚ್ಚಿನವರು ಕೃಷಿಯ ಕಡೆಗೇನೆ ತಿರುಗಬೇಕು ನಿರುದ್ಯೋಗಿಗಳನ್ನು ವ್ಯವಸ್ಥೆ ಗೊಳಿಸಿಕೊಂಡು ಕೃಷಿಯ ಹಾದಿಯ ಹಿಡಿಯುವುದು ಲೇಸಾದ ಮಾರ್ಗ. ಅದರಲ್ಲೂ ಅಂಥ ಪರಂಪರೆಯು ಕೃಷಿಯಿಂದ ಈ ಪ್ರಶ್ನೆಯ ತೀರ್ಮಾನವಾಗಲಾರದು. ಆ ವಿಷಯವಾಗಿ ಈ ಕೆಳಗಿನ ಯೋಜನೆಯು ನಡೆಯಬೇಕಾದೀತು.

೧೮–೪೦ ರ ಕನಕ, ತಾವೇ ಕೆಲಸ ಮಾಡಲು ಉತ್ಸಾಹವಿರುವ ತರುಣರು ಸಹಕಾರ ಕೂಟಗಳಾಗಿ ಮುಂದೆ ಬರಬೇಕು ತಮ್ಮ ಈ ಯೋಜನೆಯು ಯಶಸ್ವಿಯಾಗುವ ತನಕ ಅವರು ಸಾಕಷ್ಟು ದರಿದ್ರಜೀವನ ದಿಂದಲೇ ತೃಪ್ತಿಗೊಳ್ಳಬೇಕು

ಇಂಥವರ ಸಲುವಾಗಿಯಾರೂ ಮುಫ್ತಾಗಿ ಜಮೀನನ್ನು ಸಾಗುವಳಿಗೆ ಕೊಡಲಾರರು ಆದರೆ ಸರಕಾರದವರಿಂದ ನಮ್ಮ ನೂಡು ಕರಾವಳಿ ಪ್ರಾಂತದಲ್ಲಿ ಕೃಷಿಗೆ ಅನುಕೂಲವಾದ ಕಾಡುಸೆಂದುಗಳು ದೊರೆಯಬಹುದು ಕುಂದಾಪುರ ತಾಲೂಕಿನಲ್ಲಿ–ಕರಾವಳಿಗೆ ೪-೧೦ ಮೈಲು ಸಮೀಪದಲ್ಲೇ ನೀರಿನ ಅನುಕೂಲತೆಯದ್ದೂ, ಹಾಳು ಬಿದ್ದ ಜಮೀನುಗಳು ಎಣಿಕೆಯಿಲ್ಲದಷ್ಟಿವೆ ಇತರ ನೂಡು ಪ್ರಾಂತಗಳಲ್ಲಿ ಇದು ಬೇಕೆನ್ನುವಷ್ಟು ಇದೆ ಇಲ್ಲಿನ ತೊಡಕೆಂದರೆ 'ಮಲೆರಿಯಾ' ಇದ್ದರ ನಿವಾರಣೆಗೆ ಒಂದು ಯೋಜನೆ ಬೇಕು ಸರಕಾರದ ಬೆಂಬಲ ಪಡೆದು, ಇಂತಹ ವಸಾಹತುಗಳನ್ನು ಸ್ಥಾಪಿಸಿದ ಕರುವಾಯ-ಸುಕ್ತಲಿನ ಕಾಡುಪ್ರದೇಶಗಳನ್ನು ಸವರಬೇಕು ಜವುಗುನೆಲ ಕ್ಕೆ ಆಗ ಪೆರಿಸ್ ಗ್ರೀನ್, ಇಲ್ಲವೆ ಟಿಮಿಣಿಎಣ್ಣೆ–ಎಸೆಯಬೇಕಾದೀತು ವಸಾಹತಿನ ಸುತ್ತು ಸಾಕಷ್ಟು ಭದ್ರವಾದ ಬೇಲಿಯು ಬೇಕು ಒಮ್ಮುಖವಾಗಿ ಸಿಗುವ ಜಮೀನುಗಳನ್ನೆ ಆರಿಸಬೇಕು

ಇಂಥ ಕಡೆಗಳಲ್ಲಿ ಗುಡಿಸಲುಗಳನ್ನು ಸ್ಥಾಪಿಸಿ ಆದಷ್ಟು ಶಾಸ್ತ್ರೀಯ ರೀತಿಯಿಂದ ಕೃಷಿಯನ್ನು ನಡೆಯಿಸಬೇಕು ತಮ್ಮ ಊಟಕ್ಕೆಂದು ಬೆಳೆಯನ್ನು ನೂಡಿ, ಇನ್ನೊಂದು ಮಾರ್ಕೆಟ್ಟಿನ ಸಲುವಾಗಿ ತಯಾರಿಸಬೇಕು ಮೆಣಸು, ಸೋಯಾಬೀನ್ ದಂಥ ಲಾಭಕಾರಿ ಬೆಳೆಗಳನ್ನು ತೊಡಗುವುದು ಕಷ್ಟದ ಕೆಲಸವಲ್ಲ ಇದಲ್ಲದೆ, ಎಚ್ಚರದಿಂದ ನಿರ್ವಹಿಸಿದರೆ ಶಾಸ್ತ್ರೀಯವಾಗಿ ಜೇನುಸೊಣ, ಕೋಳಿ, ಹಂದಿಗಳನ್ನು ದೊಡ್ಡ ವ್ಯಮಾಣದಲ್ಲಿ ಸಾಕುವುದು ಲಾಭದಾಯಕವಾದೀತು ಕೃಷಿಯ ಜತೆಯಲ್ಲಿ ಇಂಥ ಉಪ-ಉದ್ಯೋಗವನ್ನು ಇರಿಸಿಕೊಂಡಲ್ಲಿ–ಆರ್ಥಿಕ ದೃಷ್ಟಿಯಿಂದ ಎಷ್ಟೋ ಸಹಾಯವಾದೀತು ಬೆಟ್ಟು ಸ್ಥಳಗಳಲ್ಲಿ ಗೇರು ಮರಗಳಿಂದ ವಿಶೇಷ ಲಾಭವಿದೆ

ನಮ್ಮ ಮುಂದಾಳುಗಳು–ನಿರುದ್ಯೋಗಿಗಳ ಕೂಟವನ್ನು ಸ್ಥಾಪಿಸಿ, ಅದರ ಪರವಾಗಿ ಹಡಿಲು ಭೂಮಿಗಳನ್ನು ಪಡೆದು–ಇತರ ಸಹಾಯವನ್ನು ಸರಕಾರದಿಂದ ಪಡೆಯುವುದು ಕಷ್ಟವಾಗಲಾರದು ನಮ್ಮ ಜಿಲ್ಲೆಯಂತಹ–ಜಮೀನೂ, ಜನರೂ ಇರುವ ಸ್ಥಳಗಳಲ್ಲಿ ಈ ರೀತಿಯ ಸಾಹಸವು ಯಶಸ್ವಿಯಾದೀತು. ಮಲೇರಿಯ, ಕಾಡುಮೃಗಗಳೆ–ಮುಖ್ಯ ತೊಡುಕಗಳನ್ನು ಸರಕಾರದವರ ಸಹಾಯದಿಂದ ತಪ್ಪಿಸಲು, ವಿದ್ಯಾವಂತರಿಗೆ ಕಷ್ಟವಾಗಲಾರದು.

ತರ್ಕಶೃಂದ್ರ ಭೋಸರಿಗೆ ಕೃತಂಕು ಸ್ವರ್ಗ!



ಬಾಬು ಶರತ್ಚಂದ್ರ ಬೋಸರನ್ನು ಸೆರೆಯಲ್ಲಿಟ್ಟಿದ್ದಾರೆ ಮೇಲಾಗಿ, ಶಾಸನಸಭೆಗೂ ಚುನಾಯಿಸಿದ್ದಾರೆ ಸೆರೆಯಲ್ಲಿರಬೇಕೆಂದೂ ವಿಲ್ಲಿಂಗ್ಡನ್ನರ ಆಜ್ಞೆ! 'ಶಾಸನಸಭೆಗೆ ಬಂದು ಹಾಜರಾಗಿ' ಎಂದೂ ಅವರ ಹೇಳಿಕೆ ಶರತ್ಚಂದ್ರರಿಗೆ ಇದೊಂದು ತ್ರಿಶಂಕು-ಸ್ವರ್ಗವಲ್ಲವೇನೆ? ಚತ್ರ ನೋಡಿ! ವಿಶ್ವಾಮಿತ್ರ ರೂಪದಿಂದ ಭೂಮಿಯಲ್ಲಿ ನಿಂತ ವಿಲ್ಲಿಂಗ್ಡನರು ಬೋಸರನ್ನು ಮಧ್ಯೆ ತಡೆದಿದ್ದಾರೆ–ಆದರೆ ಕೈಲಾಸದಲ್ಲಿ ವಿಲ್ಲಿಂಗ್ಡನ್ ದೇವತೆಗಳು ಬೋಸರನ್ನು ಮೇಲಕ್ಕೆ ಕರೆಯುತ್ತಿದ್ದಾರೆ

ಅಧ್ಯಾಪಕಶಿಕ್ಷಣಕ್ಕಾಗಿ ವಿದ್ಯಾರ್ಥಿಗಳ ಮುಷ್ಕರವು

ಅಲ್ಲಹಬಾದಿನಲ್ಲಿ ಮುಷ್ಕರ ಹಿಡಿದಿರುವರು ತಮ್ಮ ಹಳೆಯ ಅಧ್ಯಾಪಕರೊಬ್ಬರನ್ನು ಆಲ್ಲಿಯ ಬೋರ್ಡಿಂಗ್ ಶಾಲೆಯಿಂದ ಪಾರ್ಸಾಯಿಸಿದುದೆ ತಡ. ವಿದ್ಯಾರ್ಥಿಗಳೆಲ್ಲರೂ ಮನೆಯಲ್ಲೇ ಕುಳಿತರು ಅವರ ಪಕ್ಷವರು ವಿದ್ಯಾರ್ಥಿಗಳ ಬೆನ್ನು ತಟ್ಟಿದರು ಈಗ ಎಜ್ಯುಕೇಶನ್ ಕಮಿಟಿಯವರು ಆ ಅಧ್ಯಾಪಕರನ್ನು ಪುನಃ ಅದೇ ಶಾಲೆಯಲ್ಲಿರಿಸುವ ವ್ಯವಸ್ಥೆ ಮಾಡಿರುವರು.

ರಾಮಾಯಣದ ಶ್ಲೋಕಗಳನ್ನು—

ಭಲಾಸಪುರದ ಕೊಂಗ್ರೆಸ್ ಕೆಲಸಗಾರರಾದ ಶ್ರೀ ಶ್ಯಾಮಿಯಮಾರರೆಂಬವರು ಉಚ್ಚರಿಸಿದುದಕ್ಕಾಗಿ ಅವರನ್ನು ಸೆರೆಹಿಡಿದಿರುವರೆಂದು, ತಿಳಿದುಬಂದಿದೆ

ಮಂತ್ರಶಕ್ತಿ'ಯೆಂದೊಡನೆ–

—"ಅದು ಇಲ್ಲವೇ ಇಲ್ಲ"ವೆನ್ನುವವರಿರುವರು ೬೦ರ ನಿನಿಲ್ಲ ನೈದ್ಯರೊಬ್ಬರು ಒಬ್ಬನನ್ನು ಸಫಿಕರೆದರು ನಿಲ್ಲಿಸಿ ಅವನ ಹೊಟ್ಟೆಯಲ್ಲಿ ತಂಬುವಷ್ಟು ವಿಷವನ್ನು ಅವನಿಗೆ ಕುಡಿಯಲೊಟ್ಟರು. ಅವನು ನುಂಗಿದನು. ಅವನು ನುಂಗುತ್ತಿದ್ದಾಗ ವೈದ್ಯರು ಮಂತ್ರೋಚ್ಚಾಟನೆಗಾರಂಭ ಮಾಡಿದರು. ಇಂದ್ರಜಾಲವೃತ್ತಿಗೆ ತೊಡಗಿದರು ವಿಷ ಪಾಷಮಾಡಿದವನು ಸುಖವಾಗಿಯೇ ಉಳಿದನು

ಮದ್ದಿಲ್ಲದ ರೋಗ

ಇಲ್ಲಿನ್ಯೂರ್ ಎಂಬಲ್ಲಿ ತಲೆಯೆತ್ತಿದೆ ಒಬ್ಬ ರೈತನ ಪತ್ನಿ ಮಿಸೆಸ್ ಪೆರೊಲ್ಟ್ ಮೇಕೀ ಎಂಬವಳಿಗೆ ಒಂದು ದಿನ ಅಕಸ್ಮಾತಾಗಿ ಅಳಸುವ ರೋಗವು ಪ್ರಾರಂಭವಾಯಿತು ನಿಮಿಷಕ್ಕೊಂಬರೆಂತು ಸಲ ಅಳಸುವುದು. ೯ ದಿನಗಳ ತನಕ ಹೀಗೆ ೧೪೦,೦೦೦ ಸಲ ಅಳಸಿದಳು. ಅವಳ ಆಕ್ಕೆಕೆ ನೋಡುತ್ತಿದ್ದ ವೈದ್ಯರಿಗೆ ಒಟ್ಟು ೩೦೦೦ ಪತ್ರಗಳು ತಂತಿಗಳು ಬಂದು ಅವರಿಗೆ ಸಲಹೆಗಳನ್ನು ಕೊಟ್ಟವು. ಆದರೂ ಯಾವುದೂ ಫಲಕಾರಿಯಾಗಲಿಲ್ಲ ಎಂಬೇ ದಿನ ಎರಡು ಸಲ ಅಳಸಿ ಸ್ವಸ್ಥಳಾಗಿರುವಳು.

ಶ್ರೀ ಅಖಿಲಚಂದ್ರಪಕ್ಷರು–

ದಿಲ್ಲಿಯ ಶಾಸನ ಸಭೆಗೆ ದಕ್ಷಿಣ ಪೈಸೆಪ್ಟರರಾಗಿ ಆರಿಸಲ್ಪಟ್ಟಿರುವರು ಶ್ರೀ ಎಂ. ಸಿ. ರಾಜರು ಪರಾಜಿತರಾದರು.

ಸರ್ಕಾರಕ್ಕೆ ಇನ್ನೊಂದು ಅಪಜಯ!

ಗಡಿನಾಡಿನ ಕೆಂಪಂಗಿಯವರ ಮೇಲೂ, ಖುಜ್ಜೆ ಕೆಂಪ ಮುಸಲ್ಮಾನರ ಮೇಲೂ ಇರುವ ನಿಷೇಧಾಜ್ಞೆಯನ್ನು ಹಿಂತೆಗೆಯಬೇಕೆಂದೂ ಶ್ರೀ ಬಿ. ದಾಸರು ಎಸೆಂಬ್ಲಿಯಲ್ಲಿ ತಂದ ಠರಾವಿಗೆ ೬೩ ಮಂದಿಗಳು ಸಮ್ಮತಿಸಿ, ೪೩ ಮಂದಿಗಳು ಸಮ್ಮತಿಸದೆ ಠರಾವು ಮುಂಜೂರಾಯಿತು.

ಏಳು ಜನರು ಮಡಿದರು.

ಮಂದನ ಪಳ್ಳಿಯ ನಯಲ್'ಪಾಡಾ' ಎಂಬಲ್ಲಿ ಒಬ್ಬ ಎಣ್ಣೆ ವ್ಯಾಪಾರಿಯ ಚಮಿನಿ ಎಣ್ಣೆ ಡಬ್ಬಿಯು ಒಡೆದು ಬೆಳಿಯಲ್ಲಿದ್ದ ೧೧ ಮಂದಿಯ ವಸ್ತ್ರಗಳಿಗೆ ಬೆಂಕಿ ತಗಲಿ ೬ ಮಂದಿ ಮೃತರಾದರು ನಾಲ್ವರು ಜಖಂ ಗೊಂಡಿರುವರು

ಬಂಗಾಳಿಯ ದಸ್ಸಗಿರಿ!

ಕಲ್ಕತ್ತಾದಲ್ಲಿ ಅಪಾದನೆಗೆ ಸಿಕ್ಕಿ ತಲೆಮರೆಸಿಕೊಂಡು ಮದ್ರಾಸಿಗೆ ಬಂದು, ಅಲ್ಲಿಯೊಂದು ಹೋಟೂದು ಕಂಪೆನಿಯಲ್ಲಿ ಕೆಲಸಕ್ಕಿದ್ದ ಹೇಮಾದ್ರಿ ಭಟ್ಟಾಚಾರ್ಯ ಎಂಬ ಬಂಗಾಳಿಯನ್ನು ಮದ್ರಾಸಿನಲ್ಲಿ ಸೆರೆಹಿಡಿದಿರುವರು

ಜೈನರ ಮೇಲೆ ಬಸ್ ಬಿತ್ತು!

ಅಹ್ಮದಾಬಾದಿನಲ್ಲಿ ಪಾಲಿತಾಲ ಎಂಬಲ್ಲಿಯ ಸೀಲ್ ಮ್ಹಾಲಿಕರಾದ ಸೇತ್ ಮಾಣಕ್'ಲಾಲರ ಮುಂದಾಳತ್ವ ಜೈನರ ಮೆರವಣಿಗೆಯು ಹೋಗುತ್ತಿದ್ದಾಗ ಬಸ್ ಒಂದು ಬಂದು ಅವರ ಮೇಲೆ ಏರಿಯಾಸಪಟಾಗಿ ನಡೆದು, ಮರಳಿ ಧಕ್ಕೆ ಬಡಿಯಿತು ಇಬ್ಬರು ಒಡನೆ ಮೃತರಾದರು. ೧೧ ಮಂದಿ ಜಖಂಗೊಂಡು ಆಸ್ಪತ್ರೆಗೆ ಮೆರವಣಿಗೆ ಹೊರಟರು

ಸುಭಾಷ್ಚಂದ್ರ ಬೋಸರ ಗ್ರಂಥವು

ಕ್ಯಾಂಬ್ರಿಪ್ಪೇಲ್ ಭೀತಿಯಾಯಕವೆಂಬುದರಿಂದಲೇ ತಾನು ಅದನ್ನು ಬ್ರಿಟಿಷ ಹಿಂದೂಸ್ಥಾನದಲ್ಲಿ ನಿಷೇಧಿಸಲು ವೆನೆಂದು ಸರ್ ಸಾಮುವೆಲ್ ಹೋರಾರು ಲಂಡನಿನಲ್ಲಿ ಹೇಳಿದರು ನಿಷೇಧಿಸಲ್ಪಟ್ಟ ಗ್ರಂಥ ದಿ ಇಂಡಿಯನ್ ಸ್ಟ್ರಗ್ಲ್

ಎಲ್ಲವೂ ತನ್ನ ಮುಷ್ಟಿಯೊಳಗೆ!

ಇನ್ನು ಮುಂದಕ್ಕೆ ಜರ್ಮನಿಯಲ್ಲಿ ಯಾರನ್ನಾದರೂ ಸಾಲಿಗೆ ಕೊಡುವ, ಅಥವಾ ಬಿಡುವ ಎಲ್ಲ ಹಕ್ಕುಹರ್ ಹಿಟ್ಲರ್'ರವರ ಮುಷ್ಟಿಯೊಳಗಿರಬೇಕೆಂದು ಜರ್ಮನಿಯಲ್ಲಿ ತೀರ್ಮಾನಿಸಲಾಗಿದೆ

ವಿಶೇಷ ವಾರ್ತೆಗಳು.

ಕಪೂರ್ಥಲಾ ಸಂಸ್ಥಾನದ ಮುಖ್ಯ ಮಂತ್ರಿಯಾಗಿ ನೇಮಿತರಾದ ಲೆ ಕ ಫಿಷರ್'ರವರು ತಮ್ಮ ಅಧಿಕಾರ ಸ್ವೀಕರಿಸಿದರು

ಲಕ್ನೋ ವಿಶ್ವವಿದ್ಯಾಲಯದ ಕೌನ್ಸಿಲಿನಲ್ಲಿ ಬಾಲಕರಿಗೂ ಬಾಲಕಿಯರಿಗೂ ೧೦ ವರ್ಷದ ವರೆಗೆ ಸಹ ವಿದ್ಯಾಭ್ಯಾಸವನ್ನು ನಡೆಯಬೇಕೆಂದು ನಿರ್ಧಾರವಾಗಿದೆ

ಗಂಜಾಂ ಜಿಲ್ಲಾ ಕಲೆಕ್ಟರಾದ ಮಿ: ಡಿಕ್ಕಾನ್'ರವರು ಮಂಡಾಸಾ ಗ್ರಾಮದ ಹತ್ತಿರ ಹಾವಳಿಮಾಡುತ್ತಿದ್ದ ಒಂದು ಹುಲಿಯನ್ನು ಗುಂಡಿನಿಂದ ಸುಟ್ಟುಹಾಕಿದ್ದಾರೆ

ಸಿಂಧ್'ನಲ್ಲಿ ಇಷ್ಟು ದಿನವೂ ಶೀತವಾತವು ಬೀಸುತ್ತಿದ್ದು ಈಗ ಧೂಳಿನ ಗಾಳಿ ಬೀಸಲು ಪ್ರಾರಂಭ ಈ ಧೂಳಿನ ಬಿರುಗಾಳಿಯಲ್ಲಿ ಇಬ್ಬರು ಕೆಲಸಗಾರರು ಕೆಲಸ ಮಾಡುತ್ತಿದ್ದ ಹಾಗೆಯೇ ಮಡಿದರು.

ಕಡೂರು ಪೌರಸಭೆಯ ಆಡಳಿತವನ್ನು ಪೌರಸಭೆಯ ಕೈಯಿಂದ ಕಿತ್ತುಕೊಂಡು ಒಬ್ಬ ಸ್ಪೆಷಲ್ ಆಫೀಸರರ ಕೈಗೆ ಕೊಟ್ಟರು.ಏಕೆ? ಹೀಗೆಯೇ ಇನ್ನೂ ೬ ತಿಂಗಳು ನಡೆಸಬೇಕೆಂದು ಪುನಃ ಆರ್ಡರಾಗಿದೆ.

ವಿಷಪೂರಿತವಾದ ತಿಂಡಿ ಸಾಮಾನುಗಳನ್ನು ತಿಂದು ಅನೇಕ ಮರಣಗಳು ಸಂಭವಿಸಿದುದಕ್ಕಾಗಿ ಲಾಹೋರಿನಲ್ಲಿ ಪೋಲೀಸರು ಪತ್ತೆ ನಡೆಸಿ ಮುನ್ನೂರು ಹಾಳ್ವರಿಗೂ ಬ್ಬರ ಜೊತೆಯನ್ನು ಕೈದುಮಾಡಿರುವರು.

ಎಸೆಂಬ್ಲಿಯಲ್ಲಿ ಜ್ಯೊಂಟ್ ಸಾಲಿಸಿ ಮೆಂಟರಿ ರಿಪೋರ್ಟು.

ಈ ಬಗ್ಗೆಲ್ಲ ಎಸೆಂಬ್ಲಿಯಲ್ಲಿ ನಡೆಸಬೇಕಾದ ವ್ಯವಹಾರಗಳು ವಿಮರ್ಶಿಸಲ್ಪಟ್ಟು ಕೊಂಗ್ರೆಸ್ ಪಾರ್ಟಿ ಮತ್ತು ಇಂಡಿಪೆಂಡೆಂಟ್ ಪಾರ್ಟಿಗಳಿಂದ್ಕ ತಿರಸ್ಕೃತವಾಗಿವೆ ಕಮಿಟಿಯಲ್ ಎಂಬಾರ್ಗೊ ಕೂಡಾ ವಿಶ್ಯಂಸಲ್ಪಟ್ಟಿದೆ.

ಬಸ್ ತಣ್ಣಗೆಂದು—

ಎಲ್ಲರೂ ತಿಳಿದಿರಬಹುದು. ಆದರೂ ಅದನ್ನು ಯುಕ್ತಪಡಿಸಿಲ್ಲಿಟ್ಟರೆ ಸ್ಪೋಟನವಾಗುತ್ತದೆಂದು ಖಾಟ್ಟಾದಲ್ಲಿ ಮೊನ್ನೆ ತಿಳಿಯಿತು ಖಾಟ್ಟಾದ ಲೊ ಕೊಲೇಜಿನ ಬಳಿ ಒಂದು ಬಸ್ ಕಾರ್ಖಾನೆಯಲ್ಲಿ ಸ್ತ್ರೀಪುರುಷರಿಬ್ಬರು ಬಸ್ ತಯಾರಿಸುತ್ತಿದ್ದಾಗಲಿಂಬತ್ತುವು ಸ್ಪೋಟನಗೊಂಡು ಮಹಾ ಶಬ್ದವನ್ನುಂಟುಮಾಡಿ ಹುಲ್ಲಿನ ಮಾಡು ಹಾರಿ ಹೋಗಿ ಬಿಟ್ಟಿತು ಸ್ತ್ರೀಯ ಕಣ್ಣಿನ ಗೊಂಬೆಯೊಂದು ಎಲ್ಲಿಗೋ ಹಾರಿಹೋಗಿ ಅದರ ಪತ್ತೆಯಾಗಲಿಲ್ಲ ಇಬ್ಬರು ಜಖಂ ಗೊಂಡಿರುವರು

ಶಾಸನಸಭೆಗೆ ಅಧ್ಯಕ್ಷರಿಂದ ನಿಯಮಿಸಲ್ಪಡುವ ಮೊದಲು ಕೇವಲ ದಿನಗಳ ಮಟಿಗೆ ಅಧ್ಯಕ್ಷತೆಯನ್ನು ವಹಿಸಿದ್ದ
ಸರ್ ಹೆನ್ರಿ ಗಿಡ್ನಿಯವರು

ಅಖಿಲ ಭಾರತ ಕೊಂಗ್ರೆಸ್ ಕಮಿಟಿ.

ಇದರ ಆಫೀಸ್ನ ಅಕ್ಟೋಬರ್ ೧ ದಿಗೆ ಒಬ್ಬರಿಂದರು ಸದ್ಯಕ್ಕೆ ಅಧಿ ಕೆಲಸವು ಬಾಬ್ಬುದಿಲ್ಲವೆಂಬ ಅಧಿ ಕೆಲಸವು ಅಲ್ಲಾಹಾದಾನಿಸಲ್ಪ ಜರಗುತ್ತಿದೆ ಸಿಬ್ಬಂಯನ್ನು ಪೂರ್ಣವಾಗಿ ದಗಾರಿ ಸುವ ಕುರಿತು ಸಿಬ್ಬಿ ತಾಧಿಕಾರ್ಯಯವೇನಿಂದು ತಿಳಿದುಬಂದಿಲ್ಲ

ಕಾಡುನಿವಾಸಿಗಳಿಗೂ ಪೋಲೀಸರಿಗೂ

ಪೇಶಾವರದ ಲಬ್ಬಾಂಖೈಲ್ ಯುದ್ಧವು ನಡೆಯಿತು ಪೋಲೀಸರ ಪ್ರತಿಯೊಂದು ಗುಂಡಿಗೆ ಕಾಡುನಿವಾಸಿಗಳ ಬಂದೂಕಿನ ಉತ್ತರವು ತಪ್ಪದೆ ಬಂದಿತು ಕೆಲವರು ಜಖಂಗೊಂಡರು. ಕೊನೆಗೆ ಲಭ್ಯರೀ ಜನರು ಮುಖಂಡರು ಸೆಶ್ಶರಿದ್ದು ಅವರು ಸಿಕ್ಕಿಬಿದ್ದರು

ವಿದ್ಯೆಯೆಂಬುದರ ಅರ್ಥವು—

ತಿಳಿಯಬೇಕಾದರೆ ಇರ್ಮನಿಗೆ ಹೋಗಬೇಕು ಅಲ್ಲಿ ಪುಸ್ತಕದ ಬದಲಿಕಾಯಿಗೆ ಹುಳು ಹಿಡಿದಿದೆ ಬದಲಿಗೆ ಮಕ್ಕಳ ಕಲ್ಪನಾಶಕ್ತಿಯನ್ನು ಹೆಚ್ಚಿಸುವುದಕ್ಕಾಗಿ ೩೦೦ ಶಾಲೆಗಳಲ್ಲಿ ಚಲಚ್ಚಿತ್ರ ಪ್ರದರ್ಶನದ ಯೋಜನೆ ಮಾಡಿರುವರು ಜರ್ಮನಿಯ ೫೦೦೦ ಶಾಲೆಗಳಿಗೆ ಈ ಯೋಜನೆಯನ್ನು ಮಾಡಲಿರುವರು ಬೋಧಕರಾದ ೧೧ ಚಲಚ್ಚಿತ್ರಗಳೂ ಅವುಗಳ ೬೨೦೦ ಪ್ರತಿಗಳೂ ಸಿದ್ಧವಾಗಿವೆ

ಗಡಿನಾಡಿನಲ್ಲಿ ಕೊಲೆಗಳು

ಕೊಚಿನ ಟ್ರೈಬ್ ಕಡಿಮೆ ೧೯೨೩ರಲ್ಲಿ ೪೯೧ ಜನ ಜನರನ್ನು ಕೊಲೆಮಾಡಿದರು. ೧೯೨೪ರಿಂದ ದಶಂಬರ ಅಂತ್ಯದ ವರೆಗೆ ಅಲ್ಲಿ ೪೫೫ ಜನರು ಕೊಲೆಯಾಯಿತು ೧೯೨೫ರ ದಶಂಬರ ತಿಂಗಳಲ್ಲಿ ಅಲ್ಲಿ ೩೪ ಜನರನ್ನು ಕೊಲೆಗಡಕನಕ್ಕಾಗಿ ಶಿಕ್ಷಿಸಿದರು ೧೯೨೪ರಲ್ಲಿ ೩೩ ಮಂದಿಯನ್ನು ಶಿಕ್ಷೆಗೆ ಗುರಿಪಡಿಸಿದರು

ದಾನಿಗಳ ಸಂಖ್ಯೆ ಕಡಿಮೆಯೆಂದು—

ಹೇಳುವವರು ತಪ್ಪುತಿದ್ದಿದ್ದಾರೆ ತಿರುಪುರದಲ್ಲಿ ಉಥೋವದಾಸ್ ತಾರಕಚಂದ ಸೆಂಟ್ರಲ್ ಅನ್ನಕ್ಷೇತ್ರವು ನಿರ್ವಾಹಕ್ಕಾಗಿ ಉಥೋವದಾಸ್ ತಾರಕಚಂದ್ ಎಂಬ ಪ್ರಸಿದ್ಧ ವರ್ತಕರೊಬ್ಬರು ಒಂದು ಲಕ್ಷ ರೂಪಾಯಿಗಳನ್ನು ದಾನಮಾಡಿರುವರು ಈ ಕಟ್ಟಡಕ್ಕೆ ೪೨ ಲಕ್ಷ ರೂಪಾಯಿಗಳ ವೆಚ್ಚವಾಗಿದೆ.

ಚಕ್ರವರ್ತಿಯವರ ಪುತ್ರನಿಗೆ—

ಪ್ರಿನ್ಸೆಸ್ ಮೆರಿಗೆಳೆದನೆ ಮೊನ್ನೆ ವಿವಾಹವಾದ ವಿಷಯವು ಎಲ್ಲರಿಗೆ ತಿಳಿದ್ದೇ ಈ ದಂಪತಿಗಳಿಗೆ ಬಂದ ಬಹು ಮಾ ನ ಗಳ ನ್ನು ಪ್ರದರ್ಶಿಸಿದ್ದರು ಧರ್ಮಾರ್ಥವಾಗಿ ಅಲ್ಲ!—ಟಿಕೇಟು ಇಟ್ಟು! ಒಬ್ಬರು ೧೦೦,೦೦೦ ಜನರು ಆ ಬಹುಮಾನಗಳನ್ನು ನೋಡಲು ಗುಂಪುಕಟ್ಟಿ ಹೋದರು ೫೦೦೦ ಪೌಂಡುಗಳ ಉತ್ಪತ್ತಿಯಾಯಿತು ಈ ದೃಶ್ಯವನ್ನು ಡ್ಯೂಕ್ ಒಫ್ ಕೆಂಟರ ಸಂಬಂಧಿಕರಿಬ್ಬರ ವಿಷಯಗಳಿಗಾಗಿ ವಿಸಲಾಗಿಟ್ಟರುವರು

ಪರಿಷತ್ತುಗಳಿಗೂ ಮಂಡನೆಗಳಿಗೂ—

ಕಡಪೆ ಯಿಲ್ಲ ಅಖಿಲ ಬಂಗಾಳ ಹಿಂದೂ ಪರಿಷತ್ತು ಜಾ ಎನ್ ಕೆ ಬಾಸು ಎಂ ಎಲ್ ಸಿ ಇವರ ಅಧ್ಯಕ್ಷತೆಯಲ್ಲಿ ಜರಗಿ ಕಮ್ಯೂನಲ್ ಎವಾರ್ಡ್ ಖಂಡಿಸಲ್ಪಟ್ಟಿತು

ತಾ ಒನೇ ದಿನ—

ಜ್ಯೊಂಟ್ ಸಿಲೆಕ್ಟ್ ಕಮಿಟಿಯ ರಿಪೋರ್ಟಿನ ಮೇಲೆ ಅಖಿಲ ಭಾರತೀಯ ಹಿಂದೂಸಭೆಯು ಶ್ರೀ ಲಾಲಾ ರಾಜೇಂದ್ರ ಪ್ರಸಾದರವರ ಈ ಬಗ್ಗೆ ಪ್ರಾರಂಭಿಸಿದ ಅರಿಕೆಯ ಪರಿಶ್ಯರ್ಣವಾಗಿ ದೇಶದಲ್ಲೆಲ್ಲಾ ಸ್ತ್ರೀಯರಿಂದ ಹಿಂದೂಸಭೆಯ ಧೋರಣೆಯ ಸರ್ವತೋಮುಖವಾಗಿ ನಡೆಯಿತು



ದಕ್ಷಿಣಾಫ್ರಿಕದ ಸಿಜಂಟ್ ಜನರಲರಾಗಿ ನೇಮಕಹೊಂದಿರುವ ಅಡ್ಮ ತೆರೆಪ

ಸಯ್ಯದ್ ರಜಾ ಅಲಿಗೆಳವರು

೨,೦೦,೦೦೦ ರೂಪಾಯಿ ನಿತಿಗಳನ್ನು

ಚಕ್ರವರ್ತಿಯವರ ಸಿಲ್ವರ್ ಜುಬಿಲಿ ಫಂಡಿಗೆ ಹೈದರಾಬಾದಿನ ನಿಜಾಮರು ೨ ಅತ್ತಲಾಗೆ ಉದಾರವಾಗಿ ಕೊಟ್ಟರು ಇದರ ಮೇಲೆ ೫೫ ೦೦೦ ರೂಪಾಯಿಗಳನ್ನು ತಾನು ತನ್ನ ಸ್ವಂತ ತಿಜೋರಿಯಿಂದ ಕೊಡುವುದೆಂದು ತಿಳಿಸಬೇಕೆಂದು ಬಿಜಮೇರು ತನ್ನ ತಿಜೋರಿಯವರಿಗೆ ಹೇಳಿದರು ಇಷ್ಟಾಮ ಸರಕಾರದ ಪಾನ್ ಬಹದ್ದೂರ್ ಆಹಮದ್ ಅಲ್ಲಾವ್ ಎನ್ನರು ೧೦,೦೦೦ ರೂಪಾಯಿಗಳನ್ನು ಕೊಟ್ಟರು ನವಾಬ ಜೋಯರ್ ಜಂಗರು ೨೦೦೦ ರೂಪಾಯಿಗಳನ್ನು ಕೊಟ್ಟರು ದಿವಾನ್ ಭೂಕಂದರ ವೇಳೆ ಈ ಮುದ್ದಿಗೆ "ಆರ್ಥಿಕ ದುಸ್ಥಿತಿ"

ಸಂಬಳದ ಮೇಲಿನ ಕಡಿತವು ಹೋಯಿತು.

ಇಷ್ಟರ ವರೆಗೆ ಸರಕಾರೀ ನೌಕರರ ಸಂಬಳದ ಮೇಲಿದ್ದ ಕಡಿತವು ಇದೇ ಮಾರ್ಚ್ ತಿಂಗಳ ೩೧ ರ ನಂತರ ರದ್ದಾಗುವುದು ಆಲ್ ಇಂಡಿಯಾ ಸರ್ವಿಸ್ ಇಂಡಿಯಾ ಸರಕಾರ ರಿಫೆಸ್ ರೈಲ್ವೆ ಸರ್ವಿಸುಗಳಲ್ಲಿರುವವರ ಸಂಬಳವನ್ನು ಮುಂಬಕ್ಕೆ ಕಡಿಯಲಾಗುವುದಿಲ್ಲವೆಂದು ಇಂಡಿಯಾ ಸರಕಾರವು ತಿಳಿಸಿದೆ

೧೦೦,೦೦೦ ಪೌಂಡು ನೆಚ್ಚಮಾಡಿ—

ನೆವ್ಯಾ ವಿನ್ಸೆಟಿನ್ ಚರ್ಚಿಲ್ಲರು ಬರೆದ ಒಂದು ಚರಿತ್ರೆಯನ್ನನುಸರಿಸಿ ಚಕ್ರವರ್ತಿಯವರ ಜುಬಿಲಿ ಚಲಚ್ಚಿತ್ರವನ್ನು ಲಂಡನ್ ಫಿಲ್ಮ್ಪ್ರೊಡಕ್ಷನ್ ಕಂಪೆನಿಯವರು ತಯಾರಿಸಬೇಕೆಂದಿದ್ದರೂ, ಅದರ ಕೆಲವೊಂದು ಸೀನುಗಳನ್ನು ಸ್ವಾನುಕೂಲತೆಗನುಸಾರವಾಗಿ ತೆಗೆದು ಹೊಸ ಸೀನುಗಳನ್ನು ಸೇರಿಸಬೇಕಾಗಿ ಬಂದುದರಿಂದಲೂ ಅದರ ವೆಚ್ಚವು ವಿಪರೀತವಾಗುವುದೆಂದು ಅಂದಾಜು ಮಾಡಲ್ಪಟ್ಟಿದ್ದರಿಂದಲೂ ಆ ಸಾಹಸವು ಬೇಡವೆಂದು ಕೂಲಿಗೆ ಬಿದ್ದಿತು.

ಮಹದುಪಕಾರವೇ ಅನ್ಯಾಯ!—

ಮುಂಬಾಯಿ ಸರಕಾರವು ರೆವೆನ್ಯೂ ಮೆಂಬರರಾದ ಪಾನ್ ಬಹದ್ದೂರ್ ಕೂಪರರನ್ನು ನಾನಿಕ ಜಿಲ್ಲೆಯು ಕೃಷಿಗೆ ತಗಲಿದ ಆನಾದುಕತೆಪೈಕಿಯಾದ ನೋಡಿಕೊಳಲು ಕಳುಹಿಸಿರುತ್ತದೆ ನೋಡುವುದೂ ಒಂದು ಉಪಕಾರವೇ ಎನ್ನಿ

ಯಾವುದಿಲ್ಲದಿದ್ದರೂ—

ಜೊಮಿಸಿಯನ್ ಸ್ಟೇಟಿನನ್ನು ಕೊಡಿರಿ ಎಂದು ನಾಗಪುರದ ಕೇಂದ್ರ ಪ್ರಾಂತೀಕ ಕೌನ್ಸಿಲಿನಲ್ಲಿ ಸಭೆ ಜರಗಿ ಠರಾವಾಯಿತು ರಿಪೋರ್ಟ್ಸ್ ರಿಪೋರ್ಟು ದೇವರೇ ದೇವನೆಂದು ತೀರ್ಮಾನವಾಯಿತು

ಸ್ವಾಮಿ ವಿವೇಕಾನಂದರು

ಇವರ ೬೩ನೇ ಜನ್ಮ ದಿನೋತ್ಸವವು ೩೦ ನೇ ದಿನ ದೇಶವಿದೇಶಗಳಲ್ಲಿ ಅತಿ ವಿಜೃಂಭಣೆಯಿಂದ ಜರಗಿತು

ಸುಭಾಷ್ಚಂದ್ರ ಬೋಸರು—

ಒಂಡಸಿಗೆ ಹೋಗುವಂತೆ ಅಪ್ಪಣೆ ಕೊಡಬೇಕು ಎಂದು ಸರ್ ಪಾಮುವೇಲ್ ಹೋರರೊಡನೆ ಕೇಳಿ ಬೇಕೆಂದು ಇಂಡಿಯ ಜರ್ನಲಿಸ್ಟ್ ಎಸೋಸಿಯೇಶನವರು ನಿರ್ಧರಿಸಿರುವರು

ನಾಟಕದಿಂದ ದೇವನಿಂದೆ!

ಶ್ರೀ ಒಬ್ರಿ ಮೆನಿಸ್ ಎಂಬ ಬಿಂಡೀಮರೊಬ್ಬರು ಲಂಡನ್ನ ಲಂಡನ್ ಸ್ಕೂಲ್ ಒಫ್ ಇಕನಾಮಿಕ್ಸ್ನಲ್ಲಿ ೧೯೨೪ರಲ್ಲಿ ಸ್ವಿಸ್ಟ್ಜರ್ಲೆಂಡ್ (GENEVA) ಎಂಬ ನಾಟಕವೆ ರಿದ್ದು ಬರೆದರು ತಿದರ ಪ್ರದರ್ಶನವಾಗಲಿದ್ದದನ್ನು ತಿಳಿದ ಬೋರ್ಡ್ ತಿಂಬರ್ಲೈನರು ಒಡನೆ ನಿಷೇಧಾಜ್ಞೆಯನ್ನು ಕಳಿಸಿದರು ಅದಂ ಅವರ ದಿಗಳಿಂದ ನಡೆದ ಅದ್ಭುತ ಚರಿತ್ರೆಯೇ ಈ ನಾಟಕದ ವಸ್ತುವೆಯಂತೆ ಶ್ರೀ ಮೆನಿಸ್ರವರು ಅದನ್ನು ಬೇಕಾ ಬೇಕಾದವರಿಗೆ ತೋರಿಸಿದರು ಈ ನಾಟಕವು ದೇವ ನಿಂದಕವಾಗುವುದೆಂಬ ದಿಟಕರ ದಾವನ್ನು ಮೇನ ನೆ ಅಲ್ಲಗಳೆಯುತ್ತಾರೆ



"ಹತ್ತಿಯ ರಫ್ತನ್ನು ಅವೇಂಕವು ನಿರ್ಬಂಧಿಸಲಿ; ಭಾರತಕ್ಕೆ ಅದನ್ನು ವ್ಯವಸ್ಥೆಗೊಳಿಸುವ ಹೊಣೆ ಬೇಡ"
ಎಂದು ಅವೇಂಕಕ್ಕೆ ಹೇಳುವ
ಸೇಟ್ ಜಮನ್ಲಾಲ್ ಬಜಾಜರು

ಭಾರತದಿಂದ ಭಂಗಾರವು ಮಾತ್ರ—

—ಯೂರೋಪಿಗೆ ಹೋಗುವುದಲ್ಲ ಕೆಲವು ಹಣ್ಣುಗಳೂ ಈಗೀಗ ಅತ್ತ ತೆರಳುತ್ತಿವೆ ಮೊನ್ನೆ ನಾಗಪುರದಿಂದ ಕೃಷಿಖಾತೆಯವರಿಂದ ಹಲವು ಪೆಟ್ಟಿಗೆಗಳಲ್ಲಿ ಕಿತ್ತಳೆ ಹಣ್ಣುಗಳನ್ನು ಯೂರೋಪಿಗೆ ಕಳುಹಿಸಲಾಯಿತು. ತುಂಬಾ ಲಾಭವುದುವುದೆಂದು ನಿರೀಕ್ಷಿಸಲಾಗಿದೆ.

ಅವರು ಬಿಟ್ಟರು—ಹ್ಯಾಣಬಿಟ್ಟಿಳು!

ಮುಂಬಾಯಿಯಿಂದೊಂದು ವಾರ್ತೆ ಮಿಸೆಸ್ ವೇಲ್ ಫೀಲ್ಡ್ ಎಂಬ ೬೦ ವರ್ಷ ಪ್ರಾಯದ ಯೂರೋಪಿಯ ಯಾನಕೊಬ್ಬರು ಮಲಬಾರ್ ಹಿಲ್ನ ಒಳ ಒಂದು ಬೋರ್ಡಿಂಗನ್ನು ನಡೆಸಿ ದಿನ ಹರಣ ಮಾಡುತ್ತಿದ್ದರು ಇತ್ತೀಚೆಗೆ ಬೋರ್ಡಿಂಗಿನವರೆಲ್ಲಾ ಆದಳನ್ನು ಬಿಟ್ಟು ಹೋಗಿಬಿಟ್ಟರು ಆದಕ್ಕಿಗೆ ಬಹು ದುಃಖವಾಯಿತು, ತಾ ಳಿಸೇ ದಿನ ನೇಣುಹಾಕಿಕೊಂಡು ಆದಳು ನೇಣಾದು ತ್ತಿರುವುದು ಕಂಡುಬಂತು.

'ಸಾಮಾನ್ಯ' ಮನುಷ್ಯನಿಗೆ ಧೈರ್ಯವಿಲ್ಲ

—ನೆಂದು ತಿಳಿದಿದ್ದವರೆಲ್ಲರೂ ತಪ್ಪುದಿದ್ದಿರುವರೆಂದು ಉದಾಹರಿಸಲು ಒಂದು ಘಟನೆಯು ಸಂಭವಿಸಿದೆ ಸಿಲೋನಿನ ಗವರ್ನರರಾದ ಸ್ಟುವರ್ಟು ಸಕ್ಕೀಳಕರಾಗಿ ಜಾಫ್ನಾಕ್ಕೆ ತೆರಳಿದರು ರೈಲ್ವೇ ಸ್ಟೇಷನಿನಲ್ಲಿ ಅವರನ್ನು ವಿಜೃಂಭಣೆಯಿಂದ ಸ್ವಾಗತಕಾರಿಸಿದರು ಗವರ್ನರರು ಮೋಟಾರಿಗೆ ಹತ್ತಲಿರುವಾಗ್ಗೆ ಒಬ್ಬ 'ಸಾಮಾನ್ಯ' ಮನುಷ್ಯನು ಅವರಿಗೆಂದು ಪತ್ರವನ್ನು ಕೊಟ್ಟು ಇದಕ್ಕೆ ಉತ್ತರವನ್ನೀಯಲೇ ಕೊಂದಿರಿ" ಎಂದನು. ಗವರ್ನರ್ ಅತ್ಯಕ್ಕ ನೋಡುವುದರೊಳಗೆ ಅವನಿಗೆ ಉತ್ತರವು ಸಿಕ್ಕಿತು —ಪೋಲೀಸರು ಬಂದು ಅವನನ್ನೆತ್ತಿಕೊಂಡು ಸ್ಟೇಶನ್ಗೊಯ್ದರು ಸ್ಟೇಶನಿನೊಳಗೆ ಸದರ್ಪಕವಾದ ಉತ್ತರವು ಸಿಗುವುದೆಂದು ಬೇರೆ ಹೇಳಬೇಕಾಗಿಲ್ಲ

ಹೈದರಾಬಾದಿನ ನಿಜಾಮರು
ಚಕ್ರವರ್ತಿಯವರ ಪಟ್ಟಾಭಿಷೇಕದ ರಜತೋತ್ಸವದ ಕಾಲದಲ್ಲಿ ಇವರನ್ನು ಆದರ್ಸನಾಗಿ ಪಡಿಸಲಿರುವರು

'ಸಂಪಾದಕರ ಹೃದಯವನ್ನು ನೋಡಬೇಕು -

ಅವರ ಲೇಖನವನ್ನಲ್ಲ ದೇಶದ ಹಿತದೃಷ್ಟಿಯಿಂದ ಸಂಪಾದಕರು ಒಲ್ಲದ ಲೇಖನಗಳು ಮಾನಸಿಕ್ಕೆಗೆ ಕಾರಣ ವೆಂದಾಗ್ಗೂ ಎಂಬ ಒಂಬತ್ತು ಇ ಪ್ರೆಸಿಡೆನ್ಸಿ ಮೆಜಿಸ್ಟ್ರೇಟ್ "ಪ್ರೊಂಟೀ ಸ್ಟಾರ್ಟಿಲ್" ಪತ್ರಿಕೆಯ ಸಂಪಾದಕರಾದ ಖಾ ಬಿ ಜಿ ಹೊರ್ನಿಮನ್ನರ ಮೇಲೆ ಭಗವಾನ್ದಾಸ್ ಲಕ್ಷ್ಮಣದ ಮೊಕದ್ದಮೆಯನ್ನು ಮಾಡಿದ ವ್ಯಾಜ್ಯವನ್ನು ವಾಪಸ್ಸು ತೆಗೆದುಕೊಳ್ಳಲು ಅವಕಾಶವನ್ನು ಬಿಟ್ಟುಬಿಟ್ಟರು ಹೊರ್ನಿಮನ್ನ ಎಸಿಟ್ಟ ಅಭಿಪ್ರಾಯವನ್ನು ಒಪ್ಪಿಗೆಯಿಂದ ಭಗವಾನ್ದಾಸರನ್ನು ಟೀಕಿಸಿದುದೇ ದಿನದ ಕಾರಣ

ಜೀವಂತವಿರುವ ಹರಿಜನರು- ಜೀವಂತವಿರುವ ಮುಸ್ಲಿಮರು

ಲಂಡೋನಿನಲ್ಲಿ ಸೃಷ್ಟಾನಭೂಮಿಗಾಗಿ ಹೋರಾಡುತ್ತಿರುವ ಶ್ರೀಯರಿಬ್ಬರಿಗೆ ಬ್ರಿಟಿಷ್ ಆಳ್ವಿಕ ಗೊಳ್ಪಟ್ಟಿರುವ ಒಆಫ್ರಿಕಾ ಲಾಹೋರಿನ ಸ್ಥಾತೆಯು ನಿಜ ಅಲ್ಲಿಯ ಭಾಷೀಗೇಟ್ ಎಂಬ ಮುಸ್ಲಿಮರು ವಾಸವಾಗಿರುವ ಒಂದು ಸ್ಥಳವು ಪವಿತ್ರ ಭೂಮಿಯಂತೆ ಇದು ಕಮ್ಮಾರ ಓಮಿ ಎಂಬ ಹರಿಜನರ ಹೇಳಿಕೆ ತಮ್ಮ ಹಿಂಯರನ್ನು ಇದೇ ಸ್ಥಳದಲ್ಲಿ ಭೂಗತಮಾಡಿರುವೆವು ಎಂಬ ಅದರ ಸಾಕ್ಷಿ. ಅದರೆ ಅಲ್ಲಿಯ ಪವಿತ್ರಮಾನ ಮಾತ್ರ ಆ ಭೂಮಿ ತಮ್ಮದೆನ್ನುತ್ತಿರುವರು ಕಳೆದ ಎರಡು ತಿಂಗಳುಗಳಿಂದ ಈ ವಾದವು ನಡೆದುಬಂದು, ಕೆಪೆನ್ಸ್ಲೆ ಕೈಹೊಯ್ಯಾಗುವುದರಲ್ಲಿತ್ತು ಹರಿಜನರು ಆ ಸ್ಥಳಾಭೂಮಿಯನ್ನು ಕಾಯ ಚ್ಚಿತ್ತಾರೆ ಮುಸ್ಲಿಮರೆ ಕಾಯ್ಸಿಕೊಳ್ಳಬೇಕು ನೋಡುತ್ತಿದ್ದಾರೆ. ಈ ಎರಡು ಪಕ್ಷಗಳ ಹೋರಾಟವು ಎಂದು ಸ್ವೋಟನವಾಗುವುದೋ ಎಂದು ಪೋಲೀಸರ್ಸ್ ನೋಡುತ್ತಿದ್ದಾರೆ! ಏನಾಗುವುದೋ ಎಂದು ನಾವು ನೋಡೋಣ!

ಮಂಗಳೂರು

ಶ್ರೀ ಮಹಾಗಣಪತಿ ಹೊಸ್ಟೆಲ್ ಬೆಸೆಂಟ್ ಸಭಾಂಗಣದಲ್ಲಿ ಇಂದು ಸಾಯಂಕಾಲ ೪ ಗಂಟೆಗೆ ಶ್ರೀಮತಿ ಲಕ್ಷ್ಮಿಬಾಯಿ ಅವರ ಅಧ್ಯಕ್ಷತೆಯಲ್ಲಿ ಬಹಿರಂಗ ಸಭೆಯೊಂದು ನಡೆಯಲಿದೆ. ಈ ಸಭೆಯಲ್ಲಿ ಶ್ರೀಯುತ ಬಂಟ್ವಾಳ ಜಯರಾಮ ಕಾಲೇಜಿನ ಪ್ರಾಧ್ಯಾಪಕರಾದ ಶ್ರೀ ಕೆ. ಶಿವರಾಮ ಕಾರಂತರವರು ಭಾಷಣ ಮಾಡಲಿದ್ದಾರೆ. ಈ ಸಭೆಯಲ್ಲಿ ಹಾಜರಿರಲು ಹೊಸ್ಟೆಲಿನ ಎಲ್ಲಾ ವಿದ್ಯಾರ್ಥಿಗಳಿಗೂ ಹಾಗೂ ಹೊಸ್ಟೆಲಿನ ಅಭಿವೃದ್ಧಿಯಲ್ಲಿ ಆಸಕ್ತಿಯುಳ್ಳ ಇತರ ಸಜ್ಜನರಿಗೂ ಆಹ್ವಾನವಿದೆ.

ಮಂಗಳೂರು ಮುನಿಸಿಪಲ್ ಕೌನ್ಸಿಲಿನ ಸಭೆಯೊಂದು ಇದೇ ತಾ ೧೩ನೇ ಶುಕ್ರವಾರ ಕೌನ್ಸಿಲ್ ಮಂದಿರದಲ್ಲಿ ನಡೆಯಬರುವುದಾಗಿ ಚೀಫ್ ಆಫೀಸರವರು ತಿಳಿಸುತ್ತಾರೆ.

ಮಂಗಳೂರಿನ ಮೊಸೋರಂಜನ ಸಂಘದ ತಾತ್ಕಾಲಿಕ ಸಭೆಯೊಂದು ಇದೇ ತಾ. ೫ರಲ್ಲಿ ಶ್ರೀ ರಮಾನಂದ ಧಾರೇಶ್ವರರ ಅಧ್ಯಕ್ಷತೆಯಲ್ಲಿ ಶ್ರೀ ಸುಬ್ಬಯ್ಯಶೆಟ್ಟಿ ಮನೆಗೆಯಲ್ಲಿ ಜರಗಿತು. 'ಶಾಲೆಗಳಲ್ಲಿ ಚಿತ್ರ ಪ್ರಯೋಗ' ಎಂಬ ವಿಷಯದಲ್ಲಿ ತರ್ಕ ನಡೆದು, ಬಹುಮತವು ಪರವಾಗಿತ್ತು. ಮುಂದಿನ ಸಭೆಯು ಇದೇ ತಾ. ೧೨ನೇ ಆದಿತಾರ್ಜ ೪-೩೦ಕ್ಕೆ ಜರಗುವುದು.

ಇಲ್ಲಿಯ ಮಿಷನ್ ಹೊಸ್ಟೆಲಿನ ವಾರ್ಷಿಕೋತ್ಸವವು ಮೊನ್ನೆ ತಾ. ೨೬ನೇ ದಕ್ಷಲ ಶ್ರೀ ಅನಂತಶಯನಾರ್ ರವರ ಅಧ್ಯಕ್ಷತೆಯಲ್ಲಿ ಅತಿವಿಜೃಂಭಣೆಯಿಂದ ಜರುಗಿತು

ಶ್ರೀಮತಿ ಕಮಲಾಬಾಯಿ (ಪಟ್ಟುಪಾಧ್ಯಾಯ) ರು ಮಂಗಳೂರಿಗೆ ಬಂದಿಪ್ಪು, ಇಲ್ಲಿ ಗ್ರಾಮಸಂಘಟನಾ ಕಾರ್ಯದಲ್ಲಿ ಪ್ರಾರಂಭಿಸಲಿರುವರು

ಕಳೆದ ಶನಿವಾರ ರಾತ್ರೆ ಗಣಪತಿ ಜ್ಯಾಸ್ಕೂಲಿನ ಶಾರದಾ ಮಂದಿರದಲ್ಲಿ ಶ್ರೀಮತಿ ಪುಟ್ಟಬಾಯಿಯವರ ಸಂಗೀತ ಕಚೇರಿಯು ಯಶಸ್ವಿಯಾಗಿ ಜರುಗಿತು ಶ್ರೀಮತಿಯ ಪರ ಗಾಯನವು ಜನರನ್ನು ಮುಗ್ಧಗೊಳಿಸಿತು

ಇಲ್ಲಿಯ ದ್ರಾವಿಡ ಬ್ರಾಹ್ಮಣ ಹೊಸ್ಟೆಲಿನ ದಿನಾಚರಣೆಯು ತಾ ೩ನೇ ದಿನ ದಿ ಬಿ ಲಿ ಫಾವರ್ ಆರೊ ಅಂಬ್ರೊಜಿಯವರ ಅಧ್ಯಕ್ಷತೆಯಲ್ಲಿ ಜರಗಿತು

ಹಿಂದೀ ಪ್ರಚಾರಾರ್ಥವಾಗಿಯೂ ಆ ಬಗ್ಗೆ ಧನಸಂಗ್ರಹ ಕ್ಕಾಗಿಯೂ ಮಹಾತ್ಮಾಜೀಯವರ ಅಪ್ಪಣೆ ನೇರಗೆ, ದಕ್ಷಿಣ ಭಾರತಕ್ಕೆ ಕಳುಹಿಸಲ್ಪಟ್ಟ ಗುಜರಾತ್ ವಿದ್ಯಾಪೀಠದ ಪ್ರಿನ್ಸಿಪಾಲರಾದ ಆಕಾ ಅಲೇಲ್ಕರರು ಇದೇ ತಾ. ೧೧ಕ್ಕೆ ಮಂಗಳೂರಿಗೆ ಬರಲಿರುವರು ಇವರು ಉಡುಪಿ, ಶಾರ್ಕಳ ಮುಂತಾದ ಸ್ಥಳಗಳನ್ನು ಸಂದರ್ಶಿಸಿ ತಾ ೧೫ಕ್ಕೆ ಪುತ್ತೂರು ಮಾರ್ಗವಾಗಿ ಮೈಸೂರಿಗೆ ತೆರಳಲಿರುವರೆಂದು ತಿಳಿದುಬರುತ್ತದೆ

ಮಂಗಳೂರು ಇಲೆಕ್ಟ್ರಿಕ್ ಸಪ್ಲೈ ಕಂಪೆನಿಯ ಇಂಜಿನಿಯರರಾದ ಮಿ ಜೆ ಗೋರ್ಡನ್ ಇವರು ಪಾಟ್ನಾಕ್ಕೆ ವರ್ಗಾಯಿಸಲ್ಪಟ್ಟಿರುವರು ಕಳೆದ ಶನಿವಾರ ಸಾಯಿರ ವಿದಾಯಸತ್ಕಾರವಾಗಿ ಡಾ ವಿಜ್ಞಲ ಶೆಟ್ಟಿಯರು ಅವರ ಚಿತ್ರವೊಂದನ್ನು ಆಫೀಸಿನಲ್ಲಿ ಅನಾವರಣಮಾಡಿದರು

ಇದೇ ತಾ. ೩ನೇ ಆರ್ಯೋದಯ ಪುಣ್ಯದಿನದಲ್ಲಿ ಹಿಂದೂದೇಶದ ಪುಣ್ಯಕ್ಷೇತ್ರಗಳನ್ನು ಮಿಲಿಯಾವಧಿ ಜನರು ಸಂದರ್ಶಿಸಿ ಸಮುದ್ರಸ್ನಾನಾದಿಗಳನ್ನು ಮಾಡಿದಂತೆ ಮಂಗಳೂರಿನಲ್ಲೂ ಲಕ್ಷಗಟ್ಟಿಲೆ ಜನರೂ ನೇಮೀಶ್ವರಕ್ಕೂ, ಸಮುದ್ರದ ಬದಿಗೂ ಹೋಗಿ ಮಿಂದರು

ಶ್ರೀ ಡಾ ಸುಬ್ಬರಾಯನ್ ಇವರು ಇದೇ ತಿಂಗಳ ತಾ ೧೩ನೇ ದಿನ ಮಂಗಳೂರಿಗೆ ಬರಲಿರುವರೆಂದು ತಿಳಿದುಬರುತ್ತದೆ

ಸ್ಥಳೀಯ ಒರಿಯಂಟಲ್ ಬೆಡ್‌ಮಿಂಟನ್ ಕ್ಲಬ್ಬಿನ ವರ್ಧಂತ್ಯುತ್ಸವವು ಇದೇ ೧೪ರ ಸಂಜೆ ರೈಲ್ವೇ ಸ್ವೇಶನಿನ ಕ್ವಟ್ಟಿನ ವಠಾರದಲ್ಲಿ ಬರ್ಮಾಶೆಲ್ ಜಿಯಲ್ ಕಂಪೆನಿಯ ಸುವರಿಂಟೆಂಡೆಂಟರಾದ ಶ್ರೀ ಪಿ ಆರ್ ಶ್ರೀನಿವಾಸನ್‌ರವರ ಅಧ್ಯಕ್ಷತೆಯಲ್ಲಿ ವಿಜೃಂಭಣೆಯಿಂದ ಜರಗಿತು ಫಲಾಹಾರಗಳಾದಮೇಲೆ ಶ್ರೀ ಹೂಡಪ್ಪನವರ ಗಾಯನ ಕಾರಂತಾರಾಮ ಕಾರ್‌ವಾರರ ಅಂಗಸೌಷ್ಠವ ಪ್ರದರ್ಶನ ರಾಮಶರ್ಮರ ಭಾಷಣಗಳಿಂದ ಮೇಲೆ ಅಧ್ಯಕ್ಷರ ಮಧುರ ಭಾಷಣವಾಯಿತು ಅನಂತರ ಜತಕಾರ್ಯದರ್ಶಿಗಳಾದ ಶ್ರೀ ಎಸ್ ಕಾಶ್ಯಾರ್ ಮತ್ತು ಶ್ರೀ ಪಿ ಆರ್. ಜಂದರ್ ಇವರ ಉಪಕಾರಸ್ಮರಣೆಯಾಗಿ ಸಭೆಯು ಅಂತ್ಯವಾಯಿತು

ಸ್ವಾಮಿ ವಿಜ್ಞಾನಂದ ಪರಮಹಂಸರಿಂದ ಸ್ಥಾಪಿಸಲ್ಪಟ್ಟ ಸಿದ್ಧಾಶ್ರಮಗಳ ಜನರಲ್ ಸೆಕ್ರೆಟರಿಯೂ ಮತ್ತು ಸಿದ್ಧ ಯೋಗಾಶ್ರಮದ ಅಧ್ಯಕ್ಷರೂ ಆದ ಶ್ರೀ ಸ್ವಾಮಿ ಸತ್ಯಾನಂದರವರು ಸಂಘಟನೆ, ಸುಧಾರಣೆ ಮುಂತಾದ ಕೃತ್ಯಕ್ರಮಗಳ ವೀಕ್ಷಣೆಯನ್ನು ಉದ್ದೇಶಿಸುವುದಕ್ಕಾಗಿ ಇದೇ ತಾ. ೭ರಲ್ಲಿ ಮಂಗಳೂರಿಗೆ ಬರಲಿದ್ದಾರೆಂದು ಹೇಳಲ್ಪಟ್ಟಿದೆ. ಬೆಲ್ಲೆಯ ಬೇರೆ ಬೇರೆ ಕಡೆಗಳಲ್ಲಿ ಇರುವ ಸಹೋದರರನ್ನು ಕರೆಯುವುದಕ್ಕಾಗಿ ಇವರು ಈಗ ಉಡುಪಿ, ಕುಂದಾಪುರದ ಕಡೆ ಸಂಚಾರಕ್ಕೆ ಹೋಗಿರುವರು ಇವರು ಬರುವ ತಾ ೧೦ನೇ ಆದಿತ್ಯವಾರ ಇಲ್ಲಿಗೆ ಪುನಃ ಬಂದು, ಮರುದಿವಸ ಸೋಮವಾರ ೪-೩೦ಕ್ಕೆ ಕೆನರಾ ಹೈಸ್ಕೂಲಿನ ಭುವನೇಂದ್ರ ಹೋಲಿನಲ್ಲಿ "ಸಿದ್ಧಸಮಾಜ" ಎಂಬುದರ ಕುರಿತು ಭಾಷಣವಿತ್ತು, ಮರುದಿವಸ ಪುತ್ತೂರು, ಕಾಸರಗೋಡು ಮುತ್ತು ತ್ರಿಶೂರಿನ ಕಡೆ ಪ್ರಯಾಣವಾಗಲಿರುವರೆಂದು ತಿಳಿದುಬರುತ್ತದೆ.

ಇದೇ ತಾ. ೨೪ಕ್ಕೆ ಅಂತ್ಯವಾದ ವಾರದಲ್ಲಿ, ಮಂಗಳೂರು ನಗರ ಸಭೆಯ ಆರೋಗ್ಯಖಾತೆಯ ಪ್ರಕಟಣೆಯಿಂದ ತಿಳಿದುಬರುವಂತೆ ಮುನಿಸಿಪಾಲಿಟಿಯೊಳಗೆ ೨೬ ಮರಣಗಳೂ ೫೦ ಜನನಗಳೂ ಆಗಿವೆ ಬೋಳಾರದಲ್ಲಿ ೪ ಮಂದಿಗೂ ಹೊಗೆ ಗುಜ್ಜರಕೆರೆ ಬಳಿ ಅಜಿಲ್ಡಿನ್ ಮಾರ್ಗ, ನಂದಿಗುಡ್ಡಗಳಲ್ಲಿ ತಲಾಕೆಲವರಿಗೆ ಸಿಡುಬು ತಗಲಿರುತ್ತದೆ ೨೬ ಮರಣಗಳಲ್ಲಿ ೩ ಮರಣಗಳು ಸಿಡುಬಿನಿಂದಾಗಿವೆ

ಕಳೆದ ಸಲ ಪ್ರಕಟಿಸಿದಂದಿನಿಂದ ಇಂದಿನ ತನಕ ಈ ಸುಬ್ಬರಾವ್ ಮೆಮೋರಿಯಲ್ ಮಂದಿರಕ್ಕೆ ಧನಸಹಾಯ ಮಾಡಿದವರು.

ಮಂಜೇಶ್ವರ ರಾಮಕೃಷ್ಣ ನಾಯ್ಕರ ಸ್ಮರಣಾರ್ಥವಾಗಿ ಮಿ ಸುಗುಣನಾಯ್ಕರು ರೂ ೧೧೧ ಮಂಗಳೂರು ಸಾಮಂತಾರ ರಂಗಪೈಗಳ ಸ್ಮರಣಾರ್ಥವಾಗಿ ಮಿ ರಾಘವೇಂದ್ರ ರಂಗಪೈಯವರು ರೂ ೧೧೧, ಮಿ ಲಕ್ಷ್ಮಣಪೈಯವರ ಸ್ಮರಣಾರ್ಥವಾಗಿ ಸಾಮುಂಕಾರ ಸಾಂತಪ್ಪ ಲಕ್ಷ್ಮಣ ಪೈಗಳು ರೂ ೧೧೧ ಆತ್ಮಾನಿರ ದೇವಪ್ಪಪೂಂಜರ ಸ್ಮರಣಾರ್ಥವಾಗಿ ಶ್ರೀ ಎ ಪಿ ಶೆಟ್ಟಿ ಅವರುಗಳು ರೂ ೧೦೪ ಮಿ ರಾ ಬೈಲು ಗೋವಿಂದಕೃಷ್ಣಯ್ಯನವರು ರೂ ೧೧೧, ಶ್ರೀ ಡಾ ಕೆ ಮಾಧವ ನಾಯ್ಕರು ರೂ ೧೦೦ ಮಂಗಳೂರು ಪಾಂಡೇಶ್ವರ ಕೆನೆರಾ ಹೈಸ್ಕೂಲಿನ ಹೆಸರಿನಲ್ಲಿ ಡಾ ಎಂ ಪಿ ಕಿಣಿ ವಿಶಾಖಪಟ್ಟಣ ಇವರು ರೂ ೧೧೪ ಆತ್ಮರು ನರಸಯ್ಯಪ್ರಭುಗಳ ಸ್ಮರಣಾರ್ಥವಾಗಿ ಆತ್ಮರು ವೈಕುಂಠ ಪ್ರಭುಗಳು ರೂ ೧೧೧ ಗುಜ್ಜರಕೆರೆ ರೂ ೧೧೦, ಬೆಲ್ಲಾರಿ ರೂ ೨೪೬, ಹುಮ್ಮಾ ರೂ ೧೧೧೫೪

ಸ್ಥಳೀಯ ಶ್ರೀ ವೆಂಕಟರಮಣ ದೇವಸ್ಥಾನದ ರಥೋತ್ಸವವು ಇದೇ ತಾ ೭೦೦ ಪ್ರಾರಂಭವಾಗಿರುತ್ತದೆ ಇದೇ ತಾ ೧೦ನೇ ರವಿವಾರ ಮಹೋತ್ಸವ ಸೋಮವಾರ ಅವಭೃತಸ್ನಾನ

ಇದೇ ತಾ ೩ನೇ ಸಂಯಂಕಾಲ ಶ್ರೀಯುತ ಲಕ್ಷ್ಮಣ ದೇವ ವಿದ್ಯಾರ್ಥಿಗಳವರು ಜಪ್ಪು ಮಾರ್ಕೆಟಿನ ಬಳಿ "ಶ್ರೀ ಮಹಾದುರ್ಗಾ ಸಚ್ಚಿದಾನಂದ ಕ್ರಿಪೆ"ಯ ಕುರಿತು ಸಾಧಾರಣ ಏನೂರು ಜನರ ಸಮಕ್ಷದಲ್ಲಿ ಒಂದು ಪರಿಚಯವನ್ನು ನಡೆಸಿದರು ಇದರಿಂದ ದೊರೆತ ರೂ ೧೧ ೧೦-೦೦ನ್ನು ಮಂಗಳೂರು ನಿಟ ಅಸ್ಪ ಸಮಾಜದ ವಾರ್ಷಿಕೋತ್ಸವದ ಬಗ್ಗೆ ವಿನಿಯೋಗಿಸಲಾಗುವುದೆಂದು ತಿಳಿದುಬರುತ್ತದೆ

ಇದೇ ತಾ ೩ನೇ ರವಿವಾರ ಕುದ್ರೋಳಿಯ ಶ್ರೀ ಶಿವ ಭಕ್ತ ಯೋಗ ಸಂಘದಲ್ಲಿ ಡಾ ಎ ಕೆ ಪಿ ಕರ್ಮಾರು ಅರೋಗ್ಯದ ಕೀಲಿ ಪ್ರಾಣಾಯಾಮ ಪೌಣಾಗಳ ಉದಾಹರಣೆಗಳನ್ನಿತ್ತು ವಿಚಾರಪೂರ್ಣವೂ ಸುರಸವೂ ಆದ ಭಾಷಣವಿತ್ತರು ಮನಸಮಾಜಕ್ಕೆ ಆರೋಗ್ಯಕ್ಕಿಂತ ಮಿಗಿಲಾದ ಬಾಗ್ಯವೇ ಇಲ್ಲವೆಂದು ಅವರು ವ್ಯಕ್ತಪಡಿಸಿದರು. ಇದೇ ಬರುವ ತಾ ೧೦ರಲ್ಲಿ "ರಾಷ್ಟ್ರಬಂಧು" ಸಂಪಾದಕ ವಿದ್ವಾನ್ ಶ್ರೀ ಕಡಂಗೋಡ್ಲು ಶಂಕರಭಟ್ಟರು "ಲೋಕದ ಸಮಸ್ಯೆಗಳು" ಎಂಬ ಕುರಿತು ಭಾಷಣ ಮಾಡಲಿರುವರು ಸರ್ವರಿಗೂ ಸುಸ್ವಾಗತವಿದೆ

ಹಿಂದೀ ಪ್ರಚಾರ ಸಪ್ತಾಹ ಸಮಾರಂಭದ ಆಯವ್ಯಯದ ಲೆಕ್ಕ:-

ಜಮಾ —ಸಹಾಯ ಧನ ರೂ ೩೦೩—೩—೦ ನಾಟಕ ಇತ್ಯಾದಿಗಳ ಟಿಕೇಟು ಮಾರಾಟದಿಂದ ರೂ ೨೪೬—೪ ೧೦ ೨ ರೂಪ್ಯಾ ೪೩—೩—೧೦

ಖರ್ಚು ಸಿನೆಮಾ ಹೋಲಿನ ಬಾಡಿಗೆ ತೆರಿಗೆ ಇತ್ಯಾದಿ ೯ ೭—೧೦—೦ ಸ್ವಯಂಸೇವಕರಿಗೆ ಉಪಹಾರ ರೂ ೪—೦—೩, ದೀಪದ ಬಿಗ್ಗೆ ರೂ ೧೦-೧೩—೦ ಮುದ್ರಣ ಖರ್ಚು, ಸಾಡಿಲವಾರು ರೂ ೩೩-೧—೯ ಪ್ರಚಾರದ ಜಾಹೀರಾತುಗಳ ಬಗ್ಗೆ ೪೯—೧೫—೨೦ ನಾಟಕ ಮತ್ತು ಇತರ ವಿನೋದಾವಳಿಗಳಿಗೆ ೪೯—೪—೧೦ ಬೆಲ್ಲ ರೆಪೇರ್ ರೂ ೧, ಬಿಟ್ಟುವ ರೂ ೨೨೨—೯—೧೦ ಜಾತಾ ಶಿಲ್ಕು ರೂ. ೨೧೨—೧೨—೧೦" ಎಂದು ಹಿಂದೀ ಸಪ್ತಾಹ ಸಮಿತಿಯ ಕಾರ್ಯದರ್ಶಿಯವರ ಅಧ್ಯಕ್ಷರೂ ಬರೆಯುತ್ತಾರೆ

ತಾಲೂಕುಗಳಿಂದ

ಕಟೀಲು:—ಕಟೀಲು ಹೊಳಿಗೆ ಸಂಕ ಕಟ್ಟುವ ಕುರಿತು ದಿ ಟೋರ್ಡಿನವರು ಎಸ್ಟಿಮೇಟ್ ತಯಾರಿಯ ಬಗ್ಗೆ ಒಬ್ಬ ಸೈಕ್ಲರ್ ಓವರ್‌ಸೀಯರರನ್ನು ನೇಮಿಸಿರುವರು. ಇನ್ನು ಸದ್ಯದಲ್ಲಿಯೇ ಈ ಹೊಳಿಗೆ ಸಂಕವು ಆಗುವುದು

ಕೆಸ್ಕಿಗೋಳಿ:—ಇಲ್ಲಿಂದ ಸುಮಾರು ಅರ್ಧ ಮೈಲು ದೂರ ಕೆಲ್ಲಂಡಿಬೆಟ್ಟ ಎಂಬಲ್ಲಿ ಒಬ್ಬ ಶ್ರೀಮತ್ತ ರವನು ಬಾವಿ ತೋಡುವಾಗ ೩ ಅಳದ ನಂತರ ಒಂದು ಬಂಡೆ ದೊಡ್ಡ ಸುರಂಗವೊಂದು ಕಾಣುತ್ತಿರುತ್ತದೆ ಇದರೊಳಗೆ ಒಂದೇ ಸಾರಿ ಸುಮಾರು ೧ ಸಾವಿರ ಮಂದಿ ಕೂತುಕೊಳ್ಳುವಷ್ಟು ವಿಶಾಲತ್ವವು ಪ್ರಥಮದಲ್ಲಿಯೂ ಇದ್ದು, ನಂತರ ಸುರಂಗವು ಎಷ್ಟು ದೂರದ ವರೆಗೆ ಇರುವುದೆಂದು ಹೇಳಬರುವುದಿಲ್ಲ ಸುಮಾರು ಅರ್ಧ ಮೈಲು ದೂರದ ವರೆಗೆ ಸುರಂಗವು ವಿಸ್ತಾರವಾಗಿದ್ದು ನಂತರ ಚಿಕ್ಕದಾಗಿಯೂ, ಎರಡು ಮೂರು ದ್ವಾರಗಳಿಂದ ಕೂಡಿಯೂ ಇರುತ್ತದೆ ಈ ಅದ್ಭುತವನ್ನು ನೋಡಲು ದಿನಾಲೂ ಜನರು ಕಿಕ್ಕಿರಿದ ಬರುತ್ತಿರುವರು

ಕಿಲ್ಪಗೋಳಿಯಲ್ಲಿ ಹೊಸತಾಗಿ ಕಟ್ಟಲ್ಪಟ್ಟ ಪಂಚಾಯತ್ ಕೋರ್ಟಿನ ಪ್ರವೇಶೋತ್ಸವವು ಇದೇ ಫೆಬ್ರವರಿ ೩ನೇ ವಾರದಲ್ಲಿ ಜರಗಿ ವುದು

ತಾ ೨೬ನೇ ೧೩ನೇ ಮತ್ತ ೨೯ನೇ ಬೆಳಿಗ್ಗೆ ಇಲ್ಲಿ ಬಲು ಜೋರಾದ ಮಳೆಯು ಬಂದಿದೆ

ಪುತ್ತೂರು:—ದರಂಬರ ತಾ ೭ರಲ್ಲಿ ಅಡಪು ಶ್ರೀ ಮಹಾಲಿಂಗೇಶ್ವರ ದೇವಸ್ಥಾನದಲ್ಲಿ ಪುತ್ತೂರು ವಕೀಲ ಶ್ರೀ ಎಚ್ ಪದ್ಮರಾಜ ಅಂಗ ಜೈಸಿ ಇವರ ಅಧ್ಯಕ್ಷತೆಯಲ್ಲಿ ಜರಗಿದ ದಕ್ಷಿಣ ಕನ್ನಡ ಜಿಲ್ಲಾ ಮಟ್ಟಾರ ಸಮಾಜದ ಶ್ರೀ ಶಾರದಾ ಸಂಘ ಇದರ ೪ನೇ ಮಹಾ ಸಭೆಯಲ್ಲಿ ಈ ಸಂಘವು ಮುಂದಕ್ಕೆ ಬದ್ಧಪಡಿಸಿಕೊಂಡು ಅನುಸರಿಸಿಬರತಕ್ಕ ಉಪವಿಬಂಧನೆ ಉದ್ದೇಶಗಳು ಇ ರೂಲ್ಸು ಗಳನ್ನು ತಯಾರಿಸಿ ಜ್ಯಾರಿಗೆ ತರುವ ರೀತಿ ಮಾಡಬೇಕು ಮಾಡಿಯೆಂದು ತಿಳಿದುಬರುತ್ತದೆ

ಕಾರ್ಕಳ:—ಮೊದಲ ಸೂಚನೆಯಂತೆ ಸ್ಥಳೀಯ ಬೋರ್ಡು ಹೈಸ್ಕೂಲಿನ ವರ್ಧಂತ್ಯುತ್ಸವವು ಕುಂದಾಪುರದ ಸಬ್ ಕಲೆಕ್ಟರರಾದ ಆರ್ ಗಿಲೆಟ್ಟ್ ಐ ಸಿ ಎಸ್ ಇವರ ಅಧ್ಯಕ್ಷತೆಯಲ್ಲಿ ಕಳೆದ ತಾ ೨೬ರಲ್ಲಿ ಜರಗಿತು ಶ್ರೀ ಎಂ ಸರ್ವೋತ್ತಮ ಕಾಮತ್ ಬಿ ಎ ಎಲ್ ಬಿ ಇವರು ಶಾಲಾಭ್ಯುದಯವನ್ನು ಕೋರಿ ಸರಸ ಭಾಷಣ ಪ್ರದಿದ ಬಳಿಕ ವರದಿ ವಾಚನ ಅಧ್ಯಕ್ಷರ ಭಾಷಣ ಬಹುಮಾನ ವಿತರಣಗಳಾದುವು ನಾಟಕಾದಿ ವಿನೋದ ಗಳೂ ಇದ್ದುವು

ದಕ್ಷಿಣ ಭಾರತ ಹಿಂದೀ ಪ್ರಚಾರ ಸಭೆಯ ಫೆಬ್ರವರಿ ತಿಂಗಳ ಪರೀಕ್ಷೆಗಳು ತಾ ೧೧ ೨—೭ನೇ ದಿನ ಕಾರ್ಕಳ ಕೇಂದ್ರದಲ್ಲಿ ಶ್ರೀ ಸಿಂಕಟೆಮಣ ಹಾ ೬ ಶಾಲೆಯಲ್ಲಿ ಜರಗುವುದು.ಗಿಯೂ ಕಾರ್ಕಳ ಕೇಂದ್ರದಲ್ಲಿ ಈ ತನಕ ಪರೀಕ್ಷೆಗಳನ್ನು ಕೊಟ್ಟು ಉತ್ತೀರ್ಣರಾಗಿ ಪ್ರಮಾಣಪತ್ರಗಳನ್ನು ಪಡೆಯದೆ ಈಗ ಪರೀಕ್ಷೆಗಳಲ್ಲಿ ವಾಸಮಾಡುವವರು ಯದು ಕಾಲಾನಂತರ ಅಂಚೆಟೀಟು ಗಳೊಂದಿಗೆ ತಮ್ಮ ಹೆಸರು ವಿಳಾಸಗಳನ್ನು ಕೂಡಲೆ ಕಳುಹಿಸಿಕೊಟ್ಟಲ್ಲಿ ಅವರ ಸರ್ಟಿಫಿಕೇಟುಗಳನ್ನು ಅವರಿಗೆ ಕಳುಹಿಸಿಕೊಡಲಾಗ ವುದೆಂದು ಹಿಂದೀ ಪ್ರಚಾರಕರಾದ ಶ್ರೀ ಕಟಪಾಡಿ ಶ್ರೀನಿವಾಸ ಶೆಣೈಯವರು ತಿಳಿಸುತ್ತಾರೆ

ಕಸ್ತೂರಿಗೆ ನೀರ ಹಾಯಿಸಲಾರಂಭವಾಗಿದೆ ಇದು ದಕ್ಷಿಣೆಗೆ ತಕ್ಕ ಪ್ರದಕ್ಷಿಣೆಯ ಕಾರ್ಯವೆಂಬಂತಾಗದೆ ಪ್ರಾತಃಕಾಲ ಎರಡು ಹೊತ್ತು ರಸ್ತೆಯಲ್ಲಿ ಎರಡು ಬಿದಿಗಳಲ್ಲಿ ಅದನ್ನು ಪ್ರವಹಿಸಿ ಸೀರು ಹಾಕುವಂತೆ ನಮ್ಮ ಪಂಚಾಂ ತಿನ ಪೈಸಿಕೆಂಟರು ತಕ್ಕ ವ್ಯವಸ್ಥೆ ಮಾಡಿ ವರಾಗಿ ನೆರ ಗೆ ಸಂಪೂರ್ಣ ಭರವಸೆ ಇದೆ

